ಮಂಗಳವಾರ, ಜೂನ್ 1, 2021 | ₹ 6.00
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಜಾಗೃತಿ

ವಿಶ್ವ ತಂಬಾಕು ರಹಿತ ದಿನಾಚರಣೆ ಪ್ರಯುಕ್ತ ಸೋಮವಾರ ಪ್ರಯಾಗ್ ರಾಜ್‌ನಲ್ಲಿ ಸಮಾಜ ಸೇವಕ ರಾಜೇಂದ್ರ ಕುಮಾರ್ ತಿವಾರಿ ಅವರು ತಮ್ಮ ಸ್ಕೂಟರ್‌ನಲ್ಲಿ ವಿಭಿನ್ನವಾಗಿ ಜಾಗೃತಿ ಮೂಡಿಸಿದರು

25 ಮಣ್ಣಿನ ಮಗನ ಮಹಾಯಾನ

ದೇವೇಗೌಡರು ಪ್ರಧಾನಿಯಾದ ಅಭಿಮಾನದ ಗಳಿಗೆಗೆ ಬೆಳ್ಳಿ ಹಬ್ಬ

ಬಂಧುಗಳೇ...

ಕನ್ನಡ ನಾಡಿನ ಕುಗ್ರಾಮವೊಂದರ ಸಾಮಾನ್ಯ ಒಕ್ಕಲುತನ ಕುಟುಂಬದ ಮಗನಾಗಿದ್ದ ಹೆಚ್. ಡಿ ದೇವೇಗೌಡರು ಭಾರತದ ಪ್ರಧಾನಮಂತ್ರಿಯಾದ ಸಂದರ್ಭಕ್ಕೆ ಇಂದು 25 ವರ್ಷಗಳೇ ತುಂಬಿವೆ. ಸಾಮಾನ್ಯ ರೈತನ ಮಗ ದೇವೇಗೌಡರು ಜನಪರ ಹೋರಾಟಗಳಿಂದ ಪ್ರಧಾನಮಂತ್ರಿ ಪದವಿವರೆಗೂ ಬೆಳೆದು ನಿಂತದ್ದು ಬಾಬಾಸಾಹೇಬ್ ಅಂಬೇಡ್ಕರ್ ಅವರು ಕೊಟ್ಟ ಸಂವಿಧಾನದ ಸತ್ವ ಮತ್ತು ಸೌಂದರ್ಯವೇ ಆಗಿದೆ.

ದೇವೇಗೌಡರು ಪ್ರಧಾನಿಯಾಗಿದ್ದದ್ದು ಕೇವಲ 11 ತಿಂಗಳು. ಸ್ವಾಭಿಮಾನದಿಂದ, ಕನ್ನಡ ನಾಡಿನ ಘನತೆಗೆ ಚ್ಯುತಿ ಬರದಂತೆ ದಕ್ಷತೆ– ಪ್ರಾಮಾಣಿಕತೆಯ ಆಡಳಿತ ನಡೆಸಿದ್ದು ಕನ್ನಡ ನಾಡಿನ ಜನತೆಯ ಆಶೀರ್ವಾದದ ಫಲವೇ ಆಗಿತ್ತು.

ನಾನು ಇಲ್ಲಿ ದೇವೇಗೌಡರು ನನ್ನ ತಂದೆ ಎನ್ನುವ ಪಿತೃ ಪ್ರೇಮದಿಂದ ಆಚೆ ನಿಂತು ನೋಡುವಾಗ ಅವರು ಎಂದೆಂದಿಗೂ ನನ್ನ ಸಾರ್ವಜನಿಕ ಬದುಕಿಗೆ, ಗುಣಾತ್ಮಕ ರಾಜಕಾರಣಕ್ಕೆ ಆದರ್ಶ ನಾಯಕರಾಗಿ ನಿಲ್ಲುತ್ತಾರೆ. ಅಧಿಕಾರ ಇರಲಿ, ಇಲ್ಲದಿರಲಿ ಅದರ ಅಂತಿಮ ಗುರಿ 'ಜನರ ಕಲ್ಯಾಣಕ್ಕಾಗಿ' ಎಂಬ ಮೂಲ ಮಂತ್ರವನ್ನು ನಾನು ಕಲಿತದ್ದು ದೇವೇಗೌಡರಿಂದಲೇ. ಆ ಕಾರಣದಿಂದ ನನ್ನ ಹೃದಯದ ಮಾತುಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ.

ದೇವೇಗೌಡರು ಮೊದಲ ಬಾರಿಗೆ 1962ರಲ್ಲಿ ಶಾಸಕರಾದಾಗ ನಾನಿನ್ನೂ 3 ವರ್ಷದ ಕೂಸು. ಅಲ್ಲಿಂದ ಇಂದಿನ ವರೆಗಿನ ಅವರ ರಾಜಕೀಯ ಬದುಕೆ ನನಗೆ ಒಂದು ವಿಶ್ವವಿದ್ಯಾಲಯದಂತೆ ಕಲಿಸಿದೆ. ಅವರ ಬದುಕೇ ಒಂದು ಆದರ್ಶ ಮಾರ್ಗ.

ದೇವೇಗೌಡರು ಜನಸೇವೆಗೆ ಯಾವ ಮಟ್ಟದ ಸಮರ್ಪಣಾ ಭಾವ ಹೊಂದಿದ್ದಾರೋ ಅದೇ ಮಟ್ಟದ ಸಮರ್ಪಣೆಯನ್ನು ಕೃಷಿಯಲ್ಲೂ ಹೊಂದಿದ್ದರು. ಶ್ರೀಮತಿ ಚನ್ನಮ್ಮ (ನನ್ನ ತಾಯಿ) ನವರ ಮೈ ಮೇಲಿದ್ದ ಕನಿಷ್ಠ ಅಡಮಾನ ಮಾಡಿ ಪಡುವಲಹಿಪ್ಪೆಯಲ್ಲಿ 1960ರಲ್ಲಿ ದೇವೇಗೌಡರು 11.26 ಎಕರೆ ಜಮೀನು ಖರೀದಿಸಿದ್ದರು. ಆ ಭೂಮಿಯಲ್ಲಿ ದೇವೇಗೌಡರು ಅಕ್ಷರಶಃ **'ಬಂಗಾರದ ಮನುಷ್ಯ'** ಸಿನಿಮಾದ ನಾಯಕನಂತೆಯೇ ಕೃಷಿಯಲ್ಲಿ ತೊಡಗಿದ್ದರು ಎಂದರೆ ಅತಿಶಯವಲ್ಲ. ಏರು ಬಂಡೆಯ ಭೂಮಿಯನ್ನು ಹಸನು ಮಾಡಿ ದೇವೇಗೌಡರು ಅಲ್ಲಿ ಉಳುಮೆ ಮಾಡಿದ್ದರು. ಶಾಸಕರಾಗಿದ್ದರೂ ಬೆಂಗಳೂರಿನಿಂದ ಪಡುವಲಹಿಪ್ಪೆಗೆ ಬಂದು ಹೊಲ ಉಳುತ್ತಿದ್ದ ದೇವೇಗೌಡರ ಮೇಲೆ ಭೂಮಿ ತಾಯಿಗೂ ಅಪಾರ ಪ್ರೀತಿ. ಅವರು ಬೆಳೆದಾಗೆಲ್ಲ ಭರಪೂರ ಫಸಲು ಬರುತ್ತಿತ್ತು ಎಂದು ಕಣ್ಣಾರೆ ಕಂಡವರು ಹೇಳಿದ್ದಾರೆ. ವ್ಯವಸಾಯಕ್ಕಾಗಿ ಅಮ್ಮನ ಮೈ ಮೇಲಿನ ಒಡವೆಗಳನ್ನು ಅಡ ಇಡುವುದು. ಫಸಲು ಕೈ ಸೇರಿದಾಗ ಬಿಡಿಸುವುದು, ಮತ್ತೆ ಬ್ಯಾಂಕಿಗೆ ಒಡವೆ ಅಡಮಾನ ಮಾಡುವ ಪಡಿಪಾಟಲು ಕಂಡ ಅಮ್ಮ, ಆಗಾಗ್ಗೆ ಅಡಮಾನ ಮಾಡುವ ಸಿರಿಗೆ ಒಡವೆ ಯಾಕೆ ಧರಿಸಬೇಕೆಂದು, ಇನ್ನೆಂದೂ ತಾನು ಒಡವೆ ಧರಿಸುವುದಿಲ್ಲವೆಂದು ನಿರ್ಧರಿಸಿಬಿಟ್ಟರು. ಕೃಷಿ ಮಾಡುತ್ತಿದ್ದಾಗ ಹೊಲದಲ್ಲೆ ಕಟ್ಟಿದ ಚಿಕ್ಕ ಗುಡಿಸಲಲ್ಲಿ ದೇವೇಗೌಡರು ಗೋಣಿ ಚೀಲಗಳನ್ನೆ ಹಾಸು–ಹೊದಿಕೆ ಮಾಡಿಕೊಂಡು ಜೀವನ ನಡೆಸಿದ್ದನ್ನು ಕಂಡವರಿದ್ದಾರೆ.

1972 ರಲ್ಲಿ ವಿಪಕ್ಷನಾಯಕರಾದಾಗ ಹೊಳೆನರಸಿಪುರದಿಂದ ನಮ್ಮ ಕುಟುಂಬ ಬೆಂಗಳೂರಿನ ರಾಮೋಜಿರಾವ್ ರಸ್ತೆಯ ಒಂದೇ ಕೋಣೆಯ ಸಣ್ಣ ಮನೆಗೆ ಬಂದು ನೆಲೆಸಿತು. ತುಂಬು ಕುಟುಂಬವಾದ ನಮಗೆ ಆ ಮನೆಯ ಕಾರ್‌ಶೆಡ್ ಹೊಂದಿಕೊಂಡಂತಿದ್ದ ಒಂದು ಕೋಣೆ ಮಲಗಲು ಆಶ್ರಯ ನೀಡಿತ್ತು. ತುರ್ತು ಪರಿಸ್ಥಿತಿಯಲ್ಲಿ ತಂದೆ ದೇವೇಗೌಡರು ಜೈಲು ಸೇರಿದ್ದರು. ಕುಟುಂಬದ ನಿರ್ವಹಣೆಗಾಗಿ ಎಚ್.ಡಿ ರೇವಣ್ಣ ವಾಪಾಸ್ ಹೊಳೆನರಸೀಪುರಕ್ಕೆ ಹೋಗಿ ಕೃಷಿ ಜೊತೆಗೆ ಹಿಟ್ಟಿನ ಗಿರಣಿ ಆರಂಭಿಸಿದರು. 1972ರಲ್ಲಿ ವಿಪಕ್ಷ ನಾಯಕರಾದ ಬಳಿಕ ದೇವೇಗೌಡರ ರಾಜಕೀಯ ಬಿರುಸುಗೊಂಡಿತು. ಮನೆಯಲ್ಲಿ ಮಕ್ಕಳು ಏನು ಓದುತ್ತಿದ್ದಾರೆ ಎಂಬುದಕ್ಕೂ ಗಮನ ಕೊಡದಷ್ಟು ಅವಿಶ್ರಾಂತರಾಗಿದ್ದರು. ನನ್ನ ತಾಯಿ ಕುಟುಂಬವನ್ನು ನಿಭಾಯಿಸುತ್ತಿದ್ದರು. ಕುಟುಂಬಕ್ಕಿಂತ ದೇವೇಗೌಡರಿಗೆ ರಾಜ್ಯದ ಹಿತವೇ ಮುಖ್ಯವಾಗುವುದು ನಮಗೆ ಈಗಲೂ ವಿಸ್ಮಯದಂತೆ ಕಾಣುತ್ತದೆ.

ಈ ಘಟನೆಗಳನ್ನು ಹೇಳಲೇ ಬೇಕು.

1978ರ ವಿಧಾನಸಭಾ ಚುನಾವಣೆ ಘೋಷಣೆ ಆಗಿತ್ತು. ಅವತ್ತಿನ ಖ್ಯಾತ ಉದ್ಯಮಿಯೊಬ್ಬರು ನಾವಿದ್ದ ಬಾಡಿಗೆ ಮನೆಗೆ ನೂರಾರು ವಾಹನಗಳೊಂದಿಗೆ ಮತ್ತು ಹಣದೊಂದಿಗೆಗೆ ಬಂದರು. ಚುನಾವಣೆಗಾಗಿ ಎಲ್ಲವನ್ನೂ ಬಳಸಿಕೊಳ್ಳುವಂತೆ ಮನವಿ ಮಾಡಿಕೊಂಡರು. ಕ್ಷಣಕಾಲವೂ ಯೋಚಿಸದ ದೇವೇಗೌಡರು **'ನೀವು ಬಡವರ ರಕ್ತ ಹೀರಿ ಹಣ ಸಂಪಾದಿಸಿರುತ್ತೀರಿ. ನಿಮ್ಮಿಂದ ಇದನ್ನೆಲ್ಲಾ ಪಡೆದರೆ ನಿಮ್ಮ ದಾಕ್ಷಿಣ್ಯಕ್ಕೆ ಒಳಗಾಗಬೇಕಾಗುತ್ತದೆ. ದಯಮಾಡಿ ಯಾವುದು ಬೇಡ ಹೊರಡಿ'** ಎಂದು ಹೇಳಿ ಕಳುಹಿಸಿಬಿಟ್ಟರು. ಆಗ ಅಲ್ಲೇ ಇದ್ದ ನನಗೆ ಓರ್ವ ಜನನಾಯಕನಿಗೆ ಇರಬೇಕಾದ 'ಜನಪರ ಬದ್ಧತೆ' ಏನೆಂಬುದರ ದರ್ಶನವೊಂದು ಆದಂತಾಯಿತು. ಈ ಸನ್ನಿವೇಶ ನನಗಿನ್ನೂ ಸ್ಮೃತಿಪಟಲದಲ್ಲಿ ಹಸಿರಾಗಿಯೇ ಉಳಿದಿದೆ.

ಅರಸು ಅವರು ಮುಖ್ಯಮಂತ್ರಿಯಾಗಿದ್ದಾಗ ದೇವೇಗೌಡರು ವಿರೋಧ ಪಕ್ಷದ ನಾಯಕರಾಗಿದ್ದರು. ಅರಸು–ದೇವೇಗೌಡರ ವಾದ, ಚರ್ಚೆ, ಸಂವಾದಗಳು ಅದೆಷ್ಟು ಮೌಲ್ಯಯುತವಾದವೆಂದರೆ, ಈ ಇಬ್ಬರ ಸದನ ಸಂವಾದವು ಅಧ್ಯಯನಯೋಗ್ಯ ವಿಷಯ ಎಂದು ಹಿರಿಯ ಪತ್ರಕರ್ತ ವಡ್ಡರ್ಸೆ ರಘುರಾಂಶೆಟ್ಟರು ತಮ್ಮ ಬರಹದಲ್ಲಿ ಪ್ರತಿಪಾದಿಸಿದ್ದಾರೆ.

1978ರ ನಂತರ ಅರಸು–ಇಂದಿರಾಗಾಂಧಿ ಅವರ ನಡುವೆ ಭಿನ್ನಾಭಿಪ್ರಾಯ ತಾರಕಕ್ಕೇರಿದಾಗ, ರಾಜ್ಯದಲ್ಲಿ ಕಾಂಗ್ರೆಸ್‌ಗೆ ದೇವೇಗೌಡರ ಅನಿವಾರ್ಯತೆ ಎದುರಾಗಿತ್ತು. ಇಂದಿರಾಗಾಂಧಿ ಅವರು ತಮ್ಮ ಆಪ್ತ ಕಮಲ್‌ನಾಥ್ ತ್ರಿಪಾಠಿ ಅವರ ಮೂಲಕ ದೇವೇಗೌಡರನ್ನು ಕಾಂಗ್ರೆಸ್‌ಗೆ ಸೆಳೆಯುವ ಪ್ರಯತ್ನ ನಡೆಸಿದರು. ಮುಖ್ಯಮಂತ್ರಿ ಮಾಡುವ ಆಮಿಷ ಒಡ್ಡಿದ್ದರು. ಆದರೆ, ದೇವೇಗೌಡರು ಜಗ್ಗಲಿಲ್ಲ.

ಮಣ್ಣಿನಿಂದ ಮೇಲೆದ್ದು ಬರುವುದು ದೇವೇಗೌಡರ ಹುಟ್ಟುಗುಣ

ದೇವೇಗೌಡರನ್ನು ರಾಜಕೀಯವಾಗಿ ತುಳಿಯಲು ಸ್ವಪಕ್ಷದಲ್ಲೆ ನಡೆದ ಪಿತೂರಿಗಳು ಸಾಕಷ್ಟಿವೆ. ಜನರ ವಿಶ್ವಾಸ–ಪ್ರೀತಿಯಿಂದಷ್ಟೆ ಬೆಳೆಯತೊಡಗಿದ್ದ ದೇವೇಗೌಡರನ್ನು ಅವರದ್ದೆ ಪಕ್ಷದ ಮುಖ್ಯಮಂತ್ರಿ ಷಡ್ಯಂತ್ರದಿಂದ ಲೋಕಾಯುಕ್ತ–ಸಿಒಡಿ ಪ್ರಕರಣಗಳಲ್ಲಿ ಸಿಲುಕಿಸುತ್ತಾರೆ. ಪ್ರಕರಣದಲ್ಲಿ ಅಂತಿಮವಾಗಿ ಅವರು ನಿರಪರಾಧಿಯಾಗಿ ಮೇಲೆದ್ದರು. ಇದು ದೇವೇಗೌಡರ ನೈತಿಕತೆಯ ತಾಕತ್ತು. ದೇವೇಗೌಡರನ್ನು ರಾಜಕೀಯವಾಗಿ ಹತ್ತಿಕ್ಕುವ ಪ್ರಯತ್ನಗಳು ನಡೆದಾಗಲೆಲ್ಲಾ ಅವರು ಮತ್ತೆ ಮತ್ತೆ ಫಿನಿಕ್ಸ್‌ನಂತೆ ಮೇಲೆದ್ದು ಬಂದಿದ್ದಾರೆ. ಪಿತೂರಿಗಳನ್ನೆ ಸವಾಲಾಗಿ ಸ್ವೀಕರಿಸುವುದು ಅವರ ಹುಟ್ಟುಗುಣ.

1996 ಲೋಕಸಭಾ ಚುನಾವಣೆಯಲ್ಲಿ ಜನತಾದಳ ರಾಜ್ಯದಲ್ಲಿ 16 ಸ್ಥಾನ ಗೆದ್ದಿತ್ತು. ಇಡೀ ದೇಶದಲ್ಲಿ ಜನತಾದಳ ಒಟ್ಟು 44 ಸ್ಥಾನಗಳನ್ನು ಗಳಿಸಿತ್ತು. ತೃತೀಯರಂಗ ವೇದಿಕೆ ಸಿದ್ಧವಾಗಿ ಅಂತಿಮವಾಗಿ ಪ್ರಧಾನಿ ಆಗುವ ಅವಕಾಶ ದೇವೇಗೌಡರಿಗೆ ಒಲಿದು ಬಂತು. ಆದರೆ, ಅವರು ಪ್ರಧಾನಿಯಾಗುವುದು ನಮ್ಮ ಕುಟುಂಬದಲ್ಲಿ ಯಾರಿಗೂ ಇಷ್ಟವಿರಲಿಲ್ಲ.

ದೇವೇಗೌಡರು ರಾಜ್ಯದಲ್ಲಿ ಅತ್ಯುತ್ತಮ ಕೆಲಸ ಮಾಡುತ್ತಿದ್ದರು. ಆದರೆ, ರಾಮಕೃಷ್ಣ ಹೆಗಡೆ ಅವರ ಮುನಿಸು ಸರ್ಕಾರದ ಮೇಲೆ ಕಾರ್ಮೋಡದಂತೆ ಕವಿದುಕೊಂಡಿತ್ತು. ಹಾಗಾಗಿ, ದೇವೇಗೌಡರನ್ನು ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿಯೇ ಉಳಿಸಿಕೊಂಡು, ರಾಮಕೃಷ್ಣ ಹೆಗಡೆ ಅವರ ಹೆಸರನ್ನು ಪ್ರಧಾನಿ ಹುದ್ದೆಗೆ ಶಿಫಾರಸು ಮಾಡುವ ಬಗ್ಗೆ ಮಾತನಾಡಲೆಂದು ನಾನು ಸಚಿವ ನಬಿ ಅವರನ್ನು ರಾಮಕೃಷ್ಣ ಹೆಗಡೆ ಅವರ ನಿವಾಸಕ್ಕೆ ಕಳುಹಿಸಿದ್ದೆ. ನನಗೆ ಒಂದೈದು ನಿಮಿಷ ಮಾತಾಡಲು ಸಮಯ ಕೇಳಿದ್ದೆ. ಆದರೆ, ರಾಮಕೃಷ್ಣ ಹೆಗಡೆ, **'ಅವನ್ಯಾರೋ ಹುಡ್ಗ ನನ್ನತ್ರ ಏನು ಮಾತಾಡೋದು'**? ಎಂದು ಲೇವಡಿ ಮಾಡಿ ಕಳಿಸಿದ್ದರು. ಅಲ್ಲಿಗೆ ರಾಮಕೃಷ್ಣ ಹೆಗಡೆ ಅವರನ್ನು ಪ್ರಧಾನಿ ಹುದ್ದೆಗೆ ಪ್ರೊಜೆಕ್ಟ್ ಮಾಡುವ ಪ್ರಯತ್ನ ಕೈಬಿಡಲಾಯಿತು. ದೇವೇಗೌಡರು ಪ್ರಧಾನಿ ಆಗುವುದು ನಿಶ್ಚಿತವಾಯಿತು.

ನೋವುಂಡು ನಗುವ ನಂಜುಂಡ

ದೇವೇಗೌಡರ ರಾಜಕೀಯ ಹೋರಾಟದಲ್ಲಿ ತಮ್ಮದಲ್ಲದ ತಪ್ಪುಗಳಿಗೆ ಖಳನಾಯಕರಾಗಿದ್ದೇ ಹೆಚ್ಚು. ಅವುಗಳನ್ನು ದೇವೇಗೌಡರು ಯಾವ ಹಂತದಲ್ಲೂ ಹೇಳದೇ ಕಳಂಕವನ್ನು ಹೊತ್ತು, ನಂಜುಂಡನಂತೇಯೇ ಸುಮ್ಮನೆ ಇದ್ದಾರೆ. ಈ ಸಂದರ್ಭದಲ್ಲಾದರೂ ನಾನು ಕೆಲ ವಿಷಯಗಳನ್ನು ಪ್ರಸ್ತಾಪಿಸಲೇಬೇಕು. ಯಾರದ್ದೋ ಮತ್ಸರ, ಯಾರಿಗೋ ಕಳಂಕ ಪ್ರಧಾನಿ ದೇವೇಗೌಡರ ಮಂತ್ರಿ ಮಂಡಲಕ್ಕೆ ಎಸ್.ಆರ್ ಬೊಮ್ಮಾಯಿ ಅವರನ್ನು ಸೇರಿಸಿಕೊಳ್ಳುವುದಕ್ಕೆ ಎಡ ಪಕ್ಷಗಳು ಸುತಾರಾಂ ಒಪ್ಪಲಿಲ್ಲ. ಯಾಕೆಂದರೆ, ಹವಾಲ ಹಗರಣಕ್ಕೆ ಸಂಬಂಧಿಸಿದಂತೆ ಪತ್ರಿಕೆಯೊಂದು ಮಾಡಿದ್ದ ವರದಿಯಲ್ಲಿ ಬೊಮ್ಮಾಯಿ ಹೆಸರು ಪ್ರಸ್ತಾಪವಾಗಿತ್ತು. ಆದರೆ, ದೇವೇಗೌಡರೇ ಎಲ್ಲರ ಮನವೊಲಿಸಿ ಬೊಮ್ಮಾಯಿ ಅವರನ್ನು ಮಂತ್ರಿ ಮಾಡಿದರು.

ತಮ್ಮ ಹೆಸರು ಹವಾಲ ಹಗರಣದಲ್ಲಿ ಉಲ್ಲೇಖವಾಗಲು ರಾಮಕೃಷ್ಣ ಹೆಗಡೆ ಕಾರಣ ಎಂಬುದು ಬೊಮ್ಮಾಯಿ ಅವರ ಶಂಕೆ. ಇನ್ನೊಂದೆಡೆ, ತಮ್ಮನ್ನು ಭ್ರಷ್ಟ ಎಂದು ಬಿಂಬಿಸಿದ್ದಾರೆ ಎಂಬ ಕಾರಣಕ್ಕೆ ಜನತಾದಳದ ಅಧ್ಯಕ್ಷ ಲಾಲು ಪ್ರಸಾದ್ ಯಾದವ್ ಅವರಿಗೂ ರಾಮಕೃಷ್ಣ ಹೆಗಡೆ ಅವರ ಮೇಲೆ ಕೋಪವಿತ್ತು. ಲಾಲು ಮತ್ತು ಬೊಮ್ಮಾಯಿ ಅವರು ರಾಮಕೃಷ್ಣ ಹೆಗಡೆ ಅವರನ್ನು ಪಕ್ಷದಿಂದ ಹೊರದಬ್ಬಲು ದೇವೇಗೌಡರನ್ನು ಒತ್ತಾಯಿಸಿದರು. ಆದರೆ, ದೇವೇಗೌಡರು ನಿರಾಕರಿಸಿದ್ದರು. ಒಂದು ದಿನ ಲಾಲು ಮಧ್ಯರಾತ್ರಿ ದೇವೇಗೌಡರ ನಿವಾಸಕ್ಕೆ ಬಂದು ರಾಮಕೃಷ್ಣ ಹೆಗಡೆ ಅವರನ್ನು ಪಕ್ಷದಿಂದ ಉಚ್ಚಾಟಿಸುವಂತೆ ಒತ್ತಾಯಿಸಿದರು. ಆಗಲೂ ದೇವೇಗೌಡರು ಒಪ್ಪಲಿಲ್ಲ. ಲಾಲು ನಿರ್ಗಮಿಸಿದ್ದರು. ಆದರೆ, ಬೆಳಗ್ಗೆದ್ದು ನೋಡಿದಾಗ ಆಘಾತವಾಗಿತ್ತು. ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಲಾಲು ಅವರು ರಾಮಕೃಷ್ಣ ಹೆಗಡೆ ಅವರನ್ನು ಪಕ್ಷದಿಂದ ಉಚ್ಚಾಟಿಸಿದ್ದರು. ದೇವೇಗೌಡರನ್ನು ಬಹಿರಂಗವಾಗಿ ಟೀಕಿಸುತ್ತಿರುವ ಕಾರಣಕ್ಕೆ ರಾಮಕೃಷ್ಣ ಹೆಗಡೆ ಅವರನ್ನು ಉಚ್ಚಾಟಿಸುತ್ತಿರುವುದಾಗಿ ಲಾಲು ಮಾಧ್ಯಮಗಳಿಗೆ ಹೇಳಿದ್ದರು. ಆದರೆ, ಅದರ ಹಿಂದೆ ವೈಯಕ್ತಿಕ ದ್ವೇಷ ಕೆಲಸ ಮಾಡಿತ್ತು. ಆದರೆ ದೇವೇಗೌಡರು ಈ ಕಳಂಕ ಹೊರಬೇಕಾಯಿತು.

ಮೊದಲ ತಪ್ಪು

ದೇವೇಗೌಡರು ಪ್ರಧಾನಿಯಾಗಿದ್ದಾಗ ಕರ್ನಾಟಕದಲ್ಲಿ ಸಚಿವರಾಗಿದ್ದ ಪಿ.ಜಿ ಆರ್. ಸಿಂಧ್ಯ ಅವರು ಕರ್ನಾಟಕ ಕೇಡರ್‌ನ ಐಪಿಎಸ್ ಅಧಿಕಾರಿ ಜೋಗಿಂದರ್ ಸಿಂಗ್ ಅವರನ್ನು ಸಿಬಿಐ ನಿರ್ದೇಶಕರನ್ನಾಗಿಸುವಂತೆ ಮನವಿ ಮಾಡಿದ್ದರು. ಅವರ ಶಿಫಾರಸಿನಂತೆ ಜೋಗಿಂದರ್ ಸಿಂಗ್ ಅವರನ್ನು ಸಿಬಿಐ ನಿರ್ದೇಶಕರನ್ನಾಗಿ ಮಾಡಿದ್ದೇ ದೇವೇಗೌಡರ ಮೊದಲ ತಪ್ಪು. ಸ್ವಿಟ್ಜರ್‌ಲೆಂಡ್‌ಗೆ ಹೋಗಿದ್ದ ಜೋಗಿಂದರ್ ಸಿಂಗ್ ಭಾರತಕ್ಕೆ ಬಂದಿಳಿಯುತ್ತಲೇ, ಮಾಧ್ಯಮಗಳೊಂದಿಗೆ ಮಾತಾಡುತ್ತಾ ಬೋಫೋರ್ಸ್ ಹಗರಣದ ದಾಖಲೆ ತಂದಿದ್ದೇನೆ. ಈ ಪ್ರಕರಣದ ತನಿಖೆ ಆರಂಭಿಸಲಾಗುವುದು ಎಂದು ಹೇಳಿದ್ದರು.

ಇದೇ ಸಂದರ್ಭದಲ್ಲಿ ಕೇಂದ್ರದಲ್ಲಿ ಸಚಿವರಾಗಿದ್ದ, ದೇವೇಗೌಡರ ಆಪ್ತರಾಗಿದ್ದ ಕನ್ನಡಿಗ ಮಂತ್ರಿಯೊಬ್ಬರು ಕಾಂಗ್ರೆಸ್ ನಾಯಕ ಸೀತಾರಾಂ ಕೇಸರಿ ಅವರು ಪ್ರಕರಣವೊಂದರಲ್ಲಿ ಬಂಧನವಾಗುವುದು ಖಚಿತ ಎಂದು ಉಡಾಫೆ ಮಾತಾಡಿದ್ದರು. ಈ ಮಾತುಗಳು ಕೇಂದ್ರ ಸರ್ಕಾರದ ಮೇಲೆ ಅತಿ ಕೆಟ್ಟ ಪರಿಣಾಮವನ್ನೇ ಬೀರಿತು.

ಇದಾದ ನಂತರ ಜನತಾದಳದ ರಾಷ್ಟ್ರೀಯ ಅಧ್ಯಕ್ಷ ಲಾಲು ಪ್ರಸಾದ್ ಯಾದವ್ ಅವರ ಮೇವು ಹಗರಣವು ದೇವೇಗೌಡರಿಗೆ ಮತ್ತೊಂದು ಸವಾಲಾಯಿತು. ಪ್ರಕರಣವನ್ನು ಮುಚ್ಚಿಹಾಕಲು ಲಾಲು ದೇವೇಗೌಡರಿಗೆ ಒತ್ತಾಯಿಸಿದರು. ಇದಕ್ಕೆ ದೇವೇಗೌಡರು ಒಪ್ಪಲಿಲ್ಲ. ಆದರೂ, ಪ್ರಕರಣದ ತನಿಖೆ ನಡೆಸುತ್ತಿದ್ದ ಇಬ್ಬರು ಅಧಿಕಾರಿಗಳನ್ನು ಒತ್ತಡದಿಂದ ವರ್ಗಾವಣೆ ಮಾಡಿಸಲಾಯಿತು. ಆದರೆ ಆ ಇಬ್ಬರೂ ಅಧಿಕಾರಿಗಳು ನ್ಯಾಯಾಲಯದ ಮೊರೆ ಹೋಗಿ ತನಿಖಾಧಿಕಾರಿಗಳಾಗಿ ಮುಂದುವರೆದರು. ಇದು ಸರ್ಕಾರದ ಹೆಸರಿಗೆ ತೀವ್ರ ಹಾನಿ ಮಾಡಿತ್ತು. ದೇವೇಗೌಡರು ಮನಸ್ಸು ಮಾಡಿದರೆ ಮೇವು ಹಗರಣವನ್ನು ಕ್ಷಣದಲ್ಲಿ ಮುಚ್ಚಿಹಾಕಬಹುದು ಎಂದು ಲಾಲು ಅವರಿಗೆ ತಲೆ ತುಂಬಿದ್ದೇ ಎಸ್.ಆರ್.ಬೊಮ್ಮಾಯಿ ಎಂಬುದು ನಂತರ ತಿಳಿಯುತ್ತದೆ.

ತಮ್ಮವರೇ ಆಗಿದ್ದವರ ಈ ಎಲ್ಲಾ ಪ್ರಕರಣಗಳನ್ನು ಪ್ರಧಾನಿಯಾಗಿದ್ದ ದೇವೇಗೌಡರ ಮನಸ್ಸು ಮಾಡಿದ್ದರೆ ಚಿಟಿಕೆ ಹೊಡೆಯುವುದರಲ್ಲಿ ಕಸದ ಬುಟ್ಟಿಗೆ ಎಸೆದು ಅಧಿಕಾರದಲ್ಲಿ ಮುಂದುವರಿಯಬಹುದಿತ್ತು. ಆದರೆ ಭ್ರಷ್ಟಾಚಾರದ ಪೋಷಣೆ, ಸ್ವಜನಪಕ್ಷಪಾತದಂಥ ಸಂವಿಧಾನ ದ್ರೋಹ, ಜನದ್ರೋಹ ಕೃತ್ಯಗಳಿಗೆ ದೇವೇಗೌಡರು ಎಂದಿಗೂ ಒಪ್ಪಲಿಲ್ಲ. ಇನ್ನು ಕಾಂಗ್ರೆಸ್ನಲ್ಲಿ ಆಗಷ್ಟೇ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಗಳು ಆರಂಭವಾಗಿದ್ದವು. ಶರದ್ ಪವಾರ್, ರಾಜೇಶ್ ಪೈಲಟ್, ಸೀತಾರಾಮ್ ಕೇಸರಿ ನಡುವೆ ತೀವ್ರ ಪೈಪೋಟಿ ಇತ್ತು. ಒಂದು ದಿನ ಪ್ರಧಾನಿ ದೇವೇಗೌಡರನ್ನು ಭೇಟಿಯಾಗಿದ್ದ ಪೈಲಟ್, ಸೀತಾರಾಂ ಕೇಸರಿ ಅವರ ಮೇಲಿದ್ದ ಒಂದು ಪ್ರಕರಣವನ್ನು ಮತ್ತೆ ತನಿಖೆಗೆ ಆದೇಶಿಸುವಂತೆ ಕೋರಿದ್ದರು. ಈ ಪ್ರಕರಣ ತನಿಖೆಗೆ ಒಳಪಟ್ಟರೆ ತಾವು ಎಐಸಿಸಿ ಅಧ್ಯಕ್ಷರಾಗುವ ದಾರಿ ಸುಲಭ ಎಂಬುದು ಪೈಲಟ್ ಅವರ ಉದ್ದೇಶ. ಆದರೆ, ಕಾಂಗ್ರೆಸ್ ಆಂತರಿಕ ವಿಚಾರದಲ್ಲಿ ತಾವು ತಲೆ ಹಾಕುವುದಿಲ್ಲ ಎಂದು ದೇವೇಗೌಡರು ಹೇಳಿದ್ದರು. ಈ ವಿಚಾರ ಮಾಧ್ಯಮಗಳಿಗೆ ಸೋರಿಕೆಯಾಗಿತ್ತು. ಮರುದಿನ ಪತ್ರಿಕೆಯಲ್ಲಿ ವರದಿ ಪ್ರಕಟವಾಗಿತ್ತು. ಸೀತಾರಾಂ ಕೇಸರಿಯವರನ್ನು ಹಣಿಯುವ ಪ್ರಯತ್ನ ನಡೆಯುತ್ತಿದೆ ಎಂದು ಬಿಂಬಿಸಲಾಯಿತು. ಇದು ಸೀತಾರಾಂ ಕೇಸರಿ ಅವರನ್ನು ಕೆರಳಿಸುತ್ತದೆ. ಅಲ್ಲಿಗೆ ಕಾಂಗ್ರೆಸ್ ತೃತೀಯರಂಗಕ್ಕೆ ನೀಡಿದ್ದ ಬೆಂಬಲ ಹಿಂಪಡೆಯುವ ಸಂದರ್ಭ ಎದ್ದು ನಿಂತುಬಿಟ್ಟಿತು. ದುರಾದೃಷ್ಟವೆಂದರೆ ಈ ಬೆಳವಣಿಗೆಗಳ ಹಿಂದೆ ಹೆಚ್. ಡಿ ದೇವೇಗೌಡರ ಪಾತ್ರವೇ ಇರಲಿಲ್ಲ.

ಇದೇ ಸಂದರ್ಭದಲ್ಲಿ ನನ್ನನ್ನು ಉತ್ತರಹಳ್ಳಿಯ ಅವತ್ತಿನ ಕಾಂಗ್ರೆಸ್ ಶಾಸಕರೊಬ್ಬರು ಕಾಂಗ್ರೆಸ್‌ನ ಪ್ರಭಾವಿ ನಾಯಕ ಆರ್ ಕೆ ಧವನ್ ಅವರ ಮನೆಗೆ ಬೆಳಗಿನ ಉಪಹಾರಕ್ಕೆ ಕರೆದೊಯ್ದಿದ್ದರು. ನಿಮ್ಮ ತಂದೆ (ಪ್ರಧಾನಿ)ಯವರ ಜೊತೆ ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಅವರು ಮಾತಾಡ ಬೇಕಿದೆ. ಚರ್ಚೆ ನಡೆಸಿದರೆ ಕನ್ವೀನ್ಸ್ ಆಗಬಹುದು. ದೇವೇಗೌಡರು ಪ್ರಧಾನಿಯಾಗಿ ಮುಂದುವರೆಯಬಹುದು. ಸಮಯ ಕೊಡಿ ಎಂದು ಕೇಳಿಕೊಂಡರು. ಈ ವಿಚಾರ ನಾನು ದೇವೇಗೌಡರಿಗೆ ತಿಳಿಸಿದ್ದೆ. ಈ ಮಧ್ಯೆ ಕಾಂಗ್ರೆಸ್‌ನಿಂದ ದೇವೇಗೌಡರಿಗೆ ಎರಡು ಷರತ್ತು ಎದುರಾಗಿದ್ದವು. ಒಂದು: ಇನ್ನು ಮುಂದೆ ಪ್ರಧಾನಿ ದೇವೇಗೌಡರು ಎಲ್ಲ ನಿರ್ಧಾರಗಳನ್ನು ಕಾಂಗ್ರೆಸ್ ಅನ್ನು ಕೇಳಿಯೇ ತೆಗೆದುಕೊಳ್ಳಬೇಕು. ಎರಡನೇಯದು: ಆಗಿದ್ದಕ್ಕೆಲ್ಲ ಕ್ಷಮೆ ಕೇಳಬೇಕು ಎಂಬುದು.

ದೇವೇಗೌಡರು ಒಂದು ಕ್ಷಣವೂ ಯೋಚಿಸದೆ ಕಾಂಗ್ರೆಸ್‌ನ ದೊಡ್ಡಸ್ತಿಕೆ ಒಪ್ಪದೇ, **'ಸ್ವಾಭಿಮಾನ ಕಳೆದುಕೊಂಡು ಮುಂದುವರೆಯುವ ಅಗತ್ಯವಿಲ್ಲ ನನಗೆ. ದೇವರು ನನ್ನ ಹಣೆಬರಹದಲ್ಲಿ ಬರದಂತಾಗುತ್ತದೆ. ನಡಿ ಬೆಂಗಳೂರಿಗೆ ಹೋಗೋಣ'** ಎಂದು ಬಿಟ್ಟರು.

ಸರ್ಕಾರ ಪತನದ ಅಂಚಿಗೆ ಬಂದಾಗ, ಬಿಜೆಪಿಯ ಹಿರಿಯ ನಾಯಕ ಅಟಲ್ ಬಿಹಾರಿ ವಾಜಪೇಯಿ ಅವರು ದೇವೇಗೌಡರಿಗೆ ಹತ್ತಾರು ಬಾರಿ ದೂರವಾಣಿ ಕರೆ ಮಾಡಿ ಬೆಂಬಲ ನೀಡುವ ಪ್ರಸ್ತಾವ ಮುಂದಿಟ್ಟಿದ್ದರು. ಕಲಾಪದ ವೇಳೆ ಚೀಟಿ ಕೊಟ್ಟು ಕಳುಹಿಸಿ ಬೆಂಬಲ ಪಡೆಯುವಂತೆ ಹೇಳಿದರು. ದೆಹಲಿಯ ಸಿ.ಎಂ ಸಾಹೀಬ್ ಸಿಂಗ್ ವರ್ಮಾ ಸ್ವತಃ ನನ್ನನ್ನೇ ಕರೆದು ದೇವೇಗೌಡರನ್ನು ಬೆಂಬಲಿಸುವ ಮಾತಾಡಿದ್ದರು. ಮಹಾರಾಷ್ಟ್ರದ ಬಾಳಾ ಸಾಹೇಬ್ ಠಾಕ್ರೆ, ಪಂಜಾಬ್‌ನ ಪ್ರಕಾಶ್ ಸಿಂಗ್ ಬಾದಲ್ ಅವರೂ ಬೆಂಬಲದ ಭರವಸೆ ನೀಡಿದ್ದರು. ಆದರೆ, ತತ್ವ ಸಿದ್ಧಾಂತವನ್ನೇ ಪ್ರತಿಪಾದಿಸಿದ ದೇವೇಗೌಡರು ಬೆಂಬಲಗಳನ್ನೆಲ್ಲ ನಿರಾಕರಿಸಿ ಕೇವಲ 11 ತಿಂಗಳಲ್ಲಿ ಸ್ಥಾನ ತೊರೆದು ಬಂದರು.

ಪ್ರಧಾನಿಯಾಗಿದ್ದ 11 ತಿಂಗಳು ಅವರು ರಾಜ್ಯಕ್ಕೆ, ದೇಶಕ್ಕೆ ಕೊಟ್ಟ ಕೊಡುಗೆಯನ್ನು ಇತಿಹಾಸವೇ ಹೇಳುತ್ತದೆ. ತೃತೀಯರಂಗದ ಸಂಚಾಲಕರಾಗಿದ್ದ ಚಂದ್ರಬಾಬು ನಾಯ್ಡು ಅವರ ವಿರೋಧದ ನಡುವೆಯೂ ಕರ್ನಾಟಕದ ನೀರಾವರಿ ಯೋಜನೆಗಳಿಗೆ ಹಣ ಒದಗಿಸುತ್ತಾರೆ. ರಾಜ್ಯದ ನೀರಾವರಿ ಯೋಜನೆಗಳಿಗೆ ಜೀವಕಳೆ ಬಂದಿದ್ದೆ ದೇವೇಗೌಡರ ಆಡಳಿತದಲ್ಲಿ ಎಂಬುದನ್ನು ದಾಖಲೆಗಳೆ ಹೇಳುತ್ತವೆ. ಬರಡಾಗಿದ್ದ ಕೃಷ್ಣ ಜಲಾನಯನ ಪ್ರದೇಶ ಇಂದು ಹಸಿರಾಗಿ ಕಂಗೊಳಿಸುತ್ತಿದ್ದರೆ ಅದು ದೇವೇಗೌಡರ ದೂರದೃಷ್ಟಿ ನಿರ್ಧಾರ. ನನಗೂ ನನ್ನ ತಂದೆ ದೇವೇಗೌಡರಿಗೆ ಇರುವ ಒಂದು ವ್ಯತ್ಯಾಸವೆಂದರೆ. ನಾನು ಅವರಿಗಿಂತ ಭಿನ್ನ. ಯಾವುದನ್ನೂ ನುಂಗಿಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಪರಿಣಾಮಗಳ ಗೋಜಿಲ್ಲದೆ ಯಥಾವತ್ತಾಗಿ ಆಡಿಬಿಡುತ್ತೇನೆ.

ಆದರೆ ನನ್ನ ತಂದೆ ಅವರು ತಮಗಾದ ನೋವನ್ನು ಯಾರೊಂದಿಗೂ ಹೇಳಿಕೊಳ್ಳುವುದಿಲ್ಲ. ಎಲ್ಲವನ್ನೂ ವಿಷವುಂಡ ನಂಜುಂಡನಂತೆ ನುಂಗಿಕೊಳ್ಳುತ್ತಾರೆ. ಇಂತಹ ಸಹನಾಶೀಲತೆ, ಅವರೊಳಗಿನ ಧಾರಾಣಾ ಶಕ್ತಿ ಅಸಮಾನ್ಯವಾದುದ್ದು.

1989ರಲ್ಲಿ ದೇವೇಗೌಡರು ಕನಕಪುರ, ಹೊಳೆನರಸೀಪುರ ಎರಡೂ ಕಡೆ ಸೋಲುಣ್ಣಬೇಕಾಯಿತು. ದೇವೇಗೌಡರ ಪಕ್ಷ ನಿಷ್ಠೆ, ಸಹನೆ ಇಂದಿನ ತಲೆಮಾರಿನ ಶಾಸಕರಿಗೆ ಮಾದರಿಯಾಗುವಂತದ್ದು. 1962ರಲ್ಲಿ ರಾಜಕೀಯ ಪ್ರವೇಶಿಸಿದ ದೇವೇಗೌಡರು ಸಚಿವರಾದದ್ದು 1983ರಲ್ಲಿ. ಆದರೆ ಇಂದಿನ ರಾಜಕಾರಣಿಗಳು ಗೆದ್ದ ತಕ್ಷಣ ಸಚಿವರಾಗಬೇಕೆನ್ನುತ್ತಾರೆ. ದೇವೇಗೌಡರೂ ಎಂದೆಂದಿಗೂ ಪಕ್ಷ ನಿಷ್ಠೆಯನ್ನು ಬಿಟ್ಟುಕೊಟ್ಟವರಲ್ಲ.

ಕನ್ನಡಿಗರೊಬ್ಬರು ದೇಶದ ಪ್ರಧಾನಿಯಾಗುವುದು ಅಸಾಧ್ಯವೆ ಸರಿ. ಆದರೆ ದೇವೇಗೌಡರು ಸಂಕೀರ್ಣ ಕಾಲಘಟ್ಟದಲ್ಲಿ ಪ್ರಧಾನಿಯಾಗಿ ದಕ್ಷತೆಯಿಂದ ಆಡಳಿತ ಮಾಡಿದರು. ಇಂತಹ ಸಂದರ್ಭಕ್ಕೆ 25 ವರ್ಷ ತುಂಬಿದ ಸ್ಮರಣೆ.

ಅವರ ರಾಜಕೀಯ ಬದುಕಿನಲ್ಲಿ ಎರಡು ವರ್ಷ ರಾಜ್ಯದ ಸಚಿವರಾಗಿ, 18 ತಿಂಗಳು ಮುಖ್ಯಮಂತ್ರಿ, 11 ತಿಂಗಳು ಪ್ರಧಾನಿಯಾಗಿ ಅಷ್ಟೇ ಅಧಿಕಾರದಲ್ಲಿದ್ದರು. ಅಧಿಕಾರ ಅವರಿಗೆ ಎಂದೂ ಅಹಂಕಾರವನ್ನು ತರಲಿಲ್ಲ. ಅಧಿಕಾರಕ್ಕಾಗಿ ತಾವು ನಂಬಿದ ಸಿದ್ಧಾಂತಗಳನ್ನು ಬಿಟ್ಟುಕೊಟ್ಟವರಲ್ಲ. ಆದರೆ, ಅವರ ವಿರುದ್ಧ ನಡೆಯುವ "ಕ್ಷುಲ್ಲಕ ರಾಜಕಾರಣ" ವನ್ನು ಕನ್ನಡನಾಡಿನ ಜನತೆ ಇನ್ನಾದರೂ ಅರ್ಥಮಾಡಿಕೊಳ್ಳುತ್ತಾರೆ ಎಂಬ ವಿಶ್ವಾಸ ನನಗಿದೆ.

ನಾನೂ ಕೂಡ ಎರಡು ಬಾರಿ ರಾಜ್ಯದ ಮುಖ್ಯಮಂತ್ರಿಯಾದದ್ದು ಆಕಸ್ಮಿಕ ಮತ್ತು ನಿಮ್ಮೆಲ್ಲರ ಆಶೀರ್ವಾದದಿಂದ. ನಾನು ತಂದೆಯವರನ್ನು **'ಅಣ್ಣ'** ಎಂದು ಕರೆಯುತ್ತೇನೆ. ಕಾರ್ಯಕರ್ತರು. ಅಭಿಮಾನಿಗಳು **'ದೊಡ್ಡವರು'** ಎನ್ನುತ್ತಾರೆ. ದೇಶ ಅವರನ್ನು **'ಹೆಚ್.ಡಿ ದೇವೇಗೌಡರು'** ಎಂದು ಕರೆಯುತ್ತದೆ.

ದೇವೇಗೌಡರು ಪ್ರಧಾನಿಯಾಗಿ 11 ತಿಂಗಳು ದೇಶವನ್ನು ಅಭಿವೃದ್ಧಿ ದಿಕ್ಕಿನಲ್ಲಿ, ಭ್ರಷ್ಟಾಚಾರ ರಹಿತವಾಗಿ ಕೊಂಡೊಯ್ದದ್ದು ಒಂದು ಮೈಲಿಗಲ್ಲು. ಅವರು ಪ್ರಧಾನಿಯಾಗಿ 25 ವರ್ಷಗಳು ತುಂಬಿದ ಸಂದರ್ಭದಲ್ಲಿ ಈ ಎಲ್ಲವೂ ನನ್ನ ನೆನಪಿನಾಳದಿಂದ ನಿಮ್ಮೊಂದಿಗೆ ಹಂಚಿಕೊಂಡು ಹಗುರಾಗಿದ್ದೇನೆ. ಈ ನಾಡಿನ ನಿಮ್ಮೆಲ್ಲರ ಬೆಂಬಲ, ಆಶೀರ್ವಾದವೇ ಹೆಚ್.ಡಿ. ದೇವೇಗೌಡರ ಆತ್ಮಬಲ.

ನಮಸ್ತೆ

ಹೆಚ್.ಡಿ.ಕುಮಾರಸ್ವಾಮಿ
ಮಾಜಿ ಮುಖ್ಯಮಂತ್ರಿಗಳು



ಕೊರೊನಾ ವೈರಸ್ ಸೋಂಕು ಪ್ರಕರಣಗಳು ಕಡಿಮೆಯಾಗುತ್ತಿವೆ ಎಂಬ ಮಾತ್ರಕ್ಕೆ ಜನ ಈ ನಿರ್ಣಾಯಕ ಸಂದರ್ಭದಲ್ಲಿ ಕೋವಿಡ್ ನಿಯಮಾವಳಿಗಳನ್ನು ಮರೆಯಬಾರದು. ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು, ಸಾಮಾಜಿಕ ಅಂತರ ಪಾಲಿಸಬೇಕು. ಆರೋಗ್ಯ ರಕ್ಷಣೆಯತ್ತ ಜನ ಗಮನಹರಿಸಬೇಕು.

ನಗರದಿಂದ ದೂರ ಇರುವ ಹಾಸ್ಟೆಲ್‌ಗಳಲ್ಲಿ ಕೋವಿಡ್ ಕೇಂದ್ರ; ಕಾಡುವ ಒಂಟಿತನ

ಆರೈಕೆ ಕೇಂದ್ರ: ಕಾಳಜಿ ಕೊರತೆ

• ಸಿದ್ದನಗೌಡ ಪಾಟೀಲ

ಕೊಪ್ಪಳ: 'ಕೋವಿಡ್ ಆರೈಕೆ ಕೇಂದ್ರಕ್ಕೆ ಬಂದು ಐದು ದಿನ ಆಯಿತು. ಇಲ್ಲಿ ಕಾಳಜಿ ಮಾಡುವವರು ಯಾರೂ ಇಲ್ಲ. ಕುಡಿಯಲು ನೀರು ಸಹ ಸಮಯಕ್ಕೆ ಸರಿಯಾಗಿ ಸಿಗುತ್ತಿಲ್ಲ. ನಮ್ಮನ್ನು ಕರೆದುಕೊಂಡು ಬಂದು ಇಲ್ಲಿ ಕೂಡಿಹಾಕಲಾಗಿದೆ' ಎಂದು ಕುಕನೂರು ತಾಲ್ಲೂಕಿನ ಗುದ್ನೇಶ್ವರ ಕ್ಯಾಂಪಿನ ಕೋವಿಡ್ ಆರೈಕೆ ಕೇಂದ್ರದಲ್ಲಿ ದಾಖಲಾಗಿರುವ ಚಂದ್ರಪ್ಪ ಅಸಮಾಧಾನದಿಂದಲೇ ಹೇಳಿದರು.

'ಇಲ್ಲಿ ಕಾಳಜಿ ಮಾಡುವವರು ಇಲ್ಲ. ಆರೈಕೆಯ ಕೊರತೆಯ ಮಧ್ಯೆಯೇ ಬೇಗ ಗುಣಮುಖಳಾಗುವ ಆಶಾಭಾವ ಹೊಂದಿದ್ದೇನೆ' ಎಂದರು ಗಂಗಾವತಿ ತಾಲ್ಲೂಕಿನ ಆನೆಗೊಂದಿ ಆರೈಕೆ ಕೇಂದ್ರದಲ್ಲಿದ್ದ ಮಹಿಳೆ ಶಾಂತಮ್ಮ.

'ಪ್ರಜಾವಾಣಿ' ತಂಡ ಜಿಲ್ಲೆಯ ಹಲವು ಕೋವಿಡ್ ಆರೈಕೆ ಕೇಂದ್ರಗಳಿಗೆ ಭೇಟಿ ನೀಡಿದಾಗ ಅಲ್ಲಿ 'ಆರೈಕೆ ಕೊರತೆ' ಎದ್ದುಕಂಡಿತು.

ಕುಕನೂರು ತಾಲ್ಲೂಕಿನ ತಳಕಲ್ ಗ್ರಾಮದ ಲಕ್ಷ್ಮಿ ಎಂಬುವರು ತನ್ನ ಎರಡು ವರ್ಷದ ಕಂದಮ್ಮನೊಂದಿಗೆ ಕೊಪ್ಪಳ ತಾಲ್ಲೂಕಿನ ತಣಕನಕಲ್ ಕೋವಿಡ್ ಆರೈಕೆ ಕೇಂದ್ರದಲ್ಲಿ ದಾಖಲಾಗಿದ್ದಾರೆ. ನಾಲ್ಕಾರು ಮಹಿಳೆಯರು ಮಾತ್ರ ಇಲ್ಲಿ ಇದ್ದಾರೆ. 'ಮಗು ಆಗಾಗ ಬಿಸ್ಕೆಟ್, ಬ್ರೆಡ್, ತಿಂಡಿ ಕೊಡು ಎಂದು ಹಟ ಮಾಡುತ್ತಿದೆ. ಆರೈಕೆ ಕೇಂದ್ರ ಜನವಸತಿಯಿಂದ ದೂರ ಇರುವುದರಿಂದ ತಂದು ಕೊಡುವವರು ಯಾರು' ಎಂದು ಆಕೆ ನೋವು ತೋಡಿಕೊಂಡರು.

'ಆರೋಗ್ಯ ಕಾರ್ಯಕರ್ತೆಯರು ವಾಹನದಲ್ಲಿ ನಮ್ಮನ್ನು ಇಲ್ಲಿಗೆ ತಂದು ಬಿಟ್ಟು ಹೋಗಿದ್ದಾರೆ. ಕೂಲಿ ಮಾಡಿ ಜೀವನ ಸಾಗಿಸುವ ಪತಿ ಒಬ್ಬಂಟಿ ಆಗಿದ್ದಾರೆ. ಅನಾಥ ಪ್ರಜ್ಞೆ ಕಾಡುತ್ತಿದೆ. ಊಟ, ಉಪಾಹಾರ ನೀಡುತ್ತಿದ್ದರೂ ಅದು ರುಚಿಸುತ್ತಿಲ್ಲ' ಎಂದು ದೈನ್ಯದಿಂದ ಹೇಳುತ್ತಿರುವಾಗ ಅಲ್ಲಿದ್ದ ಇತರ ಸೋಂಕಿತರು 'ಏನೂ ಆಗೋಲ್ಲ, ಧೈರ್ಯದಿಂದ ಇರು' ಎಂದು ಸಂತೈಸಿದರು.

ಕುಕನೂರು ತಾಲ್ಲೂಕಿನ ಗುದ್ನೇಶ್ವರಮಠ ಕ್ಯಾಂಪ್‌ನ ವಸತಿ ನಿಲಯದಲ್ಲಿಯ ಆರೈಕೆ ಕೇಂದ್ರದಲ್ಲಿ ವೈದ್ಯರೇ ಇಲ್ಲ. ಶೌಚಾಲಯಗಳಲ್ಲಿ ಸ್ವಚ್ಛತೆ ಇಲ್ಲ. ಸಮಯಕ್ಕೆ ಸರಿಯಾಗಿ ನೀರು ಬರುತ್ತಿಲ್ಲ ಎಂದು ಸೋಂಕಿತರು ಹೇಳಿಕೊಂಡರು.

'ಅಲ್ಲಿ ಏನೂ ವ್ಯವಸ್ಥೆ ಇಲ್ಲ. ಸುಖಾಸುಮ್ಮನೆ ಜನರನ್ನು ಇರಿಸಿ ಮಂದಿ– ಮಕ್ಕಳಿಂದ ದೂರ ಮಾಡುತ್ತಾರೆ' ಎಂದು ಕುಷ್ಟಗಿಯ ಕೋವಿಡ್ ಆಸ್ಪತ್ರೆಗೆ ಪರೀಕ್ಷೆಗೆ ಬಂದಿದ್ದ ಲಲಿತಾ ಹರಿಹಾಯ್ದರು.

ಜಿಲ್ಲೆಯ ಒಂದು ಸಾವಿರಕ್ಕೂ ಹೆಚ್ಚು ಸೋಂಕಿತರು ಹೋಂ ಐಸೋಲೇಷನ್‌ನಲ್ಲಿದ್ದರು. ಸೋಂಕು ತಡೆಗೆ ಹೋಂ ಐಸೋಲೇಷನ್ ರದ್ದು ಮಾಡಿ, 159 ಕೋವಿಡ್ ಆರೈಕೆ ಕೇಂದ್ರಗಳನ್ನು ತೆರೆದು ಅವರನ್ನು ಸ್ಥಳಾಂತರಿಸಲಾಗಿದೆ.

'ಬಹುತೇಕ ಕೇಂದ್ರಗಳನ್ನು ಹಾಸ್ಟೆಲ್‌ಗಳಲ್ಲಿ ಆರಂಭಿಸಲಾಗಿದೆ. ಅವು ಮೂಲಸೌಕರ್ಯದ ಕೊರತೆಯಿಂದ ಬಳಲುತ್ತಿವೆ. ಶುದ್ಧ ಕುಡಿಯುವ ನೀರು, ಬಿಸಿ–ಶುಚಿ ಮತ್ತು ರುಚಿಯಾದ ಊಟವೂ ಸೋಂಕಿತರಿಗೆ ಸಿಗುತ್ತಿಲ್ಲ' ಎಂದು ಕುಷ್ಟಗಿ ತಾಲ್ಲೂಕಿನ ಹಿರೇಮನ್ನಾಪುರ ಗ್ರಾಮದ ಮುಖಂಡ ದೊಡ್ಡಯ್ಯ ದೂರಿದರು.

'ಆರೈಕೆ ಕೇಂದ್ರಗಳನ್ನು ಸ್ಥಳೀಯ ಪಂಚಾಯಿತಿಗಳು ನಿರ್ವಹಣೆ ಮಾಡುತ್ತಿವೆ. ಪಂಚಾಯಿತಿ ಸಿಬ್ಬಂದಿ ರೋಗಿಗಳ ಬಳಿ ಹೋಗಲು ಆತಂಕ ಪಡುತ್ತಾರೆ' ಎಂದು ಕನಕಗಿರಿ ತಾಲ್ಲೂಕಿ ಹಿರೇಮ್ಯಾದನೇರಿ ಗ್ರಾಮದ ಪಿಡಿಒ ನಾಗೇಶ ಪೂಜಾರ ಅಸಹಾಯಕತೆ ವ್ಯಕ್ತಪಡಿಸಿದರು.

'ಸ್ವಚ್ಛತೆ ಸೇರಿದಂತೆ ಸೋಂಕಿತರ ಕೋಣೆಗಳಿಗೆ ತೆರಳಿ ಸೇವೆ ಮಾಡುವಂತೆ ನಮಗೆ ಯಾರೂ ಹೇಳಿಲ್ಲ. ಹೊರಗಡೆ ಮಾತ್ರ ವ್ಯವಸ್ಥೆ ನೋಡಿಕೊಳ್ಳುತ್ತೇವೆ. ನಮಗೆ ಸೋಂಕು ಬಂದರೆ ಯಾರು ಹೊಣೆ' ಎಂದು ತಾವರಗೇರಾ ಆರೈಕೆ ಕೇಂದ್ರದ ಸಿಬ್ಬಂದಿ ಶರಣಬಸವ ಪ್ರಶ್ನಿಸಿದರು.

ಇನ್ನು ಜಿಲ್ಲೆಯಲ್ಲಿ 59 ವೆಂಟಿಲೇಟರ್‌ಗಳು ಇದ್ದು, 14 ವೆಂಟಿಲೇಟರ್‌ಗಳು ಬಳಕೆಗೆ ಬಾರದೇ ಹಾಳಾಗಿವೆ. ತಾಲ್ಲೂಕು ಆಸ್ಪತ್ರೆಗಳಲ್ಲಿ ವೆಂಟಿಲೇಟರ್ ನಿರ್ವಹಣೆ ಮಾಡುವ ತಂತ್ರಜ್ಞರು ಇಲ್ಲ. ಸಾವಿನ ಸಂಖ್ಯೆ ಹೆಚ್ಚಲು ಇದೂ ಕಾರಣ ಎಂದು ಗಂಗಾವತಿಯ ಸಮಾಜ ಸೇವಕ ದೊಡ್ಡಪ್ಪ ದೇಸಾಯಿ ದೂರಿದರು.

ಕುಕನೂರಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕೋವಿಡ್ ಲಸಿಕೆಗೆ ಮುಗಿಬಿದ್ದಿರುವ ಜನತೆ

ಪರೀಕ್ಷೆಗೂ ಪರದಾಟ

ಆರ್‌ಟಿಪಿಎಸ್ ಪರೀಕ್ಷೆಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮಾದರಿ ಸಂಗ್ರಹಿಸುತ್ತಿಲ್ಲ. ದೂರದ ಸಮುದಾಯ ಆರೋಗ್ಯ ಕೇಂದ್ರಕ್ಕೆ ಹೋಗಬೇಕಾಗಿದೆ ಎಂದು ಗ್ರಾಮೀಣ ಜನ ಅಳಲು ತೋಡಿಕೊಂಡರು.

'ನಿತ್ಯ ಸಾವಿರ ಜನರಿಗೆ ಕೋವಿಡ್ ಪರೀಕ್ಷೆ ಮಾಡುತ್ತಿದ್ದು, ಪಾಸಿಟಿವ್ ಬಂದವರಿಗೆ 24 ಗಂಟೆಗಳಲ್ಲಿ ವರದಿ ನೀಡುತ್ತೇವೆ. ಸಿಬ್ಬಂದಿ ಕೊರತೆಯಿಂದಾಗಿ ನೆಗಟಿವ್ ವರದಿ ನೀಡಿಕೆ ವಿಳಂಬವಾಗುತ್ತಿದೆ' ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಟಿ.ಲಿಂಗರಾಜು ಹೇಳಿದರು.

ಆಸ್ಪತ್ರೆ ಆರಂಭಿಸಲು ಒತ್ತಾಯ

'ಕನಕಗಿರಿ ತಾಲ್ಲೂಕು ಕೇಂದ್ರವಾಗಿದ್ದರೂ ಕೋವಿಡ್ ಆಸ್ಪತ್ರೆ ಇಲ್ಲ. ತಕ್ಷಣವೇ ಕೋವಿಡ್ ಆಸ್ಪತ್ರೆ ಆರಂಭಿಸಬೇಕು' ಎಂದು ಕನಕಗಿರಿ ತಾಲ್ಲೂಕು ಚಿಕ್ಕಮ್ಯಾದಿನೇರಿಯ ಮಹೇಶ ಪಾಟೀಲ ಒತ್ತಾಯಿಸಿದರು.

'ಕುಷ್ಟಗಿ ಮತ್ತು ಯಲಬುರ್ಗಾದ ತಾಲ್ಲೂಕು ಆಸ್ಪತ್ರೆಗಳಲ್ಲಿ ನಿತ್ಯ ಇಬ್ಬರಾದರೂ ಸಾವಿಗೀಡಾಗುತ್ತಿದ್ದಾರೆ. ಗ್ರಾಮೀಣ ಭಾಗದ ಜನರಲ್ಲಿ ಕಾಳಜಿ, ಭರವಸೆ ಮೂಡಿಸುವ ಕೆಲಸ ಆಗುತ್ತಿಲ್ಲ. ಬರೀ ಸಾವಿನ ಸುದ್ದಿ ಕೇಳುತ್ತಿರುವುದರಿಂದ ರೋಗಿಗಳಲ್ಲಿ ಪ್ರಾಣಭಯ ಮೂಡುತ್ತಿದೆ' ಎಂದು ಮೆಣೆದಾಳ ಗ್ರಾಮದ ಪ್ರಕಾಶ್ ಕಟ್ಟಿಮನಿ ವಿಷಾದಿಸಿದರು.

ಕೊಪ್ಪಳ ಜಿಲ್ಲಾ ಕೋವಿಡ್ ಅಂಕಿ–ಅಂಶ

31,664 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
3,649 ▼	27,594 ▼	421 ▼

ದಿನದ ಏರಿಕೆ

ಹೊಸ ಪ್ರಕರಣ	249 ▼
ಗುಣಮುಖ	518 ▼
ಸಾವು	08 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಅಂಕಿ–ಅಂಶ

3	ತಾಲ್ಲೂಕು ಆಸ್ಪತ್ರೆ
2	ನಗರ ಆರೋಗ್ಯ ಕೇಂದ್ರ
2	ಕೋವಿಡ್ ಆಸ್ಪತ್ರೆ
3	ಸಮುದಾಯ ಆರೋಗ್ಯ ಕೇಂದ್ರ
20	ಪ್ರಾಥಮಿಕ ಆರೋಗ್ಯ ಕೇಂದ್ರ

ಆರೈಕೆ ಕೇಂದ್ರಗಳ ಮೇಲುಸ್ತುವಾರಿಗೆ ಜಿಲ್ಲಾಮಟ್ಟದ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ.
ರಘುನಂದನಮೂರ್ತಿ, ಸಿಇಒ, ಜಿಲ್ಲಾ ಪಂಚಾಯಿತಿ, ಕೊಪ್ಪಳ

ತಣಕನಕಲ್ ಆರೈಕೆ ಕೇಂದ್ರಕ್ಕೆ ಕರೆತಂದು ಹಾಕಿದ್ದಾರೆ. ಇಲ್ಲಿ ಸೇವಾ ಮನೋಭಾವ, ಕಾಳಜಿಯ ಕೊರತೆ ಇದೆ. ಇದು ನನ್ನಲ್ಲಿ ಭಯ ಹೆಚ್ಚಿಸಿದೆ
ಗುರು ಹೊಸಳ್ಳಿ, ಹೊಸಳ್ಳಿ ಗ್ರಾಮಸ್ಥ

ಆರೈಕೆ ಕೇಂದ್ರಗಳಲ್ಲಿ ಸ್ವಚ್ಛತೆ ಸೇರಿದಂತೆ ವಿವಿಧ ಕೆಲಸ ನಿರ್ವಹಿಸುತ್ತಿದ್ದೇವೆ. ನಮ್ಮನ್ನೂ ಕೊರೊನಾ ಸೇನಾನಿಗಳೆಂದು ಪರಿಗಣಿಸಿ ಲಸಿಕೆ ಹಾಗೂ ಸೌಲಭ್ಯ ನೀಡಬೇಕು
ಶಿವು, ವಸತಿ ನಿಲಯದ ಕೆಲಸಗಾರ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಲೆಕ್ಕಕ್ಕೆ ಸಿಗದೆ ಸತ್ತವರ ನೆರಳು!

• ಬಾಲಕೃಷ್ಣ ಪಿ.ಎಚ್.

ದಾವಣಗೆರೆ: ಹಳ್ಳಿಗಳಲ್ಲಿ ಜನರ ಸಾವಿನ ಸಂಖ್ಯೆ ಒಮ್ಮೆಲೇ ಏರಿದೆ. ಆದರೆ, ಕೊರೊನಾ ಲೆಕ್ಕಕ್ಕೆ ಸೇರುತ್ತಿರುವುದು ಬೆರಳೆಣಿಕೆಯಷ್ಟು. ಕೆಲವರ ಕೊರೊನಾ ಟೆಸ್ಟ್ ವರದಿ ನೆಗೆಟಿವ್ ಎಂದು ಬಂದಿದ್ದರೆ, ಹಲವರು ಪರೀಕ್ಷೆ ಮಾಡಿಸಿಕೊಳ್ಳದೇ ಜೀವ ಕಳೆದುಕೊಂಡಿದ್ದಾರೆ.

'ಪ್ರಜಾವಾಣಿ' ತಂಡ ಜಿಲ್ಲೆಯ ಎಲ್ಲ ತಾಲ್ಲೂಕುಗಳ ವಿವಿಧ ಗ್ರಾಮಗಳ ಸುತ್ತಾಟ ನಡೆಸಿ ಅಲ್ಲಿನ ಪರಿಸ್ಥಿತಿಯನ್ನು ತಿಳಿಯಲು ಪ್ರಯತ್ನಿಸಿದಾಗ ಕಂಡುಬಂದ ವಾಸ್ತವ ಚಿತ್ರಣ ಇದು.

ಹರಿಹರ ತಾಲ್ಲೂಕಿನ ಕಡರನಾಯಕನಹಳ್ಳಿಯಲ್ಲಿ ಮೇ 1ರಿಂದ 21 ದಿನಗಳಲ್ಲಿ 22 ಮಂದಿ ಮೃತಪಟ್ಟಿದ್ದಾರೆ. ಅವರಲ್ಲಿ ಕೊರೊನಾ ದೃಢಪಟ್ಟ ಪ್ರಕರಣಗಳು ಎರಡಷ್ಟೇ. ಇಷ್ಟೊಂದು ಸಾವುಗಳು ಸಂಭವಿಸಿದ್ದಾದರೂ ಹೇಗೆ ಎಂದರೆ, ಹತ್ತನ್ನು ಸಹಜ ಸಾವು ಎಂದು ಗುರುತಿಸಲಾಗಿದೆ. ಇಬ್ಬರು ಹೃದಯಾಘಾತದಿಂದ ಸತ್ತಿದ್ದಾರೆ. ಇಬ್ಬರು ಉಸಿರಾಟದ ಸಮಸ್ಯೆಯಿಂದ, ಇಬ್ಬರು ಕಡಿಮೆ ರಕ್ತದೊತ್ತಡದಿಂದ ಮೃತಪಟ್ಟಿದ್ದಾರೆ ಎಂದು ಸರ್ಕಾರಿ ದಾಖಲೆಗಳು ಹೇಳುತ್ತವೆ. ಇವೆಲ್ಲ ಕೊರೊನಾ ಲೆಕ್ಕಕ್ಕೆ ಸೇರಿಲ್ಲ. ಇದಲ್ಲದೇ ಇಬ್ಬರು ಕ್ಯಾನ್ಸರ್‌ನಿಂದ, ಒಬ್ಬರು ಬಿಳಿರಕ್ತಕಣದ ಕೊರತೆಯಿಂದ, ಒಬ್ಬರು ಪಾರ್ಶ್ವವಾಯುವಿನಿಂದ ನಿಧನರಾಗಿದ್ದಾರೆ.

ಜಿಲ್ಲೆಯಲ್ಲಿ ಅತಿಹೆಚ್ಚು ಕೊರೊನಾ ಸೋಂಕಿತರ ಇರುವ ಗ್ರಾಮ ಎಂದು ನ್ಯಾಮತಿ ತಾಲ್ಲೂಕಿನ ರಾಮೇಶ್ವರವನ್ನು ಗುರುತಿಸಲಾಗಿದೆ. 1,400 ಜನಸಂಖ್ಯೆ ಇರುವ ಈ ಪುಟ್ಟ ಗ್ರಾಮದಲ್ಲಿ 92 ಮಂದಿಗೆ ಕೊರೊನಾ ಸೋಂಕು ಬಂದಿದೆ. ಇಲ್ಲಿಯೂ 9 ಮಂದಿ ಮೃತಪಟ್ಟಿದ್ದಾರೆ. ಕೊರೊನಾದಿಂದ ಇಬ್ಬರು ಸತ್ತಿದ್ದರೆ, ಏಳು ಮಂದಿಗೆ ಕೊರೊನಾ ಇಲ್ಲ ಎಂದು ನಮೂದಾಗಿದೆ.

ಬಿಳಿಚೋಡಿನಲ್ಲಿ 18 ಮಂದಿ ಮೃತಪಟ್ಟಿದ್ದಾರೆ. ಅವರಲ್ಲಿ ಕೊರೊನಾ ಎಂದು ದಾಖಲಾಗಿರುವುದು ನಾಲ್ಕು ಪ್ರಕರಣಗಳಷ್ಟೆ.

ಜಿಲ್ಲೆಯ ಬಹುತೇಕ ಗ್ರಾಮಗಳಲ್ಲಿ ಈ ರೀತಿ ಸಾವುಗಳು ಸಂಭವಿಸುತ್ತಿವೆ. ಆದರೂ ಜನರು ಕೊರೊನಾ ಪರೀಕ್ಷೆ ಮಾಡಿಸಿಕೊಳ್ಳಲು ಈಗಲೂ ಹಿಂದೇಟು ಹಾಕುತ್ತಿದ್ದಾರೆ. ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರಗಳ, ಸಮುದಾಯ ಆರೋಗ್ಯ ಕೇಂದ್ರಗಳ ಸಿಬ್ಬಂದಿ, ಸ್ಥಳೀಯ ಜನಪ್ರತಿನಿಧಿಗಳು ಜನರನ್ನು ಪರೀಕ್ಷೆ ಮಾಡಿಸಲು ಒತ್ತಾಯಿಸಿ ಸೋತು ಹೋಗಿದ್ದಾರೆ.

ಯಾರಿಗಾದರೂ ಜ್ವರ, ಶೀತ, ಕೆಮ್ಮು ಬಂದರೆ ತಮಗೆ ಗೊತ್ತಿರುವ ವೈದ್ಯರಿಂದ ಇಲ್ಲವೇ ಮೆಡಿಕಲ್ ಶಾಪ್‌ಗಳಿಂದ ಗುಳಿಗೆ ತೆಗೆದುಕೊಂಡು ಸುಮ್ಮನಿರುವ ಕಾರಣದಿಂದಾಗಿಯೇ ಸಾವು–ನೋವು ಜಾಸ್ತಿಯಾಗುತ್ತಿದೆ. ಜತೆಗೆ ಕೊರೊನಾ ಹಬ್ಬಲೂ ಕಾರಣವಾಗುತ್ತಿದೆ.

ಸಣ್ಣಪುಟ್ಟ ಕಾಯಿಲೆಗೆಲ್ಲ ಕೊರೊನಾ ಪರೀಕ್ಷೆ ಯಾಕೆ ಎಂಬುದು ಜನರ ಅಭಿಪ್ರಾಯ. ಶಾಸಕರನ್ನೂ ಒಳಗೊಂಡಂತೆ ಅನೇಕರು ಒತ್ತಾಯಿಸಿದ್ದರಿಂದ ಈಗ ಕೊರೊನಾ ಪರೀಕ್ಷೆ ಮಾಡಿಸಿಕೊಳ್ಳುತ್ತಿದ್ದಾರೆ ಎನ್ನುತ್ತಾರೆ ರಾಮೇಶ್ವರದ ಗ್ರಾಮ ಪಂಚಾಯಿತಿ ಅಧ್ಯಕ್ಷ ಮಲ್ಲೇಶಪ್ಪ, ಗ್ರಾಮದ ಮುಖಂಡ ಚಂದ್ರೇಗೌಡ.

ಜನರು ಪರೀಕ್ಷೆ ಮಾಡಿಸಲು ಹೋಗದೇ ಖಾಸಗಿ ವೈದ್ಯರಿಂದ ಹೈಡೋಸ್ ಗುಳಿಗೆ ತೆಗೆದುಕೊಳ್ಳುತ್ತಾರೆ. ಅದರ ಅಡ್ಡಪರಿಣಾಮದ ಅರಿವಿಲ್ಲದೇ ತೊಂದರೆಗೆ ಸಿಲುಕುತ್ತಿದ್ದಾರೆ ಎನ್ನುವುದು ಸ್ಥಳೀಯ ಶಾಸಕ ಎಂ.ಪಿ. ರೇಣುಕಾಚಾರ್ಯ ಅಭಿಪ್ರಾಯ.

ಸಿಸಿಸಿ: ಸ್ಥಳೀಯ ಸೋಂಕಿತರಿಗೆ ಸ್ಥಳೀಯವಾಗಿಯೇ ಕೋವಿಡ್ ಕೇರ್ ಸೆಂಟರ್ (ಸಿಸಿಸಿ) ಆರಂಭಿಸಿದರೆ ಮನೆಯಲ್ಲೇ ಉಳಿಯಲು ಪಟ್ಟು ಹಿಡಿಯುವುದು ತಪ್ಪಲಿದೆ ಎಂಬ ಕಾರಣಕ್ಕೆ ಕೂಲಂಬಿ ಗದ್ದಿಗೇಶ್ವರ ದೇವಸ್ಥಾನ ಸಮಿತಿ ಮತ್ತು ಅಲ್ಲಿನ ಗ್ರಾಮ ಪಂಚಾಯಿತಿ ಸೇರಿ ದೇವಸ್ಥಾನದ ಸಭಾಂಗಣದಲ್ಲಿಯೇ ಸಿಸಿಸಿ ತೆರೆದಿದ್ದಾರೆ. ಕಾರಿಗನೂರಿನಲ್ಲಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಸದಸ್ಯರ ಗೌರವಧನದಲ್ಲಿ ಸ್ಥಳೀಯರ ಸಹಕಾರ ಪಡೆದು ಸಿಸಿಸಿ ಆರಂಭಿಸಿದ್ದಾರೆ.

ದೇವರಿಗೆಮೊರೆ: ಹರಿಹರ ತಾಲ್ಲೂಕಿನ ಕಡಾರನಾಯಕನಹಳ್ಳಿ, ಚನ್ನಗಿರಿ ತಾಲ್ಲೂಕಿನ ಮರಬನಹಳ್ಳಿ ಸಹಿತ ವಿವಿಧೆಡೆ ಜನರು ಕೊರೊನಾ ಓಡಿಸಲು ದೇವರ ಮೊರೆ ಹೋಗಿದ್ದಾರೆ. ವಿವಿಧ ಪೂಜೆ, ಮಾರಿ ಗಡಿ ದಾಟಿಸುವುದು ಮುಂತಾದವುಗಳನ್ನೂ ಮಾಡುತ್ತಿದ್ದಾರೆ.

ಚನ್ನಗಿರಿ ತಾಲ್ಲೂಕಿನ ಮರಬನಹಳ್ಳಿಯಲ್ಲಿ ಕೊರೊನಾ ಬಾರದಂತೆ ಕಾಪಾಡು ಎಂದು ಭೂತಪ್ಪ, ಚೌಡಮ್ಮನಿಗೆ ಪೂಜೆ ಸಲ್ಲಿಸುತ್ತಿರುವ ಸ್ಥಳೀಯರು /ಪ್ರಜಾವಾಣಿ ಚಿತ್ರ: ಸತೀಶ ಬಡಿಗೇರ್

ಕೊರೊನಾಕ್ಕಿಂತ ಲಾಕ್‌ಡೌನ್ ಹೊಡೆತ ದೊಡ್ಡದು

'ಕೊರೊನಾ ಬರುತ್ತದೆ, ಹೋಗುತ್ತದೆ. ಕೃಷಿ ಮಾಡದೇ ಇದ್ದರೆ ಹೊಟ್ಟೆ ತುಂಬುವುದು ಹೇಗೆ? ಮೊದಲು ಲಾಕ್‌ಡೌನ್ ತೆಗೆಯಬೇಕು' ಎನ್ನುವುದು ದಾಗಿನಕಟ್ಟೆಯ ಕೃಷಿಕ ಕರಿಬಸಪ್ಪ ಒತ್ತಾಯಿಸಿದ್ದಾರೆ.

'ಮಳೆ ಬಂದಿದೆ. ಕೃಷಿ ಚಟುವಟಿಕೆ ಆರಂಭವಾಗಿದೆ. ಆದರೆ ನಾವು ಬೆಳೆದ ಬೆಳೆಗಳಿಗೆ ಈ ಲಾಕ್‌ಡೌನ್‌ನಿಂದ ಬೆಲೆ ಸಿಗದೇ ಹೋದರೆ ಎಂಬ ಚಿಂತೆ ಕಾಡುತ್ತಿದೆ' ಎನ್ನುತ್ತಾರೆ ಎಪಿಎಂಸಿ ಅಧ್ಯಕ್ಷರೂ ಆಗಿರುವ ಕೃಷಿಕ ಅಣಜಿಯ ಎಸ್.ಕೆ. ಚಂದ್ರಶೇಖರ್.

'ನಾವು ಹೊಲಕ್ಕೆ ಹೋಗಿ ಬಿಡುತ್ತೇವೆ. ವ್ಯಾಪಾರಸ್ಥರು, ಖಾಸಗಿ ವಾಹನಗಳ ಚಾಲಕರು, ಕಂಡಕ್ಟರ್‌ಗಳು ಏನು ಮಾಡಬೇಕು' ಎಂಬುದು ಬಿಳಿಚೋಡಿನ ಪರಮೇಶ್ವರ್, ಪರಶುರಾಮ, ಸಿದ್ದಪ್ಪ ಅವರ ಪ್ರಶ್ನೆ.

ಆಸ್ಪತ್ರೆಗಳಿವೆ, ಸಿಬ್ಬಂದಿ ಇಲ್ಲ

ಹೊನ್ನಾಳಿ, ಚನ್ನಗಿರಿ, ಹರಿಹರ, ಜಗಳೂರು ತಾಲ್ಲೂಕು ಆಸ್ಪತ್ರೆಗಳಲ್ಲಿ, ಮಲೇಬೆನ್ನೂರು, ನ್ಯಾಮತಿ ಇನ್ನಿತರ ಕಡೆಗಳ ಸಮುದಾಯ ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಶೇ 50ರಷ್ಟು ಕೂಡ ವೈದ್ಯರಿಲ್ಲ, ಶುಶ್ರೂಷಕರಿಲ್ಲ. ಸಿಬ್ಬಂದಿ ಇಲ್ಲ. ಇದ್ದಿದ್ದರಲ್ಲೇ ಸುಧಾರಿಸಿಕೊಳ್ಳುತ್ತಿದ್ದಾರೆ. ಆಮ್ಲಜನಕ ಅಗತ್ಯ ಇರುವಷ್ಟು ಪೂರೈಕೆ ಇಲ್ಲ. ಮಲೇಬೆನ್ನೂರು ಆಸ್ಪತ್ರೆಯಲ್ಲಿ ಆಕ್ಸಿಜನ್ ಬೆಡ್‌ಗಳು ತಯಾರಿವೆ. ಆದರೆ, ಟೆಕ್ನಿಷಿಯನ್ ಮತ್ತು ಆಮ್ಲಜನಕ ಎರಡೂ ಇಲ್ಲದೇ ಅವು ಚಾಲನೆಗೊಂಡಿಲ್ಲ.

'ತಜ್ಞ ವೈದ್ಯರು, ಸಿಬ್ಬಂದಿಯ ಕೊರತೆಯನ್ನು ನೀಗಿಸಿದರೆ ಜನರಿಗೆ ಇನ್ನಷ್ಟು ಪರಿಣಾಮಕಾರಿಯಾಗಿ ಆರೋಗ್ಯ ಸೇವೆಯನ್ನು ಒದಗಿಸಲು ಸಾಧ್ಯ' ಎಂದು ಮಲೇಬೆನ್ನೂರು ಸಮುದಾಯ ಕೇಂದ್ರ ವೈದ್ಯರಾದ ಡಾ. ಕೆ.ಆರ್. ಗೌಡ, ಡಾ. ನಿಸಾರ್ ಅಹಮ್ಮದ್ ಹೇಳಿದರು.

ಕೊರೊನಾ ಪರೀಕ್ಷೆ ಮಾಡಿಸಿಕೊಳ್ಳಲು ಜನ ಬಾರದೇ ಇದ್ದರೂ ಲಸಿಕೆಗಾಗಿ ಸರದಿಯಲ್ಲಿ ನಿಲ್ಲುತ್ತಿದ್ದಾರೆ. ಆದರೆ ಲಸಿಕೆಗಳೇ ಸಿಗುತ್ತಿಲ್ಲ. 'ಏಪ್ರಿಲ್ 1ರಂದು ನನ್ನ ತಂದೆಗೆ ಕೊವಾಕ್ಸಿನ್ ಲಸಿಕೆ ಮೊದಲ ಡೋಸ್ ಹಾಕಲಾಗಿತ್ತು. ಮೇ 16ಕ್ಕೆ ಎರಡನೇ ಡೋಸ್‌ಗಾಗಿ ಬರಲು ಹೇಳಿದ್ದರು. ಆದರೆ ಲಸಿಕೆ ನೀಡುತ್ತಿಲ್ಲ. ಈಗ 80 ದಿನ ಆಗಬೇಕು ಎಂದು ಹೇಳುತ್ತಿದ್ದಾರೆ' ಎಂದು ಮಲೇಬೆನ್ನೂರಿನ ಕಿರಣ್ ಬೇಸರ ವ್ಯಕ್ತಪಡಿಸಿದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ದಾವಣಗೆರೆ ಜಿಲ್ಲಾ ಕೋವಿಡ್ ಅಂಕಿ–ಅಂಶ

42,394 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
4,314 ▼	37,724 ▲	356 ▲

ದಿನದ ಏರಿಕೆ

ಹೊಸ ಪ್ರಕರಣ	360 ▼
ಗುಣಮುಖ	818 ▼
ಸಾವು	01 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ರಾಮೇಶ್ವರದಲ್ಲಿ ಕೊರೊನಾ ಸೋಂಕು ಹೆಚ್ಚು ವ್ಯಾಪಿಸಿದೆ ಎಂದು ಪ್ರಚಾರ ಆಗಿ, ಇಲ್ಲಿಯ ಜನರಿಗೆ ಕೂಲಿ ಕೆಲಸ ಕೂಡ ಸಿಗದಂತಾಗಿತ್ತು. ಈಗ ಎಲ್ಲ ಕಡೆ ಕೊರೊನಾ ಬಂದಿದೆ.
ಮಲ್ಲೇಶಪ್ಪ, ರಾಮೇಶ್ವರ ಗ್ರಾ.ಪಂ. ಅಧ್ಯಕ್ಷ, ನ್ಯಾಮತಿ ತಾಲ್ಲೂಕು

ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರದ ಸೂಚನೆ ಬರುವುದಕ್ಕಿಂತ 10 ದಿನ ಮೊದಲೇ ನಾವು ಸಿಸಿಸಿ ತೆರೆದು ಸೋಂಕಿತರಿಗೆ ತೊಂದರೆಯಾಗದಂತೆ ನೋಡಿಕೊಂಡಿದ್ದೇವೆ.
ಸೋಮಶೇಖರ, ಕೂಲಂಬಿ ಗದ್ದಿಗೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷ, ಹೊನ್ನಾಳಿ ತಾಲ್ಲೂಕು

ಸ್ಥಳೀಯ ಸೋಂಕಿತರನ್ನು ಎಲ್ಲೋ ಕೋವಿಡ್ ಸೆಂಟರ್‌ಗೆ ಹಾಕಿ ಅವರ ಆತ್ಮಸ್ಥೈರ್ಯ ಕುಂದಿಸುವ ಬದಲು ಸ್ಥಳೀಯವಾಗಿ ಸಿಸಿಸಿ ತೆರೆದರೆ ನೆಮ್ಮದಿಯಾಗಿರುತ್ತಾರೆ.
ತೇಜಸ್ವಿ ವಿ.ಪಟೇಲ್, ರೈತ ಮುಖಂಡ, ಕಾರಿಗನೂರು, ಚನ್ನಗಿರಿ ತಾಲ್ಲೂಕು

ಆಂಧ್ರ: 14 ವೈದ್ಯಕೀಯ ಕಾಲೇಜಿಗೆ ಚಾಲನೆ

ಹೈದರಾಬಾದ್: ಆಂಧ್ರಪ್ರದೇಶದಲ್ಲಿ 14 ನೂತನ ವೈದ್ಯಕೀಯ ಕಾಲೇಜುಗಳ ಕಟ್ಟಡ ನಿರ್ಮಾಣಕ್ಕೆ ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ಸೋಮವಾರ ಶಂಕುಸ್ಥಾಪನೆ ನೆರವೇರಿಸಿದರು. ಒಟ್ಟು ₹ 8000 ಕೋಟಿ ವೆಚ್ಚದಲ್ಲಿ ಈ ಕಟ್ಟಡಗಳು ನಿರ್ಮಾಣವಾಗಲಿದ್ದು, ಮೂರು ವರ್ಷದಲ್ಲಿ ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ.

ಗಣಿಯಲ್ಲಿ ಸಿಲುಕಿದ ಐವರು ಕಾರ್ಮಿಕರು

ಶಿಲ್ಲಾಂಗ್(ಪಿಟಿಐ): ಮೇಘಾಲಯದ ಪೂರ್ವ ಜೈಂಟಿಯಾ ಹಿಲ್ ಜಿಲ್ಲೆಯ ಕಲ್ಲಿದ್ದಲು ಗಣಿಯೊಂದರಲ್ಲಿ ಐವರು ಕಾರ್ಮಿಕರು ಸಿಲುಕಿದ್ದಾರೆ.

ಡೈನಮೈಟ್ ಸ್ಫೋಟದ ಬಳಿಕ ಕಲ್ಲಿದ್ದಲು ಗಣಿಯಲ್ಲಿ ಪ್ರವಾಹ ಉಂಟಾಗಿ ಈ ಘಟನೆ ನಡೆದಿದೆ.

ಮೈಸೂರು: ತನಿಖೆಗೆ ಆಗ್ರಹಿಸಿ ಸಾ.ರಾ.ಮಹೇಶ್ ದೂರು ಸಲ್ಲಿಸಲು ಸಜ್ಜು

'ಕೋವಿಡ್ ಸಾವಿನ ಲೆಕ್ಕ ಸುಳ್ಳು'

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರಿನಲ್ಲಿ ಕೋವಿಡ್‌ನಿಂದ ಮೃತಪಟ್ಟವರ ನಿಖರ ಮಾಹಿತಿಯನ್ನು ಮುಚ್ಚಿಡಲಾಗಿದೆ ಎಂದು ಆರೋಪಿಸಿರುವ ಜೆಡಿಎಸ್ ಶಾಸಕ ಸಾ.ರಾ. ಮಹೇಶ್, ಈ ಬಗ್ಗೆ ಸಮಗ್ರ ತನಿಖೆ ನಡೆಸಲು ರಾಜ್ಯ ಸರ್ಕಾರಕ್ಕೆ ಆದೇಶಿಸುವಂತೆ ಕೋರಿ ರಾಜ್ಯಪಾಲರಿಗೆ ದೂರು ಸಲ್ಲಿಸುವುದಾಗಿ ಸೋಮವಾರ ಇಲ್ಲಿ ಹೇಳಿದರು.

'ಮೈಸೂರು ನಗರದಲ್ಲಿ ಮೇ 1ರಿಂದ 29ರವರೆಗೆ 238 ಜನರು ಕೋವಿಡ್‌ನಿಂದ ಮೃತಪಟ್ಟಿದ್ದಾಗಿ ಜಿಲ್ಲಾಡಳಿತ ಪ್ರಕಟಿಸಿದೆ. ಆದರೆ ಮೈಸೂರಿನ ಮುಕ್ತಿಧಾಮ, ಸ್ಮಶಾನಗಳಲ್ಲಿ ಈ ಅವಧಿಯಲ್ಲಿ ಕೋವಿಡ್‌ನಿಂದ ಮೃತಪಟ್ಟ 969 ಜನರ ಅಂತ್ಯ ಸಂಸ್ಕಾರ ನಡೆಸಲಾಗಿದೆ' ಎಂದು ಶಾಸಕರು, ಪಾಲಿಕೆಯ ಜನನ–ಮರಣ ವಿಭಾಗದಿಂದ ತಾವು ಸಂಗ್ರಹಿಸಿದ ದಾಖಲಾತಿಗಳನ್ನು ಸುದ್ದಿಗೋಷ್ಠಿಯಲ್ಲಿ ಪ್ರದರ್ಶಿಸಿದರು.

ಜಿಲ್ಲೆಯಾದ್ಯಂತ 3 ಸಾವಿರಕ್ಕೂ ಹೆಚ್ಚು ಜನರು ಕೋವಿಡ್‌ನಿಂದ ಮೃತಪಟ್ಟಿರುವ ಅನುಮಾನವಿದೆ ಎಂದ ಅವರು, ಈ ಬಗ್ಗೆಯೂ ದಾಖಲೆಗಳನ್ನು ಸಂಗ್ರಹಿಸುತ್ತಿರುವುದಾಗಿ ಹೇಳಿದರು.

> ಅಧಿಕಾರಿಯ ಸ್ಥೈರ್ಯ ಕುಗ್ಗಿಸುವ ಕೆಲಸ ಮಾಡ್ತಿಲ್ಲ. ರಿಯಲ್ ಎಸ್ಟೇಟ್ ಉದ್ಯಮದ ಪ್ರಭಾವವನ್ನೂ ಬೀರುತ್ತಿಲ್ಲ. ಜಿಲ್ಲಾಧಿಕಾರಿ ಕುಟುಂಬದವರ ಉದ್ಯೋಗ ಏನು?
> **ಸಾ.ರಾ.ಮಹೇಶ್**, ಶಾಸಕ

ಈ ಬಗ್ಗೆ ಮುಖ್ಯಮಂತ್ರಿಗೆ ಪತ್ರ ಬರೆಯುವುದರ ಜೊತೆಗೆ, ತನಿಖೆಗೆ ಆಗ್ರಹಿಸಿ ಮುಖ್ಯ ಕಾರ್ಯದರ್ಶಿ ಹಾಗೂ ಮಾನವ ಹಕ್ಕುಗಳ ಆಯೋಗಕ್ಕೂ ದೂರು ಸಲ್ಲಿಸುವುದಾಗಿ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಜಿಲ್ಲಾಡಳಿತದ ಮಾಹಿತಿ ಹಾಗೂ ಪಾಲಿಕೆಯಿಂದ ನನಗೆ ಲಭ್ಯವಾದ ದಾಖಲಾತಿಯ ಪ್ರಕಾರ 731 ಜನರ ಸಾವು ದಾಖಲಾಗಿಲ್ಲ. ಸರ್ಕಾರ ಕೋವಿಡ್‌ನಿಂದ ಮೃತಪಟ್ಟ ಕುಟುಂಬಗಳಿಗೆ ಯಾವುದಾದರೂ ಯೋಜನೆ ಘೋಷಿಸಿದರೆ, ಇವರಿಗೆ ಅನ್ಯಾಯವಾಗುವುದಿಲ್ಲವೇ?' ಎಂದು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಹೆಸರು ಪ್ರಸ್ತಾಪಿಸದೇ ಕಿಡಿಕಾರಿದರು.

'ಕೋವಿಡ್ ನಿಯಂತ್ರಿಸಿದ್ದಾಗಿ ಬಿಂಬಿಸಿಕೊಳ್ಳಲು, ಸರ್ಕಾರವನ್ನೇ ದಿಕ್ಕು ತಪ್ಪಿಸುತ್ತಿದ್ದೀರಾ? ಮನುಷ್ಯತ್ವವೇ ಇಲ್ಲವಾ?' ಎಂದು ಹರಿಹಾಯ್ದ ಸಾ.ರಾ. ಮಹೇಶ್, 'ಮೈಸೂರಿನಲ್ಲಿ ಕೋವಿಡ್ ಸಾವಿನ ಪ್ರಮಾಣ ಇಂದಿಗೂ ಇಳಿಮುಖವಾಗಿಲ್ಲ. ಸರ್ಕಾರವನ್ನು ವಂಚಿಸುವ ಇವರ ಕುತಂತ್ರದ ಕ್ರಮದಿಂದ ಅಂಕಿ–ಅಂಶದಲ್ಲಷ್ಟೇ ತಗ್ಗಿದೆ. ಆದರೆ, ಲೆಕ್ಕ ಸುಳ್ಳು ಎಂಬುದನ್ನು ದಾಖಲೆಗಳೇ ಹೇಳುತ್ತಿದ್ದು, ಇಂತಹ ಲೆಕ್ಕ ಕೊಡಲು ನಮಗೆ ಐಎಎಸ್ ಅಧಿಕಾರಿಯೇ ಬೇಕಿಲ್ಲ. ಎಸ್ಸೆಸ್ಸೆಲ್ಸಿ ಫೇಲಾದವರೂ ಈ ಕೆಲಸ ಮಾಡಬಲ್ಲರು. ರಾಜ್ಯದಲ್ಲಿ ಬೆಂಗಳೂರಿನ ನಂತರದ ಕೇಂದ್ರ ಸ್ಥಾನವಾದ ಮೈಸೂರಿಗೆ ಒಳ್ಳೆಯ, ಕಳಂಕ ರಹಿತ ಅಧಿಕಾರಿ ಬೇಕು ಆದರೆ, ನಮ್ಮದು ದುರ್ದೈವ' ಎಂದರು.

7ರ ಬಳಿಕವೂ ಲಾಕ್‌ಡೌನ್ ವಿಸ್ತರಣೆಗೆ ತಜ್ಞರ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ದೃಢಪಡುವ ಪ್ರಮಾಣ ಶೇ 5ಕ್ಕಿಂತ ಕೆಳಗೆ ಬರುವರೆಗೆ ಮತ್ತು ಮರಣ ಪ್ರಮಾಣ ಶೇ 1ಕ್ಕಿಂತ ಕೆಳಗೆ ಇಳಿಯುವವರೆಗೆ ರಾಜ್ಯದಲ್ಲಿ ಲಾಕ್‌ಡೌನ್ ಮುಂದುವರಿಸಬೇಕು' ಎಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದೆ.

'ಕೋವಿಡ್ ದೃಢ ಪ್ರಮಾಣ ಸೋಮವಾರ (ಮೇ 31) ಶೇ 13.57ರಷ್ಟು ಹಾಗೂ ಮರಣ ಪ್ರಮಾಣ ಶೇ 2.47 ಇದೆ. ದಿನೇ ದಿನೇ ಕೋವಿಡ್ ದೃಢ ಪ್ರಕರಣಗಳ ಸಂಖ್ಯೆ ಕಡಿಮೆ ಆಗುತ್ತಿದೆ. ರಾಜ್ಯದಲ್ಲಿ ದಿನನಿತ್ಯದ ಸೋಂಕು ದೃಢ ಪ್ರಮಾಣ 5 ಸಾವಿರಕ್ಕೆ ಇಳಿಯುವವರೆಗೆ ಕಠಿಣ ನಿಯಮಗಳನ್ನು ಮುಂದುವರಿಸಬೇಕು' ಎಂದು ಸಮಿತಿ ಹೇಳಿದೆ.

ಸೋಮವಾರ ಬೆಳಿಗ್ಗೆ ವರದಿಯನ್ನು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರಿಗೆ ಸಲ್ಲಿಸಿದೆ.

ಭಾನುವಾರ (ಮೇ 30) ಸುಮಾರು 5.30 ಗಂಟೆ ಸಭೆ ನಡೆಸಿದ ಸಮಿತಿಯ ಎಲ್ಲ 14 ಸದಸ್ಯರು, ಕೇಂದ್ರ ಸರ್ಕಾರದ ಮಾರ್ಗಸೂಚಿ, ಕಳೆದ ಒಂದು ತಿಂಗಳ ಅವಧಿಯಲ್ಲಿ ರಾಜ್ಯದಲ್ಲಿ ವರದಿಯಾಗುತ್ತಿರುವ ಕೋವಿಡ್ ಪ್ರಕರಣಗಳು, ದೃಢಪಡುವ ಪ್ರಮಾಣ, ಸಾವು ಪ್ರಮಾಣದ ಬಗ್ಗೆ ವಿಸ್ತೃತ ಚರ್ಚೆ ನಡೆಸಿದ ಬಳಿಕ ಈ ಶಿಫಾರಸು ಮಾಡಿದೆ ಎಂದು ಸಮಿತಿಯ ಮೂಲಗಳು ತಿಳಿಸಿವೆ.

'ಯಾವ ರೀತಿಯಲ್ಲಿ ಲಾಕ್‌ಡೌನ್ ಮಾಡಬೇಕು ಎನ್ನುವುದು ಸರ್ಕಾರಕ್ಕೆ ಬಿಟ್ಟಿದ್ದು. ಸದ್ಯದ ಪರಿಸ್ಥಿತಿ ನೋಡಿದರೆ, ಲಾಕ್‌ಡೌನ್ ವಿಧಿಸಿರುವ ಜೂನ್ 7ರವರೆಗೆ ದೃಢ ಪ್ರಮಾಣ ಶೇ 5ಕ್ಕಿಂತ ಕೆಳಗೆ ಮತ್ತು ಮರಣ ಪ್ರಮಾಣ ಶೇ 1ಕ್ಕಿಂತ ಕಡಿಮೆ ಬರುವುದು ಅನುಮಾನ. ಹೀಗಾಗಿ, ಸದ್ಯಕ್ಕೆ ಈಗ ಜಾರಿಯಲ್ಲಿರುವ ಕ್ರಮಗಳನ್ನು ಮುಂದುವರಿಸಬೇಕು' ಎಂಬ ಅಭಿಪ್ರಾಯ ಸಮಿತಿಯ ಸಭೆಯಲ್ಲಿ ವ್ಯಕ್ತವಾಗಿದೆ.

'ಚಿತ್ರರಂಗಕ್ಕೆ ಆರ್ಥಿಕ ಪರಿಹಾರ ಪ್ಯಾಕೆಜ್ ಅಗತ್ಯತೆ ಇದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಳೆದ ನಾಲ್ಕೈದು ತಿಂಗಳಿಂದ ಸಿನಿಮಾ ಚಿತ್ರೀಕರಣವೆಲ್ಲವೂ ಸ್ಥಗಿತವಾಗಿದ್ದು, ಚಿತ್ರರಂಗ ಸಂಕಷ್ಟಕ್ಕೀಡಾಗಿದೆ. ಈ ಸಂದರ್ಭದಲ್ಲಿ ಆರ್ಥಿಕ ಪರಿಹಾರ ಪ್ಯಾಕೆಜ್ ನೀಡಬೇಕು ಎನ್ನುವ ಮನವಿಯನ್ನು ಮುಖ್ಯಮಂತ್ರಿಯವರಿಗೆ ಮಾಡಿದ್ದು, ಅವರು ಸಕರಾತ್ಮಕ ಭರವಸೆ ನೀಡಿದ್ದಾರೆ' ಎಂದು ನಟಿ, ಸಂಸದೆ ಸುಮಲತಾ ಅಂಬರೀಷ್ ಹೇಳಿದರು.

ಚಾಮರಾಜಪೇಟೆಯಲ್ಲಿರುವ ಕರ್ನಾಟಕ ಚಲನಚಿತ್ರ ಕಲಾವಿದರ ಸಂಘದಲ್ಲಿ ಚಿತ್ರರಂಗದ ಕಲಾವಿದರಿಗೆ ಕೋವಿಡ್ ಲಸಿಕೆ ನೀಡುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಕನ್ನಡ ಚಿತ್ರರಂಗದ ಸಂಕಷ್ಟದ ಪರಿಸ್ಥಿತಿ ಮನವರಿಕೆ ಮಾಡಿದ್ದೇವೆ. ಕಳೆದ ಬಾರಿ ಲಾಕ್‌ಡೌನ್ ಸಂದರ್ಭದಲ್ಲಿ ಚಿತ್ರರಂಗದ ಕಾರ್ಮಿಕರಿಗೆ ದಿನಸಿ ಕಿಟ್ ನೀಡಿದ್ದರು. ಹೀಗಾಗಿ ಈ ಬಾರಿಯೂ ಆಹಾರದ ಕಿಟ್ ನೀಡಲು ಮನವಿ ಸಲ್ಲಿಸಿದ್ದೇವೆ. ಈಗಾಗಲೇ ಉಪಮುಖ್ಯಮಂತ್ರಿ ಡಾ.ಅಶ್ವತ್ಥನಾರಾಯಣ ಅವರು ಫೋನ್ ಮುಖಾಂತರ ಆಹಾರ ಸಚಿವರ ಜೊತೆ ಮಾತುಕತೆ ನಡೆಸಿದ್ದಾರೆ. ಅವರು ಆಹಾರ ಕಿಟ್ ನೀಡುವ ಭರವಸೆ ನೀಡಿದ್ದಾರೆ' ಎಂದರು.

'ಅಂಬರೀಷ್ ಅವರು ಕಲಾವಿದರ ಭವನವನ್ನು ಪಟ್ಟು ಹಿಡಿದು ಮಾಡಿದ್ದೇ ಕಲಾವಿದರ ಒಳಿತಿಗಾಗಿ. ಇಂದು ನೂರಾರು ಕಲಾವಿದರಿಗೆ ಲಸಿಕೆ ಹಾಕಿಸಲು ಈ ಭವನ ನೆರವಾಗಿದೆ. ಕೋವಿಡ್–19 ವಿಷಯದಲ್ಲಿ ನಿಯಮ ಎಲ್ಲರಿಗೂ ಒಂದೇ ಆಗಿರುವ ಕಾರಣ, ಜೂನ್ 7ರ ನಂತರ ಚಿತ್ರೀಕರಣಕ್ಕೆ ಅನುಮತಿ ನೀಡಿ ಎಂದು ಮನವಿ ಮಾಡುವುದು ಸೂಕ್ತವಾಗುವುದಿಲ್ಲ' ಎಂದರು.

ಸಂಕ್ಷಿಪ್ತ ಸುದ್ದಿ

'ಧೂಮಪಾನ ಮಾಡುವವರಲ್ಲಿ ಗಂಭೀರ ಕಾಯಿಲೆ'

ನವದೆಹಲಿ(ಪಿಟಿಐ): ಧೂಮಪಾನ ಮಾಡುವವರು ಶೇಕಡ 40ರಿಂದ 50ರಷ್ಟು ಗಂಭೀರ ಕಾಯಿಲೆಗಳಿಗೆ ಒಳಗಾಗುತ್ತಿದ್ದಾರೆ ಮತ್ತು ಕೋವಿಡ್–19 ಸೋಂಕಿನಿಂದ ಸಾವಿಗೀಡಾಗುತ್ತಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವ ಹರ್ಷ ವರ್ಧನ್ ಸೋಮವಾರ ತಿಳಿಸಿದ್ದಾರೆ.

ಭಾರತದಲ್ಲಿ ಪ್ರತಿ ವರ್ಷ ಸುಮಾರು 13 ಲಕ್ಷ ಮಂದಿ ತಂಬಾಕು ಸೇವನೆಯಿಂದ ಸಾವಿಗೀಡಾಗುತ್ತಿದ್ದಾರೆ. ಅಂದರೆ, ಪ್ರತಿ ದಿನ 3,500 ಮಂದಿ ಸಾವಿಗೀಡಾಗುತ್ತಿದ್ದಾರೆ. ಇದು ದೇಶದ ಅಭಿವೃದ್ಧಿಗೂ ಮಾರಕವಾಗಿದೆ ಎಂದು ಅವರು ಹೇಳಿದ್ದಾರೆ.

ತಂಬಾಕು ರಹಿತ ದಿನದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರಯತ್ನದಿಂದಾಗ ತಂಬಾಕು ಬಳಕೆಯು ಕಡಿಮೆಯಾಗಿದೆ. 2009–10ರಲ್ಲಿ ಶೇಕಡ 34.6ರಷ್ಟು ಬಳಕೆಯಾಗುತ್ತಿದ್ದರೆ, 2016–17ರಲ್ಲಿ ಶೇಕಡ 28.6ಕ್ಕೆ ಇಳಿಕೆಯಾಗಿದೆ ಎಂದು ಅವರು ವಿವರಿಸಿದ್ದಾರೆ.

12ನೇ ತರಗತಿ ಪರೀಕ್ಷೆ–ಕೇಂದ್ರದಿಂದ 2 ದಿನದಲ್ಲಿ ನಿರ್ಧಾರ

ನವದೆಹಲಿ (ಪಿಟಿಐ): ಕೋವಿಡ್ ಪಿಡುಗಿನ ಮಧ್ಯೆ 12ನೇ ತರಗತಿ ಪರೀಕ್ಷೆಗಳನ್ನು ನಡೆಸಬೇಕೇ ಎಂಬ ಕುರಿತಾಗಿ ಎರಡು ದಿನಗಳಲ್ಲಿ ಕೇಂದ್ರ ಸರ್ಕಾರವು ಅಂತಿಮ ನಿರ್ಧಾರ ಕೈಗೊಳ್ಳಲಿದೆ ಎಂದು ಸೋಮವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಲಾಗಿದೆ.

ಸಿಬಿಎಸ್‌ಇ ಮತ್ತು ಸಿಐಎಸ್‌ಸಿಇ ಮಂಡಳಿಗಳು ನಡೆಸುವ 12ನೇ ತರಗತಿ ಪರೀಕ್ಷೆಗಳನ್ನು ರದ್ದುಗೊಳಿಸಬೇಕು ಎಂದು ಕೋರಿ ಸಲ್ಲಿಸಲಾಗಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ಮತ್ತು ನ್ಯಾಯಮೂರ್ತಿ ದಿನೇಶ್ ಮಹೇಶ್ವರಿ ಅವರಿದ್ದ ಪೀಠಕ್ಕೆ ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಈ ಮಾಹಿತಿ ನೀಡಿದರು.

'ನೀವು ಈ ಸಂಬಂಧ ನಿರ್ಧಾರವನ್ನು ಕೈಗೊಳ್ಳಿ. ಅದಕ್ಕೆ ನೀವು ಅರ್ಹರು. ಒಂದು ವೇಳೆ ಹಿಂದಿನ ವರ್ಷದ ನೀತಿಯನ್ನು ರದ್ದುಗೊಳಿಸುವುದಿದ್ದರೆ, ಅದಕ್ಕೆ ಸರಿಯಾದ ಕಾರಣವನ್ನು ನೀಡಬೇಕು' ಎಂದು ಪೀಠವು ತಿಳಿಸಿತು. ನ್ಯಾಯಾಲಯವು ಅರ್ಜಿ ವಿಚಾರಣೆಯನ್ನು ಜೂನ್ 3ಕ್ಕೆ ಮುಂದೂಡಿತು.

ದಾದಿಯರಿಗೆ ಧೈರ್ಯ ತುಂಬಿದ ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳ ಸರ್ಕಾರಿ ಆಸ್ಪತ್ರೆಗಳಲ್ಲಿ ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿರುವ ಸ್ಟಾಫ್ ನರ್ಸ್‌ಗಳೊಂದಿಗೆ ಸೋಮವಾರ ವಿಡಿಯೊ ಸಂವಾದ ನಡೆಸಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ನರ್ಸ್‌ಗಳಿಗೆ ಧೈರ್ಯತುಂಬಿದರು.

'ರಾಜ್ಯದಲ್ಲಿ 21,574 ಮಂದಿ ಸ್ಟಾಫ್ ನರ್ಸ್‌ಗಳಿದ್ದಾರೆ. ಕೋವಿಡ್ ಸಂಕಷ್ಟದ ಕಾಲದಲ್ಲಿ ಅವರ ಸೇವೆ ಶ್ಲಾಘನೀಯವಾದುದು. ಎಲ್ಲ ನರ್ಸ್‌ಗಳಿಗೂ ಮಾಸಿಕ ₹ 8,000 ಕೋವಿಡ್ ವಿಶೇಷ ಭತ್ಯೆ ನೀಡಲಾಗುತ್ತಿದೆ. ಕೋವಿಡ್‌ನಿಂದ ಮೃತಪಟ್ಟ ಸ್ಟಾಫ್ ನರ್ಸ್‌ಗಳ ಕುಟುಂಬಗಳಿಗೆ 'ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ವಿಮೆ' ಯೋಜನೆಯಡಿ ತಲಾ ₹ 50 ಲಕ್ಷ ಪರಿಹಾರ ನೀಡಲಾಗುವುದು. ಆರು ಅರ್ಜಿಗಳು ಸ್ವೀಕೃತವಾಗಿದ್ದು, ಮೂರು ಪ್ರಕರಣಗಳಲ್ಲಿ ಪರಿಹಾರ ಪಾವತಿಸಲಾಗಿದೆ' ಎಂದರು.

ಆಸ್ಪತ್ರೆಗಳಲ್ಲಿ ಸಮಸ್ಯೆ, ಸೌಲಭ್ಯ, ಕೆಲಸದ ಅವಧಿಯಲ್ಲಿನ ಸಮಸ್ಯೆಗಳು, ಕೋವಿಡ್ ರೋಗಿಗಳ ವರ್ತನೆ, ಕೋವಿಡ್ ನಿಯಂತ್ರಣಕ್ಕೆ ಇರುವ ಮಾರ್ಗಗಳ ಕುರಿತು ನರ್ಸ್‌ಗಳೊಂದಿಗೆ ಯಡಿಯೂರಪ್ಪ ಸಂವಾದ ನಡೆಸಿದರು. ಎರಡೂವರೆ ತಿಂಗಳ ಹಿಂದೆ ಪತಿಯನ್ನು ಕಳೆದುಕೊಂಡಿರುವ ಬಾದಾಮಿ ತಾಲ್ಲೂಕು ಆಸ್ಪತ್ರೆಯ ನರ್ಸ್ ರೇಣುಕಾ ಗೂಗಿಹಾಳ ಅವರಿಗೆ ಸಂವಾದದಲ್ಲೇ ಮುಖ್ಯಮಂತ್ರಿ ಸಾಂತ್ವನ ಹೇಳಿದರು.

ನರ್ಸ್‌ಗಳ ಕುಟುಂಬದ ಸದಸ್ಯರಿಗೂ ಸರ್ಕಾರದಿಂದ ಉಚಿತವಾಗಿ ಕೋವಿಡ್ ಲಸಿಕೆ ನೀಡುವಂತೆ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯ ವಹೀದಾ ಮನವಿ ಮಾಡಿದರು. ವೈದ್ಯಕೀಯ ಶಿಕ್ಷಣ ಇಲಾಖೆಯ ಸಿಬ್ಬಂದಿಗೂ 'ಜ್ಯೋತಿ ಸಂಜೀವಿನಿ' ಯೋಜನೆ ಸೌಲಭ್ಯ ನೀಡುವಂತೆ ರಾಯಚೂರು ವೈದ್ಯಕೀಯ ಕಾಲೇಜಿನ ರಾಚೋಟಿ ವಾರದ ಆಗ್ರಹಿಸಿದರು. ಎರಡೂ ವಿಷಯಗಳ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಯಡಿಯೂರಪ್ಪ ಭರವಸೆ ನೀಡಿದರು.

ಸತತ ಕೆಲಸದಿಂದ ಬಳಲುವ ಹಾಗೂ ಮರಣ ಪ್ರಕರಣಗಳನ್ನು ಸಮೀಪದಿಂದ ನೋಡುವುದರಿಂದ ನರ್ಸ್‌ಗಳಿಗೆ ಆಪ್ತ ಸಮಾಲೋಚನೆ ಸೌಲಭ್ಯ ಕಲ್ಪಿಸುವಂತೆ ಹರಿಹರ ಸಾರ್ವಜನಿಕ ಆಸ್ಪತ್ರೆಯ ಶ್ವೇತಾ ಆರ್. ಮನವಿ ಮಾಡಿದರು. ಚಿಕ್ಕಮಗಳೂರು ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿರುವ ಸಿಬ್ಬಂದಿ ಕೊರತೆ ಸಮಸ್ಯೆಯನ್ನು ಅಲ್ಲಿನ ನರ್ಸ್ ಸಂಧ್ಯಾ ರಾಣಿ ಮುಖ್ಯಮಂತ್ರಿಗೆ ವಿವರಿಸಿ, ಹೆಚ್ಚಿನ ಸಿಬ್ಬಂದಿ ಒದಗಿಸುವಂತೆ ಮನವಿ ಮಾಡಿದರು. ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ಇಲಾಖೆ ಆಯುಕ್ತ ಡಾ.ಕೆ.ವಿ. ತ್ರಿಲೋಕಚಂದ್ರ ಸಂವಾದದಲ್ಲಿ ಪಾಲ್ಗೊಂಡಿದ್ದರು.

ಮಂಗಳವಾರ, ಜೂನ್ 1, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 152 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಶಿಸ್ತುಬದ್ಧ ಜೀವನ ಹಾಗೂ ದಿನವೂ ಇಪ್ಪತ್ತು ನಿಮಿಷಗಳ ಕಾಲ ವ್ಯಾಯಾಮ ಮಾಡುವುದರಿಂದ ಮನಸ್ಸನ್ನು ಸ್ಥಿಮಿತದಲ್ಲಿಟ್ಟುಕೊಳ್ಳಬಹುದು.

ಬೆಳ್ಳಿ ಸಂಭ್ರಮ ದೆಹಲಿಯ ಸಂಚಿಗೆ ಸಿಲುಕಿದರೇ ಗೌಡರು?

ಕೋವಿಡ್: ಪಿಎಫ್ ಹಣ ಹಿಂಪಡೆಯಲು ಮತ್ತೆ ಅವಕಾಶ 11

ಅಂಗವಿಕಲರಿಗೆ ಪಿಂಚಣಿ ಸಿಗದೇ ವರ್ಷ 10

ಸೆನ್ಸೆಕ್ಸ್	ನಿಫ್ಟಿ	₹/$
51,937 ▲	15,582 ▲	72.62 ▼

ಕಾರ್ಮಿಕ ಇಲಾಖೆ
ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
ಕಾರ್ಮಿಕ ಸಹಾಯವಾಣಿ 155214ಕ್ಕೆ ಸಂಪರ್ಕಿಸಿ
ಕೊರೋನಾ 2ನೇ ಅಲೆಯ ನಿಯಂತ್ರಣಕ್ಕಾಗಿ ಸರ್ಕಾರ ಲಾಕ್‌ಡೌನ್ ಘೋಷಿಸಿದ್ದು, ಈ ಸಂಕಷ್ಟದ ಸಮಯದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ನೆರವಾಗಲು ಸನ್ಮಾನ್ಯ ಮುಖ್ಯಮಂತ್ರಿಗಳು ರೂ. 3000/-ಗಳ ಸಹಾಯಧನವನ್ನು ಘೋಷಣೆ ಮಾಡಿರುತ್ತಾರೆ.
- ರೂ. 3000/-ಗಳ ಸಹಾಯಧನವನ್ನು ಪಡೆಯಲು ಕಾರ್ಮಿಕರು ಹೊಸದಾಗಿ ಅರ್ಜಿ ಹಾಕುವ, ಕಛೇರಿಗೆ ಭೇಟಿ ನೀಡುವ ಅಥವಾ ಯಾವುದೇ ಮಧ್ಯವರ್ತಿಗಳನ್ನು ಸಂಪರ್ಕಿಸುವ ಅವಶ್ಯಕತೆಯಿರುವುದಿಲ್ಲ.
- ಮಂಡಳಿಯಲ್ಲಿ ನೋಂದಣಿಯಾಗಿರುವ ಅರ್ಹ ಫಲಾನುಭವಿಗಳ ಆಧಾರ್ ಕಾರ್ಡ್‌ಗೆ ಲಿಂಕ್ ಆಗಿರುವ ಬ್ಯಾಂಕ್ ಖಾತೆಗೆ ನೇರವಾಗಿ ಡಿ.ಬಿ.ಟಿ. (ನೇರ ನಗದು ವರ್ಗಾವಣೆ) ಮುಖಾಂತರ ಸಹಾಯಧನವನ್ನು ಜಮೆ ಮಾಡಲಾಗುವುದು.
- ಆಧಾರ್ ಕಾರ್ಡ್‌ಗೆ ಲಿಂಕ್ ಆಗಿರುವ ಬ್ಯಾಂಕ್ ಖಾತೆ ಮತ್ತು ಮೊಬೈಲ್ ಸಂಖ್ಯೆಯನ್ನು ಅಪ್‌ಡೇಟ್ ಮಾಡಿಸಿ. ಒಂದುವೇಳೆ ಬ್ಯಾಂಕ್ ಖಾತೆ ನಿಷ್ಕ್ರಿಯಗೊಂಡಿದ್ದಲ್ಲಿ (ಸ್ಥಗಿತವಾಗಿದ್ದಲ್ಲಿ) ಈ ಕೂಡಲೇ ಸಕ್ರಿಯಗೊಳಿಸಿಕೊಳ್ಳಲು ವಿನಂತಿಸಿದೆ.
ಮಾನ್ಯ ಕಾರ್ಮಿಕ ಸಚಿವರಾದ ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್‌ರವರು ಕಾರ್ಮಿಕರಿಗೆ ಲಸಿಕೆ ನೀಡುವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು.
ಶ್ರೀ ಬಿ.ಎಸ್. ಯಡಿಯೂರಪ್ಪ ಸನ್ಮಾನ್ಯ ಮುಖ್ಯಮಂತ್ರಿಗಳು
ಡಾ. ಜಿ. ಕಲ್ಪನಾ, ಭಾ.ಆ.ಸೇ. ಅಪರ ಮುಖ್ಯಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ
ಅಕ್ರಂ ಪಾಷ, ಭಾ.ಆ.ಸೇ. ಕಾರ್ಮಿಕ ಆಯುಕ್ತರು ಮತ್ತು ಸಿ.ಇ.ಒ., ಕ.ಕ. ಮತ್ತು ಇ.ನಿ.ಕಾ.ಕ.ಮಂಡಳಿ
ಕೊರೋನಾ ಮುಕ್ತ ಸಮಾಜಕ್ಕಾಗಿ ಕೈಜೋಡಿಸೋಣ... ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ
ಸಾರ್ವಜನಿಕ ಆಸ್ತಿ-ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು. - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ರಾಜ್ಯ ಕೋವಿಡ್ ಅಂಕಿ-ಅಂಶ

26,04,431 ▲	ಒಟ್ಟು ಸೋಂಕಿತರು (25,87,827 ನಿನ್ನೆಯ ವಿವರ)
3,13,730 ▼	ಸಕ್ರಿಯ ಪ್ರಕರಣಗಳು
22,61,590 ▲	ಗುಣಮುಖರಾದವರು
29,090 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	16,604	▼
ಗುಣಮುಖ	44,473	▲
ಸಾವು	411	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಒಳ ಪುಟ
ಕಂಪನಿಗಳ ವಿಶ್ವಾಸ ಕುಗ್ಗಿಸಿದ ಕೋವಿಡ್‌ಎರಡನೇ ಅಲೆ 11

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ-7

ಇಂದಿನ ಪಾಡ್‌ಕಾಸ್ಟ್ ವಿಶೇಷ
ಸುದ್ದಿ ಸ್ವಾರಸ್ಯ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ
ಪ್ರಕಾಶ್ ಶೆಟ್ಟಿ

ನೀತಿ ನಿರೂಪಕರಿಗೆ ವಾಸ್ತವದ ಅರಿವಿರಬೇಕು: ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ತರಾಟೆ

ಲಸಿಕೆ ನೀತಿಗೆ ತರ್ಕ ಇದೆಯೇ?

ನವದೆಹಲಿ (ಪಿಟಿಐ): ಕೋವಿಡ್-19ರ ಲಸಿಕೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವನ್ನು ಸುಪ್ರೀಂ ಕೋರ್ಟ್ ಸೋಮವಾರ ತರಾಟೆಗೆ ತೆಗೆದುಕೊಂಡಿದೆ. ಕೋವಿಡ್ ಲಸಿಕೆ ಹಾಕಿಸುವಿಕೆ, ಲಸಿಕೆ ಖರೀದಿ ನೀತಿ, ಕೇಂದ್ರ ಮತ್ತು ರಾಜ್ಯಗಳಿಗೆ ಭಿನ್ನ ದರ ನಿಗದಿ ಎಲ್ಲದಕ್ಕೆ ಸಂಬಂಧಿಸಿ ಕಠಿಣ ಪ್ರಶ್ನೆಗಳನ್ನು ಕೇಂದ್ರದ ಮುಂದಿಟ್ಟಿದೆ. ಹಿಂದೆಂದೂ ಕಂಡರಿಯದ ಬಿಕ್ಕಟ್ಟನ್ನು ಪರಿಣಾಮಕಾರಿಯಾಗಿ ನಿಭಾಯಿಸಬೇಕಿದ್ದರೆ ನೀತಿ ನಿರೂಪಕರಿಗೆ 'ತಳಮಟ್ಟದ ವಾಸ್ತವದ ಅರಿವಿರಬೇಕು' ಎಂದಿದೆ.

ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಿ, ದೇಶದಾದ್ಯಂತ ಏಕರೂಪದ ದರದಲ್ಲಿ ಕೋವಿಡ್ ಲಸಿಕೆ ಲಭ್ಯವಾಗುವಂತೆ ನೋಡಿಕೊಳ್ಳಿ. ಸಾಂಕ್ರಾಮಿಕದ ಸನ್ನಿವೇಶದಲ್ಲಿ ಹೊಂದಾಣಿಕೆ ಸಾಧ್ಯವಾಗುವಂತಹ ನೀತಿಯನ್ನು ರೂಪಿಸಿ ಎಂದು ಸರ್ಕಾರಕ್ಕೆ ಸಲಹೆ ಕೊಟ್ಟಿದೆ.

'ನೀತಿ ನಿರೂಪಿಸುವವರು ನಾವಲ್ಲ. ಈ ಎಲ್ಲ ಸಮಸ್ಯೆಗಳು ಇವೆ ಎಂಬ ಆದೇಶವನ್ನು ಏಪ್ರಿಲ್ 30ರಂದು ನೀಡಲಾಗಿದೆ. ನೀವು (ಸರ್ಕಾರ) ಹೊಂದಾಣಿಕೆ ಮನೋಭಾವ ತೋರಬೇಕು. ನಾವು ಕೇಂದ್ರ ಸರ್ಕಾರ, ನಾವು ಮಾಡಿದ್ದೇ ಸರಿ ಎಂಬ ಮನೋಭಾವ ಸಾಧ್ಯವಿಲ್ಲ. ಇದನ್ನು ನಿಭಾಯಿಸಲು ನಮ್ಮಲ್ಲಿ ಬಲವಾದ ವ್ಯವಸ್ಥೆ ಇದೆ' ಎಂದು ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ಎಲ್. ಎನ್. ರಾವ್ ಮತ್ತು ಎಸ್. ರವೀಂದ್ರ ಭಟ್ ಅವರ ಪೀಠವು ಹೇಳಿದೆ.

'ಯಾರನ್ನೇ ಟೀಕಿಸುವುದು ಅಥವಾ ಕಾಲೆಳೆಯುವುದು ನಮ್ಮ ಉದ್ದೇಶವಲ್ಲ. ವಿದೇಶಾಂಗ ಸಚಿವರು ಅಮೆರಿಕಕ್ಕೆ ಹೋಗಿ ಮಾತುಕತೆ ನಡೆಸಿದ್ದಾರೆ. ಪರಿಸ್ಥಿತಿಯು ಎಷ್ಟು ಕಷ್ಟಕರವಾಗಿದೆ ಎಂಬುದನ್ನು ಇದು ತೋರಿಸುತ್ತದೆ' ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರನ್ನು ಪೀಠವು ಶ್ಲಾಘಿಸಿದೆ.

ಕೋವಿಡ್‌ನಿಂದ ಚೇತರಿಸಿಕೊಳ್ಳುತ್ತಿರುವ ಚಂದ್ರಚೂಡ್ ಅವರು ಕೇಂದ್ರದ ಲಸಿಕೆ ಖರೀದಿ ನೀತಿಯ ಬಗ್ಗೆ ಹಲವು ಪ್ರಶ್ನೆಗಳನ್ನು ಕೇಳಿದರು.

ಜಾಗತಿಕ ಟೆಂಡರ್ ಮೂಲಕ ಲಸಿಕೆ ಖರೀದಿಸಲು ಪಂಜಾಬ್ ಮತ್ತು ದೆಹಲಿ ಯತ್ನಿಸಿವೆ. ಬೃಹನ್ ಮುಂಬೈ ಮಹಾನಗರಪಾಲಿಕೆಗೂ ಬಿಡ್‌ಗಳು ಬಂದಿವೆ. ರಾಜ್ಯಗಳು ಅಥವಾ ನಗರಪಾಲಿಕೆಗಳು ನೇರವಾಗಿ ಲಸಿಕೆ ಖರೀದಿಸಬೇಕು ಎಂಬುದು ಸರ್ಕಾರದ ನೀತಿಯೇ? ಅಥವಾ ರಾಜ್ಯಗಳಿಗಾಗಿ ಕೇಂದ್ರ ಲಸಿಕೆ ಖರೀದಿ ಮಾಡಲಿದೆಯೇ? ಇದರ ಬಗ್ಗೆ ಸ್ಪಷ್ಟತೆ ಬೇಕು ಮತ್ತು ಅದರ ಹಿಂದಿನ ತರ್ಕ ಏನು ಎಂಬುದನ್ನು ಹೇಳಬೇಕು ಎಂದು ಪೀಠವು ಸೂಚಿಸಿದೆ.

'ಇಂತಹ ವಿಚಾರಗಳಲ್ಲಿ ಸರ್ಕಾರದ ನೀತಿ ಏನು ಎಂಬುದರ ದಾಖಲೆಯನ್ನು ಈವರೆಗೆ ನಾವು ನೋಡಿಲ್ಲ. ಆ ಕಡತಗಳನ್ನು ನಾವು ನೋಡಬೇಕಿದೆ. ನಮಗೆ ಇದರ ಹಿಂದಿನ ತರ್ಕ ಏನು ಎಂಬುದು ತಿಳಿಯಬೇಕು. ಕೇಂದ್ರವು ಕಡಿಮೆ ದರದಲ್ಲಿ ಲಸಿಕೆ ಖರೀದಿಸುತ್ತಿದೆ. ಇತರರಿಗೆ ಬೇರೆ ದರಕ್ಕೆ ಲಸಿಕೆ ಮಾರಲು ತಯಾರಕರಿಗೆ ಸ್ವಾತಂತ್ರ್ಯ ಇದೆ. ಇದರ ಹಿಂದಿನ ತರ್ಕ ಏನು' ಎಂದೂ ಪೀಠ ಪ್ರಶ್ನಿಸಿದೆ.

ಭಾರತವು ಒಕ್ಕೂಟ ವ್ಯವಸ್ಥೆ. ರಾಜ್ಯಗಳು ಏನು ಬೇಕಾದರೂ ಮಾಡಿಕೊಳ್ಳಲಿ ಎಂದು ಬಿಡಲಾಗದು. ಕೇಂದ್ರವೇ ಲಸಿಕೆ ಖರೀದಿಸಿ ರಾಜ್ಯಗಳಿಗೆ ಹಂಚಬೇಕು ಎಂದು ಪೀಠ ಹೇಳಿದೆ.

ಈ ಎಲ್ಲ ವಿಚಾರಗಳ ಬಗ್ಗೆ ಎರಡು ವಾರಗಳಲ್ಲಿ ಪ್ರಮಾಣಪತ್ರ ಸಲ್ಲಿಸುವಂತೆ ಪೀಠವು ಸೂಚಿಸಿದೆ. ದೇಶದಲ್ಲಿ ಕೋವಿಡ್ ನಿರ್ವಹಣೆಗೆ ಸಂಬಂಧಿಸಿ ಸುಪ್ರೀಂ ಕೋರ್ಟ್ ಸ್ವಯಂ ಪ್ರೇರಣೆಯಿಂದ ವಿಚಾರಣೆ ನಡೆಸುತ್ತಿದೆ.

ಆದೇಶ ಬೇಡ: ಕೋವಿಡ್ ಸನ್ನಿವೇಶವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದಕ್ಕಾಗಿ ವಿವಿಧ ದೇಶಗಳ ಮುಖ್ಯಸ್ಥರ ಜತೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಮಾತುಕತೆ ನಡೆಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ನ್ಯಾಯಾಲಯವು ಯಾವುದೇ ಆದೇಶ ನೀಡಬಾರದು. ಆದೇಶ ನೀಡಿದರೆ, ಲಸಿಕೆ ಖರೀದಿಗಾಗಿ ನಡೆಯುತ್ತಿರುವ ರಾಜತಾಂತ್ರಿಕ ಮತ್ತು ರಾಜಕೀಯ ಪ್ರಯತ್ನಗಳಿಗೆ ಹಿನ್ನಡೆ ಆಗಬಹುದು ಎಂದು ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು.

ಕೋವಿನ್ ನೋಂದಣಿ ಕಡ್ಡಾಯವೇಕೆ?

ಜನರು ಲಸಿಕೆ ಹಾಕಿಸಿಕೊಳ್ಳಬೇಕಿದ್ದರೆ ಕೋವಿನ್ ಆ್ಯಪ್‌ನಲ್ಲಿ ನೋಂದಣಿ ಮಾಡಿಕೊಳ್ಳುವುದನ್ನು ಕಡ್ಡಾಯ ಮಾಡಿರುವುದು ಏಕೆ ಎಂದು ಕೇಂದ್ರವನ್ನು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ. 'ಡಿಜಿಟಲ್ ಇಂಡಿಯಾ'ದ ನಿಜವಾದ ಸ್ಥಿತಿ ಏನು ಎಂಬುದನ್ನು ಅರ್ಥ ಮಾಡಿಕೊಳ್ಳದೆಯೇ ಈ ನಿಯಮ ಮಾಡಲಾಗಿದೆ. ನೀತಿ ನಿರೂಪಕರಿಗೆ ತಳಮಟ್ಟದಲ್ಲಿ ಪರಿಸ್ಥಿತಿ ಹೇಗಿದೆ ಎಂಬುದರ ಅರಿವು ಇರಬೇಕು ಎಂದು ಪೀಠವು ಹೇಳಿದೆ.

'ಡಿಜಿಟಲ್ ಇಂಡಿಯಾ, ಡಿಜಿಟಲ್ ಇಂಡಿಯಾ ಎಂದು ಹೇಳುತ್ತಲೇ ಇದ್ದೀರಿ. ಆದರೆ, ಗ್ರಾಮೀಣ ಪ್ರದೇಶಗಳಲ್ಲಿ ಪರಿಸ್ಥಿತಿ ಭಿನ್ನವಾಗಿದೆ. ಜಾರ್ಖಂಡ್‌ನ ಅನಕ್ಷರಸ್ಥ ಕಾರ್ಮಿಕನೊಬ್ಬ ರಾಜಸ್ಥಾನದಲ್ಲಿ ನೋಂದಣಿ ಮಾಡಿಕೊಳ್ಳುವುದು ಹೇಗೆ? ಈ ಡಿಜಿಟಲ್ ಅಂತರವನ್ನು ಹೇಗೆ ತುಂಬುವಿರಿ ಹೇಳಿ' ಎಂದು ಸರ್ಕಾರವನ್ನು ಪೀಠವು ಪ್ರಶ್ನಿಸಿದೆ.

'ದೇಶದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಿ. ಅದಕ್ಕೆ ಅನುಗುಣವಾಗಿ ನೀತಿಯನ್ನು ರೂಪಿಸಿ. ನಾವೇ ಮಾಡುವುದಾಗಿದ್ದರೆ 15-20 ದಿನ ಮೊದಲೇ ಇದನ್ನು ಸರಿ ಮಾಡುತ್ತಿದ್ದೆವು' ಎಂದು ಪೀಠ ಹೇಳಿತು.

ಪ್ರತಿಯೊಬ್ಬರಿಗೂ ಎರಡನೇ ಡೋಸ್ ಲಸಿಕೆ ನೀಡಬೇಕಿರುವುದರಿಂದ ನೋಂದಣಿ ಕಡ್ಡಾಯ ಮಾಡುವುದು ಅನಿವಾರ್ಯವಾಗಿತ್ತು. ಗ್ರಾಮೀಣ ಪ್ರದೇಶದ ಸಮುದಾಯ ಕೇಂದ್ರಗಳಲ್ಲಿ ಲಸಿಕೆ ನೋಂದಣಿ ಮಾಡಲು ಸಿಬ್ಬಂದಿ ಇದ್ದಾರೆ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು.

ಇಂತಹ ಪ್ರಕ್ರಿಯೆ ಕಾರ್ಯಸಾಧ್ಯ ಎಂದು ಸರ್ಕಾರ ಭಾವಿಸಿದೆಯೇ ಎಂದು ಪ್ರಶ್ನಿಸಿದ ಪೀಠವು, ನೀತಿ ದಾಖಲಾತಿಯನ್ನು ಸಲ್ಲಿಸುವಂತೆ ಸೂಚಿಸಿತು.

ದೇಶದ್ರೋಹ: ಕೋರ್ಟ್ ವ್ಯಂಗ್ಯ

ಮಾಧ್ಯಮದ ವಿರುದ್ಧ ದೇಶದ್ರೋಹ ಪ್ರಕರಣಗಳನ್ನು ದಾಖಲಿಸುವ ಪ್ರವೃತ್ತಿ ಹೆಚ್ಚಳವಾಗಿರುವುದಕ್ಕೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಚಂದ್ರಚೂಡ್ ಅವರು ವ್ಯಂಗ್ಯವಾಗಿ ಪ್ರತಿಕ್ರಿಯೆ ನೀಡಿದ್ದಾರೆ. ಕೋವಿಡ್‌ನಿಂದ ಸತ್ತವರ ಶವಗಳನ್ನು ನದಿಗಳಿಗೆ ಎಸೆಯುವ ದೃಶ್ಯಗಳನ್ನು ಪ್ರಸಾರ ಮಾಡಿದ ಸುದ್ದಿ ವಾಹಿನಿಗಳ ವಿರುದ್ಧ 'ದೇಶದ್ರೋಹ' ಕಾಯ್ದೆಯಡಿ ಪ್ರಕರಣ ದಾಖಲಾಗಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

ದೇಶದ್ರೋಹ ಕಾಯ್ದೆ ಪರಿಶೀಲನೆಗೆ ನಿರ್ಧಾರ

ಮಾಧ್ಯಮ ಹಕ್ಕುಗಳು ಮತ್ತು ವಾಕ್ ಸ್ವಾತಂತ್ರ್ಯವನ್ನು ಗಮನದಲ್ಲಿರಿಸಿಕೊಂಡು, ದೇಶದ್ರೋಹ ಕಾನೂನಿನ ವ್ಯಾಖ್ಯಾನವನ್ನು ಪರಿಶೀಲನೆಗೆ ಒಳಪಡಿಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ.

ವಿವರ 11

ಜಿಡಿಪಿ: ಐತಿಹಾಸಿಕ ಕುಸಿತ

ನವದೆಹಲಿ (ಪಿಟಿಐ): ದೇಶದ ಅರ್ಥ ವ್ಯವಸ್ಥೆಯು 2020-21ರಲ್ಲಿ ನಿರೀಕ್ಷೆಗಿಂತ ಕಡಿಮೆ ಪ್ರಮಾಣದಲ್ಲಿ ಕುಸಿತ ಕಂಡಿದೆ. ಈ ವರ್ಷದ ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಅರ್ಥ ವ್ಯವಸ್ಥೆಯು ಒಟ್ಟು ಶೇಕಡ (-)7.3ರಷ್ಟು ಕುಸಿದಿದೆ. ಕುಸಿತದ ಪ್ರಮಾಣವು ಶೇ (-) 8ರಷ್ಟು ಇರಲಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಈ ಹಿಂದೆ ಅಂದಾಜಿಸಿತ್ತು.

1979-80ರ ನಂತರ ಇಡೀ ಆರ್ಥಿಕ ವರ್ಷದಲ್ಲಿ ಜಿಡಿಪಿಯು ಶೂನ್ಯಕ್ಕಿಂತ ಕಡಿಮೆ ಮಟ್ಟಕ್ಕೆ ಬಂದಿರುವುದು ಇದೇ ಮೊದಲು. 1979-80ರಲ್ಲಿ ದೇಶದ ಜಿಡಿಪಿ ಶೇ (-) 5.2ರಷ್ಟು ಕುಸಿದಿತ್ತು.

ಜನವರಿ-ಮಾರ್ಚ್ ತ್ರೈಮಾಸಿಕದಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯು (ಜಿಡಿಪಿ) ಶೇ 1.6ರಷ್ಟು ಏರಿಕೆ ದಾಖಲಿಸಿದೆ. ಡಿಸೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ಶೇ 0.5ರಷ್ಟಿತ್ತು. ಅದಕ್ಕೂ ಹಿಂದಿನ ಎರಡು ತ್ರೈಮಾಸಿಕಗಳಲ್ಲಿ ಜಿಡಿಪಿಯು ಶೂನ್ಯಕ್ಕಿಂತ ಕೆಳಮಟ್ಟದಲ್ಲಿ ಇತ್ತು.

ಎನ್‌ಎಸ್‌ಒ ಬಿಡುಗಡೆ ಮಾಡಿರುವ ಮಾಹಿತಿ ಪ್ರಕಾರ ಜಿಡಿಪಿ ಮೊತ್ತವು 2020-21ರಲ್ಲಿ ₹ 135 ಲಕ್ಷ ಕೋಟಿಗೆ ಕುಸಿದಿದೆ. ಹಿಂದಿನ ಆರ್ಥಿಕ ವರ್ಷದಲ್ಲಿ ಇದರ ಮೊತ್ತವು ₹ 145 ಲಕ್ಷ ಕೋಟಿ ಆಗಿತ್ತು. ದೇಶದ ಜಿಡಿಪಿಯ ಮೊತ್ತವು ಮತ್ತೆ ₹ 145 ಲಕ್ಷ ಕೋಟಿಗೆ ತಲುಪಬೇಕು ಎಂದಾದರೆ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಬೆಳವಣಿಗೆಯು ಶೇ 10ರಿಂದ ಶೇ 11ರಷ್ಟು ಇರಬೇಕು.

ಆದರೆ, ಕೋವಿಡ್ ಎರಡನೇ ಅಲೆಯು ಆರ್ಥಿಕ ಚಟುವಟಿಕೆಗಳ ವೇಗಕ್ಕೆ ಅಡ್ಡಿ ಉಂಟುಮಾಡಿದೆ. ಹಾಗಾಗಿ, ಜಿಡಿಪಿ ಬೆಳವಣಿಗೆಯು ಎರಡಂಕಿಯ ಪ್ರಮಾಣದಲ್ಲಿ ಇರುವುದಿಲ್ಲ ಎಂದು ಹಲವು ಅರ್ಥಶಾಸ್ತ್ರಜ್ಞರು ಅಂದಾಜಿಸಿದ್ದಾರೆ. ಕೋವಿಡ್ ಪ್ರಕರಣಗಳ ಸಂಖ್ಯೆ ಕಡಿಮೆ ಆಗುತ್ತಿದ್ದರೂ, ಗ್ರಾಹಕರಿಂದ ಬೇಡಿಕೆ ಕುಸಿದಿರುವುದು ಹಾಗೂ ನಿರುದ್ಯೋಗ ಶೇ 14.73ಕ್ಕೆ ತಲುಪಿರುವುದು ಹೊಸ ಸವಾಲು ತಂದಿತ್ತಿವೆ.

ಜಿಡಿಪಿ ಕುಸಿತವು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಈ ಹಿಂದೆ ಅಂದಾಜಿಸಿದ್ದಕ್ಕಿಂತಲೂ ತುಸು ಕಡಿಮೆ ಪ್ರಮಾಣದಲ್ಲಿ ಇದೆ. ಕುಸಿತವು ಶೇ (-)7.5ರಷ್ಟು ಆಗಬಹುದು ಎಂದು ಆರ್‌ಬಿಐ ಅಂದಾಜು ಮಾಡಿತ್ತು.

ಜಿಡಿಪಿ ಏರಿಕೆ, ಇಳಿಕೆ

ವರ್ಷ	ಬದಲಾವಣೆ (%)
2016-17	8.3
2017-18	7
2018-19	6.1
2019-20	4
2020-21	(-)7.3

ಶೇ 9.3ರಷ್ಟು ವಿತ್ತೀಯ ಕೊರತೆ

ನವದೆಹಲಿ: ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ದೇಶದ ವಿತ್ತೀಯ ಕೊರತೆಯು ಒಟ್ಟು ಜಿಡಿಪಿಯ ಶೇ 9.3ರಷ್ಟು ಇತ್ತು. ವಿತ್ತೀಯ ಕೊರತೆಯು ಶೇ 9.5ರಷ್ಟಾಗಬಹುದು ಎಂದು ಫೆಬ್ರುವರಿಯಲ್ಲಿ ಕೇಂದ್ರ ಬಜೆಟ್‌ನ ಪರಿಷ್ಕೃತ ಅಂದಾಜಿನಲ್ಲಿ ಹೇಳಲಾಗಿತ್ತು.

ಹಿಂದಿನ ವರ್ಷದಲ್ಲಿ ಕೊರೊನಾ ವೈರಾಣು ಹರಡುವುದನ್ನು ತಡೆಯುವ ಉದ್ದೇಶದಿಂದ ಜಾರಿಗೊಳಿಸಿದ ಲಾಕ್‌ಡೌನ್ ಹಾಗೂ ಇತರ ನಿರ್ಬಂಧ ಕ್ರಮಗಳಿಂದಾಗಿ ಆರ್ಥಿಕ ಚಟುವಟಿಕೆಗಳ ಮೇಲೆ ಭಾರಿ ಏಟು ಬಿದ್ದಿತ್ತು.

2011ನೇ ಸಾಲಿನ 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿ

ಕೆಪಿಎಸ್‌ಸಿ: ಮತ್ತೆ ಕೋರ್ಟ್‌ಗೆ?

• ರಾಜೇಶ್ ರೈ ಚಟ್ಲ

ಬೆಂಗಳೂರು: 2011ನೇ ಸಾಲಿನ 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮದಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವ ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಅಂದಿನ ಅಧ್ಯಕ್ಷ ಮತ್ತು 9 ಸದಸ್ಯರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡದಿರಲು ಸಚಿವ ಸಂಪುಟ ಸಭೆ ತೀರ್ಮಾನ ತೆಗೆದುಕೊಂಡ ಬೆನ್ನಲ್ಲೆ, ಸರ್ಕಾರದ ಈ ನಡೆಯನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಲು ಹುದ್ದೆ ವಂಚಿತ ಅಭ್ಯರ್ಥಿಗಳು ಸಿದ್ಧತೆ ನಡೆಸಿದ್ದಾರೆ.

ಅಲ್ಲದೆ, ಸರ್ಕಾರದ ಈ ನಡೆಯ ವಿರುದ್ಧ ಕಾನೂನು ತಜ್ಞರು ಕೂಡಾ ಭಿನ್ನ ಧ್ವನಿ ಎತ್ತಿದ್ದಾರೆ. 'ಈ ತೀರ್ಮಾನ ನೈತಿಕವಾಗಿ ಮತ್ತು ಕಾನೂನು ಪ್ರಕಾರ ಸರಿಯಲ್ಲ. ಇದನ್ನು ಕೋರ್ಟ್‌ನಲ್ಲಿ ಪ್ರಶ್ನಿಸಲು ಸಾಕಷ್ಟು ಅವಕಾಶಗಳಿವೆ. ಯಾರನ್ನೋ ರಕ್ಷಿಸಲು ಸರ್ಕಾರ ಮುಂದಾಗುವ ಬದಲು, ಕೋರ್ಟ್ ತೀರ್ಮಾನಕ್ಕೆ ಬಿಡಬೇಕಿತ್ತು' ಎಂದು ಅಭಿಪ್ರಾಯಪಟ್ಟಿದ್ದಾರೆ.

ವ್ಯಾಪಕ ಭ್ರಷ್ಟಾಚಾರ ನಡೆದಿದೆಯೆಂದು ವಿವಾದಕ್ಕೆ ಒಳಗಾಗಿದ್ದ ಈ ಸಾಲಿನ ನೇಮಕಾತಿಯನ್ನು ಹೈಕೋರ್ಟ್ 2018ರ ಮಾರ್ಚ್ 9ರಂದು ರದ್ದುಗೊಳಿಸಿತ್ತು. ಅದೇ ತೀರ್ಪನ್ನು ಸುಪ್ರೀಂ ಕೋರ್ಟ್ ಕೂಡಾ ಎತ್ತಿ ಹಿಡಿದಿತ್ತು. ಈ ಪ್ರಕರಣದಲ್ಲಿ ತನಿಖೆ ನಡೆಸಿದ್ದ ಸಿಐಡಿ, ದೋಷಾರೋಪಪಟ್ಟಿ ಸಿದ್ಧಪಡಿಸಿದೆ. ಆದರೆ, ಆರೋಪ ಹೊತ್ತವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡದೆ, ಈ ಸಾಲಿನಲ್ಲಿ ಆಯ್ಕೆಯಾದವರನ್ನು ನೇಮಕ ಮಾಡಿಕೊಳ್ಳಲು ಸರ್ಕಾರ ಮುಂದಾಗಿದೆ. ಪ್ರಾಸಿಕ್ಯೂಷನ್‌ಗೆ ಅನುಮತಿ ನಿರಾಕರಿಸಿದ ಅಂಶವನ್ನೇ ಹೈಕೋರ್ಟ್‌ನಲ್ಲಿ ಪ್ರಶ್ನಿಸಲು ನಿರ್ಧರಿಸಿದ್ದೇವೆ' ಎಂದು ಹುದ್ದೆ ವಂಚಿತ ಅಭ್ಯರ್ಥಿಯೊಬ್ಬರು ತಿಳಿಸಿದರು.

'ನೈತಿಕವಾಗಿ ಮತ್ತು ಕಾನೂನು ಪ್ರಕಾರ ಸರ್ಕಾರದ ಈ ನಿಲುವು ತಪ್ಪು. ಯಾರದ್ದೊ ಒತ್ತಡಕ್ಕೆ ಅಥವಾ ತೊಂದರೆಯಿಂದ ಹೊರಬರಲು ಸರ್ಕಾರ ಈ ನಿಲುವು ತೆಗೆದುಕೊಂಡು, ಅಭ್ಯರ್ಥಿಗಳ ನೇಮಕಾತಿಗೆ ಮುಂದಾದರೆ ಹುದ್ದೆ ವಂಚಿತ ಅಭ್ಯರ್ಥಿಗಳು ಕೋರ್ಟ್‌ನಲ್ಲಿ ಪ್ರಶ್ನೆ ಮಾಡಿಯೇ ಮಾಡುತ್ತಾರೆ' ಎಂದು ಹೈಕೋರ್ಟ್ ವಕೀಲ ವಿಕ್ರಂ ಫಡ್ಕೆ ಹೇಳಿದರು.

ಯಾರನ್ನೊ ರಕ್ಷಿಸಲು ಸಂಪುಟ ಸಭೆ ಈ ತೀರ್ಮಾನ ತೆಗೆದುಕೊಂಡಂತೆ ಕಾಣುತ್ತಿದೆ. ಮೇಲ್ನೋಟಕ್ಕೆ ಈ ಪ್ರಕರಣದಲ್ಲಿ ಪ್ರಾಸಿಕ್ಯೂಷನ್‌ಗೆ ಸರ್ಕಾರ ಮಂಜೂರಾತಿ ನೀಡಬೇಕಿತ್ತು
ನ್ಯಾ. ಎನ್. ಸಂತೋಷ್ ಹೆಗ್ಡೆ
ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ

ಪ್ರಾಸಿಕ್ಯೂಷನ್‌ಗೆ ಮಂಜೂರಾತಿ ನಿರಾಕರಿಸಿದ್ದರಿಂದ ಅಷ್ಟೂ ಅಭ್ಯರ್ಥಿಗಳನ್ನು ಸರ್ಕಾರಿ ಸೇವೆಗೆ ನೇಮಿಸಿಕೊಳ್ಳಬಹುದು ಎಂದು ಅರ್ಥವಲ್ಲ
ಅಶೋಕ್ ಹಾರನಹಳ್ಳಿ
ಮಾಜಿ ಅಡ್ವೊಕೇಟ್ ಜನರಲ್

ಪ್ರಜಾವಾಣಿ ವಿಶೇಷ

10ನೇ ಪುಟ ನೋಡಿ

ಅಲಪನ್ ಈಗ ಸಿಎಂ ಸಲಹೆಗಾರ

ಮೋದಿ–ಮಮತಾ ಸಂಘರ್ಷಕ್ಕೆ ಮತ್ತೊಂದು ತಿರುವು

ಮಮತಾ ಬ್ಯಾನರ್ಜಿ ಜೊತೆ ಅಲಪನ್ ಬಂದೋಪಾಧ್ಯಾಯ –ಪಿಟಿಐ ಚಿತ್ರ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿಯಾಗಿದ್ದ ಅಲಪನ್ ಬಂದೋಪಾಧ್ಯಾಯ ಅವರನ್ನು ಕೇಂದ್ರ ಸೇವೆಗೆ ವಾಪಸ್ ಕರೆಸಿಕೊಳ್ಳುವ ಪ್ರಸಂಗವು ಸೋಮವಾರ ಹಲವು ಅನಿರೀಕ್ಷಿತ ಬೆಳವಣಿಗೆಗೆ ಸಾಕ್ಷಿಯಾಗಿದೆ.

'ಅಲಪನ್ ಅವರನ್ನು ಮುಖ್ಯ ಕಾರ್ಯದರ್ಶಿ ಹುದ್ದೆಯಿಂದ ಬಿಡುಗಡೆ ಮಾಡುವುದಿಲ್ಲ' ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸೋಮವಾರ ಬೆಳಿಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದರು. ಆ ಪತ್ರ ಬರೆದ ಕೆಲವೇ ಗಂಟೆಗಳಲ್ಲಿ, 'ಕರ್ತವ್ಯಕ್ಕೆ ಹಾಜರಾಗದ ಬಗ್ಗೆ ವಿವರಣೆ ನೀಡಿ' ಎಂದು ಅಲಪನ್ ಅವರಿಗೆ ಕೇಂದ್ರ ಸರ್ಕಾರವು ನೋಟಿಸ್ ನೀಡಿತ್ತು. ಆನಂತರ ಸಂಜೆ ಮಮತಾ ಬ್ಯಾನರ್ಜಿ ಅವರು, 'ಅಲಪನ್ ಅವರು ಮುಖ್ಯ ಕಾರ್ಯದರ್ಶಿ ಹುದ್ದೆಯಿಂದ ನಿವೃತ್ತರಾಗಿದ್ದಾರೆ. ಅವರನ್ನು ಮುಖ್ಯಮಂತ್ರಿಯ ಮುಖ್ಯ ಸಲಹೆಗಾರನಾಗಿ ಮೂರು ವರ್ಷಗಳ ಅವಧಿಗೆ ನೇಮಕ ಮಾಡಲಾಗಿದೆ' ಎಂದು ಆದೇಶ ಹೊರಡಿಸಿದ್ದಾರೆ.

'ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿ ಅಲಪನ್ ಅವರನ್ನು ಸೇವೆಯಿಂದ ಬಿಡುಗಡೆ ಮಾಡುವುದಿಲ್ಲ. ಅವರನ್ನು ಕೇಂದ್ರ ಸೇವೆಗೆ ಕರೆಸಿಕೊಳ್ಳುವ ಆದೇಶ ಹಿಂಪಡೆಯಿರಿ' ಎಂದು ಮಮತಾ ಅವರು ಪ್ರಧಾನಿ ನರೇಂದ್ರ ಮೋದಿಗೆ ಸೋಮವಾರ ಬೆಳಿಗ್ಗೆ ಪತ್ರ ಬರೆದಿದ್ದರು.

ಪೂರ್ವನಿಗದಿಯಂತೆ ಅಲಪನ್ ಅವರು ಮೇ 31ರ ಸೋಮವಾರ ನಿವೃತ್ತರಾಗಬೇಕಿತ್ತು. ಕೋವಿಡ್ ತುರ್ತುಪರಿಸ್ಥಿತಿ ಇರುವ ಕಾರಣ, ಅವರ ಸೇವೆಯನ್ನು ಮೂರು ತಿಂಗಳು ವಿಸ್ತರಿಸಿ ಮೇ 24ರಂದು ಕೇಂದ್ರ ಸರ್ಕಾರವು ಆದೇಶ ಹೊರಡಿಸಿತ್ತು. ಮೇ 28ರಂದು ಕೇಂದ್ರ ಸರ್ಕಾರವು ಹೊರಡಿಸಿದ್ದ ಆದೇಶದ ಪ್ರಕಾರ ಅಲಪನ್ ಅವರು ಸೋಮವಾರ ಕೇಂದ್ರದ ಸೇವೆಗೆ ಹಾಜರಾಗಬೇಕಿತ್ತು. ಆದರೆ ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿ ಹುದ್ದೆಯಿಂದ ಅವರನ್ನು ಬಿಡುಗಡೆ ಮಾಡದ ಕಾರಣ ಅವರು, ಕೇಂದ್ರ ಸೇವೆಗೆ ಹಾಜರಾಗಿಲ್ಲ.

ಅಲಪನ್ ಸೇವೆಯನ್ನು ವಿಸ್ತರಿಸಿ, ಮೇ 24ರಂದು ಹೊರಡಿಸಿದ್ದ ಆದೇಶವನ್ನು ಹಿಂಪಡೆಯಲಾಗಿದೆಯೇ ಎಂಬುದನ್ನು ಕೇಂದ್ರ ಸರ್ಕಾರವು ತನ್ನ ನೋಟಿಸ್‌ನಲ್ಲಿ ಸ್ಪಷ್ಟಪಡಿಸಿಲ್ಲ. ಆದರೆ ಅವರು ನಿವೃತ್ತರಾಗಿದ್ದಾರೆ ಎಂದು ಮಮತಾ ಘೋಷಿಸಿದ್ದಾರೆ.

ಇನ್ನೊಂದು ಸುದ್ದಿ 10

ಎರಡು ಎಕರೆ ಹೊಲ, ₹80 ಸಾವಿರಕ್ಕೆ ಅಡ

ಹೊಲ ಅಡವಿಟ್ಟು ದಿನಸಿ ನೀಡಿದ ರೈತ

ಪ್ರಜಾವಾಣಿ ವಾರ್ತೆ

ಲಕ್ಷ್ಮೇಶ್ವರ ಸಮೀಪದ ಕುಂದ್ರಳ್ಳಿ ಗ್ರಾಮದ ಯುವಕ ರಮೇಶ ಮುಂದಿನಮನಿ ಭಾನುವಾರ ಗ್ರಾಮದ ಬಡವರಿಗೆ ಆಹಾರ ಧಾನ್ಯಗಳ ಕಿಟ್ ಹಂಚಿದರು

ಲಕ್ಷ್ಮೇಶ್ವರ(ಗದಗ ಜಿಲ್ಲೆ): ಕೋವಿಡ್ ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ಬಡ ಜನರಿಗೆ ಸಹಾಯ ಮಾಡಲು ಯುವ ರೈತರೊಬ್ಬರು ಎರಡು ಎಕರೆ ಜಮೀನು ಅಡವಿಟ್ಟು, ಆ ಹಣದಲ್ಲಿ ಗ್ರಾಮದ ಬಡವರಿಗೆ ಆಹಾರ ಧಾನ್ಯಗಳ ಕಿಟ್ ವಿತರಿಸಿದ್ದಾರೆ.

ತಾಲ್ಲೂಕಿನ ಕುಂದ್ರಳ್ಳಿ ಗ್ರಾಮದ ರಮೇಶ ಮುಂದಿನಮನಿ ಜನರ ಕಷ್ಟಕ್ಕೆ ಮಿಡಿದ ರೈತ.

ರಮೇಶ ಅವರಿಗೆ ಎರಡು ಎಕರೆ ಹೊಲ ಇದ್ದು, ಅದನ್ನು ₹80 ಸಾವಿರಕ್ಕೆ ಅಡ ಇಟ್ಟಿದ್ದಾರೆ. ಬಂದ ಹಣದಲ್ಲಿ ₹40 ಸಾವಿರವನ್ನು ಗ್ರಾಮದಲ್ಲಿನ ನಿರ್ಗತಿಕರು, ವಿಧವೆಯರು, ಅಂಗವಿಕಲರು, ವೃದ್ಧರಿಗೆ ದಿನಸಿ ಕಿಟ್ ಹಂಚಲು ಬಳಸಿದ್ದಾರೆ. ಭಾನುವಾರ 200 ಜನರಿಗೆ ದಿನಸಿ ಕಿಟ್ ವಿತರಿಸಿದ್ದಾರೆ.

'ಲಾಕ್‌ಡೌನ್‌ನಲ್ಲಿ ಕೆಲಸ ಇಲ್ಲದೆ ನಮ್ಮೂರಿನ ಬಡವರು ಬಳಲುತ್ತಿದ್ದರು. ಹಸಿವಿನ ಕಷ್ಟ ನನಗೆ ಗೊತ್ತಿದೆ. ದುಡಿಮೆಯಿಲ್ಲದ ಅಸಹಾಯಕತನ ನಾನೂ ಅನುಭವಿಸಿರುವೆ. ನನ್ನಂತೆ ಇರುವವರ ಕಷ್ಟಕ್ಕೆ ಕೈಲಾದಷ್ಟು ಸಹಾಯ ಮಾಡಿದರಾಯಿತು ಎಂದು ಕಿಟ್ ಹಂಚಿದ್ದೇನೆ. ಡಾ.ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಗಳೇ ನನಗೆ ಸ್ಫೂರ್ತಿ' ಎಂದು ರಮೇಶ ಹೇಳುತ್ತಾರೆ.

'ರಮೇಶ ತಾನೇ ಬಡವನಿದ್ದರೂ ಉಳಿದವರಿಗೆ ಸಹಾಯ ಮಾಡಲು ಮುಂದಾಗಿದ್ದಾನೆ. ಅವನ ಕೆಲಸ ಉಳಿದವರಿಗೆ ಮೇಲ್ಪಂಕ್ತಿಯಾಗಿದೆ' ಎಂದು ಗ್ರಾಮದ ನಿವಾಸಿ ನಾಗರಾಜ ಪಾಟೀಲ ಮೆಚ್ಚುಗೆ ವ್ಯಕ್ತಪಡಿಸಿದರು.

ಒಳ್ಳೆ ಸುದ್ದಿ

ಪರೀಕ್ಷೆಗೆ ಮುಂದಾಗದ ಗ್ರಾಮಸ್ಥರು • ತಂತ್ರಜ್ಞರಿಲ್ಲದೇ ಬಳಕೆಯಾಗದ ವೆಂಟಿಲೇಟರ್

ಹಾಸಿಗೆ ಹೆಚ್ಚಳಕ್ಕೆ ಸಿಬ್ಬಂದಿ, ಸವಲತ್ತಿನ ಕೊರತೆ

• ಬಿ.ಜೆ. ಧನ್ಯಪ್ರಸಾದ್

ಚಿಕ್ಕಮಗಳೂರು: ತಾಲ್ಲೂಕು ಆಸ್ಪತ್ರೆಗಳಲ್ಲಿ ವೆಂಟಿಲೇಟರ್‌ಗಳು ಇದ್ದರೂ ಅರಿವಳಿಕೆ ತಜ್ಞರು, ತಂತ್ರಜ್ಞರು, ಆಮ್ಲಜನಕದ ಕೊರತೆಯಿಂದಾಗಿ ಬಹಳಷ್ಟು ಕಡೆ ಅವು ಬಳಕೆಯಾಗುತ್ತಿಲ್ಲ, ವೈದ್ಯರು ಸೂಚಿಸಿದರೂ ಗ್ರಾಮಗಳಲ್ಲಿ ಬಹುತೇಕರು ಆರ್‌ಟಿಪಿಸಿಆರ್ ಮಾಡಿಸಿಕೊಳ್ಳಲು ಮುಂದಾಗುತ್ತಿಲ್ಲ, ಮಲೆನಾಡು ಭಾಗದ ದುರ್ಗಮ ರಸ್ತೆಗಳಲ್ಲಿ ಸೋಂಕಿತರನ್ನು ಆಸ್ಪತ್ರೆಗಳಿಗೆ ಒಯ್ಯಲು ಹರಸಾಹಸಪಡಬೇಕಾದ ಸ್ಥಿತಿ ಇದೆ.

ಇದು ಚಿಕ್ಕಮಗಳೂರು ಜಿಲ್ಲೆಯ ಆರೋಗ್ಯ ವ್ಯವಸ್ಥೆಯ ಚಿತ್ರಣ. ಜಿಲ್ಲಾಸ್ಪತ್ರೆಯ ಕೋವಿಡ್ ಆರೋಗ್ಯ ಕೇಂದ್ರದಲ್ಲಿನ ಐಸಿಯು ವೆಂಟಿಲೇಟರ್ ವಾರ್ಡ್‌ಗಳ ಹಾಸಿಗೆಗಳು ಭರ್ತಿಯಾಗಿವೆ. ಈ ವಾರ್ಡ್‌ಗಳು ಮತ್ತು ಹಾಸಿಗೆಗಳ ಸಂಖ್ಯೆ ಹೆಚ್ಚಿಸಲು ವೈದ್ಯರು-ಸಿಬ್ಬಂದಿ, ಸವಲತ್ತುಗಳ ಕೊರತೆ ಇದೆ.

ಗ್ರಾಮಾರೋಗ್ಯ
ಆಗಲಿ ಇನ್ನಷ್ಟು ಯೋಗ್ಯ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

'ತಾಲ್ಲೂಕು ಆಸ್ಪತ್ರೆಯಲ್ಲಿ ಆರು ವೆಂಟಿಲೇಟರ್‌ಗಳು ಇವೆ. ಅವು ಮೂಲೆಗುಂಪಾಗಿವೆ. ಅವುಗಳ ಬಳಕೆಗೆ ತಜ್ಞರು, ತಂತ್ರಜ್ಞರ ನೇಮಕಕ್ಕೆ ಸಂಬಂಧಪಟ್ಟವರು ಗಮನಹರಿಸುತ್ತಿಲ್ಲ' ಎನ್ನುತ್ತಾರೆ ಎನ್.ಆರ್.ಪುರದ ಜನಸಂಗ್ರಾಮ ಪರಿಷತ್ ಸದಸ್ಯ ವಾಸುದೇವ ಕೋಟ್ಯಾನ್.



ಚಿಕ್ಕಮಗಳೂರು ಎನ್‌ಆರ್‌ಪುರ ತಾಲ್ಲೂಕು ಆಸ್ಪತ್ರೆಯಲ್ಲಿ ತಂತ್ರಜ್ಞರು ಇಲ್ಲದೆ ವೆಂಟಿಲೇಟರ್ ಬಳಕೆಯಾಗುತ್ತಿಲ್ಲ

ಜಿಲ್ಲಾ ಆಸ್ಪತ್ರೆಯಲ್ಲೂ ಅವ್ಯವಸ್ಥೆ

ಜಿಲ್ಲಾಸ್ಪತ್ರೆಯ ವಾರ್ಡ್‌ನಲ್ಲಿನ ರೋಗಿಗಳ ಜತೆ ಅವರ ಕಡೆಯವರು ಇರುತ್ತಾರೆ. ಪಿಪಿಇ ಕಿಟ್ ಧರಿಸದೆ ವಾರ್ಡ್ ಒಳಕ್ಕೆ, ಹೊರಕ್ಕೆ ಸಲೀಸಾಗಿ ಓಡಾಡುತ್ತಾರೆ.

'ಕೋವಿಡ್‌ನಿಂದ ಸ್ನೇಹಿತನ ಸಂಬಂಧಿಕರೊಬ್ಬರು ಮೃತಪಟ್ಟಿದ್ದರು. ಜಿಲ್ಲಾಸ್ಪತ್ರೆಗೆ ಕೋವಿಡ್ ಘಟಕಕ್ಕೆ ಹೋಗಿದ್ದೆ. ವಾರ್ಡ್‌ನಲ್ಲಿ ರೋಗಿ ಜತೆ ಅವರ ಕಡೆಯವರೂ ಇದ್ದರು. ಅಂತರ ಪಾಲನೆ ಯಾವುದೂ ಇರಲಿಲ್ಲ' ಎಂದು ಉಪ್ಪಳ್ಳಿಯ ಗೌಸ್ ಮುನೀರ್ ತಿಳಿಸಿದರು.

ಜಿಲ್ಲಾಸ್ಪತ್ರೆಯಲ್ಲೂ ಸವಲತ್ತುಗಳು ಅಷ್ಟಕಷ್ಟೆ. ತುರ್ತು, ಗಂಭೀರ ಸ್ಥಿತಿ ಪ್ರಕರಣಗಳನ್ನು ಪಕ್ಕದ ಮಂಗಳೂರು, ಹಾಸನ, ಶಿವಮೊಗ್ಗಕ್ಕೆ ಒಯ್ಯಬೇಕಾದ ಅನಿವಾರ್ಯ ಇದೆ. ಲಸಿಕೆಯ ಕೊರತೆ ಇದ್ದು, ಲಸಿಕೆ ಹಾಕಿಸಿಕೊಳ್ಳಲು ಕೇಂದ್ರಗಳಿಗೆ ಜನ ಎಡತಾಕುವಂತಾಗಿದೆ.

ಎರಡನೇ ಅಲೆಯಲ್ಲಿ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಪ್ರಕರಣಗಳು ಹೆಚ್ಚಾಗಿವೆ. ಬಯಲು ಸೀಮೆಯ ಚಿಕ್ಕಮಗಳೂರು, ಕಡೂರು, ತರೀಕೆರೆ ಭಾಗ, ಮಲೆನಾಡಿನ ಎನ್.ಆರ್.ಪುರ, ಮೂಡಿಗೆರೆ ಭಾಗದಲ್ಲಿ ಸೋಂಕಿತರ ಪ್ರಮಾಣ ಜಾಸ್ತಿ ಇದೆ.

ತಪಾಸಣೆಗೆ ಮುಂದಾಗುತ್ತಿಲ್ಲ: ಶೀತ, ತಲೆನೋವು, ಸುಸ್ತು ಮೊದಲಾದ ಲಕ್ಷಣಗಳಿದ್ದವರು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಬರುತ್ತಾರೆ. ಅದಕ್ಕೆ ಔಷಧ ಪಡೆಯುತ್ತಾರೆ. ವೈದ್ಯರು ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಿ ಎಂದು ಸೂಚಿಸಿದರೂ ಬಹಳಷ್ಟು ಮಂದಿ ಮಾಡಿಸುತ್ತಿಲ್ಲ.

11ನೇ ಪುಟ ನೋಡಿ

ನಗರದಲ್ಲಿ ಇಂದು

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ (ಆರ್‌ಜಿಯುಎಚ್‌ಎಸ್) ಸಂಸ್ಥಾಪನಾ ದಿನ: ಅತಿಥಿ–ಹೃದ್ರೋಗ ತಜ್ಞ ವಿವೇಕ್ ಜವಳಿ, ದತ್ತಿ ಉಪನ್ಯಾಸ–ಆಚಾರ್ಯ ಧನ್ವಂತ್ ಸಿಂಗ್, ಎಸ್.ಕಾಂತಾ, ಕೃಷ್ಣಮೂರ್ತಿ ಬೋನಂತಾಯ, ಶಿವರತ್ನ ಸಿ.ಸವದಿ, ಆರ್‌ಜಿಯುಎಚ್‌ಎಸ್ ಕುಲಪತಿ ಎಸ್.ಸಚ್ಚಿದಾನಂದ, ಆಯೋಜನೆ, ಸ್ಥಳ–ಧನ್ವಂತರಿ ಹಾಲ್, ಸಂಸ್ಥೆಯ ಆವರಣ, ಜಯನಗರ, ಬೆಳಿಗ್ಗೆ 10.30

ಶೇಖರಗೌಡ ಮಾಲಿ ಪಾಟೀಲ ಅವರ ಜನ್ಮದಿನದ ಅಂಗವಾಗಿ ವೆಬಿನಾರ್: ಸಾನ್ನಿಧ್ಯ–ತೋಂಟದ ಸಿದ್ಧರಾಮೇಶ್ವರ ಸ್ವಾಮೀಜಿ, ಉದ್ಘಾಟನೆ–ಎಸ್.ಜಿ.ಸಿದ್ಧರಾಮಯ್ಯ, ಅಧ್ಯಕ್ಷತೆ–ಎಲ್.ಹನುಮಂತಯ್ಯ, ಅತಿಥಿಗಳು–ವಸುಂಧರ ಭೂಪತಿ, ‘ಕೊರೊನಾ ಸಂಕಷ್ಟ ಕಾಲದಲ್ಲಿ ಬದುಕು’ ಕುರಿತು ವಿಶೇಷ ಉಪನ್ಯಾಸ–ಗಂಗಾವತಿ ಪ್ರಾಣೇಶ, ಆಯೋಜನೆ–ಶೇಖರಗೌಡ ಮಾಲಿಪಾಟೀಲ ಸ್ನೇಹ ಬಳಗ, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ಐಐಎಚ್‌ಆರ್ ನಿರ್ದೇಶಕ ದಿನೇಶ್ ನಿವೃತ್ತಿ

ಬೆಂಗಳೂರು: ಹೆಸರಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ (ಐಐಎಚ್‌ಆರ್) ನಿರ್ದೇಶಕ ಡಾ.ಎಂ.ಆರ್.ದಿನೇಶ್ ಸೋಮವಾರ ನಿವೃತ್ತರಾದರು.

ಕಳೆದ ಐದೂವರೆ ವರ್ಷಗಳಿಂದ ನಿರ್ದೇಶಕರಾಗಿದ್ದ ಅವರು, ಈ ಹುದ್ದೆ ಅಲಂಕರಿಸಿದ್ದ ಮೊದಲ ಕನ್ನಡಿಗ.

ಹಣ್ಣಿನ ಬೆಳೆ ವಿಜ್ಞಾನಿಯಾಗಿ ವೃತ್ತಿ ಆರಂಭಿಸಿ, ಮಾವು, ಸೀಬೆ, ಪಪ್ಪಾಯ ಬೆಳೆಗಳ ಹೊಸ ತಳಿಗಳ ಅಭಿವೃದ್ಧಿಪಡಿಸಿದ್ದರು. ರೈತರಿಗಾಗಿ 310ಕ್ಕೂ ಹೆಚ್ಚು ಕೃಷಿ ತಂತ್ರಜ್ಞಾನಗಳನ್ನು ಇವರು ಪರಿಚಯಿಸಿದ್ದಾರೆ.

ಸಂಸ್ಥೆಯಲ್ಲಿ ಸೋಮವಾರ ನಡೆದ ಸರಳ ಕಾರ್ಯಕ್ರಮದಲ್ಲಿ ದಿನೇಶ್ ಅವರನ್ನು ಸಿಬ್ಬಂದಿ ಬೀಳ್ಕೊಟ್ಟರು. ಸದ್ಯ ಈ ಹುದ್ದೆಗೆ ಸಂಸ್ಥೆಯ ಪ್ರಧಾನ ವಿಜ್ಞಾನಿ ಡಾ.ಬಿ.ಎನ್.ಎಸ್.ಮೂರ್ತಿ ಅವರನ್ನು ಪ್ರಭಾರ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದೆ.

ವರ್ಷದ ಬಳಿಕ ಪ್ರಕರಣ ಭೇದಿಸಿದ ಪೊಲೀಸರು • ಚಾಮರಾಜಪೇಟೆಯಿಂದ ಅಪಹರಣವಾಗಿದ್ದ ಮಗು

₹16.5 ಲಕ್ಷಕ್ಕೆ ಶಿಶು ಮಾರಿದ್ದ ವೈದ್ಯೆ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆ ಬಿಬಿಎಂಪಿ ಆಸ್ಪತ್ರೆಯಿಂದ ನವಜಾತ ಶಿಶು ಅಪಹರಣವಾಗಿದ್ದ ಪ್ರಕರಣವನ್ನು ವರ್ಷದ ಬಳಿಕ ಭೇದಿಸಿರುವ ದಕ್ಷಿಣ ವಿಭಾಗದ ಪೊಲೀಸರು, ನಗರದ ಆಸ್ಪತ್ರೆಯೊಂದರ ಮನೋವೈದ್ಯೆ ಡಾ. ರಶ್ಮಿ (34) ಎಂಬುವರನ್ನು ಬಂಧಿಸಿದ್ದಾರೆ.

ಡಾ. ರಶ್ಮಿ

‘ನಗರದ ಬನ್ನೇರುಘಟ್ಟ ರಸ್ತೆಯಲ್ಲಿರುವ ಆಸ್ಪತ್ರೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ರಶ್ಮಿ, 2020ರ ಮೇ 29ರಂದು ಶಿಶು ಅಪಹರಣ ಮಾಡಿದ್ದರು. ಅದೇ ಶಿಶುವನ್ನು ₹ 16.50 ಲಕ್ಷಕ್ಕೆ ಕೊಪ್ಪಳದ ದಂಪತಿಗೆ ಮಾರಿದ್ದರು. ಇದೀಗ ರಶ್ಮಿ ಅವರನ್ನು ಬಂಧಿಸಿ, ಮಗುವನ್ನು ಸುರಕ್ಷಿತವಾಗಿ ರಕ್ಷಿಸಲಾಗಿದೆ’ ಎಂದು ದಕ್ಷಿಣ ವಿಭಾಗದ ಡಿಸಿಪಿ ಹರೀಶ್ ಪಾಂಡೆ ತಿಳಿಸಿದರು.

‘ಜಗಜೀವನರಾಮ್ ನಗರ ನಿವಾಸಿ ಹುಸ್ನಾ ಬಾನು ಹೆರಿಗೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದರು. ಅವರಿಗೆ ಗಂಡು ಮಗುವಾಗಿತ್ತು. ಆ ಮಗುವನ್ನು ಆರೋಪಿ ಅಪಹರಣ ಮಾಡಿದ್ದರು. ಆ ಸಂಬಂಧ ಹುಸ್ನಾಬಾನು ಪತಿ ನವೀದ್ ಪಾಷಾ ಚಾಮರಾಜಪೇಟೆ ಠಾಣೆಗೆ ದೂರು ನೀಡಿದ್ದರು. ತನಿಖೆಯನ್ನು ಬಸವನ ಗುಡಿ ಮಹಿಳಾ ಠಾಣೆಗೆ ವರ್ಗಾಯಿಸಲಾಗಿತ್ತು. 20 ಸಿಬ್ಬಂದಿ ಒಳಗೊಂಡಿದ್ದ ವಿಶೇಷ ತಂಡ, ಪ್ರಕರಣವನ್ನು ಭೇದಿಸಿ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ’ ಎಂದರು.

ಹುಬ್ಬಳ್ಳಿಯಲ್ಲಿ ಒಪ್ಪಂದ: ‘ಆರೋಪಿ ರಶ್ಮಿ, 2014ರಲ್ಲಿ ಹುಬ್ಬಳ್ಳಿಯ ಪ್ರತಿಷ್ಠಿತ ಆಸ್ಪತ್ರೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಅಲ್ಲಿಯೇ ಮಗುವಿನ ಚಿಕಿತ್ಸೆಗಾಗಿ ಬಂದಿದ್ದ ಕೊಪ್ಪಳದ ದಂಪತಿ ಪರಿಚಯವಾಗಿತ್ತು. ಅವರ ಮಗು ಬುದ್ಧಿಮಾಂದ್ಯವಾಗಿತ್ತು. ಚಿಕಿತ್ಸೆ ನೀಡಿದರೂ ಸುಧಾರಣೆ ಕಂಡುಬಂದಿರಲಿಲ್ಲ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದಂಪತಿ ಜೊತೆ ಒಡನಾಟ ಹೊಂದಿದ್ದ ರಶ್ಮಿ, ‘ವೀರ್ಯಾಣು ಮತ್ತು ಅಂಡಾಣು ತೆಗೆದುಕೊಂಡು ಬಾಡಿಗೆ ತಾಯಿ ಹೊಟ್ಟೆಯಲ್ಲಿ ನಿಮ್ಮದೇ ಮಗು ಬೆಳೆಸಬಹುದು. ಅದಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚಾಗುತ್ತದೆ. ಮಗು ಜನಿಸಿದ ಬಳಿಕ ನಿಮಗೆ ತಂದುಕೊಡುತ್ತೇನೆ’ ಎಂದು ಹೇಳಿದ್ದರು. ಅದನ್ನು ನಂಬಿದ್ದ ದಂಪತಿ, ಆರೋಪಿ ಮಾತಿಗೆ ಒಪ್ಪಿದ್ದರು.’

‘ದಿನಗಳು ಕಳೆದಂತೆ ಬಾಡಿಗೆ ತಾಯಿ ಹೊಟ್ಟೆಯಲ್ಲಿ ಮಗು ಬೆಳೆಯುತ್ತಿರುವುದಾಗಿ ದಂಪತಿಗೆ ಆರೋಪಿ ಹೇಳುತ್ತಿದ್ದರು. ಹೀಗಾಗಿ, ದಂಪತಿ ಮಗುವಿಗಾಗಿ ಕಾಯುತ್ತಿದ್ದರು’ ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

‘ಹುಬ್ಬಳ್ಳಿ ಆಸ್ಪತ್ರೆ ಕೆಲಸಕ್ಕೆ ರಾಜೀನಾಮೆ ನೀಡಿ ಬೆಂಗಳೂರಿಗೆ ಬಂದಿದ್ದ ಆರೋಪಿ, ಇಲ್ಲಿಯೇ ಆಸ್ಪತ್ರೆಯಲ್ಲಿ ಕೆಲಸ ಮಾಡಲಾರಂಭಿಸಿದ್ದರು. ಅದೇ ಸಮಯದಲ್ಲೇ ಚಾಮರಾಜಪೇಟೆ ಬಿಬಿಎಂಪಿ ಆಸ್ಪತ್ರೆಗೆ ಬಂದು ಶಿಶು ಅಪಹರಿಸಿ ಕೊಪ್ಪಳ ದಂಪತಿಗೆ ಕೊಟ್ಟಿದ್ದರು. ಅದಕ್ಕೆ ಪ್ರತಿಯಾಗಿ ₹ 16.50 ಲಕ್ಷ ಪಡೆದಿದ್ದರು’ ಎಂದೂ ಮೂಲಗಳು ಹೇಳಿವೆ.

ಕಾನೂನು ಬದ್ಧವೆಂದಿದ್ದ ಆರೋಪಿ: ‘ಶಿಶು ಅಪಹರಿಸಿದ್ದು ರಶ್ಮಿ ಎಂಬುದು ತಿಳಿಯುತ್ತಿದ್ದಂತೆ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ‘ಕಾನೂನುಬದ್ಧವಾಗಿಯೇ ಬಾಡಿಗೆ ತಾಯಿ ಹೊಟ್ಟೆಯಲ್ಲಿ ಶಿಶು ಜನನವಾಗಿದೆ. ಕೊಪ್ಪಳ ದಂಪತಿ ಬಳಿ ಇರುವ ಶಿಶು ಅವರದ್ದೇ’ ಎಂಬುದಾಗಿ ಅವರು ಹೇಳಿಕೆ ನೀಡಿದ್ದರು. ಆದರೆ, ಪುರಾವೆಗಳು ಹಾಗೂ ಶಿಶು ಖರೀದಿಸಿದ್ದ ದಂಪತಿ ಸಮೇತ ವಿಚಾರಣೆ ನಡೆಸಿದಾಗ ತಪ್ಪೊಪ್ಪಿಕೊಂಡರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ತಮ್ಮ ಬಳಿ ಇರುವುದು ಅಪಹರಣವಾಗಿರುವ ಶಿಶು ಎಂಬುದು ಕೊಪ್ಪಳ ದಂಪತಿಗೆ ಗೊತ್ತೇ ಇರಲಿಲ್ಲ. ಪೊಲೀಸರು ಅವರ ಮನೆಗೆ ಹೋದಾಗಲೇ ಅವರಿಗೆ ವಿಷಯ ಗೊತ್ತಾಯಿತು.’

‘ಶಿಶುವನ್ನು ಡಿಎನ್‌ಎ ಪರೀಕ್ಷೆಗೆ ಒಳಪಡಿಸಬೇಕಿದೆ. ವರದಿ ಬಂದ ನಂತರ ಶಿಶುವನ್ನು ಪೋಷಕರ ಸುಪರ್ದಿಗೆ ನೀಡಲಾಗುವುದು’ ಎಂದೂ ಮೂಲಗಳು ಹೇಳಿವೆ.

ಹೈಕೋರ್ಟ್ ಮೆಟ್ಟಿಲೇರಿದ್ದ ಪೋಷಕರು

‘ಪ್ರಕರಣ ದಾಖಲಾದರೂ ಶಿಶುವನ್ನು ಪೊಲೀಸರು ಹುಡುಕಿಲ್ಲ’ ಎಂದು ಆರೋಪಿಸಿ ಪೋಷಕರು ಹೈಕೋರ್ಟ್ ಮೆಟ್ಟಿಲೇರಿದ್ದರು. ವಿಚಾರಣೆ ನಡೆಸಿದ್ದ ಹೈಕೋರ್ಟ್, ಶಿಶುವನ್ನು ತ್ವರಿತವಾಗಿ ಹುಡುಕುವಂತೆ ನಿರ್ದೇಶನ ನೀಡಿತ್ತು.

ಹೈಕೋರ್ಟ್ ಮಧ್ಯಪ್ರವೇಶದಿಂದಾಗಿ ತನಿಖೆ ಮತ್ತಷ್ಟು ಚುರುಕುಗೊಳಿಸಿದ್ದ ಪೊಲೀಸರು, ಘಟನಾ ಸ್ಥಳದ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಹಲವು ಬಾರಿ ಪರಿಶೀಲಿಸಿದ್ದರು. 1000ಕ್ಕೂ ಹೆಚ್ಚು ಕರೆಗಳ ವಿವರಗಳನ್ನು ಕಲೆಹಾಕಿ, ಅನುಮಾನ ಬಂದವರನ್ನು ವಿಚಾರಣೆಗೆ ಒಳಪಡಿಸಿದ್ದರು.

‘ಶಿಶು ಅಪಹರಿಸಲು ಬಳಸಿದ್ದ ವಾಹನ ಚಾಲಕ, ಆರೋಪಿಯನ್ನು ನೋಡಿದ್ದ ಪ್ರತ್ಯಕ್ಷದರ್ಶಿಗಳು, ಶಿಶು ಖರೀದಿಸಿದ್ದ ದಂಪತಿ ಸೇರಿ ಹಲವರನ್ನು ಪ್ರಕರಣ ಸಂಬಂಧ ವಿಚಾರಣೆ ನಡೆಸಿ ಹೇಳಿಕೆ ಪಡೆಯಲಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಬ್ಯಾಂಕ್ ಸಾಲ ತೀರಿಸಲು ಕೃತ್ಯ’

‘ವೈದ್ಯಕೀಯ ವಿದ್ಯಾಭ್ಯಾಸಕ್ಕಾಗಿ ಲಕ್ಷಾಂತರ ರೂಪಾಯಿ ಸಾಲ ಪಡೆದಿದ್ದೆ. ಅದನ್ನು ತೀರಿಸುವುದಕ್ಕಾಗಿ ಹಾಗೂ ಪತಿ ಜೊತೆ ಉತ್ತಮ ಜೀವನ ನಡೆಸುವುದಕ್ಕಾಗಿ ಹಣ ಬೇಕಿತ್ತು. ಹೀಗಾಗಿಯೇ ಶಿಶುವನ್ನು ಅಪಹರಣ ಮಾಡಿ ಮಾರಾಟ ಮಾಡಿದ್ದೆ’ ಎಂಬುದಾಗಿ ಆರೋಪಿ ರಶ್ಮಿ ಹೇಳಿಕೆ ನೀಡಿರುವುದಾಗಿ ಪೊಲೀಸ್ ಮೂಲಗಳು ಹೇಳಿವೆ.

ಅಮೆರಿಕ ವಿಶ್ವವಿದ್ಯಾಲಯ ಸೀಟು ಆಮಿಷ; ₹ 2.41 ಕೋಟಿ ವಂಚನೆ

ಬೆಂಗಳೂರು: ಅಮೆರಿಕದ ವಿಶ್ವವಿದ್ಯಾಲಯವೊಂದರಲ್ಲಿ ಸೀಟು ಕೊಡಿಸುವುದಾಗಿ ಹೇಳಿ ₹ 2.41 ಕೋಟಿ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಉತ್ತರಹಳ್ಳಿ ನಿವಾಸಿಯಾಗಿರುವ 26 ವರ್ಷದ ಯುವಕ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿ ಸೂರಜ್ ಶೇಖರ್ ಎಂಬಾತನ ವಿರುದ್ಧ ಎಫ್‌ಐಆರ್ ದಾಖಲಾಗಿದೆ’ ಎಂದು ಪೊಲೀಸರು ಹೇಳಿದರು.

‘ದೂರುದಾರ ಹಾಗೂ ಆರೋಪಿ, ಪಿಯುಸಿ ಸಹಪಾಠಿಗಳು. ನ್ಯಾಯಾಲಯದ ಪ್ರಕರಣವೊಂದರಲ್ಲಿ ವಕೀಲರಿಗೆ ಶುಲ್ಕ ನೀಡಲು ಹಣದ ಅವಶ್ಯಕತೆ ಇರುವುದಾಗಿ ಹೇಳಿ ಆರೋಪಿ, ದೂರುದಾರರ ಬಳಿ ₹ 20,000 ಪಡೆದಿದ್ದ.’

‘ವಿದೇಶದ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗ ಮಾಡುವುದು ದೂರುದಾರನ ಕನಸಾಗಿತ್ತು. ಹೀಗಾಗಿ, ಸೂಕ್ತ ವಿಶ್ವವಿದ್ಯಾಲಯದಲ್ಲಿ ಸೀಟು ಪಡೆಯಲು ಪ್ರಯತ್ನಿಸುತ್ತಿದ್ದರು. ಅದೇ ವಿಚಾರವಾಗಿ ಮಾತನಾಡಿದ್ದ ಆರೋಪಿ, ಅಮೆರಿಕದ ವಿಶ್ವವಿದ್ಯಾಲಯವೊಂದರಲ್ಲಿ ಸೀಟು ಕೊಡಿಸುವುದಾಗಿ ಹೇಳಿದ್ದ. ಅದಕ್ಕೆ ಸಾಕಷ್ಟು ಹಣ ಖರ್ಚಾಗುವುದಾಗಿಯೂ ತಿಳಿಸಿದ್ದ’ ಎಂದೂ ಪೊಲೀಸರು ತಿಳಿಸಿದರು.

‘ಆರೋಪಿ ಮಾತು ನಂಬಿದ್ದ ದೂರುದಾರ, ಆತ ತಿಳಿಸಿದ್ದ ಬ್ಯಾಂಕ್ ಖಾತೆಗಳಿಗೆ ₹ 2.41 ಕೋಟಿ ಹಾಕಿದ್ದರು. ಅದಾದ ನಂತರ ಆರೋಪಿ ನಾಪತ್ತೆಯಾಗಿದ್ದಾನೆ’ ಎಂದೂ ಹೇಳಿದರು.

ಅನುದಾನರಹಿತ ಶಾಲಾ–ಕಾಲೇಜು ಸಿಬ್ಬಂದಿಗೂ ವಿಶೇಷ ಪ್ಯಾಕೇಜ್?

ಬೆಂಗಳೂರು: ಕೋವಿಡ್‌ನಿಂದ ಸಂಕಷ್ಟದಲ್ಲಿರುವವರಿಗೆ ಎರಡನೇ ಹಂತದ ಆರ್ಥಿಕ ಪ್ಯಾಕೇಜ್ ಘೋಷಣೆಯ ವೇಳೆ, ರಾಜ್ಯದ ಖಾಸಗಿ ಅನುದಾನರಹಿತ ಶಾಲಾ–ಕಾಲೇಜುಗಳ ಬೋಧಕ–ಬೋಧಕೇತರ ಸಿಬ್ಬಂದಿಗೂ ವಿಶೇಷ ಪ್ಯಾಕೇಜ್ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಇಲಾಖೆಯಲ್ಲಿ ಲಭ್ಯವಿರುವ ಆರ್ಥಿಕ ಸಂಪನ್ಮೂಲ ಬಳಸಿ ಈ ನೌಕರರಿಗೂ ವಿಶೇಷ ಪ್ಯಾಕೇಜ್ ನೀಡಲು ಮುಖ್ಯಮಂತ್ರಿ ತೀರ್ಮಾನಿಸಿದ್ದಾರೆ. ಹೀಗಾಗಿ, ಲಭ್ಯ ಸಂಪನ್ಮೂಲದ ಬಗ್ಗೆ ತಕ್ಷಣವೇ ಮಾಹಿತಿ ನೀಡುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಮತ್ತು ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಿಗೆ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಪತ್ರ ಬರೆದಿದ್ದಾರೆ.

ಮೇ 27ರವರೆಗೆ ವಿವಿಧ ಬ್ಯಾಂಕ್ ಖಾತೆಗಳಲ್ಲಿ ಲಭ್ಯವಿರುವ ಅನುದಾನ, ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಕಲ್ಯಾಣ ನಿಧಿಯ ಖಾತೆಯಲ್ಲಿರುವ ಮೊತ್ತ, ಪ್ರೌಢ ಶಿಕ್ಷಣ ಮಂಡಳಿಯ ವಿವಿಧ ಲೆಕ್ಕ ಶೀರ್ಷಿಕೆಯಲ್ಲಿ ಅಡಿಯಲ್ಲಿ ಒದಗಿಸಿ ಅನುದಾನದ ಉಳಿಕೆ ಮೊತ್ತ, ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕವಾಗಿ ಪಡೆದ ಅನುದಾನ, ಸರ್ಕಾರ ಪರವಿಪೂರ್ವ ಶಿಕ್ಷಣ ಮಂಡಳಿಗೆ ಒದಗಿಸಿ ಅನುದಾನದಲ್ಲಿ ಉಳಿಕೆ ಮೊತ್ತ ಮತ್ತು ವಿದ್ಯಾರ್ಥಿಗಳ ಪರೀಕ್ಷಾ ಮೊತ್ತದ ಮಾಹಿತಿ ನೀಡುವಂತೆ ಅವರು ಕೋರಿದ್ದಾರೆ.

ಸುದ್ದಿ 2 ನಿಮಿಷ

‘ದೇಶದಲ್ಲಿ ಎರಡೇ ನ್ಯಾಯಾಲಯ ಸಾಕು’

ಬೆಂಗಳೂರು: ‘ದೇಶದಲ್ಲಿ ಎರಡೇ ನ್ಯಾಯಾಲಯ ಇರಬೇಕು. ನ್ಯಾಯಾಧೀಶರಾದವರು ಅತ್ಯಂತ ಪ್ರಾಮಾಣಿಕರಾಗಿರಬೇಕು. ಹಾಗಾದಾಗ ನ್ಯಾಯದಾನ ವಿಳಂಬವಾಗುವುದಿಲ್ಲ. ಇದರಿಂದ ಜನರೂ ನ್ಯಾಯಾಲಯಕ್ಕೆ ಅಲೆಯುವುದು ತಪ್ಪುತ್ತದೆ’ ಎಂದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಅಭಿಪ್ರಾಯಪಟ್ಟರು.

ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಘಟಕವು ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಆನ್‌ಲೈನ್‌ನಲ್ಲಿ ಹಮ್ಮಿಕೊಂಡಿರುವ ‘ವಿಚಾರ ಕಲರವ’ ಉಪನ್ಯಾಸ ಮಾಲಿಕೆಯಲ್ಲಿ ಅವರು ‘ಪ್ರಜಾಪ್ರಭುತ್ವದಲ್ಲಿ ಉತ್ತಮ ಆಡಳಿತ’ ಕುರಿತು ಸೋಮವಾರ ಮಾತನಾಡಿದರು.

‘ನ್ಯಾಯಾಂಗ ವ್ಯವಸ್ಥೆಯ ಮೇಲೆ ಜನ ಅಪಾರ ನಂಬಿಕೆ ಇಟ್ಟಿದ್ದಾರೆ. ಒಂದು ಪ್ರಕರಣ ಇತ್ಯರ್ಥವಾಗಬೇಕಾದರೆ 50 ರಿಂದ 60 ವರ್ಷ ತಗಲುತ್ತಿದೆ. ಇದರಿಂದ ಜನಸಾಮಾನ್ಯರು ಪರಿತಪಿಸುವಂತಾಗಿದೆ’ ಎಂದರು.

‘ನ್ಯಾಯಾಂಗ, ಕಾರ್ಯಾಂಗ ಹಾಗೂ ಶಾಸಕಾಂಗ ಇವೆಲ್ಲದರಲ್ಲೂ ಭ್ರಷ್ಟಾಚಾರ ಮನೆ ಮಾಡಿದೆ. ಪ್ರಾಮಾಣಿಕರನ್ನು ಕಡೆಗಣಿಸಲಾಗುತ್ತಿದೆ’ ಎಂದು ಹೇಳಿದರು.

‘ಪೋಷಕರು ತಮ್ಮ ಮಕ್ಕಳಲ್ಲಿ ತೃಪ್ತಿ ಮತ್ತು ಮಾನವೀಯತೆ ಗುಣಗಳನ್ನು ಬೆಳೆಸಬೇಕು. ಅದರಿಂದ ಭ್ರಷ್ಟಾಚಾರವನ್ನು ನಿಯಂತ್ರಿಸಬಹುದು’ ಎಂದರು.



ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಕೆ.ಆರ್. ವೇಣುಗೋಪಾಲ್, ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಎನ್. ಸತೀಶ್ ಗೌಡ ಹಾಗೂ ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ ಇದ್ದರು.

ಬಿಬಿಎಂಪಿ: ಆಸ್ತಿ ತೆರಿಗೆ ರಿಯಾಯಿತಿ ಅವಧಿ ಜೂನ್ 30ರವರೆಗೆ ವಿಸ್ತರಣೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 2021–22ನೇ ಸಾಲಿನ ಪೂರ್ತಿ ಆಸ್ತಿ ತೆರಿಗೆಯನ್ನು ಒಂದೇ ಕಂತಿನಲ್ಲಿ ಪಾವತಿಸುವವರಿಗೆ ನೀಡುವ ಶೇ 5ರಷ್ಟು ರಿಯಾಯಿತಿಯನ್ನು ಜೂನ್ 30ರವರೆಗೆ ವಿಸ್ತರಿಸಿ ನಗರಾಭಿವೃದ್ಧಿ ಇಲಾಖೆ ಸೋಮವಾರ ಅಧಿಸೂಚನೆ ಹೊರಡಿಸಿದೆ.

ಸಾಮಾನ್ಯವಾಗಿ ಆರ್ಥಿಕ ವರ್ಷದಲ್ಲಿ ಏಪ್ರಿಲ್ ತಿಂಗಳ ಕೊನೆಯ ದಿನದೊಳಗೆ ಆಸ್ತಿ ತೆರಿಗೆ ಪಾವತಿಸಿದವರಿಗೆ ಮಾತ್ರ ಶೇ 5ರಷ್ಟು ರಿಯಾಯಿತಿ ನೀಡಲಾಗುತ್ತದೆ. ಕೋವಿಡ್ ನಿಯಂತ್ರಣಕ್ಕಾಗಿ ಸರ್ಕಾರ ಲಾಕ್‌ಡೌನ್ ಜಾರಿಗೊಳಿಸಿದ್ದರಿಂದ ಬಿಬಿಎಂಪಿಯು ಆಸ್ತಿ ತೆರಿಗೆಯಲ್ಲಿ ರಿಯಾಯಿತಿ ಪಡೆಯುವ ಅವಧಿಯನ್ನು ಮೇ 31ರವರೆಗೆ ವಿಸ್ತರಿಸಿತ್ತು.

ಲಾಕ್ ಡೌನ್ ಜಾರಿಯಲ್ಲಿರುವುದರಿಂದ ಬ್ಯಾಂಕ್‌ಗಳಿಗೆ ತೆರಳಿ ಚಲನ್ ಪಡೆದು ತೆರಿಗೆ ಪಾವತಿ ಮಾಡುವವರು ಸಮಸ್ಯೆ ಎದುರಿಸಿದ್ದರು. ಹಾಗಾಗಿ ರಿಯಾಯಿತಿಯ ಅವಧಿಯನ್ನು ಮತ್ತೆ ವಿಸ್ತರಿಸುವಂತೆ ಸಾರ್ವಜನಿಕರು ಒತ್ತಾಯಿಸಿದ್ದರು. ಈ ಬಗ್ಗೆ ‘ಪ್ರಜಾವಾಣಿ’ ಸೋಮವಾರದ ಸಂಚಿಕೆಯಲ್ಲಿ ವಿಶೇಷ ವರದಿ ಪ್ರಕಟಿಸಿ ಗಮನ ಸೆಳೆದಿತ್ತು.

SOUTH WESTERN RAILWAY

E-Tender Notice No. 06 UBL 2021-22 Dt. 27-05-2021

The undersigned, on behalf of the President of India, invites E-Tenders for the following works:

ZONAL TENDER 2021-2022 (One Year) (for the period from : 01-07-2021 to 30-06-2022)

Sl.	Name of Work	Approx. Value
1	ZONE 1/A & 1/B — Assistant Divisional Engineer / Ballari Section. Hospet (Incl) to Haddinagundu (Excl), Toranagallu to Ranajitpur (Incl), Ballari to Rayadurga (Incl) Kaderidevarpalli (incl).	Rs. 1,00,00,000/-
2	ZONE 2/A & 2/B — Assistant Divisional Engineer / Gadag Section. Gadag (incl) to Hospet (Excl), Hospet (Excl) to Kottur (Excl), Vyas Colony (Excl) to Swamihalli (incl). Ginigera (excl) to Gangavathi (incl.).	Rs. 1,00,00,000/-
3	ZONE 3/A & 3/B — Assistant Divisional Engineer / Vijayapura Section. Hotgi (Excl) to Basavana Bagewadi Road (Excl).	Rs. 64,00,000/-
4	ZONE 3/A1 & 3/B1 — Assistant Divisional Engineer / Vijayapura Section. Bagalkot & Kajjidhoni Basavana Bagewadi Road (Incl) to Badami (Excl).	Rs. 64,00,000/-
5	ZONE 4/A & 4/B — Assistant Divisional Engineer / Central / Hubballi Section. Annigere (Excl) – Gadag (Excl) - Badami (Incl).	Rs. 64,00,000/-
6	ZONE 4/1A & 4/1B — Assistant Divisional Engineer / Central / Hubballi Section. Karjagi (Incl) - Hubballi (Excl) - Annigeri (Incl).	Rs. 45,00,000/-
7	ZONE 5/A & 5/B — Assistant Divisional Engineer / Belagavi Section. Alnawar (Excl) to Miraj (Excl).	Rs. 1,00,00,000/-
8	ZONE 6/A & 6/B — Assistant Divisional Engineer / Castlerock Section. Londa (Excl.) to Vasco da gama (Incl.).	Rs. 1,00,00,000/-
9	ZONE 7/A & 7/B — Assistant Divisional Engineer / HQ / Hubballi Section - All Service buildings. (EMD shed).	Rs. 20,00,000/-
10	ZONE 8/A & 8/B — Assistant Divisional Engineer / HQ / Hubballi Section. Golf Link Colony, Brook Road Officer Colony, Behind Hospital Colony, Railway Officer Club and Surrounding Colony, Willy Ground, Officer Rest House and all other service building under SSE/W/SW/Hubballi Jurisdiction.	Rs. 95,00,000/-
11	ZONE 8/A1 & 8/B1 — Assistant Divisional Engineer / HQ / Hubballi Section. Area covering all staff quarters under jurisdiction of SSE/W/SW/Hubballi.	Rs. 74,00,000/-
12	ZONE 9/A & 9/B — Assistant Divisional Engineer / HQ / Hubballi Section. All colonies to South of Gadag Road, Central Hospital, Down Chawl, Cement Chawl, Vidyaranya Nagar, Sleeper Depot and other buildings of SE/Work/Qts/Hubballi and GM Office (Rail Soudha) General Stores Depot.	Rs. 94,00,000/-
13	ZONE 10A & 10/B — Assistant Divisional Engineer / HQ / Hubballi Section. MTS Colony, Devargudhihal, Obalapur, Deshpande Nagar, Rail Nagar Colony, New Vidyaranya Colony, All colonies pipe line works including Hubballi Railway Station.	Rs. 75,00,000/-
14	ZONE 11/A & 11/B — Assistant Divisional Engineer / HQ / Hubballi Section. Hubballi Station building and its service circulating area including all service building, Supervisor Rest House, South Side Colony, Sheds, Running Room, Mechanical Laundry, All sheds, in yard, Pit line and other areas which are earlier under the control of SSE/W/M/UBL at Hubballi.	Rs. 52,00,000/-
15	ZONE 12/A & 12/B — Assistant Divisional Engineer / West / Hubballi Section. Hubballi (Excl) - Alnavar - Ambewadi (Incl).	Rs. 30,00,000/-

Last date for submission of bids: **Upto 11:00 Hrs. on 25-06-2021**

For details log on: www.ireps.gov.in

Divisional Railway Manager, Works Hubballi

PUB/58/AAS/PRB/SWR/2021-22

ನೈರುತ್ಯ ರೈಲ್ವೆ

ತೆರೆದ ಟೆಂಡರ್ ನೋಟೀಸ್ ನಂ.: 08/ ಎಸ್‌ಬಿಸಿ/21, ದಿನಾಂಕ: 27.05.2021

ಕೆಳಸಹಿದಾರರು ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಕಂಡ ಕಾಮಗಾರಿಗೆ ತೆರೆದ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ವಿವರ	ಅಂದಾಜು ಮೌಲ್ಯ (ರೂ.ಗಳಲ್ಲ)
1	ಎಸ್‌ಡಬ್ಲ್ಯೂ–1: ಬೆಂಗಳೂರು– ಸೇಲಂ ವಿಭಾಗ: ಪಾಲಕ್ಕೋಡು–ಮಾರಂಡಹಳ್ಳಿ ನಿಲ್ದಾಣಗಳ ನಡುವೆ ಕಿ.ಮೀ. 80/000 ರಿಂದ 96/200ವರೆಗೆ 16.20 ಕಿ.ಮೀ.ಗಳ ಉದ್ದದ ವೆಲ್ಡ್ ಮೂಲಕ ನವೀಕರಣ. ಎಸ್‌ಡಬ್ಲ್ಯೂ–II ಎಸ್‌ಬಿಸಿ–ಜೆಟಿಜೆ: ಕಿ.ಮಿ. 336/700 ರಿಂದ 331/0 ಅಪ್‌ಲೈನ್‌ಗೆ 5.70 ಕಿ.ಮೀ. ಉದ್ದದ ವೆಲ್ಡ್ ಮೂಲಕ ನವೀಕರಣ.	2,23,85,209/-
2	ಕೆಜೆಎಂ, ಕೆಜೆಎಂ/ಡೀಸೆಲ್, ಎಸ್‌ಜಿಟಿ, ಡಬ್ಲ್ಯುಡಿ ಮತ್ತು ಎಂಎಲ್‌ಒಗೆ ವಾಲ್ವ್‌ಮನ್‌ಗಳ ಪೂರೈಕೆಯ ಮೂಲಕ ಪಿಫ್ ಮತ್ತು ಪಿಟ್ ಲೈನ್ಸ್, ಕಾಲೋನಿಗಳಿಗೆ ನೀರು ಸರಬರಾಜು ಮತ್ತು ನೀರು ಹೈಡ್ರಾಂಟ್‌ಗಳ ನಿರ್ವಹಣೆ.	21,60,000/-
3	ಬೆಂಗಳೂರು ನಗರ ಯಾರ್ಡ್‌ನಲ್ಲಿ ಹಾಲಿ ಇರುವ ಕ್ಯಾಮ್‌ಟೆಕ್ ವಿನ್ಯಾಸದ ಜೊತೆಗೆ ಕ್ಯಾಟ್ ವಾಕ್‌ನ ಪಿಟ್‌ಲೈನ್ 3 ತೆರವುಗೊಳಿಸಿ ಪಿಟ್‌ಲೈನ್ 3ರ ಮರುನಿರ್ಮಾಣ.	5,83,11,245/-
4	ಪಿಆರ್‌ಎಸ್‌ಟಿ ಡಿಪೋದಲ್ಲಿ ನಿಲುಬಾರ (ಬಲ್ಲಾಸ್ಟ್‌) ಸರಬರಾಜು ಮತ್ತು ಸಂಗ್ರಹ.	4,36,08,610/-
5	ಎಸ್‌ಡಬ್ಲ್ಯು–I: ಎಸ್‌ಬಿಸಿ ವಿಭಾಗ:– 14.65 ಕಿ.ಮೀ. ಉದ್ದದ ಸಿಟಿಆರ್(ಪಿ) ಬೆಂಗಳೂರು–ಸೇಲಂ ವಿಭಾಗದ ಕೆಲಸಕ್ಕೆ ಸಂಬಂಧಿಸಿದಂತೆ ಭೂಮಿಯ ಕೆಲಸ: ಎಸ್‌ಡಬ್ಲ್ಯು – II: 26.108 ಕಿ.ಮೀ ಉದ್ದದ ಸಿಟಿಆರ್(ಪಿ) ಕೆಲಸಕ್ಕೆ ಸಂಬಂಧಿಸಿದಂತೆ ಭೂಮಿಯ ಕೆಲಸ.	1,29,16,811/-
6	ಎಸ್‌ಡಬ್ಲ್ಯು–I: ಬೆಂಗಳೂರು ತುಮಕೂರು ವಿಭಾಗ: ಎಸ್‌ಬಿಸಿ–ವೈಪಿಆರ್ ಡಿಎನ್ ಲೈನ್‌ನಲ್ಲಿ ಟಿಆರ್‌ಆರ್(ಪಿ) 1660 ಸಂಖ್ಯೆ/ಕಿಮೀ 60ಕೆಜಿ ಪಿಎಸ್‌ಸಿ ಸ್ಲೀಪರ್‌ಗಳಲ್ಲಿ 52ಕೆಜಿ 72/90 ಯುಟಿಎಸ್ ಹಳಿಗಳ ಜೊತೆಗೆ 3/900–5/200 ಬಿ ಮಾರ್ಗದಿಂದ 3.20 ಕಿ.ಮೀ. ಉದ್ದದ 60ಕೆಜಿ ಪಿಎಸ್‌ಸಿ ಸ್ಲೀಪರ್‌ಗಳಲ್ಲಿ 60ಕೆಜಿ/90ಯುಟಿಎಸ್ ಹಳಿಗಳನ್ನು, 5/200–6/000 ಆರ್‌ಡಿ2 ಡಿನ್ ಮಾರ್ಗ ವೈಪಿಆರ್ ಯಾರ್ಡ್ ಮತ್ತು ಡಿಇಎನ್/ಎನ್/ಎಸ್‌ಬಿಸಿ ವಿಭಾಗದಲ್ಲಿ 6/000–7/100 ವೈಪಿಆರ್ ಗಜ ರೇಖೆಗಳು. ಎಸ್‌ಡಬ್ಲ್ಯು – II: ಬೆಂಗಳೂರು ವಿಭಾಗ. ಎಸ್‌ಬಿಸಿ–ಡಿಎಂಎಂ ವಿಭಾಗ– ಎಸ್‌ಎಐಎಲ್‌ಗಾಗಿ 8.5 ಸ್ವಿಚ್‌ಗಳನ್ನು ಮತ್ತು ಕ್ರಿಂಗ್‌ಗಳನ್ನು ನವೀಕರಿಸಲು ಪ್ರಸ್ತಾಪಿಸಲಾಗಿದೆ.	56,82,148/-
7	ಬಿವೈಪಿಎಲ್–ಡಿಎಂಎಂ ವಿಭಾಗ– ಒಂದು ವರ್ಷದವರೆಗೆ ಎಡಿಇಎನ್/ಎಚ್‌ಯುಪಿ ವಿಭಾಗದಲ್ಲಿ ಖಾಸಗಿ ಏಜೆನ್ಸಿ ಮೂಲಕ ಪಕ್ಕದ ನಿಲ್ದಾಣಗಳಿಗೆ ಕುಡಿಯುವ ನೀರು ಸರಬರಾಜು.	33,35,975/-
8	ಎಡಿಇಎನ್/ಎಚ್‌ಯುಪಿ ವಿಭಾಗ: ಎಚ್‌ಯುಪಿ, ಡಿಬಿಯು, ಜಿಬಿಡಿ, ಪಿಕೆಡಿ ಮತ್ತು ಎಸ್‌ಎಸ್‌ಪಿಎನ್ ಪುರಾತತ್ವ ಮತ್ತು ಇತರ ಸೇವಾ ಕಟ್ಟಡಗಳಲ್ಲಿ 24 ತಿಂಗಳ ಕಾಲ ಕಚೇರಿ ಮತ್ತು ಸಿಬ್ಬಂದಿ ಕ್ವಾರ್ಟರ್ಸ್‌ಗಳಲ್ಲಿ ಅಸ್ತಿತ್ವದಲ್ಲಿರುವ ಒಳಚರಂಡಿ ಮಾರ್ಗಗಳನ್ನು ಸ್ವಚ್ಛಗೊಳಿಸುವುದು ಮತ್ತು ನಿರ್ವಹಿಸುವುದು.	22,54,200/-
9	ಎಸ್‌ಬಿಸಿ–ಎಂವೈಎಸ್‌ವಿಭಾಗ: ಹಳಿಗಳ ಮೇಲೆ ಕಸವನ್ನು ಎಸೆಯುವುದನ್ನು ತಪ್ಪಿಸಲು 2700 ಮೀಟರ್‌ಗಳ ಉದ್ದದ ತಡೆಗೋಡೆ ನಿರ್ಮಾಣ.	2,09,68,365/-
10	ಬೆಂಗಳೂರು ಮೈಸೂರು ವಿಭಾಗದ ಕಾಮಗಾರಿಗೆ ಸಂಬಂಧಿಸಿದಂತೆ ಉಚಿತವಾಗಿ ಒಂದು ವರ್ಷ ಕಾರ್ಯಾಚರಣೆಯ ನಂತರ ಎರಡು ವರ್ಷ ವಿಸ್ತರಿಸುವುದು ಒಳಗೊಂಡಂತೆ ಹಿರಿಯ ಡಿಇಎನ್/ಡಬ್ಲ್ಯುಇಎಸ್‌ಟಿ/ಎಸ್‌ಬಿಸಿ ವಿಭಾಗದಲ್ಲಿ ಹಳ ಆಧಾರಿತ ರೈಲ್ ಲ್ಯೂಬ್ರಿಕೇಟರ್ಸ್ (44 ಸಂಖ್ಯೆ) ಸರಬರಾಜು, ಅಳವಡಿಸುವುದು. ಎರಡು: ಸಿಟಿಆರ್(ಪಿ) 1540 ಸಂಖ್ಯೆ/ಕಿಮೀ 52ಕೆಜಿ ಪಿಎಸ್‌ಸಿ ಸ್ಲೀಪರ್‌ಗಳಲ್ಲಿ 52ಕೆಜಿ 72/90ಯುಟಿಎಸ್ ಹಳಿಗಳು ಜೊತೆಗೆ ಹಿರಿಯ ಡಿಇಎನ್/ಡಬ್ಲ್ಯುಇಎಸ್‌ಟಿ ಉಪ ವಿಭಾಗದ 32.20 ಕಿ.ಮೀ. ಉದ್ದದ ಮಾರ್ಗದ 1660 ಸಂಖ್ಯೆ/ಕಿಮೀನ 60ಕೆಜಿ ಪಿಎಸ್‌ಸಿ ಸ್ಲೀಪರ್‌ಗಳಿಗೆ 60ಕೆಜಿ/90ಯುಟಿಎಸ್ ಹಳಿಗಳು.	3,55,49,734/-
11	ಎಚ್‌ಇಎಸ್‌ಇ ಡಿಪೋದಲ್ಲಿ ನಿಲುಬಾರ ಒಳಗೊಂಡಂತೆ ಯಾಂತ್ರಿಕ ಲೋಡಿಂಗ್, ಬ್ಯಾಕ್ಸಿಂಗ್ ಇತ್ಯಾದಿಗಳ ಸಂಗ್ರಹ.	4,09,94,280/-
12	ಎಸ್‌ಬಿಸಿ ವಿಭಾಗದಲ್ಲಿ ಸ್ಟೀಲ್ ಗಿರ್ಡರ್ ಸೇತುವೆಗಳ ಸಂಖ್ಯೆ 434, 683ಯುಪಿ & ಡಿಎನ್, 319/ಎ, 288, 285, 281, 268, 266, 259, 224, 214, 197, 448 ಡಿಎನ್, 583, 610, 627 ಯುಪಿ, 664 ಡಿಎನ್, 257, 352/ಎ, 760ಡಿಎನ್, 838 (2 ಮಾರ್ಗಗಳು) ಬಲಪಡಿಸುವುದು ಮತ್ತು (ಉಕ್ಕು) ಲೋಹಕರಣಗೊಳಿಸುವುದು. (22 ಸಂಖ್ಯೆಯ ಸೇತುವೆಗಳು)	1,20,26,317/-
13	ಎಸ್‌ಬಿಸಿ–ಜೆಟಿಜಿ ವಿಭಾಗದ ನಡುವೆ ಸೇತುವೆ ಸಂಖ್ಯೆ 865ಎಸ್‌ಎನ್ (2&16.71ಮೀ)ನ ಮರು–ಗಿರ್ಡರಿಂಗ್.	37,17,731/-

ಬಿಡ್ ಸಲ್ಲಿಸಲು ಕಡೆಯ ದಿನಾಂಕ: 28.06.2021ರ 15:00 ಗಂಟೆವರೆಗೆ.

ವಿವರಗಳಿಗೆ www.ireps.gov.in ಲಾಗ್‌ಆನ್ ಮಾಡಿ

ವಿಭಾಗೀಯ ರೈಲ್ವೆ ಪ್ರಬಂಧಕರು (ಕಾಮಗಾರಿಗಳು) ಎಸ್‌ಬಿಸಿ

ಪಿಯುಬಿ/22/ಎಎಎಸ್/ಪಿಆರ್‌ಬಿ/ಎಸ್‌ಬಿಸಿ/2021–22

ಕೃಷಿ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘದಿಂದ ನೆರವು

ಮಾವು ಬೆಳೆಗಾರರಿಗೆ ಬಾಕ್ಸ್ ವಿತರಣೆ

ಬೆಂಗಳೂರು: ಲಾಕ್‌ಡೌನ್ ಅವಧಿಯಲ್ಲಿ ಮಾವು ಮಾರಾಟಕ್ಕೆ ಅನುಕೂಲವಾಗುವಂತೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘವು ಮಾವು ಬೆಳೆಗಾರರಿಗೆ ಹಣ್ಣಿನ ಪ್ಯಾಕಿಂಗ್ ಬಾಕ್ಸ್‌ಗಳನ್ನು ಉಚಿತವಾಗಿ ಸೋಮವಾರ ವಿತರಿಸಿತು.

ಮಾವನ್ನು ವೈಜ್ಞಾನಿಕವಾಗಿ ಕಟಾವು ಮಾಡಿ ಗ್ರಾಹಕರಿಗೆ ನೇರ ಮಾರಾಟ ಮಾಡಲು ಇಚ್ಛಿಸುವ ಮಾವು ಬೆಳೆಗಾರರಿಗೆ ಸಂಘವು ಸಹಾಯಹಸ್ತ ಚಾಚಿದೆ.

ಮಾವು ಬೆಳೆಗಾರರಿಗೆ ಬಾಕ್ಸ್ ವಿತರಿಸಿ ಮಾತನಾಡಿದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ರಾಜೇಂದ್ರ ಪ್ರಸಾದ್, ‘ಬೇರೆ ಕ್ಷೇತ್ರಗಳಿಗೆ ಹೋಲಿಸಿದರೆ ಕೋವಿಡ್ ಎರಡನೇ ಅಲೆಯಿಂದ ಕೃಷಿ ರಂಗಕ್ಕೆ ಹಾಗೂ ಬೆಳೆಗಾರರಿಗೆ ಹೆಚ್ಚು ಸಮಸ್ಯೆಯಾಗಿಲ್ಲ. ಬೆಳೆಗಾರರು ಉತ್ಪನ್ನಗಳ ಪೂರೈಕೆಯಲ್ಲಿ ಗುಣಮಟ್ಟವನ್ನು ಸದಾ ಕಾಯ್ದುಕೊಳ್ಳಬೇಕು’ ಎಂದರು.

ಮಾವು ಬೆಳೆಗಾರರಿಗೆ ಸಂಘದ ವತಿಯಿಂದ ಬಾಕ್ಸ್‌ಗಳನ್ನು ವಿತರಿಸಲಾಯಿತು. ಕುಲಪತಿ ರಾಜೇಂದ್ರ ಪ್ರಸಾದ್, ಸಂಶೋಧನಾ ನಿರ್ದೇಶಕ ವೈ.ಜಿ.ಷಡಕ್ಷರಿ, ವಿಸ್ತರಣಾ ನಿರ್ದೇಶಕ ಎನ್.ದೇವಕುಮಾರ್, ಕೆ.ನಾರಾಯಣಗೌಡ ಹಾಗೂ ಇತರರು ಇದ್ದರು –ಪ್ರಜಾವಾಣಿ ಚಿತ್ರ

‘ಎಂತಹ ಸಮಸ್ಯೆಗಳು ಎದುರಾಗಿದ್ದರೂ ಬೆಳೆಗಾರರು ಕೃಷಿ ಉತ್ಪನ್ನಗಳನ್ನು ಉತ್ಪಾದನೆ ಕಡೆಗಣಿಸಿಲ್ಲ. ರೈತರ ನೆರವಿಗಾಗಿ ವಿಶ್ವವಿದ್ಯಾಲಯವು ಅಗ್ರಿ ವಾರ್‌ರೂಂ ಆರಂಭಿಸಿದೆ. ರೈತರ ಸಮಸ್ಯೆಗಳಿಗೆ ಸ್ಪಂದಿಸಲು ಸಹಾಯವಾಣಿಯನ್ನೂ ಆರಂಭಿಸಿದ್ದೇವೆ. ರೈತರು ಹಾಗೂ ಗ್ರಾಹಕರನ್ನು ಸಮೀಪಿಸುವುದೇ ನಮ್ಮ ಉದ್ದೇಶ’ ಎಂದು ಹೇಳಿದರು.

ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಕೆ.ನಾರಾಯಣಗೌಡ, ‘ಮಾವನ್ನು ಮರದಿಂದ ಕೆಳಗೆ ಬೀಳದಂತೆ ಎಚ್ಚರಿಕೆಯಿಂದ ಕಟಾವು ಮಾಡಿ, ನೈಸರ್ಗಿಕವಾಗಿ ಹಣ್ಣನ್ನು ಮಾಗಿಸುವ ವಿಧಾನವನ್ನು ಬೆಳೆಗಾರರು ಅನುಸರಿಸುತ್ತಿದ್ದಾರೆ. ಇದರಿಂದ ಹಣ್ಣು ಉತ್ತಮ ಗುಣಮಟ್ಟದಿಂದ ಕೂಡಿರುವುದರ ಜೊತೆಗೆ ದರವೂ ಹೆಚ್ಚಿಸಬಹುದು. ಇದಕ್ಕಾಗಿ ಸಂಘವು ಬೆಳೆಗಾರರ ಬೆಂಬಲಕ್ಕೆ ನಿಂತಿದೆ’ ಎಂದರು.

60 ಬೆಳೆಗಾರರಿಗೆ ಪ್ರಯೋಜನ

‘ಕೋಲಾರ, ರಾಮನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿಕ್ಕಬಳ್ಳಾಪುರ ಸೇರಿದಂತೆ ವಿವಿಧ ಜಿಲ್ಲೆಗಳ 60 ಮಾವು ಬೆಳೆಗಾರರಿಗೆ ಸಂಘದ ವತಿಯಿಂದ ತಲಾ 400 ಮಾವಿನ ಬಾಕ್ಸ್‌ಗಳನ್ನು ವಿತರಿಸಲಾಗಿದೆ’ ಎಂದು ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಎ.ಗೋಪಾಲ್ ತಿಳಿಸಿದೆ.

‘ಬಾಕ್ಸ್ ವಿತರಿಸಲು ಬೆಳೆಗಾರರಿಂದ ಸಂಘವು ಅರ್ಜಿಗಳನ್ನು ಆಹ್ವಾನಿಸಿತ್ತು. ಆಯ್ದ ಬೆಳೆಗಾರರಿಗೆ ₹4 ಲಕ್ಷ ವೆಚ್ಚದಲ್ಲಿ ಉಚಿತವಾಗಿ ಬಾಕ್ಸ್ ನೀಡಲಾಗಿದೆ’ ಎಂದರು.

ಸಾಮೂಹಿಕ ಅತ್ಯಾಚಾರ; ದಂಪತಿಗಾಗಿ ಹುಡುಕಾಟ

ಬೆಂಗಳೂರು: ಬಾಂಗ್ಲಾದೇಶದ 23 ವರ್ಷದ ಯುವತಿ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ದಂಪತಿಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದು, ವಿಶೇಷ ತಂಡವೊಂದು ಈಗಾಗಲೇ ತಮಿಳುನಾಡಿಗೆ ಹೋಗಿದೆ.

‘ಯುವತಿ ಮೇಲೆ ಅತ್ಯಾಚಾರ ನಡೆಸಲು ಆರೋಪಿಗಳಿಗೆ ದಂಪತಿ ಸೇರಿ ಮೂವರು ಸಹಕರಿಸಿದ್ದರು. ಅವರು ಸಹ ಬಾಂಗ್ಲಾ ಪ್ರಜೆಗಳು. ದೇಶದಲ್ಲಿ ಅಕ್ರಮವಾಗಿ ನೆಲೆಸಿದ್ದರು. ಅವರ ಬಗ್ಗೆ ಸಂತ್ರಸ್ತೆ ಸಹ ಹೇಳಿಕೆ ನೀಡಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸಾಲ ವಸೂಲಾತಿ ಬೇಡ’

ಬೆಂಗಳೂರು: ‘ಸಹಕಾರ ಸಂಘಗಳ ಮೂಲಕ ಪಡೆದ ಸಾಲದ ಕಂತು ಪಾವತಿ ಮುಂದೂಡಿರುವ ಸರ್ಕಾರ, ಜೂನ್ ಬಳಿಕ ಪೂರ್ತಿ ಬಾಕಿ ಕಟ್ಟಬೇಕೆಂದು ಆದೇಶ ಹೊರಡಿಸಿದೆ. ಈ ಸುತ್ತೋಲೆಯನ್ನು ತಕ್ಷಣ ವಾಪಸ್ ಪಡೆಯಬೇಕು’ ಎಂದು ಆಗ್ರಹಿಸಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ.

‘ಆರ್ಥಿಕ ಪ್ಯಾಕೇಜ್‌ನಲ್ಲಿ, ರೈತರ ಮತ್ತು ಸ್ವ ಸಹಾಯ ಸಂಘಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಭೂ ಅಭಿವೃದ್ಧಿ ಬ್ಯಾಂಕುಗಳಿಂದ ಪಡೆದಿರುವ ಸಾಲಗಳ ಮರುಪಾವತಿ ಅವಧಿ ಮೇ 1ರಿಂದ ಜುಲೈ 31ರವರೆಗೆ ಮೂರು ತಿಂಗಳ ಕಾಲ ವಿಸ್ತರಿಸಲಾಗಿದೆ. ಇದಕ್ಕೆ ₹ 134.38 ಕೋಟಿ ಘೋಷಿಸಲಾಗಿದೆ. 3 ತಿಂಗಳ ಅವಧಿಯಲ್ಲಿ ಕಟ್ಟಬೇಕಾದ ಸಾಲ ಮತ್ತು ಬಡ್ಡಿ ಮನ್ನಾ ಮಾಡಲಾಗುತ್ತಿದೆಯೆಂಬ ಅರ್ಥದಲ್ಲಿ ಮುಖ್ಯಮಂತ್ರಿ ಹೇಳಿದ್ದರು.

ಆದರೆ, ಮೇ 21ರ ಸುತ್ತೋಲೆಯಲ್ಲಿ ‘ಏ. 1ರಿಂದ ಜೂನ್ 30ರವರೆಗಿನ ಕಂತುಗಳನ್ನು ಮರುಪಾವತಿಸಲು ಜೂನ್ 30ರ ವರೆಗೆ ಕಾಲಾವಕಾಶ ನೀಡಿ ಆದೇಶ ಹೊರಡಿಸಿದೆ. ಅಂದರೆ, ಜೂನ್ ನಂತರ ಸಂಪೂರ್ಣ ಬಾಕಿ ಕಟ್ಟಬೇಕೆಂದು ಅರ್ಥ. ಇದರಿಂದ ರೈತರಿಗೆ ಲಾಭವೇನು’ ಎಂದು ಸಿದ್ದರಾಮಯ್ಯ ಅವರು ಪ್ರಶ್ನಿಸಿದ್ದಾರೆ.

ಚಿತ್ರಾವಳಿ

ರಾಜ್ಯದಲ್ಲಿ ಕೋವಿಡ್ ಸಾಂಕ್ರಾಮಿಕದಿಂದ ಸಂಕಷ್ಟಕ್ಕೆ ಒಳಗಾಗಿರುವ ಜನರಿಗೆ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಕಂಪನಿಯು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಅಡಿಯಲ್ಲಿ ಆಹಾರ ಕಿಟ್‌ಗಳನ್ನು ವಿತರಿಸಿದೆ. ವಿವಿಧ ಚಾರಿಟೆಬಲ್ ಟ್ರಸ್ಟ್‌ಗಳು ಮತ್ತು ಇತರೆ ಸಂಘಗಳ ಮೂಲಕ ಈ ಕಾರ್ಯ ಕೈಗೊಂಡಿದೆ.

ನಿಟ್ಟೆ ಸಮೂಹ ಶಿಕ್ಷಣ ಸಂಸ್ಥೆಯ ವತಿಯಿಂದ ಯಲಹಂಕ ಬಳಿಯ ಮೈಲಪ್ಪನಹಳ್ಳಿಯಲ್ಲಿ ಕೂಲಿ ಕಾರ್ಮಿಕರು ಹಾಗೂ ಕೃಷಿಕರ ಕುಟುಂಬಗಳಿಗೆ ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ದಿನಸಿ ಕಿಟ್‌ಗಳನ್ನು ವಿತರಿಸಿದರು. ನಿಟ್ಟೆ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ರೋಹಿತ್ ಪೂಂಜ, ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಎಚ್.ಸಿ.ನಾಗರಾಜ್, ಸಿಂಗನಾಯಕನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಎನ್.ಚಂದ್ರಶೇಖರ್, ಮೈಲಪ್ಪನಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯರಾದ ಎನ್.ಹರೀಶ್, ಶೋಭಾ ಗೋಪಾಲ್ ಹಾಗೂ ಇತರರು ಇದ್ದರು.

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PERSONAL

Change of Name

14845976N, SEP/MT, Khade Mahendra Ginyandev 1ATC, Mother name service record ANUSAYA instead of ANUSAYA GINYANADEV KHADE, notary K.V. Mani, Bangalore.

14843384L, SEP/MT, Debasish Pahari ASC Centre & College daughter name service record SUMONA PAHARI instead of SUMANA PAHARI notary K.V. Mani, Bangalore.

14845976N, SEP/MT, Khade Mahendra Ginyandev 1ATC, Father name service record GINYANDEV instead of KHADE GINYANADEV RAMARAV, notary K.V. Mani, Bangalore.

REAL ESTATE SELLING

Flat

Jakkur

3 BHK, 3 Bathrooms, Air-Conditioned, Furnished, 2 Car Parking, 95L. Contact: 9845171036.

DH Classifieds
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information Contact:
9880856233
9731810277
9886213331

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

PUBLIC NOTICE

HOUSE KEEPING AND PEST CONTROL SERVICES AT ARJUN OFFICERS MESS ASC CENTRE AND COLLEGE BENGALURE - 560007

1. There is requirement of **Housekeeping and Pest Control services** at Arjun Officers Mess, ASC Centre and college, Agram, Bengaluru. Vendors may submit proposals in sealed envelopes by hand/ registered post to reach Mess Secretary. Arjun Officers Mess ASC Centre and College, Agram (PO), Bengaluru-560007, **by 15 June 2021**
2. The Complete details pertaining to terms & agreement is required to be collected physically from the address mentioned below. -
(a) **Address**
Mess Secretary,
Arjun Officers Mess.
ASC Centre & College,
Bengaluru-560007
(b) **Mobile/Phone**
(i) Mess Secretary - **080-25350087**
(II) Supervisor - **9448067671**
(c) **Email ID.**
messstudent@gmail.com



ವಿಶ್ವ ಕ್ಷೀರ ದಿನಾಚರಣೆ

ಕೆಲ ದಿನಗಳವರೆಗೆ ನಿರ್ಬಂಧ ಅಗತ್ಯ: ಕಂದಾಯ ಸಚಿವ ಆರ್. ಅಶೋಕ ಅಭಿಪ್ರಾಯ

‘ಲಾಕ್‌ಡೌನ್ ಮುಂದುವರಿಕೆ ಅನಿವಾರ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಪ್ರತಿದಿನದ ಒಟ್ಟು ಹೊಸ ಕೋವಿಡ್ ಪ್ರಕರಣಗಳ ಸಂಖ್ಯೆ 3,000ಕ್ಕಿಂತ ಕಡಿಮೆ ಹಾಗೂ ಬೆಂಗಳೂರಿನಲ್ಲಿ 500ರ ಆಸುಪಾಸಿಗೆ ಬರುವವರೆಗೂ ಲಾಕ್‌ಡೌನ್ ಮುಂದುವರಿಸುವುದು ಅನಿವಾರ್ಯ ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ಆರ್.ಅಶೋಕ

ಮಾಧ್ಯಮ ಪ್ರತಿನಿಧಿಗಳ ಜತೆ ಸೋಮವಾರ ಮಾತನಾಡಿದ ಅವರು, ‘ದೆಹಲಿಯಲ್ಲಿ ಲಾಕ್‌ಡೌನ್ ಜಾರಿಗೊಳಿಸಿದ ಕಾರಣದಿಂದ ಪ್ರತಿದಿನದ ಹೊಸ ಪ್ರಕರಣಗಳ ಸಂಖ್ಯೆ 1,000ಕ್ಕೆ ಕುಸಿದಿದೆ. ಆದರೆ, ಬೆಂಗಳೂರಿನಲ್ಲಿ ನಿತ್ಯವೂ 5,000 ಮತ್ತು ರಾಜ್ಯದಲ್ಲಿ 20,000 ಹೊಸ ಪ್ರಕರಣಗಳು ವರದಿಯಾಗುತ್ತಿವೆ. ಈ ಕಾರಣದಿಂದ ಕೆಲವು ದಿನಗಳ ಕಾಲ ಲಾಕ್‌ಡೌನ್ ಮುಂದುವರಿಸುವ ಅಗತ್ಯವಿದೆ’ ಎಂದರು.

ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದ ಜವಾಬ್ದಾರಿ ಹೊಂದಿರುವ ಸಚಿವರ ತಂಡ ಪ್ರತಿ ಎರಡು ದಿನಕ್ಕೊಮ್ಮೆ ಸಭೆ ನಡೆಸಲಿದೆ. ಎಲ್ಲ ವಿಷಯಗಳ ಕುರಿತು ಸಮಗ್ರವಾಗಿ ಚರ್ಚಿಸಿದ ಬಳಿಕ ಲಾಕ್‌ಡೌನ್ ಮುಂದುವರಿಸಬೇಕೆ? ಅಥವಾ ಬೇಡವೆ? ಎಂಬುದರ ಕುರಿತು ನಿರ್ಧಾರಕ್ಕೆ ಬರಲಾಗುವುದು ಎಂದರು.

ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಕೂಡ ಲಾಕ್‌ಡೌನ್ ಮುಂದುವರಿಸುವುದನ್ನು ಬೆಂಬಲಿಸಿ ಮಾತನಾಡಿದರು.

‘ತಜ್ಞರ ಜತೆ ಚರ್ಚಿಸಿ ನಿರ್ಧಾರ’

ಸೋಮವಾರ ವಿಧಾನಸೌಧದಲ್ಲಿ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಜತೆ ಸಭೆ ನಡೆಸಿದ ಬಳಿಕ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ‘ಲಾಕ್‌ಡೌನ್ ಕುರಿತು ಜೂನ್ 4 ಅಥವಾ 5ರಂದು ಸಭೆ ನಡೆಸಲಾಗುವುದು. ತಜ್ಞರ ಜತೆ ಚರ್ಚಿಸಿದ ಬಳಿಕ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು’ ಎಂದರು.

ಲಾಕ್‌ಡೌನ್ ಹಂತ ಹಂತವಾಗಿ ತೆರವು: ಗೌರವ್ ಗುಪ್ತ

ಗೌರವ್ ಗುಪ್ತ

ಬೆಂಗಳೂರು: ‘ಕೋವಿಡ್ ನಿಯಂತ್ರಣಕ್ಕಾಗಿ ನಗರದಲ್ಲಿ ಜಾರಿಗೊಳಿಸಲಾದ ಲಾಕ್‌ಡೌನ್ ಅನ್ನು ಒಮ್ಮೆಲೇ ತೆರವುಗೊಳಿಸುವ ಬದಲು ಹಂತ ಹಂತವಾಗಿ ತೆರವುಗೊಳಿಸಬೇಕು. ಆಗ ಮಾತ್ರ ಕೊರೊನಾ ಹರಡುವಿಕೆಯನ್ನು ನಿಯಂತ್ರಿಸಲು ಸಾಧ್ಯ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅಭಿಪ್ರಾಯಪಟ್ಟರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ಲಾಕ್‌ಡೌನ್ ಜಾರಿಗೊಳಿಸುವ ಅವಶ್ಯಕತೆ ಇತ್ತು. ಆದರೆ, ಜನಜೀವನ ಸಹಜ ಸ್ಥಿತಿಗೆ ಮರಳಲೇಬೇಕು. ಆದರೆ, ಅದು ಯಾವಾಗ ಎಂಬುದು ಪ್ರಶ್ನೆ. ಎಲ್ಲ ವಲಯಗಳಲ್ಲಿ ಕೆಲಸ ಮಾಡುವವರ ಕಾಳಜಿಯೂ ಮುಖ್ಯ. ಎರಡು ತಿಂಗಳುಗಳಿಂದ ಜನರು ಕಠಿಣ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಮುಂಬರುವ ದಿನಗಳಲ್ಲೂ ಅವಶ್ಯಕತೆಗೆ ತಕ್ಕಂತೆ ಸರ್ಕಾರ ಕ್ರಮಕೈಗೊಳ್ಳಲಿದೆ’ ಎಂದರು.

‘ಸದ್ಯದ ಪರಿಸ್ಥಿತಿಯಲ್ಲಿ ಕೋವಿಡ್ ಪ್ರಕರಣಗಳ ಪ್ರಮಾಣ ಕಡಿಮೆ ಆಗುವಂತೆ ನೋಡಿಕೊಳ್ಳುವುದೇ ನಮ್ಮ ಆದ್ಯತೆ. ತಳ ಮಟ್ಟದ ಅಧಿಕಾರಿಗಳು ಕೋವಿಡ್ ದೃಢಪಟ್ಟವರನ್ನು ಸಂಪರ್ಕಿಸಿ ಸೋಂಕು ಹರಡದಂತೆ ತಡೆಯುವ ಪ್ರಯತ್ನದಲ್ಲಿ ನಿರತರಾಗಿದ್ದಾರೆ. ಕೋವಿಡ್ ಲಸಿಕೆ ಅಭಿಯಾನ ಹಾಗೂ ಕೋವಿಡ್ ಪರೀಕ್ಷೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಬಗ್ಗೆಯೂ ಅಷ್ಟೇ ಗಮನ ನೀಡುತ್ತಿದ್ದೇವೆ’ ಎಂದರು.

‘45 ವರ್ಷ ಮೇಲ್ಪಟ್ಟವರರಿಗೆ ಪ್ರತಿಯೊಂದು ವಾರ್ಡ್‌ನಲ್ಲೂ ಲಸಿಕೆ ಹಾಕಲಾಗುತ್ತಿದೆ. ಈ ಸಲುವಾಗಿ ಕೆಲವು ವಾರ್ಡ್‌ಗಳಲ್ಲಿ ಒಂದು, ಇನ್ನೂ ಕೆಲವು ವಾರ್ಡ್‌ಗಳಲ್ಲಿ ಎರಡು ಲಸಿಕಾ ಕೇಂದ್ರಗಳನ್ನು ತೆರೆಯಲಾಗಿದೆ. ಲಸಿಕಾ ಕೇಂದ್ರಗಳಲ್ಲಿನ ಬೇಡಿಕೆ ಆಧರಿಸಿ ನಿತ್ಯವು 100ರಿಂದ 150 ಮಂದಿಗೆ ಹಾಕಲು ಅಗತ್ಯ ಇರುವಷ್ಟು ಲಸಿಕೆ ಪೂರೈಸಲಾಗುತ್ತಿದೆ’ ಎಂದು ಮಾಹಿತಿ ನೀಡಿದರು.

ನಗರದ ಕೋವಿಡ್ ಅಂಕಿ–ಅಂಶ

11,63,229 ▲	ಒಟ್ಟು ಪ್ರಕರಣಗಳು (11,59,237 ನಿನ್ನೆಯ ವಿವರ)
1,46,043 ▼	ಸಕ್ರಿಯ ಪ್ರಕರಣಗಳು
10,03,839 ▲	ಗುಣಮುಖರಾದವರು
13,346 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	3,992 ▼
ಗುಣಮುಖ	20,332 ▼
ಸಾವು	242 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕುಟುಂಬ ಪಿಂಚಣಿ ನಿಯಮ ಸರಳ: ಕೇಂದ್ರ

ನವದೆಹಲಿ(ಪಿಟಿಐ): ಕೋವಿಡ್–19 ಹಿನ್ನೆಲೆಯಲ್ಲಿ ಕುಟುಂಬದ ಪಿಂಚಣಿ ನಿಯಮಗಳನ್ನು ಕೇಂದ್ರ ಸರ್ಕಾರ ಸರಳಗೊಳಿಸಿದೆ.

ಕೋವಿಡ್ ಅಥವಾ ಕೋವಿಡ್‌ನಿಂದ ಅಲ್ಲದಿದ್ದರೂ ಸಾವಿಗೀಡಾದವರ ಕುಟುಂಬದ ಸದಸ್ಯರಿಗೆ ಈ ಅವಕಾಶ ಕಲ್ಪಿಸಲಾಗಿದೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ತಿಳಿಸಿದ್ದಾರೆ.

ಸೇವೆಯ ವೇಳೆ ಸರ್ಕಾರಿ ನೌಕರರು ಸಾವಿಗೀಡಾದರೆ ಕುಟುಂಬದ ಪಿಂಚಣಿಯನ್ನು ಅರ್ಹ ಸದಸ್ಯರಿಗೆ ವೇತನ ಮತ್ತು ಲೆಕ್ಕಪತ್ರ ಕಚೇರಿಗೆ ಕಳುಹಿಸಿದ ಬಳಿಕವೇ ನಿಯಮಾನುಸಾರ ನೀಡಲಾಗುತ್ತದೆ.

ಆದರೆ, ಸಾಂಕ್ರಾಮಿಕ ಕಾಯಿಲೆಯ ಈ ಸಂದರ್ಭದಲ್ಲಿ ಕುಟುಂಬದ ಅರ್ಹ ಸದಸ್ಯರು ಸರ್ಕಾರಿ ಸೇವೆಯಲ್ಲಿದ್ದವರ ಮರಣ ಪ್ರಮಾಣ ಪತ್ರ ಸಲ್ಲಿಸಿದ ತಕ್ಷಣವೇ ತಾತ್ಕಾಲಿಕವಾಗಿ ಪಿಂಚಣಿಯನ್ನು ಮಂಜೂರು ಮಾಡಲಾಗುವುದು. ಪ್ರಕ್ರಿಯೆಗಳಿಗೆ ಕಾಯುವ ಅಗತ್ಯ ಇಲ್ಲ ಎಂದು ತಿಳಿಸಿದ್ದಾರೆ.

ಕೋವಿಡ್ ಯೋಧರಿಗೆ ಹಾಡಿನ ಗೌರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಲನಚಿತ್ರ ನಿರ್ಮಾಣ ಸಂಸ್ಥೆ ‘3–ಎಸ್’ನ ವ್ಯವಸ್ಥಾಪಕ ಸುಶೀಲ್ ಸಾಗರ್ ಹಾಗೂ ಅವರ ತಂಡದವರು, ವಿಭಿನ್ನ ಹಾಡಿನ ಮೂಲಕ ಕೋವಿಡ್ ಯೋಧರಿಗೆ ಗೌರವ ಅರ್ಪಿಸಿದ್ದಾರೆ.

‘ಭರವಸೆಯ ಒಂದು ಬೆಳಕಿಗೆ ಚಾಚುವಾ ಕೈ ನೂರಾರು..ದೇವರ ರೂಪ ಎಂತೋ ಎಷ್ಟೋ ಹೇಳುವರು ಯಾರು’ ಎಂಬ ಸಾಹಿತ್ಯವನ್ನೊಳಗೊಂಡ ಈ ಹಾಡನ್ನು ಮೇ 29ರಂದು ಸಿಟಿ ಸವಾರಿ ಹೆಸರಿನ ಯೂಟ್ಯೂಬ್ ವಾಹಿನಿಯಲ್ಲಿ ಬಿಡುಗಡೆ ಮಾಡಲಾಗಿದೆ.

‘ಹೋದ ವರ್ಷ ಸ್ನೇಹಿತರೆಲ್ಲಾ ಸೇರಿ ’ನೆರವು‘ ಎಂಬ ಸಂಸ್ಥೆ ಹುಟ್ಟುಹಾಕಿದ್ದೆವು. ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಸಿಲುಕಿದ್ದ 1,000 ಬಡ ಕುಟುಂಬಗಳಿಗೆ ಅದರ ಮೂಲಕ ದಿನಸಿ ಕಿಟ್ ವಿತರಿಸಿದ್ದೆವು. ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ನಂತರ ಆಹಾರದ ಪೊಟ್ಟಣಗಳನ್ನು ಒದಗಿಸುವ ಕೆಲಸದಲ್ಲಿ ತೊಡಗಿದ್ದೆವು. ಈ ವೇಳೆ ಪೊಲೀಸರು, ವೈದ್ಯರು, ಪತ್ರಕರ್ತರು, ಆಶಾ ಕಾರ್ಯಕರ್ತೆಯರು ಜೀವದ ಹಂಗು ತೊರೆದು ಕೆಲಸ ಮಾಡುತ್ತಿರುವುದನ್ನು ಕಂಡೆ. ಅವರಿಗೆ ಹಾಡಿನ ಮೂಲಕ ಗೌರವ ಅರ್ಪಿಸುವ ಆಲೋಚನೆ ಹೊಳೆಯಿತು. ಇದನ್ನು ಸ್ನೇಹಿತ ಆಕಾಶ್‌ಗೆ ತಿಳಿಸಿದೆ. ಆತ ಸಕಾರಾತ್ಮಕವಾಗಿ ಸ್ಪಂದಿಸಿದ. ಕೂಡಲೇ ರಂಜನಿ ಅವರನ್ನು ಸಂಪರ್ಕಿಸಿ ಹಾಡು ಬರೆಸಿದೆವು. ಸರಿಗಮಪ ಕಾರ್ಯಕ್ರಮದ ಸ್ಪರ್ಧಿಗಳಾದ ಅಶ್ವಿನ್ ಶರ್ಮಾ, ಐಶ್ವರ್ಯ ರಂಗರಾಜನ್, ಆಶಾ ಭಟ್ ಇದಕ್ಕೆ ಧ್ವನಿ ನೀಡಿದರು’ ಎಂದು ಸುಶೀಲ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಹಾಡು ಎಲ್ಲರಿಗೂ ತಲುಪಬೇಕು ಎಂಬುದು ನಮ್ಮ ಉದ್ದೇಶ. ಹೀಗಾಗಿ ನಟ ವಸಿಷ್ಠ ಸಿಂಹ, ಕಿರಣ್ ಶ್ರೀನಿವಾಸ್, ನಟಿಯರಾದ ಹಿತಾ ಚಂದ್ರಶೇಖರ್, ಶ್ವೇತಾ ಪ್ರದೀಪ್ ಹಾಗೂ ಬಿಗ್‌ಬಾಸ್ ಸ್ಪರ್ಧಿಗಳಾದ ಶೈನ್ ಶೆಟ್ಟಿ, ರಘು ಗೌಡ, ಅನುಪಮಾ ಗೌಡ, ಚೈತ್ರಾ ವಾಸುದೇವನ್ ಅವರನ್ನು ಸಂಪರ್ಕಿಸಿದೆವು. ಅವರು ಈ ಹಾಡಿನಲ್ಲಿ ಕಾಣಿಸಿಕೊಳ್ಳಲು ಒಪ್ಪಿದರು’ ಎಂದು ಹೇಳಿದರು.

ಅಂಧ ದಂಪತಿಗೆ ನೆರವಾದ ಪಿಎಸ್‌ಐ

ಅಂಧ ದಂಪತಿ, ಮಕ್ಕಳ ಜೊತೆ ಪಿಎಸ್‌ಐ ಮನು

ಬೆಂಗಳೂರು: ಲಾಕ್‌ಡೌನ್‌ನಿಂದಾಗಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ಊಟಕ್ಕೂ ಪರದಾಡುತ್ತಿದ್ದ ಅಂಧ ದಂಪತಿಗೆ ವಿಜಯನಗರ ಪಿಎಸ್‌ಐ ಮನು, ಐದು ತಿಂಗಳಿಗೆ ಆಗುವಷ್ಟು ದಿನಸಿ ಹಾಗೂ ಮಕ್ಕಳ ಔಷಧಿ ಕೊಡಿಸಿದ್ದಾರೆ.

ಆರ್‌ಎಂಸಿ ಯಾರ್ಡ್ ಸಮೀಪದ ನಿವಾಸಿಗಳಾದ ಬಸವರಾಜು–ಚಿನ್ನಮ್ಮ ದಂಪತಿಗೆ ಎರಡು ವರ್ಷದ ಮಗು ಹಾಗೂ ಆರು ತಿಂಗಳ ಮಗು ಇದೆ. ಲಾಕ್‌ಡೌನ್‌ನಿಂದಾಗಿ ಜೀವನ ನಡೆಸುವುದೇ ಕಷ್ಟವಾಗಿತ್ತು. ನಿರ್ಗತಿಕರಿಗೆ ದಿನಸಿ ನೀಡುತ್ತಿದ್ದ ಸುದ್ದಿ ತಿಳಿದ ದಂಪತಿ, ಮಕ್ಕಳ ಸಮೇತ ವಿಜಯನಗರಕ್ಕೆ ಬಂದಿದ್ದರು.

ವಿಜಯನಗರ ಠಾಣೆ ಬಳಿ ದಂಪತಿಯನ್ನು ಮಾತನಾಡಿಸಿದ್ದ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಮನು, ಅವರ ಕಥೆ ಕೇಳಿ ಕಣ್ಣೀರಿಟ್ಟಿದ್ದರು. ನಾಲ್ಕು ತಿಂಗಳಿಗೆ ಆಗುವಷ್ಟು ದಿನಸಿ ಖರೀದಿಸಿ ನೀಡಿದರು. ನಂತರ ಆಟೊದಲ್ಲಿ ದಂಪತಿಯನ್ನು ಮನೆಗೆ ಕಳುಹಿಸಲಾಯಿತು. ಪಿಎಸ್‌ಐ ಕೆಲಸಕ್ಕೆ ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

50 ಕೆ.ಜಿ ಅಕ್ಕಿ, 10 ಕೆ.ಜಿ ಬೇಳೆ, 5 ಕೆ.ಜಿ ಗೋಧಿ ಹಿಟ್ಟು, 10 ಲೀಟರ್ ಎಣ್ಣೆ, 12 ಮೈ ಸೋಪು, 12 ಬಟ್ಟೆ ಸೋಪು, 10 ಕೆ.ಜಿ. ಸಕ್ಕರೆ, 2 ಕೆ.ಜಿ ಟೀ ಪುಡಿ, 1 ಕೆ.ಜಿ ಹಾಲಿನ ಪೌಡರ್, ಬಿಸ್ಕೆಟ್, ಮಗುವಿಗೆ ಪೌಡರ್ ಹಾಗೂ ಮಕ್ಕಳಿಗೆ ಬೇಕಾದ ಔಷಧಿಗಳು ದಿನಸಿ ಜೊತೆಯಲ್ಲಿದ್ದವು.

ಕೋವಿಡ್ ಅಂಕಿ–ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	17.12 ಕೋಟಿ ▲	2.81ಕೋಟಿ ▲
ಸಕ್ರಿಯ ಪ್ರಕರಣ	1.41ಕೋಟಿ ▼	19.01ಲಕ್ಷ ▼
ಗುಣಮುಖ	15.35ಕೋಟಿ ▲	2.59 ಕೋಟಿ ▲
ಸಾವು	35.61ಲಕ್ಷ ▲	3.31 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.06ಲಕ್ಷ ▼	1.14ಲಕ್ಷ ▼
ಗುಣಮುಖ	5.52ಲಕ್ಷ ▼	2.32ಲಕ್ಷ ▼
ಸಾವು	8,424 ▼	2,479 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಬ್ರೆಜಿಲ್	ರಷ್ಯಾ	ಇರಾನ್
43,520 ▼	9,694	8,876

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರೆಜಿಲ್	ಫ್ರಾನ್ಸ್
55.92 ▼	11.40 ▼	2.41 ▲

*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ

ಎಲ್ಲಿ ಹೆಚ್ಚು ಸಾವು

ಮಹಾರಾಷ್ಟ್ರ	95,344 ▼
ತಮಿಳುನಾಡು	24,232 ▲
ದೆಹಲಿ	24,237 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	57.46 ▲
ಕೇರಳ	25.26 ▲
ತಮಿಳುನಾಡು	20.96 ▲

ಪ್ರಜಾವಾಣಿ ಗ್ರಾಫಿಕ್ಸ್

ರಾಜ್ಯಸಭೆಗೆ ಮಹೇಶ್ ಜೇಠ್ಮಲಾನಿ

ನವದೆಹಲಿ (ಪಿಟಿಐ): ಖ್ಯಾತ ವಕೀಲ ಮಹೇಶ್ ಜೇಠ್ಮಲಾನಿ ಅವರನ್ನು ರಾಜ್ಯಸಭೆಗೆ ನಾಮನಿರ್ದೇಶನ ಮಾಡಲಾಗಿದೆ.

‘ನನ್ನನ್ನು ರಾಜ್ಯಸಭೆಗೆ ನಾಮನಿರ್ದೇಶನ ಮಾಡಿರುವ ಬಗ್ಗೆ ಮಾಹಿತಿ ನೀಡಲಾಗಿದೆ’ ಎಂದು ಮಹೇಶ್ ಜೇಠ್ಮಲಾನಿ ತಿಳಿಸಿದ್ದಾರೆ.

ಇವರು ಖ್ಯಾತ ವಕೀಲರಾಗಿದ್ದ ದಿವಂಗತ ರಾಮ ಜೇಠ್ಮಲಾನಿ ಅವರ ಪುತ್ರ. ರಾಮ ಜೇಠ್ಮಲಾನಿ ಅವರು ಸಹ ರಾಜ್ಯಸಭೆ ಸದಸ್ಯರಾಗಿದ್ದರು.

ರಾಜ್ಯಸಭೆಯಲ್ಲಿ ಎರಡು ಸ್ಥಾನಗಳು ತೆರವಾಗಿದ್ದವು. ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಸ್ವಪನ್ ದಾಸಗುಪ್ತಾ ರಾಜೀನಾಮೆಯಿಂದ ಮತ್ತು ರಘುನಾತ್ ಮೊಹಾಪಾತ್ರ ಅವರು ಕೋವಿಡ್‌–19ನಿಂದ ಸಾವಿಗೀಡಾಗಿದ್ದರಿಂದ ಈ ಸ್ಥಾನಗಳು ಖಾಲಿಯಾಗಿದ್ದವು.

ಈಗ ಒಂದು ಸ್ಥಾನಕ್ಕೆ ಮಹೇಶ್ ಜೇಠ್ಮಲಾನಿ ಅವರನ್ನು ನಾಮನಿರ್ದೇಶನ ಮಾಡಲಾಗಿದೆ.

ಅಂತ್ಯಸಂಸ್ಕಾರ: ಮಾನವೀಯತೆ ಮೆರೆದ ರೇಣುಕಾಚಾರ್ಯ

ಹೊನ್ನಾಳಿ: ಕೊರೊನಾದಿಂದ ಮೃತಪಟ್ಟ ಯುವಕರೊಬ್ಬರ ಮೃತ ದೇಹವನ್ನು ಗ್ರಾಮಕ್ಕೆ ತರಲು ಗ್ರಾಮಸ್ಥರು ಒಪ್ಪದ ಕಾರಣ ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಅವರೇ ಆಂಬುಲೆನ್ಸ್ ಚಾಲನೆ ಮಾಡಿಕೊಂಡು ಹೋಗಿ ಮೃತದೇಹವನ್ನು ತಂದು ಅಂತ್ಯಸಂಸ್ಕಾರ ಮಾಡಿ ಮಾನವೀಯತೆ ಮೆರೆದರು.

ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದ 30 ವರ್ಷದ ಯುವಕ ಲಾಕ್‌ಡೌನ್‌ನಿಂದಾಗಿ ಊರಿಗೆ ಬಂದಿದ್ದರು. ಕೊರೊನಾ ಸೋಂಕು ತಗುಲಿದ ಕಾರಣ ಹೊನ್ನಾಳಿಯ ತಾಲ್ಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಸೋಮವಾರ ಮುಂಜಾನೆ ಆಸ್ಪತ್ರೆಗೆ ಭೇಟಿ ನೀಡಿ ಶಾಸಕರು ಯುವಕನಿಗೆ ಧೈರ್ಯ ಹೇಳಿ ಬಂದಿದ್ದರು. ಆದರೆ ಕೆಲವೇ ಗಂಟೆಗಳಲ್ಲಿ ಯುವಕ ಮೃತಪಟ್ಟಿದ್ದ.

ಮೃತ ದೇಹ ಗ್ರಾಮಕ್ಕೆ ತರದಂತೆ ಮನವಿ: ಜಗಳೂರು ತಾಲ್ಲೂಕಿನ ಯುವಕನ ಪೋಷಕರು ಹೊನ್ನಾಳಿಯಲ್ಲಿ ನೆಲೆಸಿದ್ದರು. ಮೃತ ದೇಹವನ್ನು ಜಗಳೂರಿಗೆ ತೆಗೆದುಕೊಂಡು ಹೋಗಲು ಪೋಷಕರು ಮುಂದಾದಾಗ ಗ್ರಾಮಸ್ಥರು ಗ್ರಾಮಕ್ಕೆ ತರದಂತೆ ಮನವಿ ಮಾಡಿದರು. ವಿಷಯ ತಿಳಿಯುತ್ತಿದ್ದಂತೆ ಶಾಸಕರೇ ಆಂಬುಲೆನ್ಸ್ ಚಾಲನೆ ಮಾಡಿಕೊಂಡು ಮೃತದೇಹ ತಂದು ಹೊನ್ನಾಳಿಯ ಹಿಂದೂ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ಮಾಡಿಸಿದರು.

ಲಸಿಕೆ ಮಾರಾಟ ಆಡಿಯೊ: ಸಾಮಾಜಿಕ ಕಾರ್ಯಕರ್ತನಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿ ಶಾಸಕ ಎಲ್.ಎ.ರವಿಸುಬ್ರಹ್ಮಣ್ಯ ಅವರು ಖಾಸಗಿ ಆಸ್ಪತ್ರೆಗಳ ಮೂಲಕ ಕೋವಿಡ್ ಲಸಿಕೆ ಮಾರಾಟ ಮಾಡಿಸಿ ಕಮಿಷನ್ ಪಡೆಯುತ್ತಿದ್ದಾರೆ’ ಎಂದು ಆರೋಪಿಸಿ ಆಡಿಯೊ ಸಮೇತ ನಗರ ಪೊಲೀಸ್ ಕಮಿಷನರ್ ಅವರಿಗೆ ದೂರು ನೀಡಿದ್ದ ಸಾಮಾಜಿಕ ಕಾರ್ಯಕರ್ತ ಎಚ್.ಎಂ. ವೆಂಕಟೇಶ್ ಅವರಿಗೆ ಗಿರಿನಗರ ಪೊಲೀಸರು ನೋಟಿಸ್ ನೀಡಿದ್ದಾರೆ.

‘ಆಸ್ಪತ್ರೆ ಹೆಸರು ಹೇಳಿಕೊಂಡು ಸುಖಾಸುಮ್ಮನೇ ಆರೋಪ ಮಾಡಿರುವ ಎಚ್.ಎಂ. ವೆಂಕಟೇಶ್, ಆಸ್ಪತ್ರೆ ಘನತೆಗೆ ಧಕ್ಕೆ ತಂದಿದ್ದಾರೆ’ ಎಂದು ಆರೋಪಿಸಿ ಎ.ವಿ. ಮಲ್ಟಿ ಸ್ಪೆಷಲಿಸ್ಟ್ ಆಸ್ಪತ್ರೆ ಆಡಳಿತ ಮಂಡಳಿ ಗಿರಿನಗರ ಠಾಣೆಗೆ ದೂರು ನೀಡಿದೆ. ಅದರನ್ವಯ ವೆಂಕಟೇಶ್ ಅವರಿಗೆ ಸೋಮವಾರ ನೋಟಿಸ್ ನೀಡಿರುವ ಪೊಲೀಸರು, ವಿಚಾರಣೆಗಾಗಿ ಠಾಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ.

‘ಸರ್ಕಾರ ನಿಗದಿಪಡಿಸಿರುವ ದರಕ್ಕಿಂತ ₹ 900 ಪಡೆದು ಲಸಿಕೆ ಮಾರಲಾಗುತ್ತಿದೆ. ಅದರಲ್ಲಿ ರವಿ ಸುಬ್ರಹ್ಮಣ್ಯ ಅವರ ಕಚೇರಿಗೆ ಹಣ ಹೋಗುವುದಾಗಿ ಆಸ್ಪತ್ರೆ ಸಿಬ್ಬಂದಿಯೇ ಹೇಳಿದ್ದಾರೆ’ ಎಂದು ಆರೋಪಿಸಿ ವೆಂಕಟೇಶ್ ಶನಿವಾರ ದೂರು ನೀಡಿದ್ದರು.

ಇಂಡಿಗೊ: ಹಿರಿಯ ನೌಕರರಿಗೆ ಕಡ್ಡಾಯ ರಜೆ

ನವದೆಹಲಿ(ಪಿಟಿಐ): ಕೋವಿಡ್ ಪರಿಣಾಮ ಪ್ರಯಾಣಿಕರ ದಟ್ಟಣೆ ಕಡಿಮೆಯಾಗಿರುವುದರಿಂದ ಹಿರಿಯ ನೌಕರರು ಸೆಪ್ಟೆಂಬರ್‌ವರೆಗೆ ತಿಂಗಳಿಗೆ ನಾಲ್ಕು ದಿನ ವೇತನವಿಲ್ಲದೆ ಕಡ್ಡಾಯ ರಜೆ (ಎಲ್‌ಡಬ್ಲ್ಯೂಪಿ) ಮೇಲೆ ಹೋಗಬೇಕಾಗುತ್ತದೆ ಎಂದು ಇಂಡಿಗೊ ವಿಮಾನಯಾನ ಸಂಸ್ಥೆ ಸೋಮವಾರ ಹೇಳಿದೆ.

ನಿಧನ ವಾರ್ತೆ

ಎಸ್.ಎಂ. ಬೇಬಿ

ಬೆಂಗಳೂರು: ನಗರದ ನಿವಾಸಿ ಎಸ್.ಎಂ. ಬೇಬಿ (75) ಅವರು ಭಾನುವಾರ ನಿಧನ ಹೊಂದಿದರು.

ಅವರು ‘ಪ್ರಜಾವಾಣಿ’ಯಲ್ಲಿ ಪತ್ರಕರ್ತರಾಗಿದ್ದ ಪಿ.ಸಿ.ಅಪ್ಪಾಜಿ ಅವರ ಪತ್ನಿ.

ಮಗನ ಔಷಧಿಗಾಗಿ 300 ಕಿ.ಮೀ ಸೈಕಲ್ ಸವಾರಿ

ಪ್ರಜಾವಾಣಿ ವಾರ್ತೆ

ಬೈರೇಶ್

ಬೈರೇಶ್

ಬನ್ನೂರು (ಮೈಸೂರು): ಗಾರೆ ಕೆಲಸ ಮಾಡಿ ಜೀವನ ನಡೆಸುವ ಆನಂದ್ ಎಂಬುವವರು, ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲ್ಲೂಕಿನ ಗಾಣಿಗನಕೊಪ್ಪಲಿನಿಂದ ಸೈಕಲ್‌ನಲ್ಲಿ ಬೆಂಗಳೂರಿಗೆ ಹೋಗಿ, ತಮ್ಮ ಅಂಗವಿಕಲ ಪುತ್ರನಿಗೆ ಅಗತ್ಯವಿದ್ದ ಔಷಧ ತಂದಿದ್ದಾರೆ.

ಲಾಕ್‌ಡೌನ್ ಕಾರಣ ಬಸ್ ಸೇರಿದಂತೆ ಬೇರಾವ ವಾಹನದ ವ್ಯವಸ್ಥೆ ಇಲ್ಲದಿರುವುದರಿಂದ, ಮಗನಿಗಾಗಿ ಮೂರು ದಿನಗಳ ಕಾಲ ಸುಮಾರು 300 ಕಿ.ಮೀ ಸೈಕಲ್ ತುಳಿದಿದ್ದಾರೆ.

ಅವರ ಪುತ್ರ ಬೈರೇಶ್, ಹುಟ್ಟಿದ 6 ತಿಂಗಳಿನಿಂದಲೇ ಮಾನಸಿಕ ಸಮಸ್ಯೆ ಎದುರಿಸುತ್ತಿದ್ದಾನೆ. ಹೀಗಾಗಿ, 10 ವರ್ಷದಿಂದ ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದಾರೆ. ಅಲ್ಲಿಂದಲೇ ಔಷಧ ತರುತ್ತಾರೆ. ಪ್ರತಿ ಸಲ ಹೋದಾಗ ಎರಡು ತಿಂಗಳಿಗಾಗುವಷ್ಟು ಔಷಧ ತರುತ್ತಿದ್ದರು.

ಔಷಧ ಖಾಲಿಯಾದ ಕಾರಣ ಸೈಕಲ್‌ನಲ್ಲಿಯೇ ಹೋಗಿ ತರಲು ಆನಂದ್ ನಿರ್ಧರಿಸಿದರು. ಮೇ 23 ರಂದು ಹೊರಟು ಬನ್ನೂರು, ಮಳವಳ್ಳಿ, ಕನಕಪುರ ಮಾರ್ಗವಾಗಿ ಬೆಂಗಳೂರು ತಲುಪಿದ್ದಾರೆ. ಈ ಅವಧಿಯಲ್ಲಿ ಕನಕಪುರದಲ್ಲಿ ರಾತ್ರಿ ದೇವಾಲಯದಲ್ಲಿ ತಂಗಿದ್ದ ಅವರಿಗೆ ಸ್ಥಳೀಯರು ಊಟ–ನೀರಿನ ವ್ಯವಸ್ಥೆ ಮಾಡಿದ್ದಾರೆ. ಅಲ್ಲಿಂದ ಮರುದಿನ ಬೆಂಗಳೂರಿಗೆ ಹೊರಟ ಅವರು, ಔಷಧ ಖರೀದಿಸಿ ಮೇ 26ರಂದು ಸ್ವಗ್ರಾಮಕ್ಕೆ ಬಂದಿದ್ದಾರೆ. ಆನಂದ್ ಅವರ ವಿಚಾರದ ತಿಳಿದ ನಿಮ್ಹಾನ್ಸ್ ಆಸ್ಪತ್ರೆ ವೈದ್ಯರು, ಅವರಿಗೆ ₹ 1,000 ನೀಡಿದ್ದಾರೆ.

‘18 ವರ್ಷದವರೆಗೆ ಮಾತ್ರೆ ತಪ್ಪಿಸಬಾರದು. ಇಲ್ಲದಿದ್ದರೆ ಮೂರ್ಛೆ ರೋಗ ಬರುವ ಸಾಧ್ಯತೆ ಇದೆ ಎಂದು ವೈದ್ಯರು ತಿಳಿಸಿದ್ದಾರೆ. ಹೀಗಾಗಿ, ಸೈಕಲ್‌ನಲ್ಲಿಯೇ ಹೋಗಿ, ಔಷಧಿ ತಂದೆನು’ ಎಂದು ಆನಂದ್ ಪ್ರತಿಕ್ರಿಯಿಸಿದರು.

ಸಂಕ್ಷಿಪ್ತ ಸುದ್ದಿ

ಇಂದು ಪಿಂಚಣಿದಾರರ ಉಪವಾಸ

ಬೆಂಗಳೂರು: ಪಿಂಚಣಿ ಹೆಚ್ಚಳ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಪಿಂಚಣಿದಾರರು ನ್ಯಾಷನಲ್ ಎಜಿಟೇಶನ್ ಕಮಿಟಿ (ಎನ್‌ಎಸಿ) ನೇತೃತ್ವದಲ್ಲಿ ಜೂನ್ 1ರಂದು ರಾಷ್ಟ್ರವ್ಯಾಪಿ ಉಪವಾಸವನ್ನು ಆನ್‌ಲೈನ್ ಮೂಲಕ ಹಮ್ಮಿಕೊಂಡಿದ್ದಾರೆ..

ಪಿಂಚಣಿದಾರರು ಮನೆಗಳಲ್ಲೇ ಬೆಳಿಗ್ಗೆ 8ರಿಂದ ಸಂಜೆ 5 ಗಂಟೆಯವರೆಗೆ ಉಪವಾಸ ಕೈಗೊಳ್ಳುವ ಮೂಲಕ ಪ್ರತಿಭಟಿಸಲಿದ್ದಾರೆ.

‘ಇಪಿಎಸ್–95ರ ಯೋಜನೆಯಡಿ ಏಳು ಲಕ್ಷ ಪಿಂಚಣಿದಾರರಿದ್ದಾರೆ. ಅವರಿಗೆ ₹460ರಿಂದ ₹3 ಸಾವಿರದವರೆಗೆ ಪಿಂಚಣಿ ಸಿಗುತ್ತಿದ್ದು, ಇದರಿಂದ ಜೀವನ ನಡೆಸುವುದು ಅಸಾಧ್ಯ. ಕನಿಷ್ಠ ಪಿಂಚಣಿಯನ್ನು ₹7,500ಕ್ಕೆ ಏರಿಸಬೇಕು. ಇತ್ತೀಚಿನ ಇಪಿಎಫ್‌ಒ ಮಧ್ಯಂತರ ಸಲಹೆಗಳನ್ನು ಹಿಂಪಡೆದು, ಇಪಿಎಸ್–95ರ ಪಿಂಚಣಿದಾರರಿಗೆ ಹೆಚ್ಚಿನ ಪಿಂಚಣಿ ಆಯ್ಕೆ ನೀಡಬೇಕು. ಪಿಂಚಣಿದಾರರ ಕುಟುಂಬಗಳಿಗೆ ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಬೇಕು’ ಎಂದು ಎನ್‌ಎಸಿ ಆಗ್ರಹಿಸಿದೆ.

ನಾಳೆಯಿಂದ ‘ಜೈಮಿನಿ ಭಾರತ’ ಕಾವ್ಯ ವಾಚನ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯು ಜೂನ್ 2ರಿಂದ 6ರವರೆಗೆ ಲಕ್ಷ್ಮೀಶ ಕವಿಯ ‘ಜೈಮಿನಿ ಭಾರತ’ ಕಾವ್ಯದ ವಾಚನ ಮತ್ತು ವ್ಯಾಖ್ಯಾನವನ್ನು ಆನ್‌ಲೈನ್ ಮೂಲಕ ಹಮ್ಮಿಕೊಂಡಿದೆ.

ಬೆಂಗಳೂರಿನ ಸುಮಾ ಪ್ರಸಾದ್ ಅವರಿಂದ ಗಮಕ ವಾಚನ, ಉಜಿರೆಯ ಡಾ.ಬಿ.ಪಿ.ಸಂಪತ್ ಕುಮಾರ್ ಅವರಿಂದ ವ್ಯಾಖ್ಯಾನ ನೆರವೇರಲಿದೆ.

ಕಾರ್ಯಕ್ರಮಗಳನ್ನು https://bit.ly/3wMHuii ಅಥವಾ https://bit.ly/3p4dMmu ಮೂಲಕ ವೀಕ್ಷಿಸಬಹುದು.

ಉಚಿತ ತರಬೇತಿ

ಬೆಂಗಳೂರು: ಕಾಮಾಕ್ಷಿಪಾಳ್ಯದ ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರದ ವತಿಯಿಂದ ಪೊಲೀಸ್ ಕಾನ್‌ಸ್ಟೆಬಲ್ ಹಾಗೂ ಪಿಎಸ್‌ಐ ಹುದ್ದೆಗಳ ಪರೀಕ್ಷೆಗಳಿಗೆ ಆನ್‌ಲೈನ್ ಮೂಲಕ ಉಚಿತ ತರಬೇತಿ ನೀಡಲಾಗುವುದು.

ಮೂರು ತಿಂಗಳ ತರಬೇತಿ ಪಡೆಯಲು ಇಚ್ಛಿಸುವವರು 9108368331, 8951224920 ಸಂಪರ್ಕಿಸಬಹುದು ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ರೇರಾ: ಕಿಶೋರ್ ಚಂದ್ರ ಅಧಿಕಾರ ಸ್ವೀಕಾರ



ಬೆಂಗಳೂರು: ಕರ್ನಾಟಕ ರಿಯಲ್‌ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ (ಕೆ-ರೇರಾ) ಅಧ್ಯಕ್ಷರಾಗಿ ನಿವೃತ್ತ ಐಪಿಎಸ್ ಅಧಿಕಾರಿ ಎಚ್.ಸಿ. ಕಿಶೋರ್ ಚಂದ್ರ ಸೋಮವಾರ ಅಧಿಕಾರ ಸ್ವೀಕರಿಸಿದರು.

ಪ್ರಾಧಿಕಾರದ ಸದಸ್ಯರಾಗಿ ನಿವೃತ್ತ ಐಪಿಎಸ್ ಅಧಿಕಾರಿ ನೀಲಮಣಿ ಎನ್. ರಾಜು ಅವರೂ ಪದಗ್ರಹಣ ಮಾಡಿದರು. ಅಧ್ಯಕ್ಷರಾಗಿದ್ದ ಎಂ.ಆರ್. ಕಾಂಬಳೆ, ಸದಸ್ಯ ಅದೋನಿ ಸೈಯದ್ ಸಲೀಂ ನಿವೃತ್ತಿಯಿಂದ ಈ ಸ್ಥಾನಗಳು ತೆರವಾಗಿದ್ದವು.

ಆಮ್ಲಜನಕ ಕೊರತೆಯಿಂದ ಸಾವು: ಮಾಹಿತಿ ಪಡೆದ ನ್ಯಾ. ಬಿ.ಎ.ಪಾಟೀಲ

ಚಾಮರಾಜನಗರ: ಇಲ್ಲಿನ ಜಿಲ್ಲಾಸ್ಪತ್ರೆಯಲ್ಲಿ ಮೇ 2ರಂದು ರಾತ್ರಿ ಸಕಾಲಕ್ಕೆ ಆಮ್ಲಜನಕ ಪೂರೈಕೆಯಾಗದೆ ಸಂಭವಿಸಿದ ದುರಂತದ ನ್ಯಾಯಾಂಗ ತನಿಖೆಗೆ ರಾಜ್ಯ ಸರ್ಕಾರ ನೇಮಿಸಿರುವ, ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಎ.ಪಾಟೀಲ ಅವರು ಸೋಮವಾರ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ ಕಲೆ ಹಾಕಿದರು.

ಮಧ್ಯಾಹ್ನ 2.30ಕ್ಕೆ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿದ ಅವರು, ವೈದ್ಯಕೀಯ ಕಾಲೇಜಿನ ಡೀನ್ ಡಾ.ಸಂಜೀವ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಎಂ.ಸಿ.ರವಿ, ಜಿಲ್ಲಾ ಸರ್ಜನ್ ಡಾ.ಶ್ರೀನಿವಾಸ್, ಕೋವಿಡ್ ನೋಡಲ್ ಅಧಿಕಾರಿ ಡಾ.ಮಹೇಶ್ ಸೇರಿದಂತೆ ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿಯಿಂದ ಮಾಹಿತಿ ಪಡೆದರು.

ಕೋವಿಡ್ ಆಸ್ಪತ್ರೆಯ ನಿರೀಕ್ಷಣಾ ಕೊಠಡಿ, ಆಮ್ಲಜನಕ ಪೂರೈಕೆ ಘಟಕ, ಹೊಸದಾಗಿ ಸ್ಥಾಪನೆ ಮಾಡಲಾಗಿರುವ ಆಮ್ಲಜನಕ ಘಟಕಗಳಿಗೂ ಭೇಟಿ ನೀಡಿ ಪರಿಶೀಲಿಸಿದರು. ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶ ಸದಾಶಿವ ಎಸ್.ಸುಲ್ತಾನ್‌ಪುರಿ ಅವರು ಜೊತೆಗಿದ್ದರು.

ಬಿ.ಎ.ಪಾಟೀಲ ಅವರು ಅರ್ಧ ಗಂಟೆಗೂ ಹೆಚ್ಚು ಕಾಲ ಆಸ್ಪತ್ರೆಯಲ್ಲಿದ್ದರು.

ಎಚ್.ಡಿ.ದೇವೇಗೌಡರು ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ ಸಂದರ್ಭ

ಕೆಂಪುಕೋಟೆಯ ಮೇಲೆ ತ್ರಿವರ್ಣ ಧ್ವಜ ಹಾರಿಸಿದ ಏಕೈಕ ಕನ್ನಡಿಗ

ದೇಶದ ಮುಡಿಗೆ ಕನ್ನಡದ ಕಿರೀಟ

• ಲೇಖಕರು: ವೈಎಸ್‌ವಿ ದತ್ತ, ಸಿ. ರುದ್ರಪ್ಪ, (ಹಿರಿಯ ಪತ್ರಕರ್ತರು)

ಶಾಲು ಹೊದ್ದ ಮಣ್ಣಿನ ಮಗ ದೇವೇಗೌಡರು

ಹಾಸನ ತಾಲ್ಲೂಕು ಅಭಿವೃದ್ಧಿ ಮಂಡಳಿ ಸದಸ್ಯರಾಗಿ ರಾಜಕೀಯ ಪ್ರವೇಶಿಸಿದ್ದ ಎಚ್.ಡಿ. ದೇವೇಗೌಡರು ನಿರಂತರ ಹೋರಾಟದ ಬಲದಿಂದಲೇ ಕರ್ನಾಟಕದ ಮುಖ್ಯಮಂತ್ರಿ ಗಾದಿಗೆ ಏರಿದ್ದರು. ಜನಪರ ಮತ್ತು ದೂರದೃಷ್ಟಿಯ ಆಡಳಿತದ ಮೂಲಕ ರಾಜ್ಯದ ಜನಮಾನಸದಲ್ಲಿ ಬಲವಾಗಿ ಬೇರೂರುತ್ತಿರುವಾಗಲೇ 1996ರಲ್ಲಿ ದೇಶದ ಪ್ರಧಾನಿ ಹುದ್ದೆಯೇ ಒಲಿದು ಅವರ ಬಳಿ ಬಂತು. 25 ವರ್ಷಗಳ ಹಿಂದಿನ ಆ ಕ್ಷಣ ಕನ್ನಡನಾಡಿನ ಪಾಲಿಗೆ ಚಿರಸ್ಮರಣೀಯವಾದುದು.

ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನಲ್ಲಿ ಹುಟ್ಟಿ, ಬೆಳೆದ ದೇವೇಗೌಡರು, ಅಪ್ಪಟ ಗ್ರಾಮೀಣ ಪ್ರತಿಭೆ. ರೈತ ಕುಟುಂಬದಲ್ಲಿ ಜನಿಸಿದ ಅವರು ಬಾಲ್ಯದಿಂದಲೇ ಹಠ ಮತ್ತು ಛಲಗಾರಿಕೆ ಮೈಗೂಡಿಸಿಕೊಂಡಿದ್ದರು. ಹೊಲ, ಗದ್ದೆಗಳಲ್ಲಿ ಅಡ್ಡಾಡುತ್ತಲೇ ಬೆಳೆದ ಅವರು, ಯೌವನದ ದಿನಗಳಲ್ಲೇ ರಾಜಕೀಯದತ್ತ ಆಸಕ್ತಿ ಬೆಳೆಸಿಕೊಂಡಿದ್ದರು. 1950ರ ದಶಕದಲ್ಲೇ ರಾಜಕಾರಣಕ್ಕೆ ಧುಮುಕಿದ ದೇವೇಗೌಡರು, ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸದಸ್ಯರಾಗಿ ಆಯ್ಕೆಯಾಗುವ ಮೂಲಕ ಮತ್ತೊಂದು ಹೆಜ್ಜೆ ಮುಂದಕ್ಕೆ ಇಟ್ಟಿದ್ದರು.

1962ರಲ್ಲಿ ವಿಧಾನಸಭೆಯ ಸದಸ್ಯರಾಗಿ ಆಯ್ಕೆಯಾದ ದೇವೇಗೌಡರು, ರಾಜ್ಯ ರಾಜಕಾರಣ ಪ್ರವೇಶಿಸಿದರು. ಅವರ ಮುಖ್ಯವಾಹಿನಿಯ ರಾಜಕೀಯ ಜೀವನ 50 ವರ್ಷಗಳನ್ನು ಸಮೀಪಿಸುತ್ತಿದೆ. ಈ ಅವಧಿಯಲ್ಲಿ ಶಾಸಕರಾಗಿ ಮತ್ತು ಸಂಸದರಾಗಿ ಸುದೀರ್ಘ ಅವಧಿಯನ್ನು ಕಳೆದಿರುವ ಅವರು, ಅಧಿಕಾರ ಅನುಭವಿಸಿದ್ದು 6 ವರ್ಷ 4 ತಿಂಗಳು ಮಾತ್ರ. ಈ ಅವಧಿಯಲ್ಲಿ ದೆಹಲಿಯಲ್ಲಿ ಕುಳಿತು ದೇಶದ ಆಡಳಿತವನ್ನು ಮುನ್ನಡೆಸಿದ 10 ತಿಂಗಳ ಅವಧಿ ರಾಜ್ಯದ ಪಾಲಿಗೆ ಐತಿಹಾಸಿಕವಾದ ಕಾಲಘಟ್ಟ.

1983ರಿಂದ 1988ರವರೆಗೆ ನಾಲ್ಕು ವರ್ಷಗಳ ಕಾಲ ದೇವೇಗೌಡರು ರಾಜ್ಯದ ಸಚಿವರಾಗಿದ್ದರು. 1994ರಲ್ಲಿ ಮುಖ್ಯಮಂತ್ರಿ ಹುದ್ದೆಗೇರಿದ ಅವರು, ಒಂದೂವರೆ ವರ್ಷಗಳಲ್ಲೇ ಅದನ್ನು ತೊರೆದು ದೆಹಲಿಯತ್ತ ಹೆಜ್ಜೆ ಹಾಕಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. 1996ರ ಲೋಕಸಭಾ ಚುನಾವಣೆಯ ಬಳಿಕ ಬಿಜೆಪಿಯನ್ನು ಹೊರಗಿಟ್ಟು ಸರ್ಕಾರ ರಚಿಸುವ ಪ್ರಾದೇಶಿಕ ಪಕ್ಷಗಳ ಪ್ರಯತ್ನದ ಫಲವಾಗಿ ಗೌಡರಿಗೆ ಪ್ರಧಾನಿಯಾಗುವ ಅವಕಾಶ ಒಲಿದುಬಂತು.

ದಣಿವರಿಯದ ಹೋರಾಟಗಾರ

ಹೋರಾಟದ ಮೂಲಕವೇ ರಾಜಕೀಯ ಪ್ರವೇಶಿಸಿದ ಎಚ್.ಡಿ. ದೇವೇಗೌಡರು, ತಮ್ಮ ಬದುಕಿನುದ್ದಕ್ಕೂ ಹೋರಾಟದ ಮೂಲಕವೇ ಸಕ್ರಿಯವಾಗಿ ಉಳಿದಿದ್ದಾರೆ. ಪ್ರವಾಹಕ್ಕೆ ವಿರುದ್ಧವಾಗಿ ಸಾಗುವ ಹೋರಾಟದ ಬದುಕನ್ನು ಸಂಭ್ರಮಿಸುವ ಅವರೊಳಗೆ ಒಬ್ಬ ದಣಿವರಿಯದ ಹೋರಾಟಗಾರ ಸದಾ ಸಕ್ರಿಯವಾಗಿ ಇದ್ದಾನೆ.

ಹಳ್ಳಿಯ ಯುವಕನೊಬ್ಬ 29ನೇ ವಯಸ್ಸಿಗೆ ಶಾಸಕನಾಗಿ, 39ನೇ ವಯಸ್ಸಿಗೆ ವಿರೋಧ ಪಕ್ಷದ ನಾಯಕನಾಗಿ, 50ನೇ ವಯಸ್ಸಿಗೆ ಮಂತ್ರಿಯಾಗಿ, 58ನೇ ವಯಸ್ಸಿಗೆ ಸಂಸದನಾಗಿ, 61ನೇ ವಯಸ್ಸಿಗೆ ಮುಖ್ಯಮಂತ್ರಿಯಾಗಿ, 63ನೇ ವಯಸ್ಸಿಗೆ ರಾಷ್ಟ್ರದ ಪ್ರಧಾನಿಯಾಗಿ, ಈಗ 89ರ ಇಳಿವಯಸ್ಸಿನಲ್ಲಿಯೂ ಜನರ ಮಧ್ಯದ ಹೋರಾಟಗಾರನಾಗಿ ಏರಿಳಿದ ಪರಿ ಜನತಂತ್ರದ ಸೊಗಸಷ್ಟೇ ಅಲ್ಲ; ಒಂದು ರೋಚಕ ಸಾಹಸಗಾಥೆಯೂ ಹೌದು.

ಕನ್ನಡ, ಕನ್ನಡಿಗರ ಹಿರಿಮೆ: ಜೂನ್ 1ಕ್ಕೆ (ಮಂಗಳವಾರ) ದೇವೇಗೌಡರು ಪ್ರಧಾನಿಯಾಗಿ 25 ವರ್ಷಗಳಾಗುತ್ತವೆ. ಇದು ಕನ್ನಡಿಗರನ್ನು ಪುಳಕಗೊಳಿಸುವ ದಿನ. ನರ್ಮದೆಯನ್ನು ದಾಟಿ ಮುನ್ನಡೆದಿದ್ದ ಕನ್ನಡಿಗರ ದೊರೆ ಇಮ್ಮಡಿ ಪುಲಿಕೇಶಿಯು ಹರ್ಷವರ್ಧನ ಮಹಾರಾಜನನ್ನು ಸೋಲಿಸಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸುವ ಮೂಲಕ ಚರಿತ್ರೆ ನಿರ್ಮಿಸಿದ್ದ. ಆ ಬಳಿಕ ದಕ್ಷಿಣ ಭಾರತದ ಗಡಿಯನ್ನು ದಾಟಿ ದೆಹಲಿಯ ಕೆಂಪು ಕೋಟೆಯ ಮೇಲೆ ತ್ರಿವರ್ಣ ಧ್ವಜ ಹಾರಿಸಿದ ಏಕೈಕ ಕನ್ನಡಿಗ ಎಂಬ ಕೀರ್ತಿ ದೇವೇಗೌಡರಿಗೆ ಸಲ್ಲುತ್ತದೆ.

ಪ್ರಾದೇಶಿಕ ನಾಯಕನೊಬ್ಬ ದೇಶದ ಪ್ರಧಾನಿಯಾದರೆ ರಾಷ್ಟ್ರೀಯ ಏಕತೆ ಮತ್ತಿತರ ರಾಷ್ಟ್ರೀಯ ಭಾವನೆಗಳಿಗೆ ಧಕ್ಕೆ ಬರುತ್ತದೆ ಎಂದು ರಾಷ್ಟ್ರೀಯ ಪಕ್ಷಗಳು ಯಾವಾಗಲೂ ವಾದಿಸುತ್ತವೆ. ಸಂಯುಕ್ತ ರಂಗ ಸರ್ಕಾರದ ಪ್ರಧಾನಿಯಾಗಿ ಪ್ರಾದೇಶಿಕ ಪಕ್ಷಗಳ ಬೆಂಬಲದೊಂದಿಗೆ ಹತ್ತು ತಿಂಗಳು ಅಧಿಕಾರ ನಡೆಸಿದ ದೇವೇಗೌಡರು ಪ್ರಾದೇಶಿಕತೆ ಮತ್ತು ರಾಷ್ಟ್ರೀಯ ಏಕತೆಯನ್ನು ಅತ್ಯಂತ ಚಮತ್ಕಾರಿಕವಾಗಿ ಸಮನ್ವಯಗೊಳಿಸಿ ಇಡೀ ದೇಶವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪ್ರಾದೇಶಿಕ ಅಸ್ಮಿತೆಯ ಸೊಗಡಿನ ಜತೆಗೆ ರಾಷ್ಟ್ರೀಯ ಏಕತೆ ಮತ್ತು ಸಮಗ್ರತೆಯನ್ನು ಕಾಪಾಡಿದರು.

ಹಿಂದಿ ಭಾಷೆಯ ಜ್ಞಾನವಿದ್ದರಷ್ಟೆ ಕೇಂದ್ರ ಸರ್ಕಾರವನ್ನು ಮುನ್ನಡೆಸಲು ಸಾಧ್ಯ ಎಂಬ ಮಿಥ್ಯೆಯನ್ನು ಒಡೆದು ಹಾಕಿದ ಗೌಡರು, ಆಡಳಿತ ನಿರ್ವಹಣೆಗೆ ಬೇಕಾಗಿದ್ದದ್ದು ಹಿಂದಿ ಭಾಷೆಯ ಜ್ಞಾನವಲ್ಲ, ಬದಲಿಗೆ ದಟ್ಟ ವಾಸ್ತವ ಅನುಭವದ ಬುದ್ಧಿ ಎಂಬುದನ್ನು ನಿರೂಪಿಸಿದರು. ತಮ್ಮ ಅನುಭವವನ್ನು ಬಳಸಿಕೊಂಡೇ ಪ್ರಧಾನಿ ಹುದ್ದೆಯಲ್ಲಿ ಯಶಸ್ಸು ಕಂಡರು.

ಸಾಮಾನ್ಯವಾಗಿ ದೆಹಲಿಯ ರಾಜಕಾರಣ ಹಿಂದಿ ಪ್ರಭಾವಿ ವಲಯದ ಹಿಡಿತದಲ್ಲೇ ಇರುತ್ತದೆ. ಅದೊಂದು ಆರ್ಯ ಸಂಸ್ಕೃತಿ. ಅದರಲ್ಲಿ ದಕ್ಷಿಣ ಭಾರತದ ದ್ರಾವಿಡರು, ಅದರಲ್ಲೂ ಕನ್ನಡಿಗರಿಗೆ ಪ್ರಾತಿನಿಧ್ಯ ಸಿಗವುದು ಎಷ್ಟು ಕಷ್ಟ ಎಂಬುದು ಎಲ್ಲರಿಗೂ ತಿಳಿದಿದೆ. ಅಂತಹ ಅವಕಾಶ ಒದಗಿ ಬಂದಾಗ ದೇವೇಗೌಡರು ಅದನ್ನು ಕನ್ನಡ ಮತ್ತು ಕನ್ನಡಿಗರ ಹಿರಿಮೆಗಳನ್ನು ಹೆಚ್ಚಿಸಲು ಸಮರ್ಥವಾಗಿ ಬಳಸಿಕೊಂಡರು ಎಂಬುದಕ್ಕೆ ನೂರಾರು ನಿದರ್ಶನಗಳಿವೆ.

ದೇವೇಗೌಡರು ಪ್ರಧಾನಿಯಾದ ಬಳಿಕ ಕನ್ನಡದ ಮೇರು ನಟ ಡಾ.ರಾಜ್‌ಕುಮಾರ್ ಅವರಿಗೆ ದಾದಾಸಾಹೇಬ ಫಾಲ್ಕೆ ಪ್ರಶಸ್ತಿ ದೊರೆಯಿತು. ಕೇಂದ್ರ ಯೋಜನಾ ಆಯೋಗದಲ್ಲಿ ಕನ್ನಡಿಗ ಆರ್ಥಶಾಸ್ತ್ರಜ್ಞರಿಗೆ ಪ್ರಾತಿನಿಧ್ಯ ದೊರೆಯಿತು. ಕೇಂದ್ರ ಲೋಕಸೇವಾ ಆಯೋಗದಲ್ಲಿ ಕನ್ನಡಿಗನೊಬ್ಬ ಸದಸ್ಯನಾಗಲು ಸಾಧ್ಯವಾಯಿತು. ರೈಲ್ವೆ ನೇಮಕಾತಿ ಮಂಡಳಿಯ ಅಧ್ಯಕ್ಷನಾಗಿ ಕನ್ನಡಿಗನೊಬ್ಬ ನೇಮಕಗೊಂಡರು. ಕನ್ನಡಿಗನೊಬ್ಬ ಪ್ರಧಾನಿಯಾದದ್ದರಿಂದ ಇಂತಹವುಗಳೆಲ್ಲವೂ ಸಾಧ್ಯವಾಯಿತು.

ಪ್ರಧಾನಿ ದೇವೇಗೌಡ ಅವರನ್ನು ಅಂದಿನ ರಾಷ್ಟ್ರಪತಿ ಶಂಕರ ದಯಾಳ್ ಶರ್ಮ ಹೂಗುಚ್ಛ ನೀಡಿ ಅಭಿನಂದಿಸಿದ ವೇಳೆ

ಉತ್ತರ ಪ್ರದೇಶದ ಅಂದಿನ ರಾಜ್ಯಪಾಲ ಮಹಮ್ಮದ್ ಶಫಿ ಖುರೇಷಿ ಜತೆಗೆ ಎಚ್.ಡಿ.ದೇವೇಗೌಡರು

ಅಂದಿನ ಉಪ ರಾಷ್ಟ್ರಪತಿ ಕೆ.ಆರ್.ನಾರಾಯಣನ್ ಜತೆಗೆ ದೇವೇಗೌಡರು

ಗೌಡರ ಉತ್ತರಾಧಿಕಾರಿ ಆಯ್ಕೆ: ನೇಪಥ್ಯದ ಆಟ?

ಇಪ್ಪತ್ತೈದು ವರ್ಷಗಳ ಹಿಂದಿನ ಕಾಲಮಾನ ರಾಜ್ಯ ರಾಜಕಾರಣದಲ್ಲಿ ಒಂದು ಪ್ರಮುಖ ಕಾಲಘಟ್ಟ. ಕನ್ನಡಿಗರೊಬ್ಬರು ಪ್ರಧಾನಿ ಪಟ್ಟಕ್ಕೇರಿದ ಕ್ಷಣ. ಮುಖ್ಯಮಂತ್ರಿಯಾಗಿದ್ದ ಎಚ್. ಡಿ ದೇವೇಗೌಡರು ಪ್ರಧಾನಿಯಾಗುವುದು ಖಚಿತವಾಗುತ್ತಿದ್ದಂತೆ ಅವರ ಉತ್ತರಾಧಿಕಾರಿಯಾಗಲು ನಡೆದ ಪೈಪೋಟಿ, ದೇವೇಗೌಡರ ಅರ್ಹತೆ ಬಗ್ಗೆ ರಾಮಕೃಷ್ಣ ಹೆಗಡೆಯವರ 'ಹಗುರವಾದ' ಮಾತು, ಪಕ್ಷದಿಂದ ಹೆಗಡೆಯವರ ಉಚ್ಚಾಟನೆ... ಇವೆಲ್ಲಾ ರಾಜ್ಯ ರಾಜಕಾರಣದ ಮೇಲೆ ದೂರಗಾಮಿ ಪರಿಣಾಮವನ್ನು ಬೀರಿದ ಘಟನಾವಳಿಗಳು.

ಈ ಪೈಕಿ ನೂತನ ಮುಖ್ಯಮಂತ್ರಿ ಆಯ್ಕೆ ವೇಳೆ ನಡೆದ ರಾಜಕೀಯ ಬೃಹನ್ನಾಟಕದ ಮತ್ತೊಂದು ಆಯಾಮ ಬಹಿರಂಗವಾಗಲೇ ಇಲ್ಲ. ಅದನ್ನು ಉದ್ದೇಶಪೂರ್ವಕವಾಗಿ ಹಾಗೆ ಬಿಂಬಿಸಲಾಯಿತೋ ಅಥವಾ ಆ ಕಾಲದಲ್ಲಿ ತಮ್ಮದೇ ಆದ 'ಪ್ರಭಾವ' ಹೊಂದಿದ್ದ ಹೆಗಡೆಯವರ ದೊಡ್ಡ 'ಬಳಗ' ಅಂದಿನ ಕಾಲಮಾನಕ್ಕೆ ಹೇಗೆ ಬೇಕೊ ಹಾಗೆ ಬಿಂಬಿಸಿತೊ ಎಂಬುದನ್ನು ನಿಖರವಾಗಿ ಹೇಳುವುದು ತುಸು ಕಷ್ಟವೇ.

ದೇವೇಗೌಡರು ಪ್ರಧಾನಿಯಾಗುವುದು ಖಚಿತವಾಗುತ್ತಿದ್ದಂತೆ ರಾಜ್ಯದಲ್ಲಿ ಅವರ ಉತ್ತರಾಧಿಕಾರಿ ಸ್ಥಾನಕ್ಕೆ ದೆಹಲಿ ವಲಯದಿಂದ ಮೊದಲು ಕೇಳಿಬಂದ ಹೆಸರು ಸಿದ್ದರಾಮಯ್ಯನವರದ್ದು. ಆದರೆ ಇದಕ್ಕೆ ಜೆ.ಎಚ್. ಪಟೇಲ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ದೆಹಲಿಯ ಕರ್ನಾಟಕ ಭವನದಲ್ಲಿ ಹಿರಿಯ ನಾಯಕರ ಅನೌಪಚಾರಿಕ ಮಾತುಕತೆ ಸಂದರ್ಭದಲ್ಲಿ ಸಿದ್ದರಾಮಯ್ಯ ತಮ್ಮನ್ನು ಮುಖ್ಯಮಂತ್ರಿ ಮಾಡುವಂತೆ ಮನವಿ ಮಾಡಿದರು. ಆಗ ಕೆಂಡಾಮಂಡಲರಾದ ಪಟೇಲರು 'ನೀನು ಎಷ್ಟು ದಿನದಿಂದ ನಮ್ಮ ಪಾರ್ಟಿಯಲ್ಲಿ ಇದ್ದೀಯ. ನಾನು ನಿನಗಿಂತ ಸೀನಿಯರ್. ನಾನು ಈಗ ಡೆಪ್ಯೂಟಿ ಸಿ.ಎಂ. ಆದ್ದರಿಂದ ಈಗ ಸಿ.ಎಂ ಸ್ಥಾನಕ್ಕೆ ನಾನೇ natural choice' ಎಂದು ಕೋಪ-ತಾಪ ಪ್ರದರ್ಶಿಸಿದ್ದರಂತೆ.

ನಂತರ ಬೆಂಗಳೂರಿನಲ್ಲಿ ನೂತನ ನಾಯಕನ ಆಯ್ಕೆಗೆ ಜನತಾ ದಳದ ಹಿರಿಯ ನಾಯಕರ ಸಭೆ ವಿಧಾನ ಸೌಧದ ಮೂರನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ಆರಂಭವಾಯಿತು. ಶರದ್ ಯಾದವ್ ವೀಕ್ಷಕರಾಗಿ ಆಗಮಿಸಿದ್ದರು. ಪಟೇಲ್ ಮತ್ತು ಸಿದ್ದರಾಮಯ್ಯ ಇಬ್ಬರೂ ಪಟ್ಟು ಸಡಿಲಿಸಲಿಲ್ಲ. ಹಲವು ಸುತ್ತಿನ ತೆರೆಮರೆಯ ಕಸರತ್ತುಗಳ ನಂತರವೂ ಯಾವುದೇ ನಿರ್ಧಾರಕ್ಕೆ ಬರಲಾಗಲಿಲ್ಲ. ಗದ್ದಲದ ನಡುವೆ ಸಭೆ ಬರ್ಖಾಸ್ತುಗೊಂಡಿತು. ಕೋಪದಿಂದ ಬುಸುಗುಡುತ್ತಾ ಹೊರಗೆ ಬಂದ ಪಟೇಲರು ಸೀದಾ ತಮ್ಮ ನಿವಾಸಕ್ಕೆ ತೆರಳಿದರು. ಸಂಜೆಯಾದರೂ ಶಾಸಕಾಂಗ ಪಕ್ಷದ ಸಭೆ ಸಮಾವೇಶಗೊಳ್ಳುವ ಯಾವ ಲಕ್ಷಣಗಳೂ ಕಾಣಲಿಲ್ಲ. ಈ ಎಲ್ಲ ವಿದ್ಯಮಾನಗಳ ವರದಿಗಾಗಿ ಕಾದಿದ್ದ ಪತ್ರಕರ್ತರು ಸಮ್ಮೇಳನ ಸಭಾಂಗಣ ಬಿಟ್ಟು ಕದಲಲಿಲ್ಲ. ಪತ್ರಕರ್ತರ ಕಾಯುವ ಕರ್ಮವನ್ನು ಅರ್ಥಮಾಡಿಕೊಂಡ ವಾರ್ತಾ ಇಲಾಖೆ ಅಧಿಕಾರಿಗಳು ರಾತ್ರಿ ಏಳೂವರೆ ಸುಮಾರಿಗೆ ವಿಧಾನಸೌಧದ ನೆಲ ಮಹಡಿಯ ಬಾಂಕ್ವೆಟ್ ಹಾಲ್‌ನಲ್ಲಿ ಬಿಸಿ ಬಿಸಿ ಉಪ್ಪಿಟ್ಟು, ಕಾಫಿ ವ್ಯವಸ್ಥೆ ಮಾಡಿದರು. ಪತ್ರಕರ್ತರು ಮರಳಿ ಬರುವುದರೊಳಗಾಗಿ ಶಾಸಕಾಂಗ ಪಕ್ಷದ ಸಭೆ ಕೇವಲ ಹತ್ತು ನಿಮಿಷದ ಮಟ್ಟಿಗೆ ಔಪಚಾರಿಕವಾಗಿ ನಡೆದು ಪಟೇಲರನ್ನು ನೂತನ ನಾಯಕರನ್ನಾಗಿ ಘೋಷಿಸಿಬಿಟ್ಟಿತ್ತು. (ಎಂ.ಸಿ. ನಾಣಯ್ಯ ಮತ್ತು ಎಂ.ಪಿ ಪ್ರಕಾಶ್ ಹಿರಿಯ ನಾಯಕರ ಸೂಚನೆ ಮೇರೆಗೆ ಪಟೇಲರನ್ನು ಮನವೊಲಿಸಿ ಕರೆದುಕೊಂಡು ಬಂದಿದ್ದರಂತೆ). ಪಟೇಲರು ತಮ್ಮ ನಿವಾಸಕ್ಕೆ ತೆರಳಿಬಿಟ್ಟಿದ್ದರು. ನೂತನ ನಾಯಕರಾಗಿ (ಮುಖ್ಯಮಂತ್ರಿಯಾಗಿ) ಆಯ್ಕೆಯಾಗದವರು ಪತ್ರಕರ್ತರೊಂದಿಗೆ ಮಾತನಾಡುವುದು ವಾಡಿಕೆ. ಆದರೆ, ಕ್ಷಿಪ್ರ ಬೆಳವಣಿಗೆಯಿಂದಾಗಿ ಅಂದು ಈ ಅವಕಾಶ ಪತ್ರಕರ್ತರಿಗೆ ಸಿಗಲಿಲ್ಲ.

ದೇವೇಗೌಡರ ಕೃಪೆಯಿಂದಾಗಿ ಸಿದ್ದರಾಮಯ್ಯನವರಿಗೆ ಬಹುಮತದ ಬೆಂಬಲವಿತ್ತು. ಆದರೆ ಹೆಗಡೆಯವರಿಂದಾಗಿ ಪಟೇಲರು ಮುಖ್ಯಮಂತ್ರಿಯಾದರು ಎಂಬ ಅಭಿಪ್ರಾಯ ಆಗ ಸಾಮಾನ್ಯವಾಗಿತ್ತು. (ಕಳೆದ ವರ್ಷ ಹಿರಿಯ ಪತ್ರಕರ್ತರೊಬ್ಬರು ತಮ್ಮ ಫೇಸ್‌ಬುಕ್ ಪುಟದಲ್ಲಿ ಪಟೇಲರ ಬಗ್ಗೆ ಬರೆದ ಲೇಖನವೊಂದಕ್ಕೆ ಪ್ರತಿಕ್ರಿಯಿಸಿದ್ದ ಹೆಗಡೆಯವರ ಸ್ನೇಹಿತೆ ಪ್ರತಿಭಾ ಪ್ರಹ್ಲಾದ್ ಕೂಡ 'It was because and only because of Hegde that Patel became CM. I was privy to all that conspired and all that took place in those years, therefore I say this with a certain degree of authority' ಹೀಗೆ ಬರೆದಿದ್ದರು.

ಆದರೆ ನಿಜವಾದ ಸಂಗತಿ ಬೇರೆಯೇ ಇತ್ತು ಎಂಬುದು ದೇವೇಗೌಡರು ಮತ್ತು ಎಂ.ಸಿ ನಾಣಯ್ಯನವರ ಹೇಳಿಕೆ ಅಥವಾ ಲೇಖನದಿಂದ ಸ್ಪಷ್ಟವಾಗುತ್ತದೆ.

ಪಟೇಲರ ಪರ ನಿಂತ ಗೌಡರು: ನಾಣಯ್ಯ

ಪಟೇಲರು ಮತ್ತು ಸಿದ್ದರಾಮಯ್ಯ ಮಧ್ಯೆ ನಡೆದಿದ್ದ ಪೈಪೋಟಿಯಲ್ಲಿ ದೇವೇಗೌಡರು ಯಾರ ಪರ ಇದ್ದರು, ಅಂದು ಏನೇನಾಯ್ತು ಎಂಬುದನ್ನು ತಮ್ಮ 'ನೆನಪು ಮಾಸುವ ಮುನ್ನ' ಕೃತಿಯಲ್ಲಿ ಹಿರಿಯ ರಾಜಕಾರಣಿ ಎಂ.ಸಿ ನಾಣಯ್ಯನವರು ಹೀಗೆ ಉಲ್ಲೇಖಿಸಿದ್ದಾರೆ.

'ದೇವೇಗೌಡರು ಪ್ರಧಾನಿಯಾಗಿ ಆಯ್ಕೆಯಾದಾಗ ರಾಜ್ಯದಲ್ಲಿ ಮುಖ್ಯಮಂತ್ರಿಯನ್ನು ಆಯ್ಕೆ ಮಾಡಬೇಕಾಗಿ ಬಂತು. ಈ ಸಮಯದಲ್ಲಿ ದೇವೇಗೌಡರು ಹಿರಿಯ ಮಂತ್ರಿಗಳ ಸಭೆಯನ್ನು ಕರೆದಿದ್ದರು. ಅಂದಿನ ಸಭೆಯಲ್ಲಿ ಸಹಜವಾಗಿ ಜೆ.ಎಚ್. ಪಟೇಲರು ಆಯ್ಕೆಯಾಗುವ ನಿರೀಕ್ಷೆ ಇತ್ತಾದರೂ, ಸಿದ್ದರಾಮಯ್ಯ ತಾವು ಮುಖ್ಯಮಂತ್ರಿ ಪದವಿಯ ಆಕಾಂಕ್ಷಿ ಎಂದರು. ಅವರಿಗೆ ಬೆಂಬಲವಾಗಿ ಆರ್.ಎಲ್ ಜಾಲಪ್ಪ ನಿಂತರು. ಜನತಾ ಪಕ್ಷ -ಜನತಾ ದಳ ಇತಿಹಾಸದಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದವರು ಮುಖ್ಯಮಂತ್ರಿಯಾಗಿಲ್ಲ. ಈ ಕಾರಣದಿಂದ ಈ ಸಲ ತಮಗೆ ಮುಖ್ಯಮಂತ್ರಿ ಸ್ಥಾನ ಲಭ್ಯವಾಗಲೇ ಬೇಕು ಅನ್ನುವ ವಾದವನ್ನು ಸಿದ್ದರಾಮಯ್ಯ ಮಂಡಿಸಿದರು. ಚರ್ಚೆ ಆರಂಭವಾಯಿತು. ಹೆಚ್ಚಿನ ಜನರ ಒಲವು ಪಟೇಲರ ಪರವಾಗಿತ್ತು. ಆದರೆ ಸಿದ್ದರಾಮಯ್ಯ ಪಟ್ಟು ಸಡಿಲಿಸಲಿಲ್ಲ. 'ನೋಡಿ ನಾನು ಈ ರೀತಿ ಹೇಳಬಾರದು. ಆದರೂ ಹೇಳುವುದು ಈಗ ನನಗೆ ಅನಿವಾರ್ಯವಾಗಿದೆ. ರಾಜಕಾರಣದಲ್ಲಿ, ಅನುಭವದಲ್ಲಿ ಮತ್ತು ಪಕ್ಷದಲ್ಲಿ ಹಿರಿಯನಾಗಿದ್ದೇನೆ. ನಾನು ಉಪಮುಖ್ಯಮಂತ್ರಿಯಾಗಿದ್ದೆ. ನನಗೆ ಮುಖ್ಯಮಂತ್ರಿ ಪದವಿ ಸಿಗಬೇಕಾದದ್ದು ನ್ಯಾಯ. ಇದಕ್ಕಿಂತ ನಾನು ಹೆಚ್ಚು ಹೇಳಬಯಸುವುದಿಲ್ಲ' ಎಂದು ಪಟೇಲರು ಹೇಳಿದರು.

'ಈ ಸಂಬಂಧ ಚರ್ಚೆ ಮುಂದುವರಿಯಿತು. ಕೊನೆಗೆ ಬೇಸತ್ತ ಪಟೇಲರು, ನಿಮಗೆ ಬೇಕಾದದ್ದು ಮಾಡಿಕೊಳ್ಳಿ. ಇಂತಹ ರಾಜಕಾರಣ ನನಗೆ ಬೇಡ ಎಂದು ತಮ್ಮ ಮನೆಗೆ ಹೋಗಿಬಿಟ್ಟರು. ಪಟೇಲರ ಅನುಪಸ್ಥಿತಿಯಲ್ಲೇ ಚರ್ಚೆ ಮುಂದುವರಿಯಿತು. ದೇವೇಗೌಡರಿಗೂ ವಸ್ತು ಸ್ಥಿತಿಯ ಅರಿವಿತ್ತು. ಅವರು ಒಂದು ಹಂತದಲ್ಲಿ ತಾವು ಪ್ರಧಾನ ಮಂತ್ರಿ ಪದವಿಯನ್ನು ಸ್ವೀಕಾರ ಮಾಡುವುದಿಲ್ಲ ಅಂತಲೂ ಹೇಳಿದರು. ಅವರ ಆ ಮಾತಿನಲ್ಲಿ ನಾಟಕೀಯತೆ ಇರಲಿಲ್ಲ. ಅದು ಹೃದಯದಿಂದ ಬಂದ ಮಾತಾಗಿತ್ತು.ಕರ್ನಾಟಕದಲ್ಲಿ ಒಮ್ಮತವಿಲ್ಲದಿದ್ದರೆ ತಾವು ದೆಹಲಿಗೆ ಹೋಗಿ ಮಾಡುವುದಾದರೂ ಏನು? ಅನ್ನುವುದು ಅವರ ನಿಲುವಾಗಿತ್ತು. ಸಿದ್ದರಾಮಯ್ಯನವರನ್ನು ಉಪ ಮುಖ್ಯಮಂತ್ರಿ ಸ್ಥಾನಕ್ಕೆ ಅವರು ತುಂಬಾ ಕಷ್ಟಪಟ್ಟು ಒಪ್ಪಿಸಿದರು. ಜಾಲಪ್ಪ ಕೂಡ ತಮ್ಮ ನಿಲುವು ಸಡಿಲಿಸಿದರು. ಇಷ್ಟೆಲ್ಲಾ ಆದರೂ ಪಟೇಲರು ಬರಲಿಲ್ಲ. ಅವರನ್ನು ಕರೆ ತರುವಂತೆ ದೇವೇಗೌಡರು ನನಗೆ ಸೂಚಿಸಿದರು. ನಾನು ಮತ್ತು ಎಂ.ಪಿ ಪ್ರಕಾಶ್ ಜೊತೆಗೂಡಿ ಪಟೇಲರ ಮನೆಗೆ ಹೋದೆವು. ಪಟೇಲರು ತಮ್ಮ ಮನೆಯ ಮಹಡಿಯ ಕೋಣೆಯಲ್ಲಿ ಇದ್ದರು. ನಮ್ಮನ್ನು ನೋಡಿದ ಅವರು, 'ನೀವು ಏನು ಬೇಕಾದರೂ ಮಾಡಿಕೊಳ್ಳಿ. ಇಂಥ ರಾಜಕಾರಣ ನನಗೆ ಬೇಡ' ಅಂದರು. ನಾನು ಅವರನ್ನು ಸಭೆಗೆ ಬರುವಂತೆ ಮನವೊಲಿಸಿದೆ. ಅಂದು ಪಟೇಲರು ಮುಖ್ಯಮಂತ್ರಿಯಾಗುವುದರಲ್ಲಿ ದೇವೇಗೌಡರ ವಿಶೇಷ ಪ್ರಯತ್ನ ಇತ್ತು. ಆದರೆ ಮಾರನೇ ದಿನ ಪತ್ರಿಕೆಗಳಲ್ಲಿ ಪಟೇಲರು ಹೆಗಡೆಯವರ ಆಯ್ಕೆ ಎಂಬರ್ಥದಲ್ಲಿ ಸುದ್ದಿಗಳು ಪ್ರಕಟವಾಗಿದ್ದವು. ಆದರೆ ಇಡೀ ಘಟನೆಯಲ್ಲಿ ಹೆಗಡೆಯವರ ಪಾತ್ರ ಏನೂ ಇರಲಿಲ್ಲ. ಆದರೆ ಪತ್ರಿಕಾ ವರದಿಗಳು ಮಾತ್ರ ವಸ್ತುಸ್ಥಿತಿಗೆ ವಿರುದ್ದವಾಗಿದ್ದವು' ಎಂದು ನಾಣಯ್ಯ ಅವರು ಅಂದಿನ ಘಟನೆಯನ್ನು ವಿಸ್ತೃತವಾಗಿ ವಿವರಿಸಿದ್ದಾರೆ.

2018 ರ ವಿಧಾನಸಭೆ ಚುನಾವಣೆ ಸಂದರ್ಭದಲಿ ನ್ಯೂಸ್ 18 ಚಾನೆಲ್ ಪ್ರಧಾನ ಸಂಪಾದಕ ಅನಂತ್ ಚಿನಿವಾರ್ ಅವರಿಗೆ ನೀಡಿದ ಸಂದರ್ಶನದಲ್ಲಿ ದೇವೇಗೌಡರು ಹೇಳಿದ್ದು ಹೀಗೆ. . .

'ನಾನು ಪ್ರೈಮ್ ಮಿನಿಸ್ಟರ್ ಆಗಿ ಹೋದಾಗ ಈ ಮನುಷ್ಯನಿಗೆ (ಸಿದ್ದರಾಮಯ್ಯ) ತಾನು ಮುಖ್ಯಮಂತ್ರಿ ಆಗಬೇಕೆಂಬ ವ್ಯಾಮೋಹ ಶುರುವಾಯಿತು. ಕರ್ನಾಟಕ ಭವನದಲ್ಲಿ ಒಂದು ಮಾತುಕತೆಯಾಯಿತು. ನಾನು, ಬೊಮ್ಮಾಯಿ, ಶರದ್ ಯಾದವ್ ಜೊತೆಗೆ ಕೂತಿದ್ದೆವು. ಶರದ್ ಯಾದವ್‌ಗೆ ಸಿದ್ದರಾಮಯ್ಯನವರನ್ನು ಮುಖ್ಯಮಂತ್ರಿ ಮಾಡಬೇಕೆಂಬ ಆಸೆಯಿತ್ತು. ಆಗ ನಾನು ಇದು ಎಲ್ಲಪ್ಪಾ ಸಾಧ್ಯ? 36 ಲಿಂಗಾಯತ ಶಾಸಕರಿದ್ದಾರೆ. ನಾಲ್ಕು ಜನ ಕುರುಬರಿದ್ದಾರೆ. Anti defection law ಕೂಡ ಇಲ್ಲ. ಹೆಗಡೆಯವರಿಗೆ ಇನ್ನೂ ಸಿಟ್ಟು ಹೋಗಿಲ್ಲ. ಈ ಸರ್ಕಾರವನ್ನು ತೆಗೀಲಿಕ್ಕೆ ಅವರು ಕಣ್ಣು ಇಟ್ಟುಕೊಂಡಿದ್ದಾರೆ. ಕೈ ಮುಗೀತೇನೆ... ಆಗೋದಿಲ್ಲಾ ಅಂತ ನಾನು ಹೇಳಿದೆ. ಈ ಮನುಷ್ಯನಿಗೆ (ಸಿದ್ದರಾಮಯ್ಯ) ಮುಖ್ಯಮಂತ್ರಿ ಆಗಲೇಬೇಕೆಂಬ ಹಟ. ನೀನು ಡಿಸಿಎಂ ಆಗು, ಮುಂದೆ ಒಳ್ಳೇ ಕಾಲ ಬರುತ್ತೆ ಅಂತ ಹೇಳಿದೆ. ಆದರೂ ನನ್ನ ಮಾತು ಕೇಳಲಿಲ್ಲ. ಮತ್ತೊಂದು ದಿನ ಕರ್ನಾಟಕ ಭವನದಲ್ಲಿ ಮಾತುಕತೆಗೆ ಸೇರಿದೆವು. ನಾನು ಆಗ ಡೆಸಿಗ್ನೇಟೆಡ್ ಪಿ.ಎಂ ಆಗಿದ್ದೆ. ಆದ್ದರಿಂದ ನನಗೆ ಎಸ್‌ಪಿಜಿ ಭದ್ರತೆ ನೀಡಿದ್ದರು. ಕರ್ನಾಟಕ ಭವನಕ್ಕೆ ಪೋಲೀಸರ ಕಾವಲು ಹಾಕಿದ್ದರು. ನಾನು ಮತ್ತು ಸಿದ್ದರಾಮಯ್ಯ ಒಂದು ಕಡೆ ಕೂತಿದ್ದೆವು. ಪಟೇಲರು ಕೂಡ ಇದ್ದರು. ಚರ್ಚೆ ಕಾವೇರುತ್ತಿದ್ದಂತೆ ಪಟೇಲ್ ಏಕಾಏಕಿ ತಮ್ಮ ರೂಮಿಗೆ ಹೋಗಿ ಎರಡು ಪೆಗ್ ಹಾಕಿಕೊಂಡು ಬಂದು ಪಾದರಕ್ಷೆಯನ್ನು ಕೈಯಲ್ಲಿ ಹಿಡಿದು ನಿಂತುಕೊಂಡರು. ಆಗ ಎಸ್‌ಪಿಜಿ ಆಫೀಸರ್ ಉಪಾಧ್ಯಾಯ ಎಂಬುವವರು ಪಟೇಲರ ಕೈ ಹಿಡಿದುಕೊಂಡರು. ಅರ್ಥ ಮಾಡಿಕೊಳ್ಳಿ; ಅವತ್ತೇನಾದರೂ ಸಿದ್ದರಾಮಯ್ಯನವರನ್ನ ಸಿ.ಎಂ ಮಾಡಿದ್ದರೆ ಒಂದು ವಾರ ಸರ್ಕಾರ ಇರುತ್ತಿರಲಿಲ್ಲ. ಹೆಗಡೆ ಅವರಿಗೆ ನನ್ನ ಮೇಲೆ ಅಷ್ಟು ಕೋಪ. ನಾನು ಸಿ.ಎಂ ಆಗುವಾಗ ದೊಡ್ಡ ಹೊಡೆದಾಟವೇ ನಡೆದಿತ್ತು' ಎಂದು ಅಂದಿನ ಘಟನೆಯನ್ನು ಗೌಡರು ವಿವರಿಸಿದ್ದಾರೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಅಂದಿನ ಮುಖ್ಯಮಂತ್ರಿ ಎಚ್.ಡಿ.ದೇವೇಗೌಡರ ಜತೆಗೆ ಜನತಾ ದಳದ ನಾಯಕರು. ಬಿ.ಎಲ್.ಶಂಕರ್, ಎಸ್.ಆರ್. ಬೊಮ್ಮಾಯಿ, ಸಿದ್ದರಾಮಯ್ಯ, ಜೆ.ಎಚ್.ಪಟೇಲ್ ಚಿತ್ರದಲ್ಲಿದ್ದಾರೆ.

ದಕ್ಷಿಣ ಆಫ್ರಿಕಾದ ಉಪಾಧ್ಯಕ್ಷ ತಾಬೋ ಎಂ ಮೆಬ್ಕಿ ಜತೆಗೆ ದೇವೇಗೌಡರು

ಗಣರಾಜ್ಯೋತ್ಸವಕ್ಕೆ ದಕ್ಷಿಣ ಆಫ್ರಿಕಾದ ಅಧ್ಯಕ್ಷ ನೆಲ್ಸನ್ ಮಂಡೆಲಾ ಅವರನ್ನು ಸ್ವಾಗತಿಸಿದ ಅಂದಿನ ರಾಷ್ಟ್ರಪತಿ ಶಂಕರ ದಯಾಳ್ ಶರ್ಮ ಹಾಗೂ ಅಂದಿನ ಪ್ರಧಾನಿ ಎಚ್.ಡಿ.ದೇವೇಗೌಡ


ಬಿಜೆಪಿ ನಾಯಕ ಎಲ್.ಕೆ.ಆಡ್ವಾಣಿ ಜತೆಗೆ ಎಚ್.ಡಿ.ದೇವೇಗೌಡ

ಎಫ್‌ಕೆಸಿಸಿಐನ 80ನೇ ಸಂಸ್ಥಾಪನಾ ದಿನಾಚರಣೆಯನ್ನು ಅಂದಿನ ಪ್ರಧಾನಿ ಎಚ್‌ಡಿ.ದೇವೇಗೌಡ ಉದ್ಘಾಟಿಸಿದರು. ಸಂಸ್ಥೆಯ ಅಧ್ಯಕ್ಷ ಸುಬ್ಬರಾಜು ಶೆಟ್ಟಿ, ಆರ್‌.ವಿ.ದೇಶಪಾಂಡೆ ಹಾಗೂ ಮತ್ತಿತರ ಗಣ್ಯರು ಚಿತ್ರದಲ್ಲಿದ್ದಾರೆ

ಅಂದಿನ ಮುಖ್ಯಮಂತ್ರಿ ಎಚ್‌ಡಿ.ದೇವೇಗೌಡರು ಅಂದಿನ ರಾಜ್ಯಪಾಲ ಖುರ್ಷಿದ್ ಆಲಂ ಖಾನ್ ಜತೆಗೆ ಸೌಜನ್ಯದ ಭೇಟಿ

ಇಂಗ್ಲೆಂಡಿನ ಪ್ರಧಾನಿ ಜಾನ್ ಮೇಜರ್ ಅವರನ್ನು ಸ್ವಾಗತಿಸಿದ ಎಚ್‌ಡಿ.ದೇವೇಗೌಡರು

ಕಾವೇರಿ ರಕ್ಷಣೆಗೆ ನಿಂತ ವೀರಕುಮಾರ

ಭಾರತದಲ್ಲಿ ದ್ರೌಪದಿಯು ತಿಮಿರಾಸುರನನ್ನು ವಧೆ ಮಾಡುವ ವೇಳೆ ತನ್ನ ರಕ್ಷಣೆಗಾಗಿ 'ವೀರಕುಮಾರ'ನನ್ನು ಸೃಷ್ಟಿ ಮಾಡಿದ ಐತಿಹ್ಯವಿದೆ. ಹಾಗೇ ಮಾತೆ ಕಾವೇರಿಯೂ ತನ್ನ ರಕ್ಷಣೆಗಾಗಿ ದೇವೇಗೌಡರನ್ನು ಸೃಷ್ಟಿ ಮಾಡಿದಳೇ ಎಂದು ನನಗೆ ಆಗಾಗ್ಗೆ ಅನಿಸಿದ್ದಿದೆ. ಇದು ಅತಿಶಯೋಕ್ತಿಯಲ್ಲ. ಅದಕ್ಕೆ ಕಾರಣಗಳನ್ನು ನಾನು ನೀಡಬಲ್ಲೆ.

ಪ್ರಸಂಗ 1

ಕಾವೇರಿಗಾಗಿ ಖಾಸಗಿ ಮಸೂದೆ ಮಂಡನೆ

ದೇವೇಗೌಡರು ಶಾಸಕರಾಗಿ ಆಯ್ಕೆಯಾಗಿದ್ದು 1962ನೇ ಇಸವಿಯಲ್ಲಿ. ಅದೂ ಕೂಡ ಪಕ್ಷೇತರರಾಗಿ. 1964ರಲ್ಲಿ ನಿಜಲಿಂಗಪ್ಪ ಅವರು ತಮಿಳುನಾಡಿನಲ್ಲಿ ಕಾಮರಾಜ ನಾಡರ್ ಅವರ ಹುಟ್ಟುಹಬ್ಬದಲ್ಲಿ ಭಾಗವಹಿಸಿ 'ನಾನು ಕರ್ನಾಟಕದಿಂದ ನಿಮಗೆ ಎಷ್ಟು ಬೇಕಾದರೂ ಕಾವೇರಿ ನೀರು ಕೊಡುತ್ತೇನೆ, ನೀವು ನಮಗೆ ಭತ್ತವನ್ನು ಕೊಡಿ' ಎಂದು ಹೇಳಿದ್ದ ವಿಚಾರ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಭತ್ತಕ್ಕಾಗಿ ಇಷ್ಟು ಸುಲಭದಲ್ಲಿ ನಮ್ಮ ಕಾವೇರಿ ನೀರನ್ನು ಬಿಟ್ಟುಕೊಡುವುದೇ? ಎಂಬ ವಿಚಾರ ಅವರ ನಿದ್ದೆಗೆಡಿಸಿತ್ತು. ಈ ಹಿನ್ನೆಲೆಯಲ್ಲಿ ಕಾವೇರಿ ಯೋಜನೆಗಳಿಗೆ ಒಂದು ಸ್ಪಷ್ಟ ಸ್ವರೂಪ ಕೊಡುವ ಸಲುವಾಗಿ ಕಾವೇರಿ ಯೋಜನೆಗಳನ್ನು ಕರ್ನಾಟಕ ಸರ್ಕಾರವೇ ತನ್ನ ಹಣದಲ್ಲಿ ಕೈಗೆತ್ತಿಕೊಂಡು ಪೂರ್ಣಗೊಳಿಸಬೇಕೆಂಬ ನಿರ್ಣಯವನ್ನು ಸದನದಲ್ಲಿ ಮಂಡಿಸಲು ಕಾವೇರಿ ಜಲಾನಯನ ಪ್ರದೇಶದ ವಿರೋಧ ಪಕ್ಷದ ಶಾಸಕರ ಕೈಯಲ್ಲಿ ದೇವೇಗೌಡರು ಸಹಿ ಹಾಕಿಸಿದ್ದರು. ಪಕ್ಷೇತರ ಶಾಸಕರಾಗಿದ್ದ ದೇವೇಗೌಡರು ಈ ವಿಚಾರವಾಗಿ ವಿಧಾನಸಭೆಯಲ್ಲಿ ಸರಿ ಸುಮಾರು ಒಂದೂವರೆ ಗಂಟೆಗಳ ಕಾಲ ನಿರರ್ಗಳ ಭಾಷಣ ಮಾಡಿದ್ದರು. ಅಂಕಿ ಅಂಶಗಳ ಸಹಿತ ಕಾವೇರಿ ಯೋಜನೆಯ ಪ್ರಾಮುಖ್ಯತೆ ವಿವರಿಸಿದ್ದರು. ದೇವೇಗೌಡರ ಭಾಷಣ ಕೇಳಿ ಸಮಾಜವಾದಿ ಧುರೀಣ ಗೋಪಾಲಗೌಡರು ದೇವೇಗೌಡರನ್ನು ಆಲಂಗಿಸಿ ಹರ್ಷ ವ್ಯಕ್ತಪಡಿಸಿದ್ದರು.

'ಗೌಡರೇ ನಿಮ್ಮ ಭಾಷಣದಿಂದ ಕಾವೇರಿ ಬಗ್ಗೆ ನಮ್ಮ ಕಣ್ಣು ತೆರಿಸಿದಿರಿ' ಎಂದಿದ್ದರು. ಕಾವೇರಿ ಕೊಳ್ಳದ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಂಡು ಮುಗಿಸಬೇಕೆಂಬುದರ ಬಗ್ಗೆ 1966ರಲ್ಲಿ ದೇವೇಗೌಡರು ಒಬ್ಬೊಂಟಿಯಾಗಿ ಖಾಸಗಿ ಮಸೂದೆಯನ್ನು ಮಂಡಿಸಿ, ಅದಕ್ಕೆ ಅಂಗೀಕಾರವನ್ನೂ ಪಡೆದಿದ್ದರು. ರಾಜ್ಯದ ಇತಿಹಾಸದಲ್ಲೇ ಒಬ್ಬ ಪಕ್ಷೇತರ ಶಾಸಕ ಮಂಡಿಸಿದ ಖಾಸಗಿ ನಿರ್ಣಯವನ್ನು ಅಂಗೀಕರಿಸಿದ್ದು ಅದೇ ಮೊದಲು. ಈ ವಿಚಾರ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಕಾವೇರಿ ವಿಚಾರದಲ್ಲಿ ದೇವೇಗೌಡರಿಗೆ ಇದ್ದ ಬದ್ಧತೆಯನ್ನು ಈ ಪ್ರಸಂಗ ವಿವರಿಸುತ್ತದೆ.

ಪ್ರಸಂಗ 2

ನ್ಯಾಯಧೀಕರಣದ ವಿರುದ್ಧ ಹೋರಾಟ

ರಾಮಕೃಷ್ಣ ಹೆಗಡೆ, ಬೊಮ್ಮಾಯಿ ಸರ್ಕಾರದಲ್ಲಿ ದೇವೇಗೌಡರು ನೀರಾವರಿ ಇಲಾಖೆ ವಹಿಸಿಕೊಂಡಿದ್ದಷ್ಟೂ ದಿನ ತಮಿಳುನಾಡು ನೀರಿಗಾಗಿ ಖ್ಯಾತೆ ತೆಗೆದಿರಲಿಲ್ಲ. ಅವರ ಬಾಯಿ ಮುಚ್ಚಿಸುವುದು ಹೇಗೆಂಬುದು ದೇವೇಗೌಡರಿಗೆ ಚೆನ್ನಾಗಿಯೇ ಗೊತ್ತಿತ್ತು. ಆದರೆ, ದೇವೇಗೌಡರು ನೀರಾವರಿ ಇಲಾಖೆಯಿಂದ ಹೊರ ಬರುತ್ತಲೇ ತಮಿಳುನಾಡಿನಿಂದ ಸಮಸ್ಯೆಗಳೂ ಹೆಚ್ಚಾಗಿದ್ದವು. ಇದರ ಮಧ್ಯೆ, ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದ ವೇಳೆ ಪುಟ್ಟಸ್ವಾಮಿಗೌಡರು ನೀರಾವರಿ ಸಚಿವರಾಗಿದ್ದರು. ಕಾವೇರಿ ವಿಚಾರದಲ್ಲಿ ಮಾತುಕತೆಗೆಂದು ರಾಜ್ಯಕ್ಕೆ ಬಂದಿದ್ದ ತಮಿಳುನಾಡಿನ ಸಚಿವರನ್ನು ವೀರೇಂದ್ರ ಪಾಟೀಲರ ಸರ್ಕಾರ ಲಘುವಾಗಿ ಕಂಡು, ಅಪಮಾನಿಸಿತ್ತು. ಇದರಿಂದ ಆಕ್ರೋಶಗೊಂಡಿದ್ದ ತಮಿಳುನಾಡು ಕೇಂದ್ರದ ಬಳಿಗೆ ತೆರಳಿ ಕಾವೇರಿ ನ್ಯಾಯಾಧೀಕರಣ ಸ್ಥಾಪನೆಯಾಗುವಂತೆ ಮಾಡಿತ್ತು.

ಜೆ.ಎಚ್‌.ಪಟೇಲ್ ಜತೆಗೆ ಎಚ್‌.ಡಿ.ದೇವೇಗೌಡರ ಸಮಾಲೋಚನೆ

ಉತ್ತರ ಕರ್ನಾಟಕಕ್ಕೆ 17 ಹೊಸ ಸಕ್ಕರೆ ಕಾರ್ಖಾನೆಗಳು

ದೇವೇಗೌಡರು ಕರ್ನಾಟಕದ ಅದರಲ್ಲೂ ಉತ್ತರ ಕರ್ನಾಟಕದ ಕಬ್ಬು ಬೆಳೆಗಾರರ ಕಷ್ಟವನ್ನು ಅರಿತಿದ್ದರು.

ಸಕ್ಕರೆ ಕಾರ್ಖಾನೆಗಳು ತಮಗೆ ಇರುವ ಸೀಮಿತ ಕಬ್ಬು ಅರೆಯುವ ಸಾಮರ್ಥ್ಯದಿಂದಾಗಿ ರೈತರು ಬೆಳೆದ ಎಲ್ಲ ಕಬ್ಬನ್ನು ಕೊಂಡುಕೊಳ್ಳಲು ಸಾಧ್ಯವಾಗದೇ ಹೋಗಿದ್ದರಿಂದ ಕಬ್ಬು ಬೆಳೆಗಾರರು ತಾವು ಬೆಳೆದ ಕಬ್ಬಿಗೆ ತಾವೇ ಬೆಂಕಿ ಇಡುವಂತಾಗಿತ್ತು. ಇದನ್ನು ಕಂಡ ದೇವೇಗೌಡರು ಪ್ರಧಾನಿಯಾದ ತಕ್ಷಣವೇ ತುಮಕೂರು, ಬಳ್ಳಾರಿ, ಬೆಳಗಾವಿ, ವಿಜಯಪುರ, ಹಾಸನ, ಧಾರವಾಡ, ಶಿವಮೊಗ್ಗ, ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ಸುಮಾರು 20 ಹೊಸ ಸಕ್ಕರೆ ಕಾರ್ಖಾನೆಗಳಿಗೆ ಅನುಮತಿ ನೀಡಿದರು. ಅಷ್ಟೇ ಅಲ್ಲ, ಹಾಲಿ ಅಸ್ತಿತ್ವದಲ್ಲಿದ್ದ 9 ಖಾಸಗಿ, 7 ಸಹಕಾರಿ ಮತ್ತು ಒಂದು ಸಾರ್ವಜನಿಕ ವಲಯದ ಸಕ್ಕರೆ ಕಾರ್ಖಾನೆಗಳ ವಿಸ್ತರಣೆಗೂ ಅನುಮತಿ ನೀಡಿದರು.

ಅಷ್ಟೊತ್ತಿಗಾಗಲೇ ವಿಧಾನಸಭೆ ಚುನಾವಣೆಯಲ್ಲಿ ಎರಡು ಕ್ಷೇತ್ರಗಳಲ್ಲಿ ಸೋತಿದ್ದ ದೇವೇಗೌಡರು ನ್ಯಾಯಾಧೀಕರಣದ ವಿಚಾರ ಗೊತ್ತಾಗುತ್ತಲೇ ಮೈಸೂರು, ಮಂಡ್ಯದಲ್ಲಿ ಬೃಹತ್ ಹೋರಾಟ ಹಮ್ಮಿಕೊಂಡರು. ಆ ಹೋರಾಟಕ್ಕೆ ಅಂದು ನಾನು ಸಿನಿಮಾ ಕಲೆಕ್ಷನ್‌ನ ಹಣವನ್ನು ತಂದುಕೊಟ್ಟಿದ್ದೆ. ಆದರೆ, ಈ ಹೋರಾಟದಿಂದ ದೇವೇಗೌಡರು ಹೆಸರು ಮಾಡಲು ಯತ್ನಿಸಲಿಲ್ಲ. ಹೋರಾಟವನ್ನು ಸಂಘಟಿಸಿದ್ದು ದೇವೇಗೌಡರೇ ಆದರೂ, ಸಿದ್ದಯ್ಯ ಪುರಾಣಿಕರಿಗೆ ಅದರ ನೇತೃತ್ವ ವಹಿಸಿದರು. ತಾವು ತೆರೆಮರೆಯಲ್ಲೇ ಉಳಿದರು. ನ್ಯಾಯಾಧೀಕರಣದ ವಿರುದ್ಧ ಕರ್ನಾಟಕ ಪ್ರಬಲ ಪ್ರತಿರೋಧ ಪ್ರದರ್ಶಿಸುವಂತೆ ನೋಡಿಕೊಂಡರು.

ಪ್ರಸಂಗ 3

ಕಾವೇರಿಗಾಗಿ ಬಂಗಾರಪ್ಪನವರ ಸರ್ಕಾರ ಉಳಿಸಿದ್ದರು

ಕಾವೇರಿ ನದಿ ನೀರಿನ ವಿಚಾರದಲ್ಲಿ ಸುಗ್ರೀವಾಜ್ಞೆ ತಂದು ದಿಟ್ಟ ನಿಲುವು ಪ್ರದರ್ಶನ ಮಾಡಿದ್ದ ಬಂಗಾರಪ್ಪ ಸರ್ಕಾರವನ್ನು ವಜಾ ಮಾಡಬೇಕೆಂದು ಲೋಕಸಭೆಯಲ್ಲಿ ಅನ್ಯ ರಾಜ್ಯಗಳ ಸಂಸದರು ಮುಗಿಬಿದ್ದಾಗ ರಾಜ್ಯದ ಇತರ ಎಲ್ಲಾ ಸಂಸದರು ಉತ್ತರವಿಲ್ಲದೆ ಮೌನದಿಂದ ತಲೆತಗ್ಗಿಸಿ ಕುಳಿತರೆ ದೇವೇಗೌಡರು ಮಾತ್ರ ಸತತ ಒಂದೂವರೆ ಗಂಟೆ ಸಂಸತ್ತಿನಲ್ಲಿ ರಾಜ್ಯ ಎದುರಿಸುತ್ತಿರುವ ನೀರಿನ ವಾಸ್ತವಿಕ ಸಮಸ್ಯೆ ಹಾಗೂ ತಮಿಳುನಾಡಿನ ಅನ್ಯಾಯವನ್ನು ಸದನಕ್ಕೆ ಎಳೆ ಎಳೆಯಾಗಿ ತೆರೆದಿಟ್ಟರು. ಇದರಿಂದಾಗಿ ಪ್ರತಿಪಕ್ಷಗಳಿಗೆ ಸತ್ಯದ ಅರಿವು ಆಗಿ ತಮ್ಮ ಧರಣಿಯನ್ನು ಕೈ ಬಿಟ್ಟವು. ಬಂಗಾರಪ್ಪ ಸರಕಾರ ವಜಾಗೊಂಡು ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಯಾಗುವುದು ಈ ಮೂಲಕ ತಪ್ಪಿತ್ತು. ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ "ಕೃಷ್ಣಾ ಜಲ ಭಾಗ್ಯ ನಿಗಮ"ವನ್ನು ಸ್ಥಾಪಿಸಿ ಅಸಾಧ್ಯವಾಗಿದ್ದನ್ನು ಸಾಧ್ಯ ಮಾಡಿ ಉತ್ತರ ಕರ್ನಾಟಕದ ರೈತರ ಹದಿನೈದು ಲಕ್ಷ ಎಕರೆ ಭೂಮಿಗೆ ಕೃಷ್ಣೆ ಹರಿಯುವಂತೆ ಮಾಡಿದ್ದರು.



ಪ್ರಸಂಗ 4

ನೆಲ–ಜಲದಲ್ಲಿ ರಾಜಕಾರಣ ಮಾಡದ ಮುತ್ಸದ್ಧಿ

ದೇವೇಗೌಡರು ನೆಲ, ಜಲ, ಭಾಷೆಯ ವಿಚಾರದಲ್ಲಿ ಎಂದೂ ರಾಜಕಾರಣ ಮಾಡಿದವರಲ್ಲ. ಕಾವೇರಿ ನದಿ ನೀರಿನ ವಿಚಾರದಲ್ಲಿ ಸುಪ್ರೀಂ ಕೋರ್ಟ್ ತೀರ್ಪು ರಾಜ್ಯದ ವಿರುದ್ಧ ಬಂದು, ನ್ಯಾಯಾಧೀಕರಣ ರಚನೆಯಾಗಬೇಕು ಎಂದಾಗ ರಾಜಕೀಯ ವೈಷಮ್ಯ ಮರೆತು ಸಿದ್ದರಾಮಯ್ಯನವರ ಸರ್ಕಾರಕ್ಕೆ ಬೆಂಬಲವಾಗಿ ನಿಂತರು. ಪ್ರಧಾನಿಯಾದ ನಂತರ ವಿಧಾನಸೌಧ ಪ್ರವೇಶ ಮಾಡಿರದ ದೇವೇಗೌಡರು ಅದೇ ಮೊದಲ ಬಾರಿಗೆ ವಿಧಾನಸೌಧ ಪ್ರವೇಶ ಮಾಡಿದ್ದರು. ನಾಡಿನ ಮುಖ್ಯಮಂತ್ರಿಗಿಂತ ಹೆಚ್ಚಿನ ಜವಾಬ್ದಾರಿಯನ್ನು ತಾವೇ ಹೊತ್ತುಕೊಂಡರು. ಸುಪ್ರೀಂ ಕೋರ್ಟ್‌ನ ತೀರ್ಪಿನಿಂದ ಕಂಗೆಟ್ಟಿದ್ದ ಕರ್ನಾಟಕಕ್ಕೆ ಸಾಂವಿಧಾನಿಕ ಪರಿಹಾರ ಕಲ್ಪಿಸಿಕೊಟ್ಟರು. ತೀರ್ಪಿಗೆ ಪ್ರತಿಯಾಗಿ ವಿಧಾನಸಭೆಯಲ್ಲಿ ನಿರ್ಣಯ ಮಂಡಿಸುವ ಸಲಹೆ ನೀಡಿದ್ದ ದೇವೇಗೌಡರು, ಆ ಮೂಲಕ ಕರ್ನಾಟಕಕ್ಕೆ ಎದುರಾಗಿದ್ದ ಅಪಾಯ ತಪ್ಪಿಸಿದರು.

ಪ್ರಸಂಗ 5

ಕಾವೇರಿಗಾಗಿ ಉಪವಾಸ ಕುಳಿತರು

ಕಾವೇರಿ ನದಿ ನೀರು ನಿರ್ವಹಣಾ ಮಂಡಳಿ ರಚನೆ ಮಾಡುವ ಪ್ರಸಂಗ ಎದುರಾದಾಗ ದೇವೇಗೌಡರು ಅದನ್ನು ವಿರೋಧಿಸಿ ತಮ್ಮ ಆರೋಗ್ಯ ಪರಿಸ್ಥಿತಿಯನ್ನು ಲೆಕ್ಕಿಸದೇ, 84ರ ಇಳಿ ವಯಸ್ಸಿನಲ್ಲೂ ಉಪವಾಸಕ್ಕೆ ಕುಳಿತರು. ದೇವೇಗೌಡರ ಉಪವಾಸದ ವಿಚಾರ ತಿಳಿಯುತ್ತಲೇ ಕೇಂದ್ರವು, ನದಿ ನೀರು ನಿರ್ವಹಣಾ ಮಂಡಳಿ ರಚನೆಯಿಂದ ಹಿಂದೆ ಸರಿದಿತ್ತು. ಆಗಲು ಕಾವೇರಿಯನ್ನು ಕರ್ನಾಟಕದೊಂದಿಗೆ ಉಳಿಸಿಕೊಳ್ಳುವಲ್ಲಿ ದೇವೇಗೌಡರು ಯಶಸ್ವಿಯಾಗಿದ್ದರು. ಅಗತ್ಯ ಸಂದರ್ಭದಲ್ಲಿ ಕಾವೇರಿಗಾಗಿ ಸಿಡಿದೆದ್ದು ನಿಲ್ಲುವ ದೇವೇಗೌಡರ, ಕಾವೇರಿಯ ರಕ್ಷಕನಲ್ಲದೇ ಬೇರೇನು?

ಹಾಗಾಗಿಯೇ ಕಾವೇರಿಯ 'ವೀರಕುಮಾರ' ಎಂಬ ಮಾತಿನಲ್ಲಿ ಅತಿಶಯೋಕ್ತಿಯೂ ಇಲ್ಲ.

ಪ್ರಸ್ತುತಿ: ವಿ.ವಿ. ಬ್ರ್ಯಾಂಡ್ ಸ್ಟ್ಯಾಟ್



ಬೆಂಗಳೂರು ಪ್ರೆಸ್ ಕ್ಲಬ್‌ನಲ್ಲಿ ಎಚ್‌.ಡಿ.ದೇವೇಗೌಡರು ಬ್ಯಾಡ್ಮಿಂಟನ್ ಆಡಿದ ಕ್ಷಣ

ಬಿಜೆಪಿ ನಾಯಕ ಅಟಲ್ ಬಿಹಾರಿ ವಾಜಪೇಯಿ ಅವರೊಂದಿಗೆ ಎಚ್‌.ಡಿ.ದೇವೇಗೌಡರು

ರಾಜ್ಯದ ಯುಕೆಪಿಗೆ ಹರಿದು ಬಂದ ಕೇಂದ್ರದ ಹಣ

ರಾಜ್ಯದ ನೀರಾವರಿ ಯೋಜನೆಗಳಿಗೆ ಕರ್ನಾಟಕ ಏಕೀಕರಣವಾದಾಗಿನಿಂದ ದೇವೇಗೌಡರು ಪ್ರಧಾನಿಯಾಗುವವರೆಗೆ ಕೇಂದ್ರದ ಬಿಡಿಗಾಸೂ ಬಂದಿರಲಿಲ್ಲ.

ಅದರಲ್ಲೂ ಉತ್ತರ ಕರ್ನಾಟಕದ ಕೃಷ್ಣಾ ಮೇಲ್ದಂಡೆ ಯೋಜನೆಗೆ (ಯುಕೆಪಿ) ಹಣ ನೀಡಿ ಎಂದು ಬಿಜಾಪುರದಲ್ಲಿ ಅಂದಿನ ಪ್ರಧಾನಿ ಇಂದಿರಾಗಾಂಧಿ ಅವರನ್ನು ಕರೆಸಿ ಚಿನ್ನದಲ್ಲಿ ತುಲಾಭಾರ ಮಾಡಿದರೂ ಹಣ ಬಂದಿರಲಿಲ್ಲ. ಆದರೆ, ದೇವೇಗೌಡರು ಪ್ರಧಾನಿಯಾದೊಡನೆಯೇ ಯುಕೆಪಿಗೆ ಮತ್ತು ಕರ್ನಾಟಕದ ನೀರಾವರಿ ಯೋಜನೆಗಳಿಗೆ ಕೇಂದ್ರದ ಹಣ ಒದಗಿಬರುವಂತೆ ಮಾಡಲು ತಮ್ಮ ಮೆದುಳಿನ ಕೂಸಾಗಿ ಒಂದು ಹೊಸ ರಾಷ್ಟ್ರೀಯ ನೀರಾವರಿ ಯೋಜನೆಯನ್ನೇ ಘೋಷಿಸಿದರು. ಅದೇ ಎ.ಐ.ಬಿ.ಪಿ. ಯೋಜನೆ (Accelerated irrigation Benifit Programme). ಈ ಯೋಜನೆ ಅಡಿಯಲ್ಲಿ ಕರ್ನಾಟಕಕ್ಕೆ 1996 ರಿಂದ ಹರಿದು ಬಂದಿರುವ ಹಣ ಸುಮಾರು 20 ಸಾವಿರ ಕೋಟಿ ರೂಪಾಯಿಗಳು.

ಆಲಮಟ್ಟಿ ಎತ್ತರ

ಆಲಮಟ್ಟಿ ಅಣೆಕಟ್ಟಿನ ಎತ್ತರದ್ದೊಂದು ದೊಡ್ಡ ಕಥೆ. ನಮ್ಮ ಪಾಲಿನ ನೀರಿನ ಹಕ್ಕಿಗೆ ಅನ್ವಯವಾಗಿ ನೀರನ್ನು ಸಂಗ್ರಹಿಸಿಟ್ಟುಕೊಳ್ಳಲು ಆಲಮಟ್ಟಿ ಅಣೆಕಟ್ಟೆಯ ಎತ್ತರ 524 ಮೀಟರ್ ಇರಬೇಕೆಂಬುದು ತಂತ್ರಜ್ಞರ ಅಭಿಮತವಾಗಿತ್ತು. ಅದರಂತೆಯೇ ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ದೂರದೃಷ್ಟಿಯಿಂದ ಆಲಮಟ್ಟಿ ಅಣೆಕಟ್ಟಿನ ಎತ್ತರ 524 ಮೀಟರ್ ಇರುವಂತೆ ಹೆಡ್‌ವರ್ಕ್ ಡಿಸೈನ್ ಮತ್ತು ಅದಕ್ಕೆ ತಕ್ಕಂತೆ ಇರಬೇಕಾದ 13.7 ಮೀಟರ್ ಎತ್ತರದ ಗೇಟಿನ ಡಿಸೈನ್ ತಯಾರಿಸಿ ಕೇಂದ್ರ ಸರ್ಕಾರಕ್ಕೆ ಅನುಮೋದನೆಗೆ ಕಳುಹಿಸಿಕೊಟ್ಟಿದ್ದರು. ಆದರೆ ಆಂಧ್ರಪ್ರದೇಶದ ಒತ್ತಡದಿಂದಾಗಿ ಅದಕ್ಕಿನ್ನೂ ವಿಮೋಚನೆ ಸಿಗುತ್ತಿಲ್ಲ. ಅದೃಷ್ಟವಶಾತ್ ದೇವೇಗೌಡರೇ ಪ್ರಧಾನಿಯಾದರು. ಆದರೆ ಅದು ಸಂಯುಕ್ತ ರಂಗ ಸಮ್ಮಿಶ್ರ ಸರ್ಕಾರ. ಚಂದ್ರಬಾಬು ನಾಯ್ಡು ನೇತೃತ್ವದ ತೆಲುಗು ದೇಶಂ ಪಕ್ಷ ಸಂಯುಕ್ತ ರಂಗ ಸರ್ಕಾರದಲ್ಲಿ ಪ್ರಮುಖ ಪಾಲುದಾರ ಪಕ್ಷ. ದೇವೇಗೌಡರು ಇಂತಹ ಪಕ್ಷಗಳ ಮರ್ಜಿಯಲ್ಲಿ ಇರಬೇಕಾಗಿದ್ದ ಪರಿಸ್ಥಿತಿ. ಆದರೆ, ದೇವೇಗೌಡರ ರಾಜಕೀಯ ಧೈರ್ಯವನ್ನು ಮೆಚ್ಚಿಕೊಳ್ಳಲೇಬೇಕು. ಪ್ರಧಾನಿಯಾದ ಕೆಲವೇ ದಿನಗಳಲ್ಲಿ ಅವರು ಮಾಡಿದ ಮೊದಲ ಕೆಲಸವೆಂದರೆ ಆಲಮಟ್ಟಿ ಅಣೆಕಟ್ಟಿನ ಎತ್ತರದ ಡಿಸೈನ್ ಮತ್ತು ಗೇಟ್ ಡಿಸೈನ್‌ಗಳಿಗೆ ಅನುಮೋದನೆ ನೀಡಿಬಿಟ್ಟರು. ಇದು ದೇವೇಗೌಡರ ಧಾರ್ಷ್ಟ್ಯ.

ರಾಜ್ಯಪಾಲ ವಜುಭಾಯಿ ವಾಲಾ ಜತೆಗೆ ಎಚ್‌ಡಿ.ದೇವೇಗೌಡರು



ಮುಖ್ಯಮಂತ್ರಿಯಾಗಿದ್ದ ವೇಳೆ ಎಚ್‌ಡಿ.ದೇವೇಗೌಡರು ಪತ್ನಿ ಚೆನ್ನಮ್ಮ ಜತೆಗೆ

ಬಾಂಗ್ಲಾ ದೇಶದ ಪ್ರಧಾನಿ ಶೇಖ್ ಹಸಿನಾ ಅವರೊಂದಿಗೆ ಎಚ್‌ಡಿ.ದೇವೇಗೌಡ

ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿದ್ದ ಜ್ಯೋತಿ ಬಸು ಜತೆಗೆ ಅಂದಿನ ಪ್ರಧಾನಿ ಎಚ್‌.ಡಿ.ದೇವೇಗೌಡರು ಗಹನ ಚರ್ಚೆ

ಹಿರಿಯ ನಟ ಕೆ.ಎಸ್‌.ಅಶ್ವತ್ಥ್ ಅವರನ್ನು ಅಭಿನಂದಿಸಿದ ಅಂದಿನ ಮುಖ್ಯಮಂತ್ರಿ ಎಚ್‌ಡಿ.ದೇವೇಗೌಡ. ವರನಟ ರಾಜ್ ಕುಮಾರ್ ಇದ್ದರು.

70ನೇ ಹುಟ್ಟುಹಬ್ಬದ ವೇಳೆಯಲ್ಲಿ ಎಚ್‌ಡಿ.ದೇವೇಗೌಡರು ಪತ್ನಿ ಚನ್ನಮ್ಮ ಅವರಿಗೆ ಕೇಕ್ ತಿನ್ನಿಸಿದರು.

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಯು.ಆರ್‌.ಅನಂತಮೂರ್ತಿ ಅವರನ್ನು ಗೌರವಿಸಿದ ಎಚ್‌ಡಿ.ದೇವೇಗೌಡರು


ಪಾರ್ಲಿಮೆಂಟಿಗೆ ಬರುತ್ತಿರುವ ಎಚ್.ಡಿ. ದೇವೇಗೌಡ

1987ರಲ್ಲಿ ದೇವೇಗೌಡರು ಹೀಗಿದ್ದರು

ಹಾಸನದ ಹೊಳೆನರಸೀಪುರ ಪಡುವಲಹಿಪ್ಪೆ ಗ್ರಾಮದಲ್ಲಿನ ದೇವೇಗೌಡರ ಮನೆ

ಎಚ್.ಡಿ.ದೇವೇಗೌಡ

ಪಂಜಾಬ್ ರೈತರ ಸಂಕಷ್ಟಕ್ಕೆ ಸ್ಪಂದನೆ * ಈಶಾನ್ಯ ರಾಜ್ಯಗಳಿಗೆ ದೊಡ್ಡ ಮೊತ್ತದ ಪ್ಯಾಕೇಜ್

ರೈತರ ಕಷ್ಟಕ್ಕೆ ಮಿಡಿದ ಮಣ್ಣಿನ ಮಗ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ದೇವೇಗೌಡರು ಪ್ರಧಾನಿಯಾಗಿದ್ದ ಸಮಯ. ಪಂಜಾಬಿನಲ್ಲಿ ರೈತರು ಯಥೇಚ್ಛವಾಗಿ ಭತ್ತ ಬೆಳೆದ ಪರಿಣಾಮ ಮಾರುಕಟ್ಟೆಯಲ್ಲಿ ಬೇಡಿಕೆ ಇಲ್ಲದಂತಾಯಿತು. ರೈತರಿಂದ ಭತ್ತ ಖರೀದಿಸಲು ಯಾರೂ ಮುಂದೆ ಬರಲಿಲ್ಲ. ಜೊತೆಗೆ ರೈತರಿಗೆ ಆಸರೆಯಾಗಬೇಕಿದ್ದ ಅಲ್ಲಿನ ಸ್ಥಳೀಯ ಪಂಜಾಬ್ ಸರ್ಕಾರವೂ ರೈತರಿಗೆ ಸಹಾಯ ಮಾಡಲಿಲ್ಲ. ಆದರೆ, ಪ್ರಧಾನಿಯಾಗಿದ್ದ ದೇವೇಗೌಡರಿಗೆ ವಿಚಾರ ತಿಳಿದು ರೈತರು ಬೆಳೆದ ಅದೆಷ್ಟೇ ಭತ್ತವಿದ್ದರೂ ಆ ಎಲ್ಲ ಭತ್ತವನ್ನು ರೈತರಿಂದ ಖರೀದಿಸಲು ಆದೇಶ ನೀಡುವ ಮೂಲಕ ಪಂಜಾಬಿನ ರೈತರ ಸಹಾಯಕ್ಕೆ ಧಾವಿಸಿದ್ದರು. ದೇವೇಗೌಡರ ಈ ಸಹಾಯವನ್ನು ಪಂಜಾಬಿನ ರೈತರು ಮರೆಯಲಿಲ್ಲ. ತಾವು ಬೆಳೆಯುವ ಭತ್ತದ ತಳಿಯೊಂದಕ್ಕೆ 'ದೇವೇಗೌಡ' ಎಂದು ನಾಮಕರಣ ಮಾಡುವ ಮೂಲಕ ದೇವೇಗೌಡರಿಗೆ ತಮ್ಮ ಕೃತಜ್ಞತೆಯನ್ನು ಸಲ್ಲಿಸಿದ್ದಾರೆ.

ಈಶಾನ್ಯ ರಾಜ್ಯಗಳು ಕಂಡ ಮೊದಲ ಪ್ರಧಾನಿ

ಅದುವರೆಗೆ ಭಾರತದ ಯಾವೊಬ್ಬ ಪ್ರಧಾನಮಂತ್ರಿಯೂ ಈಶಾನ್ಯ ರಾಜ್ಯಗಳತ್ತ ಕಣ್ಣೆತ್ತಿ ಕೂಡ ನೋಡಿರಲಿಲ್ಲ. ಅವುಗಳ ಸಮಸ್ಯೆಗಳತ್ತ ಗಮನ ಕೂಡ ಹರಿಸಿರಲಿಲ್ಲ. ಆದರೆ, ಒಂದೇ ಪ್ರವಾಸದ ವೇಳೆ ಈಶಾನ್ಯದ ಏಳೂ ರಾಜ್ಯಗಳಿಗೂ ಭೇಟಿ ನೀಡಿದ ಮೊಟ್ಟ ಮೊದಲ ಪ್ರಧಾನಿ ದೇವೇಗೌಡ ಅವರು ಮಾತ್ರ.

1996ರ ಅಕ್ಟೋಬರ್ 22ರಂದು ಆರಂಭಿಸಿ ಒಟ್ಟು ಆರು ದಿನಗಳ ಕಾಲ ಈಶಾನ್ಯ ರಾಜ್ಯಗಳ ಪ್ರವಾಸ ಕೈಗೊಂಡಿದ್ದ ದೇವೇಗೌಡ ಅವರು, 'ಈಶಾನ್ಯ ರಾಜ್ಯಗಳ ಸಮಸ್ಯೆ ಅರ್ಥ ಮಾಡಿಕೊಳ್ಳುವುದು, ಅಲ್ಲಿನ ಪರಿಸ್ಥಿತಿ, ಜನ ಜೀವನದ ಆಳ-ಅಗಲವನ್ನು ತಿಳಿದುಕೊಳ್ಳುವುದು ನನ್ನ ಈ ಪ್ರವಾಸದ ಮೂಲ ಉದ್ದೇಶ' ಎಂದು ಸ್ವತಃ ಹೇಳಿದ್ದರು. ಒಬ್ಬ ಪ್ರಧಾನಿಯಾದವನು ದೇಶದ ಪ್ರತಿ ರಾಜ್ಯ, ಪ್ರತಿ ಪ್ರದೇಶದ ಬಗ್ಗೆ ತಿಳಿದುಕೊಂಡಿರಬೇಕು ಎಂಬುದು ದೇವೇಗೌಡ ಅವರ ನಿಲುವಾಗಿತ್ತು. ಪರಿಣಾಮ; ಈಶಾನ್ಯ ಭಾಗದ ಎಲ್ಲ ಏಳು ರಾಜ್ಯಗಳಿಗಾಗಿ ₹6500 ಕೋಟಿಗಳ ಆರ್ಥಿಕ ಪ್ಯಾಕೇಜ್ ಒಂದನ್ನು ದೇವೇಗೌಡರು ಘೋಷಿಸಿದರು. ಇದು ಈಶಾನ್ಯ ರಾಜ್ಯಗಳ ಅಭಿವೃದ್ಧಿಗೆ ಸಿಕ್ಕ ಬಹುದೊಡ್ಡ ಕೊಡುಗೆ ಎಂದು ಈವರೆಗೆ ಬಣ್ಣನೆಗೆ ಪಾತ್ರವಾಗಿದೆ. ಜೊತೆಗೆ ಈಶಾನ್ಯ ರಾಜ್ಯಗಳ ಸಮಸ್ಯೆ ಇತ್ಯರ್ಥಕ್ಕೆ ಪ್ರಧಾನಮಂತ್ರಿಗಳ ಕಚೇರಿಯಲ್ಲಿ ಪ್ರತ್ಯೇಕ ವಿಭಾಗ ಆರಂಭಿಸಿದ ಮೊದಲ ಪ್ರಧಾನಿ ಕೂಡ ಎಚ್.ಡಿ.ದೇವೇಗೌಡರು.

ಇದೇ ವೇಳೆ ಈಶಾನ್ಯ ಭಾಗದಲ್ಲಿ ಸಕ್ರಿಯರಾಗಿದ್ದ ಬಂಡುಕೋರ ಸಂಘಟನೆಗಳನ್ನು ಪೂರ್ವ ಷರತ್ತುಗಳಿಲ್ಲದೆ ಮಾತುಕತೆಗೆ ಆಹ್ವಾನಿಸಿದ ದೇವೇಗೌಡ ಅವರು, ಈ ಭಾಗದಲ್ಲಿ ಶಾಂತಿ ಸುವ್ಯವಸ್ಥೆ ನೆಲೆಗೊಳಿಸುವ ನಿಟ್ಟಿನಲ್ಲಿ ಮಹತ್ವದ ಪ್ರಯತ್ನವೊಂದನ್ನು ಮಾಡಿದರು. ಆ ಸಂದರ್ಭದಲ್ಲಿ ಈಶಾನ್ಯ ಪ್ರಾಂತ್ಯದಲ್ಲೇ ಅತ್ಯಂತ ಪ್ರಬಲ ಬಂಡಾಯ ಗುಂಪಾಗಿ ಗುರುತಿಸಿಕೊಂಡಿದ್ದ ನ್ಯಾಷನಲ್ ಸೋಷಿಯಲಿಸ್ಟ್ ಕೌನ್ಸಿಲ್ ಆಫ್ ನಾಗಾಲ್ಯಾಂಡ್ (ಎನ್‌ಎಸ್‌ಸಿಎನ್) ಮೇಲಿನ ನಿಷೇಧವನ್ನು ತೆರವುಗೊಳಿಸುವ ಇಂಗಿತ ಹೊಂದಿದ್ದ ದೇವೇಗೌಡ ಅವರು, ಆ ಮೂಲಕ ಸಮಾಜ ವಿರೋಧಿ ಚಟುವಟಿಕೆಗಳನ್ನು ನಿಲ್ಲಿಸಿ ಕೇವಲ ಒಂದು ಸಂಘಟನೆಯಾಗಿ ಮುಂದುವರಿಯುವಂತೆ ಗುಂಪಿನ ಸದಸ್ಯರು ಮತ್ತು ಮುಖಂಡರ ಮನವೊಲಿಸುವ ಉದ್ದೇಶ ಹೊಂದಿದ್ದರು.

ಅಸ್ಸಾಂನಲ್ಲಿ, ಅಸ್ಸಾಂ ಗಣ ಪರಿಷತ್ (ಎಜಿಪಿ) ಆಕ್ಷೇಪ ವ್ಯಕ್ತಪಡಿಸುತ್ತಿದ್ದ ಎಲ್ಲ ವಿಷಯಗಳ ಮೇಲೆ ಗಮನಹರಿಸಲು ದೇವೇಗೌಡರು ನಿರ್ಧರಿಸಿದ್ದರು. ವಿವಾದಾತ್ಮಕ ಅಕ್ರಮ ವಲಸಿಗರ (ನ್ಯಾಯಮಂಡಳಿಯ ನಿರ್ಣಯ) ಕಾಯ್ದೆ 1983ರ ರದ್ದುಗೊಳಿಸುವಿಕೆಯನ್ನು ಕೇಂದ್ರ ಸರ್ಕಾರವು ಪರಿಗಣಿಸುತ್ತಿದೆ ಎಂದು ಅವರು ಘೋಷಿಸಿದರು.

ಕರ್ನಾಟಕದ ಪ್ರಧಾನಿ ಎಂಬ ಮೂದಲಿಕೆ

ಕನ್ನಡದ ಮಣ್ಣಿನಿಂದ ಮೇಲೆದ್ದು, ಭಾರತದ ಪ್ರಧಾನಿಯಾದ ದೇವೇಗೌಡರ ಮೇಲೆ ನಾಡಿನ ಜನತೆಗೆ ಅಪಾರವಾದ ಅಭಿಮಾನ ಇದ್ದದ್ದು ನಿಜವೇ ಆದರೂ, ಅವರ ಮೇಲೆ ಅದೇ ಮಟ್ಟದ ಅಸೂಯೆ, ಮತ್ಸರಗಳಿದ್ದದ್ದು ಸತ್ಯ. ದೇವೇಗೌಡರ ವಿಚಾರದಲ್ಲಿ ಕಂಡುಬರುವ ದುರಂತದ ಸಂಗತಿ ಇದು. ರಾಷ್ಟ್ರೀಯ ಮಾಧ್ಯಮಗಳು 'ಕರ್ನಾಟಕದ ಪ್ರಧಾನಿ' ಎಂದು ಮೂದಲಿಸುತ್ತಿದ್ದರೆ, ಅದನ್ನು ಒಂದಷ್ಟು ಜನ ಬೆಂಬಲಿಸಿ ಮಾತನಾಡಿದ್ದೂ ಇದೆ. ಅಂತಿಮವಾಗಿ ದೇವೇಗೌಡರ ಮೇಲಿನ ಮೂದಲಿಕೆಗಳೇ ಮೇಲುಗೈ ಸಾಧಿಸಿದ್ದು, ಅವರ ಕಾರ್ಯಕ್ರಮಗಳು ಗೌಣವಾಗಿದ್ದು ವಿಪರ್ಯಾಸದ ಸಂಗತಿ.

ಮೈತ್ರಿ ಸರ್ಕಾರದಲ್ಲಿ, ಎಲ್ಲರ ವಿರೋಧದ ನಡುವೆಯೂ ಕರ್ನಾಟಕಕ್ಕಾಗಿ ಏನನ್ನಾದರೂ ಮಾಡಲು ಪ್ರಯತ್ನಿಸಿದರೆ, ಅದಕ್ಕೆ ಅಪಸ್ವರಗಳು ಕೇಳಿ ಬರುತ್ತಿದ್ದವು. ಆದರೆ, ಎಲ್ಲರ ವಿರೋಧದ ನಡುವೆ, ಮೂದಲಿಕೆ, ಟೀಕೆಗಳನ್ನು ನುಂಗಿಕೊಂಡು ಕರ್ನಾಟಕಕ್ಕೆ ದೇವೇಗೌಡರು ಕೊಟ್ಟ ಕೊಡುಗೆಯನ್ನು ನಮ್ಮ ಮಣ್ಣಿನಲ್ಲೇ ಮರೆಯಲಾಯಿತು. ಈ ವಿಚಾರ ಅವರನ್ನು ಬಹುವಾಗಿ ಬಾಧಿಸಿದೆ. 'ಕರ್ನಾಟಕದ ಪ್ರಧಾನಿ' ಎಂಬ ವ್ಯಂಗ್ಯದ ಮಾತುಗಳು ಅವರನ್ನು ಇನ್ನಿಲ್ಲದೆ ಚುಚ್ಚಿದವಾದರೂ, ಕರ್ನಾಟಕದ ಐಡೆಂಟಿಟಿ ಅವರಲ್ಲಿ ನೆಮ್ಮದಿಯ ಭಾವ ಮೂಡಿಸುತ್ತಿದ್ದದ್ದು ಅವರನ್ನು ಹತ್ತಿರದಿಂದ ನೋಡಿದವರಿಗೆ ಗೊತ್ತು.

> ಕೊರೊನಾ ವೈರಸ್ ಸೋಂಕು ಪ್ರಕರಣಗಳು ಕಡಿಮೆಯಾಗುತ್ತಿವೆ ಎಂಬ ಮಾತ್ರಕ್ಕೆ ಜನ ಈ ನಿರ್ಣಾಯಕ ಸಂದರ್ಭದಲ್ಲಿ ಕೋವಿಡ್ ನಿಯಮಾವಳಿಗಳನ್ನು ಮರೆಯಬಾರದು. ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು, ಸಾಮಾಜಿಕ ಅಂತರ ಪಾಲಿಸಬೇಕು. ಆರೋಗ್ಯ ರಕ್ಷಣೆಯತ್ತ ಜನ ಗಮನಹರಿಸಬೇಕು.

ಪ್ರಧಾನಿ ಸ್ಥಾನ ಉಳಿಸಿಕೊಳ್ಳಲು ಸಿದ್ಧಾಂತ ತೊರೆಯಲಿಲ್ಲ

ದೇವೇಗೌಡರ ಸರ್ಕಾರಕ್ಕೆ ಕಾಂಗ್ರೆಸ್ ನೀಡಿದ್ದ ಬೆಂಬಲ ಹಿಂಪಡೆದ ಕಾರಣ ಸರ್ಕಾರ ಅಳಿವಿನಂಚಿನಲ್ಲಿತ್ತು. ಕಾಂಗ್ರೆಸ್ ಬೆಂಬಲ ಹಿಂಪಡೆಯುತ್ತಲೇ ಬಿಜೆಪಿಯ ಅಟಲ್ ಬಿಹಾರಿ ವಾಜಪೇಯಿ ಅವರು ತಾವು ಬೆಂಬಲ ನೀಡುವುದಾಗಿ ದೇವೇಗೌಡರಿಗೆ ಲೋಕಸಭೆ ಕಲಾಪದ ಸಂದರ್ಭದಲ್ಲೇ ಚೀಟಿ ಬರೆದು ಕಳುಹಿಸಿದ್ದರು. ಇನ್ನೊಂದೆಡೆ, ಮಹಾರಾಷ್ಟ್ರದ ಶಿವಸೇನೆಯ ಬಾಳಾ ಠಾಕ್ರೆ ಅವರೂ ತಾವು ಬೆಂಬಲ ನೀಡುವುದಾಗಿ ದೇವೇಗೌಡರಿಗೆ ತಿಳಿಸಿದ್ದರು. ದೆಹಲಿಯ ಮುಖ್ಯಮಂತ್ರಿ ಸಾಹೀಬ್ ಸಿಂಗ್ ವರ್ಮಾ ಅವರು ಖುದ್ದು ಎಚ್.ಡಿ. ಕುಮಾರಸ್ವಾಮಿ ಅವರನ್ನು ಕರೆದು ಬಿಜೆಪಿ ನಿಮ್ಮೊಂದಿಗೆ ಇರಲಿದೆ ಎಂದು ಹೇಳಿದ್ದರು. ಪಂಜಾಬ್‌ನ ಪ್ರಕಾಶ್ ಸಿಂಗ್ ಬಾದಲ್ ಅವರೂ ದೇವೇಗೌಡರ ಸರ್ಕಾರ ಬೆಂಬಲಿಸಲು ಸಿದ್ಧವಾಗಿದ್ದರು. ಆದರೆ, ಈ ಬೆಂಬಲದಲ್ಲಿ ದೇವೇಗೌಡರಿಗೆ ತಾವು ನಂಬಿದ ತತ್ವ ಸಿದ್ಧಾಂತಗಳ ಪ್ರಶ್ನೆ ಎದುರಾಗಿತ್ತು. ಈ ಪಕ್ಷಗಳೊಂದಿಗೆ ದೇವೇಗೌಡರಿಗೆ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿದ್ದವು. ಹೀಗಾಗಿ ಬೆಂಬಲದ ಪ್ರಸ್ತಾವಗಳನ್ನು ಅತ್ಯಂತ ಗೌರವದಿಂದ ದೇವೇಗೌಡರು ತಿರಸ್ಕರಿಸಿದ್ದರು. ಸ್ಥಾನಕ್ಕಾಗಿ ರಾಜೀ ರಾಜಕಾರಣ ಮಾಡಬಾರದು ಎಂಬುದು ದೇವೇಗೌಡರ ಎಂದಿನ ದೃಢ ನಿಲುವು. ಆ ಕಾರಣಕ್ಕಾಗಿಯೇ ಅವರು ಅಧಿಕಾರ ತೊರೆದರೇ ಹೊರತು ಸಿದ್ಧಾಂತ ಮರೆಯಲಿಲ್ಲ.

ದೆಹಲಿ ಮೆಟ್ರೋಗೆ ಮರುಜೀವ ಕೊಟ್ಟ ನಾಯಕ

ಆರ್ಥಿಕ ಕೊರತೆ ಕಾರಣದಿಂದ 1996ರಲ್ಲಿ ನನೆಗುದಿಗೆ ಬಿದ್ದಿದ್ದ ದೆಹಲಿ ಮೆಟ್ರೋ ಮೊದಲ ಹಂತದ ಯೋಜನೆಗೆ ಮರುಜೀವ ಕೊಟ್ಟಿದ್ದು ದೇವೇಗೌಡರು. ದೆಹಲಿ ಮೆಟ್ರೋ ರೈಲು ಯೋಜನೆಯ ಒಟ್ಟಾರೆ 55.3 ಕಿ.ಮೀ ಉದ್ದದ (11 ಕಿ.ಮೀ ಸುರಂಗ ಮಾರ್ಗ) ಮೊದಲ ಹಂತದ ಪರಿಷ್ಕೃತ ಪ್ರಸ್ತಾವನೆಗೆ ಒಪ್ಪಿಗೆ ನೀಡಲು ಹಣಕಾಸು ಸಚಿವಾಲಯ ಹಿಂದೇಟು ಹಾಕಿತ್ತು. ಯೋಜನಾ ವೆಚ್ಚವಾಗಿದ್ದ ₹4860 ಕೋಟಿ ಕೊಡಲು ಆಗುವುದಿಲ್ಲ ಎಂದು ಸಚಿವಾಲಯವು ಕೈಚೆಲ್ಲಿ ಕುಳಿತಾಗ ದೆಹಲಿ ಮೆಟ್ರೋ ರೈಲು ಯೋಜನೆ ಅನುಷ್ಠಾನಗೊಳ್ಳುವುದೇ ಅನುಮಾನವಾಗಿತ್ತು. ಆಗ ಯೋಜನೆಯ ಅನುಷ್ಠಾನಕ್ಕೆ ಮರು ಜೀವ ನೀಡಿದ್ದು ದೇವೇಗೌಡರು.

ದೇವೇಗೌಡರ ನೇತೃತ್ವದ ಕೇಂದ್ರ ಸರ್ಕಾರದ ದೂರದೃಷ್ಟಿತ್ವ, ನಿಷ್ಠಾವಂತ, ಪ್ರಾಮಾಣಿಕ ಹಾಗೂ ದಕ್ಷ ಅಧಿಕಾರಿಗಳನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಸರ್ಕಾರಕ್ಕೆ ಇದ್ದ ಬದ್ಧತೆ ಕಾರಣದಿಂದಾಗಿಯೇ ದೆಹಲಿ ಮೆಟ್ರೋ ಸೇರಿದಂತೆ ಹಲವಾರು ಜನೋಪಯೋಗಿ ಕಾರ್ಯಗಳು, ಕಾಮಗಾರಿಗಳು, ಯೋಜನೆ ಹಾಗೂ ಮಸೂದೆಗಳು ಅನುಷ್ಠಾನಗೊಂಡಿವೆ ಎಂದು ಹೇಳಿದರೆ ಉತ್ಪ್ರೇಕ್ಷೆಯಲ್ಲ.

ದೇವೇಗೌಡರು ಅಧಿಕಾರಕ್ಕೆ ಬರುವ ಮೊದಲು ಸರ್ಕಾರದ ಅನುದಾನವಿದ್ದಾಗಿಯೂ ದೆಹಲಿ ಮೆಟ್ರೊ ರೈಲು ಯೋಜನೆಯು ಒಂದು ದಶಕದ ಕಾಲ ವಿಳಂಬವಾಗಿತ್ತು. ಆಗ ಯೋಜನೆ ಆರಂಭಿಸುವ ದೃಢ ನಿರ್ಧಾರ ಕೈಗೊಂಡಿದ್ದು ದೇವೇಗೌಡ ಅವರು. ಪ್ರಧಾನ ಮಂತ್ರಿ ಹುದ್ದೆಯೊಂದಿಗೆ ನಗರಾಭಿವೃದ್ಧಿ ಸಚಿವಾಲಯವೂ ದೇವೇಗೌಡರ ಕೈಯಲ್ಲೇ ಇತ್ತು. ಈ ವೇಳೆ ಮೆಟ್ರೋ ಯೋಜನೆ ವಿಳಂಬ ಹಾಗೂ ಯೋಜನೆ ಅನುಷ್ಠಾನದಿಂದ ಜನರಿಗಾಗಲಿರುವ ಅನುಕೂಲಗಳ ಕುರಿತು ಆಗಿನ ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಅವರು ದೇವೇಗೌಡರ ಗಮನಕ್ಕೆ ತಂದರು. ಸಾರ್ವಜನಿಕರಿಗೆ ಅನುಕೂಲವಾಗಲಿರುವ ಯೋಜನೆಗಳನ್ನು ಯಾವುದೇ ಕಾರಣಕ್ಕೂ ಮುಂದೂಡುವಂತಿಲ್ಲ ಅಥವಾ ವಿಳಂಬ ಮಾಡುವಂತಿಲ್ಲ ಎಂದು ಹೇಳಿದ ದೇವೇಗೌಡ ಅವರು, ಮೆಟ್ರೋ ಯೋಜನೆಗೆ ಇರುವ ಅಡೆತಡೆಗಳನ್ನು ನಿವಾರಿಸಿ ಶೀಘ್ರವೇ ಅನುಷ್ಠಾನಗೊಳಿಸುವಂತೆ ಅಧಿಕಾರಿಗಳಿಗೆ ಸ್ಪಷ್ಟ ಆದೇಶ ನೀಡಿದ್ದರು. ಬಳಿಕ ಯೋಜನೆಗೆ ಸಚಿವ ಸಂಪುಟದ ಅನುಮೋದನೆಯೂ ದೊರೆಯಿತು.

ಗಂಗಾ ವಿವಾದ ಬಗೆಹರಿಸಿದ ಕಾವೇರಿ ವರಪುತ್ರ

ದೇಶದ ವಿದೇಶಾಂಗ ನೀತಿ ವಿಷಯಕ್ಕೆ ಬರುವುದಾದರೆ, ಭಾರತದ ನೆರೆ ರಾಷ್ಟ್ರಗಳ ಜೊತೆಗೂ ದೇವೇಗೌಡರ ಸಂಬಂಧ ಅವಿನಾಭಾವ. ನೆರೆಯ ಬಾಂಗ್ಲಾದೇಶದ ಜೊತೆಗಿನ ಗಂಗಾ ನದಿ ನೀರು ಹಂಚಿಕೆ ವಿವಾದದ ಪರಿಹಾರ ಹಾಗೂ ನೇಪಾಳದೊಂದಿಗೆ ಮಹಾಕಾಳಿ ಒಪ್ಪಂದ ಜಾರಿಗೆ ಕಾರಣ ದೇವೇಗೌಡರು. ಅದುವರೆಗೂ ಮರೀಚಿಕೆಯಾಗಿದ್ದ ಪಾಕಿಸ್ತಾನದೊಂದಿಗಿನ ಮಾತುಕತೆ ಪುನರಾರಂಭಿಸಿದ ಕೀರ್ತಿ ಕೂಡ ಎಚ್.ಡಿ.ದೇವೇಗೌಡರಿಗೇ ಸಲ್ಲುತ್ತದೆ. ಎರಡೂ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧಕ್ಕೆ ಬಾಂಧವ್ಯದ ಬೆಸುಗೆ ಹಾಕಿದ್ದು ನಮ್ಮ ಮಣ್ಣಿನ ಮಗ. ಇದೇ ವೇಳೆ ಎಲ್ಲ ಶಿಷ್ಟಾಚಾರಗಳನ್ನು ಪಕ್ಕಕ್ಕೆ ತಳ್ಳಿ ಅಂದಿನ ಚೀನಾ ಅಧ್ಯಕ್ಷ ಜೈಂಗ್ ಝೆಮಿನ್ ಅವರನ್ನು ಭಾರತಕ್ಕೆ ಬರಮಾಡಿಕೊಳ್ಳುವ ಮೂಲಕ ಎರಡೂ ದೇಶಗಳ ನಡುವಿನ ಸಂಬಂಧ ವೃದ್ಧಿಸಲು ಅವಕಾಶ ಮಾಡಿಕೊಟ್ಟದ್ದು ಕೂಡ ಅಂದು ಪ್ರಧಾನಮಂತ್ರಿಯಾಗಿದ್ದ ದೇವೇಗೌಡರು.

ಭೂತಾನ್ ಜೊತೆಗೂ ಸ್ನೇಹ ಸಂಬಂಧ ಗಟ್ಟಿಗೊಳಿಸಿದ ಎಚ್.ಡಿ.ದೇವೇಗೌಡರ ನೇತೃತ್ವದ ಸರ್ಕಾರ, 1997– 2002ರ ವರೆಗಿನ ಭೂತಾನ್‌ನ 8ನೇ ಪಂಚವಾರ್ಷಿಕ ಯೋಜನೆಗೆ ಆರ್ಥಿಕ ಸಹಕಾರ ನೀಡಿದ್ದು ಸ್ಮರಣೀಯ. ದೇವೇಗೌಡರು ಪ್ರಧಾನಿಯಾಗಿದ್ದ ಅವಧಿಯಲ್ಲಿ ಅಂದಿನ ಶ್ರೀಲಂಕಾ ಪ್ರಧಾನಿ ಚಂದ್ರಿಕಾ ಕುಮಾರತುಂಗ ಅವರು ಭಾರತಕ್ಕೆ ಭೇಟಿ ನೀಡಿದ್ದರು. ಈ ವೇಳೆ ಜಫ್ನಾದ ನಾಗರಿಕರಿಗೆ ಪುನರ್‌ವಸತಿ ಹಾಗೂ ಆಹಾರದ ನೆರವು ಒದಗಿಸುವ ಭರವಸೆ ನೀಡಿ, ಅದನ್ನು ಅಕ್ಷರಶಃ ನಿಭಾಯಿಸಿತ್ತು. ಇದರೊಂದಿಗೆ ಮಾಲ್ದೀವ್ಸ್, ಮ್ಯಾನ್ಮಾರ್, ಅಫ್ಘಾನಿಸ್ತಾನ, ತಜಕಿಸ್ತಾನ, ಉಜ್ಬೇಕಿಸ್ತಾನಗಳ ಜೊತೆಗಿನ ಬಾಂಧವ್ಯ ಕೂಡ ಉತ್ತಮವಾಗಿತ್ತು. ಹಾಗೆಯೇ ಲಾವೋಸ್, ಕಾಂಬೋಡಿಯಾ, ಫಿಲಿಪೈನ್ಸ್, ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾ ದೇಶಗಳಿಗೆ ಭಾರತದ ಪ್ರಮುಖ ವಾಣಿಜ್ಯೋದ್ಯಮಿಗಳು, ಸಂಪುಟ ದರ್ಜೆಯ ಐವರು ಸಚಿವರು ಹಾಗೂ ಉಪ ಪ್ರಧಾನಿಯವರನ್ನು ಒಳಗೊಂಡ ನಿಯೋಗ ಭೇಟಿ ನೀಡಿದ್ದು ಕೂಡ ಆಗಿನ ಮಹತ್ವದ ಬೆಳವಣಿಗೆಗಳಲ್ಲಿ ಒಂದಾಗಿದೆ.

ಆದಿಚುಂಚನಗಿರಿ ಮಠದ ಬಾಲಗಂಗಾಧರನಾಥ ಸ್ವಾಮೀಜಿ ಹಾಗೂ ಸತ್ಯಸಾಯಿಬಾಬಾ ಅವರ ಜತೆಗೆ ದೇವೇಗೌಡರು

ಹಾಸನ ಜಿಲ್ಲೆಯಲ್ಲಿ ಹೇಮಾವತಿ ಕಾಲುವೆಯ ನಿರ್ಮಾಣ ಪರಿಶೀಲಿಸುತ್ತಿರುವ ದೇವೇಗೌಡರು

ದೇವೇಗೌಡರ ಸಾಧನೆಗಳು

- ಕರ್ನಾಟಕದಲ್ಲಿನ ಬರ್ಗ್ ಮೌಂಟೆಡ್ ಯೋಜನೆಗಳಿಗಾಗಿ ಹೆಚ್ಚುವರಿ 606 ಮೆಗಾವಾಟ್ ನಾಪ್ಥಾ ಲಿಂಕೇಜ್ ಬಿಡುಗಡೆ ಮಾಡುವಂತೆ ಪಿಎನ್‌ಜಿ ಸಚಿವಾಲಯಕ್ಕೆ ಪತ್ರ ಬರೆದ ವಿದ್ಯುತ್ ಸಚಿವಾಲಯ.
- ಹಾಸನ-ಬೆಂಗಳೂರು ರೈಲು ಮಾರ್ಗ ಯೋಜನೆಯ ಕಾಮಗಾರಿ ಆರಂಭಕ್ಕೆ 21.2.1997ರಂದು ಸಿಸಿಇಎ ಅನುಮೋದನೆ ಮತ್ತು ಕಾಮಗಾರಿಗೆ ಚಾಲನೆ.
- ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ ಯೋಜನೆಯ ಅಡೆತಡೆಗಳ ನಿವಾರಿಸಿ ಕಾಮಗಾರಿ ಆರಂಭಿಸುವಂತೆ 21.2.1997ರಂದು ಸಿಸಿಇಎ ಅನುಮೋದನೆ ಮತ್ತು ಕಾಮಗಾರಿಗೆ ಚಾಲನೆ.
- ಕಡೂರು-ಚಿಕ್ಕಮಗಳೂರು-ಬೇಲೂರು ರೈಲು ಮಾರ್ಗಕ್ಕೆ ಸಂಬಂಧಿಸಿದಂತೆ ಪರಿಷ್ಕೃತ ಆದೇಶ. ಅಂತಿಮ ಸ್ಥಳ ಸಮೀಕ್ಷೆ ಕಾರ್ಯ ಆರಂಭ. ₹157 ಕೋಟಿ ಮೊತ್ತದ ಕಾಮಗಾರಿ ರೈಲ್ವೆ ಬಜೆಟ್‌ನಲ್ಲಿ ಸೇರ್ಪಡೆ. ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳುತ್ತಿದ್ದಂತೆ ಕಾಮಗಾರಿಗೆ ಚಾಲನೆ.
- ಬೆಂಗಳೂರು-ಸತ್ಯಮಂಗಲ; ಮೈಸೂರು-ಚಾಮರಾಜನಗರ; ಮುನೀರಾಬಾದ್-ಮೆಹಬೂಬ್‌ನಗರ; ಕೆಂಗೇರಿ-ರಾಮನಗರ; ಯಶವಂತಪುರ-ತುಮಕೂರು; ಬೆಂಗಳೂರು--ವೈಟ್‌ಫೀಲ್ಡ್; ಬೆಂಗಳೂರು ನಗರ-ಕೃಷ್ಣರಾಜಪುರ ಜೋಡಿ ರೈಲು ಮಾರ್ಗಗಳನ್ನು ಒಳಗೊಂಡಂತೆ ಸಮೀಕ್ಷೆ ಉದ್ದೇಶಕ್ಕಾಗಿ 1996–1997 ರ ಬಜೆಟ್ ಪ್ರಸ್ತಾವನೆಯಲ್ಲಿ ಸೇರ್ಪಡೆಗೊಳಿಸಿದ್ದ ಎಲ್ಲ ಹೊಸ ರೈಲು ಮಾರ್ಗಗಳ ಪ್ರಸ್ತಾವನೆಯನ್ನು 1997–98ರ ಬಜೆಟ್‌ನಲ್ಲಿ ಸೇರ್ಪಡೆಗೊಳಿಸಲಾಯಿತು.
- ರಾಮನಗರ ಮತ್ತು ಚನ್ನಪಟ್ಟಣ ವ್ಯಾಪ್ತಿಯ ರೈಲ್ವೆ ಮೇಲು ಸೇತುವೆಗಳ ಕಾಮಗಾರಿ ಶೀಘ್ರ ಪೂರ್ಣಕ್ಕೆ ಆದೇಶ. ಯಲಹಂಕ ರೈಲ್ವೆ ಕೆಳಸೇತುವೆ ಮತ್ತು ರಾಜ್ಯ ಸರ್ಕಾರದ ಮಾರ್ಗ ಬದಲಾವಣೆ ಕಾಮಗಾರಿ ಕುರಿತು ಒಪ್ಪಂದ. ರೈಲ್ವೆ ಕೆಳ ಸೇತುವೆ ಕಾಮಗಾರಿಗೆ 7 ತಿಂಗಳ ಗಡುವು.
- ಹಾಸನ ವಿಮಾನ ನಿಲ್ದಾಣ ಯೋಜನೆಗೆ ₹5 ಕೋಟಿ ಮೀಸಲು. ಮೊದಲ ಹಂತದ ಯೋಜನೆ (₹28.20 ಕೋಟಿ) ಸಿದ್ಧ. ಅನುಮತಿಗಾಗಿ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ ಪ್ರಸ್ತಾವನೆ.

ಪ್ರಜಾವಾಣಿ ಓದುತ್ತಿರುವ ದೇವೇಗೌಡರು

ಕೇಂದ್ರದ ಮಾಜಿ ಸಚಿವ ಅಜಿತ್ ಸಿಂಗ್ ಜತೆಗೆ ಎಚ್.ಡಿ.ದೇವೇಗೌಡ

ಕಾಶ್ಮೀರಕ್ಕೆ ಹೋಗಲು ಹೆದರಲಿಲ್ಲ

ಅತ್ಯಲ್ಪ ಅವಧಿಯಲ್ಲಿ ದೇವೇಗೌಡರು ಜಗತ್ತು ನೆನಪಿನಲ್ಲಿ ಇರಿಸಿಕೊಳ್ಳುವ ಹಲವು ಕಾರ್ಯಗಳನ್ನು ಮಾಡಿದ್ದಾರೆ. ಅದರಲ್ಲಿ ಮುಖ್ಯವಾದದ್ದು ಕಣಿವೆ ರಾಜ್ಯ ಕಾಶ್ಮೀರಕ್ಕೆ ಭೇಟಿ. ಇದಾವ ದೊಡ್ಡ ವಿಷಯ ಎನ್ನಬೇಡಿ. ಅದುವರೆಗೆ ಸುಮಾರು 7 ವರ್ಷಗಳ ಕಾಲ ಯಾವೊಬ್ಬ ಪ್ರಧಾನಿಯೂ ಕಾಶ್ಮೀರಕ್ಕೆ ಭೇಟಿ ನೀಡುವ ಧೈರ್ಯ ಮಾಡಿರಲಿಲ್ಲ. ಆದರೆ, ಎಚ್.ಡಿ.ದೇವೇಗೌಡರು ಅಧಿಕಾರಕ್ಕೇರಿದ ಕೆಲವೇ ದಿನಗಳಲ್ಲಿ ಕಾಶ್ಮೀರಕ್ಕೆ ಭೇಟಿ ನೀಡಿದರು. ಕಣಿವೆ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ನೆಲೆಗೊಳಿಸುವುದು ಈ ಭೇಟಿಯ ಉದ್ದೇಶವಾಗಿತ್ತು. ಭದ್ರತೆ ರಹಿತ ತೆರೆದ ವಾಹನದಲ್ಲಿ ಸಂಚರಿಸುವ ಮೂಲಕ ಅವರು ಕಾಶ್ಮೀರದ ಜನರಲ್ಲಿ ಧೈರ್ಯ ತುಂಬಿದರು. ಶಾಂತಿ ಮಾತುಕತೆಗೆ ಬರುವಂತೆ ಬಂಡುಕೋರ ಸಂಘಟನೆಗಳಿಗೆ ಕರೆ ನೀಡಿದ ಪ್ರಧಾನಿ ದೇವೇಗೌಡರು, ಶಾಂತಿ ಮಂತ್ರ ಸಾರಿದರು. ಈ ಮೂಲಕ ಕಾಶ್ಮೀರ ಮಾತ್ರವಲ್ಲದೆ ಇಡೀ ದೇಶವಾಸಿಗಳ ಮೆಚ್ಚುಗೆಗೆ ಪಾತ್ರರಾದರು. ಶಾಂತಿಯುತ ಚುನಾವಣೆಗೂ ಕಾರಣರಾದರು.

ಉದಾಂಪುರ-ಬಾರಾಮುಲ್ಲಾ ನಡುವೆ ಸುಮಾರು 290 ಕಿ.ಮೀ ಉದ್ದದ ರೈಲು ಮಾರ್ಗ ನಿರ್ಮಿಸಲು ಅನುಮತಿ ನೀಡುವ ಮೂಲಕ ಜಮ್ಮು-ಕಾಶ್ಮೀರ ಕಣಿವೆ ರಾಜ್ಯವು ಭಾರತದ ಇತರೆ ಭಾಗಗಳೊಂದಿಗೆ ಸಂಪರ್ಕ ಸಾಧಿಸಲು ಕಾರಣರಾದವರು ದೇವೇಗೌಡರು. ಹಿಂದಿನ ಸರ್ಕಾರಗಳ ನಿರ್ಲಕ್ಷ್ಯದಿಂದಾಗಿ ನನೆಗುದಿಗೆ ಬಿದ್ದಿದ್ದ ದುಲಾಸ್ತಿ ಮತ್ತು ಯುರಿ ಹೈಡ್ರೋಎಲೆಕ್ಟ್ರಿಕ್ ಯೋಜನೆಗೆ ಒಪ್ಪಿಗೆ ಕೊಟ್ಟಿದ್ದು ಕೂಡ ದೇವೇಗೌಡರೇ. ಅಲ್ಲದೆ, ಮುಂಬೈಯ ಸೀಲಿಂಕ್ ಯೋಜನೆ, ದೆಹಲಿಯ ಮೆಟ್ರೋ ಯೋಜನೆಗಳ ಅನುಷ್ಠಾನಕ್ಕೂ ಮಾಜಿ ಪ್ರಧಾನಿ ಅವರೇ ಕಾರಣ.

ಇಷ್ಟೆಲ್ಲಾ ಮಾಡಿದರೂ ಈಗಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೊರೆತಷ್ಟು ಪ್ರಚಾರ ಆಗಿನ ಮಾಧ್ಯಮಗಳಿಂದ ಅಂದಿನ ಪ್ರಧಾನಿ ಎಚ್.ಡಿ.ದೇವೇಗೌಡರಿಗೆ ದೊರೆಯಲಿಲ್ಲ. ಕಾರಣ, ಅವರೊಬ್ಬ ದಕ್ಷಿಣ ಭಾರತೀಯ ಎಂಬ ತಾರತಮ್ಯ, ತಾತ್ಸಾರದ ಭಾವನೆ. ಆದರೆ, ಮಾಧ್ಯಮಗಳು ತಮಗೆ ಪ್ರಚಾರ ನೀಡಲಿ ಎಂದು ಬಯಸುವ ಹಾಗೂ ಮಾಧ್ಯಮಗಳು ಪ್ರಚಾರ ನೀಡಲಿ ಎಂದು ಕಾದು ಕುಳಿತುಕೊಳ್ಳುವ ವ್ಯಕ್ತಿತ್ವವೂ ಎಚ್.ಡಿ.ದೇವೇಗೌಡ ಅವರದ್ದಾಗಿರಲಿಲ್ಲ.

ಕಾಂಗ್ರೆಸ್‌ನ ಆಮಿಷಗಳಿಗೆ ಬಗ್ಗದ ಜನನಾಯಕ

1978ರ ಚುನಾವಣೆ ನಂತರ ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಹಾಗೂ ಇಂದಿರಾ ಗಾಂಧಿ ಅವರ ನಡುವಿನ ದ್ವೇಷ ತಾರಕಕ್ಕೇರಿತ್ತು. ಕಾಂಗ್ರೆಸ್‌ನಿಂದ ಅರಸು ನಿರ್ಗಮನವಾದ ನಂತರ ಇಂದಿರಾ ಗಾಂಧಿ ಅವರು ಕಮಲಾಪತಿ ತ್ರಿಪಾಠಿ ಅವರ ಮೂಲಕ ದೇವೇಗೌಡರಿಗೆ ಸಂದೇಶ ರವಾನಿಸಿದ್ದರು. ಕಾಂಗ್ರೆಸ್ ಸೇರಿದರೆ ಮುಖ್ಯಮಂತ್ರಿ ಮಾಡುವುದು ಆ ಸಂದೇಶದ ಸಾರ. ಆದರೆ, ದೇವೇಗೌಡರ ಇಂದಿರಾ ಗಾಂಧಿ ಅವರ ಕೋರಿಕೆ ನಿರಾಕರಿಸಿದ್ದರು. ಇಂದಿರಾ ಅವರ ಅಂದಿನ ರಾಜಕಾರಣದ ವಿರುದ್ಧವೇ ಹೋರಾಟ ನಡೆಸಿಕೊಂಡು ಬಂದಿದ್ದ ದೇವೇಗೌಡರು, ಕೇವಲ ಮುಖ್ಯಮಂತ್ರಿ ಸ್ಥಾನಕ್ಕಾಗಿ ತಮ್ಮ ಹೋರಾಟದ ಹಿನ್ನೆಲೆಯನ್ನು ಮರೆಯುವವರಾಗಿರಲಿಲ್ಲ. ಹೀಗಾಗಿ ಇಂದಿರಾ ಅವರ ಆಮಂತ್ರಣವನ್ನು ಅವರು ತಿರಸ್ಕರಿಸಿದ್ದರು. ಅಧಿಕಾರದ ವಿಚಾರದಲ್ಲಿ ದೇವೇಗೌಡರು ನಿರ್ಮೋಹಿ ಎನ್ನಲು ಇದು ಸೂಕ್ತ ಉದಾಹರಣೆ.

ಅರಸು ಕರೆದರೂ ಕಾಂಗ್ರೆಸ್ ಸೇರದ ದೇವೇಗೌಡರು

ಅರಸು ಅವರು ದೇವೇಗೌಡರನ್ನು ಕಾಂಗ್ರೆಸ್‌ಗೆ ಸೆಳೆಯಲು ಹಲವು ಬಗೆಯ ಪ್ರಯತ್ನಗಳನ್ನು ನಡೆಸಿದ್ದರು. ಆದರೆ, ದೇವೇಗೌಡರು ಕಾಂಗ್ರೆಸ್ ಸೇರುವ ಮನವಿಗಳನ್ನು ಆಗಲೂ ಮನ್ನಿಸಿದವರಲ್ಲ. ಕಬ್ಬನ್ ಪಾರ್ಕ್‌ನಲ್ಲಿ ಕಡಲೆಕಾಯಿ ತಿನ್ನುತ್ತಾ, ಹರಟುತ್ತಾ ಮಾತಾಡುವಷ್ಟು ಸ್ನೇಹ ಭಾವ, ಆತ್ಮೀಯತೆ ಅರಸು ಮತ್ತು ಗೌಡರ ನಡುವೆ ಇತ್ತಾದರೂ ಪಕ್ಷ ಸೇರಬೇಕೆಂಬ ಕೋರಿಕೆಗಳನ್ನೂ ಮಾತ್ರ ಅವರು ನಿರಾಕರಿಸಿಕೊಂಡು ಬಂದಿದ್ದರು. ಮಂತ್ರಿ ಮಾಡುವ ಆಮಿಷಗಳಿಗೆ ಅವರು ಎಂದಿಗೂ ಜಗ್ಗಿದವರಲ್ಲ.

ಸಿರಿವಂತರ ಕಪ್ಪು ಹಣ ಹೊರಗೆಡವಿದ ಚಾಣಾಕ್ಷ ನಾಯಕ

ದೇಶದ ಕಪ್ಪು ಹಣ ಹೊರತೆಗೆಯುವ ಪ್ರಯತ್ನವಾಗಿ ಕೆಲ ವರ್ಷಗಳ ಹಿಂದೆ ಕೇಂದ್ರ ಸರ್ಕಾರ ಘೋಷಿಸಿದ ನೋಟು ರದ್ದತಿಯಂತಹ ನಿರ್ಧಾರ ದೇಶದ ನಾಗರಿಕರ ಜೀವನ, ಜೀವಕ್ಕೆ ಕುತ್ತು ತಂದಿದ್ದು ನಮಗೆ ನೆನಪಿದೆ. ಆದರೆ, ಅದರಿಂದ ಎಷ್ಟು ಕಪ್ಪು ಹಣ ಸಿಕ್ಕಿತು ಎಂಬುದರ ಬಗ್ಗೆ ನಿಖರ ಮಾಹಿತಿ ಇಲ್ಲ. ದೇವೇಗೌಡರು ಪ್ರಧಾನಿಯಾಗಿದ್ದ ವೇಳೆ ಸಾಮಾನ್ಯ ಜನರಿಗೆ ಕಿಂಚಿತ್ತು ತೊಂದರೆಯಾಗದಂತೆ ಭಾರಿ ಪ್ರಮಾಣದ ಕಪ್ಪು ಹಣ ಹೊರಗೆಡವಿದ್ದರು. ಸಿರಿವಂತರು ತೆರಿಗೆ ವಂಚಿಸಿ ಕೂಡಿಟ್ಟ ಹಣವನ್ನು ಬಹಿರಂಗವಾಗಿ ಘೋಷಿಸಿಕೊಳ್ಳುವಂತೆ ಮಾಡಿದ್ದರು. ಆಗ ₹36 ಸಾವಿರ ಕೋಟಿ ಕಪ್ಪುಹಣ ಪತ್ತೆಯಾಗಿತ್ತು. ₹10800 ಕೋಟಿ ಹಣ ಸರ್ಕಾರದ ಖಜಾನೆಗೆ ಜಮೆ ಮಾಡುವಂತೆ ಮಾಡಿದ್ದರು. ಸಿರಿವಂತರು ತಾವು ಘೋಷಿಸಿಕೊಂಡಿರುವ ಕಪ್ಪು ಹಣವನ್ನು ಉದ್ಯಮ ಸ್ಥಾಪನೆಗೆ ಬಳಸಬೇಕೆಂದು ತಿಳಿಸಿದರು. ಕಪ್ಪು ಹಣವನ್ನು ಬಂಡವಾಳ ಹೂಡಿಕೆಯತ್ತ ಆಕರ್ಷಿಸಿ ಆರ್ಥಿಕತೆಗೆ ಚೈತನ್ಯ ತುಂಬಿದರು. 25 ವರ್ಷಗಳ ಹಿಂದಿನ ₹30 ಸಾವಿರ ಕೋಟಿ ಇವತ್ತಿಗೆ ಕನಿಷ್ಠ ₹3 ಲಕ್ಷ ಕೋಟಿಗೆ ಸಮ.

ಮಾಜಿ ರಾಷ್ಟ್ರಪತಿ ಎ.ಪಿ.ಜೆ ಅಬ್ದುಲ್ ಕಲಾಂ ಜತೆಗೆ ಎಚ್.ಡಿ.ದೇವೇಗೌಡ


ಸಿದ್ದರಾಮಯ್ಯ, ದೇವೇಗೌಡ ಹಾಗೂ ಜೆಎಚ್ ಪಟೇಲ್

ಚಿಣ್ಣರೊಂದಿಗೆ ಎಚ್.ಡಿ.ದೇವೇಗೌಡ ದಂಪತಿ

ಕಪ್ಪು ಶಿಲೀಂಧ್ರ
ಹೆದರಿಕೆ ಬೇಡ, ಎಚ್ಚರಿಕೆ ಇರಲಿ

ಕೋವಿಡ್‌ನ ಆತಂಕದ ಜೊತೆಯಲ್ಲಿಯೇ 'ಬ್ಲ್ಯಾಕ್ ಫಂಗಸ್' ಕೂಡ ಜನರನ್ನು ಆತಂಕಕ್ಕೆ ತಳ್ಳಿದೆ. ಈ ಸಮಸ್ಯೆಯ ಪರಿಚಯ, ಪರಿಹಾರದ ಮಾರ್ಗಗಳ ಸಂಕ್ಷಿಪ್ತ ವಿವರಣೆ ಇಲ್ಲಿದೆ...

ಡಾ. ರಾಮಪ್ರಸಾದ್ ಕೋಣನೂರ್

ಈಗ ಎಲ್ಲರ ಗಮನ ಸೆಳೆದು, ಆತಂಕಕ್ಕೆ ಕಾರಣವಾಗಿರುವುದು ಮ್ಯುಕೋಮೈಕೋಸಿಸ್ (Mucormycosis); ಇದು ಬೂಜಿನಿಂದಾಗುವ (Fungus) ಒಂದು ಕಾಯಿಲೆ. 'ಬ್ಲ್ಯಾಕ್ ಫಂಗಸ್' (ಕಪ್ಪು ಶಿಲೀಂಧ್ರ) ಹೆಸರಿನಿಂದ ಕುಖ್ಯಾತಿಯನ್ನು ಪಡೆದಿದೆ.

ಬೂಜು/ಶಿಲೀಂಧ್ರ - ಇದು ಪದರವುಳ್ಳ ಏಕಕೋಶ ಜೀವಿ; ಬ್ಯಾಕ್ಟೀರಿಯ ಪದರರಹಿತ ಏಕಕೋಶ ಜೀವಿ. ಜಗತ್ತಿನಲ್ಲಿ ಬೇರೆ ಬೇರೆ ಜಾತಿಯ ಲಕ್ಷಾಂತರ ಶಿಲೀಂಧ್ರಗಳಿವೆ. ಶಿಲೀಂಧ್ರಗಳು ಮನುಷ್ಯನಿಗೆ ಉಪಯೋಗಕಾರಿಯಾಗಿರುವುದೇ ಹೆಚ್ಚು. ಉದಾಹರಣೆಗೆ ಬ್ರೆಡ್ ತಯಾರಿಕೆಯಲ್ಲಿ ಉಪಯೋಗಿಸುವ yeast, ಬಿಯರ್‌ನ ತಯಾರಿಕೆಯಲ್ಲಿ ಹುದುಗುವಿಕೆಗೆ ಉಪಯೋಗಿಸುವ saccharomyces, ತಿನ್ನಲು ಉಪಯೋಗಿಸುವ ಅಣಬೆ - ಹೀಗೆ ಹತ್ತು ಹಲವಾರು.

ಇತ್ತೀಚಿಗೆ ಕೋವಿಡ್‌ಗೆ ನೀಡುತ್ತಿರುವ ಚಿಕಿತ್ಸೆಯಲ್ಲಿ ಹೆಚ್ಚು ಸ್ಟೀರಾಯ್ಡ್ ಉಪಯೋಗಿಸುತ್ತಿರುವ ಕಾರಣದಿಂದಾಗಿ 'ಕಪ್ಪು ಶಿಲೀಂಧ್ರ' (ಕರಿಬೂಜು/Black Fungus) ಕಾಯಿಲೆ ಹೆಚ್ಚು ಕಾಣಿಸಿಕೊಳ್ಳುತ್ತಿದೆ. ಬೇರೆಯ ಬೂಜಿನ ಕಾಯಿಲೆಗಳಿಗೆ ಹೋಲಿಸಿದರೆ ಈ ಕಪ್ಪು ಶಿಲೀಂಧ್ರ ಅತಿ ಶೀಘ್ರದಲ್ಲಿ ದೇಹದ ಬಹುಭಾಗಗಳಿಗೆ ಹರಡುವ ಸಾಮರ್ಥ್ಯ ಹೊಂದಿದೆ; ಇದು ರಕ್ತನಾಳಗಳಿಗೆ ಹಬ್ಬುವ (Angioinvasive) ಶಕ್ತಿಯನ್ನು ಹೊಂದಿರುವುದೇ ಇದಕ್ಕೆ ಕಾರಣವಾಗಿದೆ.

ಬೇರೆಯ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಈ ಕಪ್ಪು ಶಿಲೀಂಧ್ರ ಕಾಯಿಲೆಯ ಸಾಧ್ಯತೆ ಅತಿ ಹೆಚ್ಚು. ಭಾರತದಲ್ಲಿ ಮಧುಮೇಹವನ್ನು ಸರಿಯಾಗಿ ನಿಯಂತ್ರಿಸಿಕೊಳ್ಳದಿರುವುದೇ ಇದಕ್ಕೆ ಮುಖ್ಯ ಕಾರಣ ಎನ್ನಬಹುದು. ಕೋವಿಡ್‌ಗೆ ಎಗ್ಗಿಲ್ಲದಂತೆ ಸ್ಟೀರಾಯ್ಡ್‌ಗಳನ್ನು ಉಪಯೋಗಿಸುತ್ತಿರುವುದರಿಂದ, ರೋಗಿಗಳ ರಕ್ತದಲ್ಲಿ ಗ್ಲುಕೋಸ್ ಪ್ರಮಾಣ ಹೆಚ್ಚಾಗಿ, ದೇಹದ ರೋಗನಿರೋಧಕಶಕ್ತಿ ಕುಗ್ಗಿ ಈ ಬೂಜುಕಾಯಿಲೆ ಅಮರಿಕೊಳ್ಳುತ್ತಿದೆ. ಇತರೆ ದೇಶಗಳಲ್ಲಿ ಮಧುಮೇಹವನ್ನು ಸ್ವಲ್ಪ ಮಟ್ಟಿಗಾದರೂ ನಿಯಂತ್ರಿಸುವುದರಲ್ಲಿ ಮೇಲಗೈ ಪಡೆದಿರುವುದರಿಂದ ಆ ದೇಶಗಳಲ್ಲಿ ಮಧುಮೇಹಿಗಳಿಗಿಂತ ಹೆಚ್ಚಾಗಿ ರಕ್ತದ ಕ್ಯಾನ್ಸರ್, HIV, ಅತಿಯಾದ ಕಬ್ಬಿಣದ ಅಂಶ, ಪೌಷ್ಟಿಕಾಂಶದ ಕೊರತೆ, ಅಂಗಕಸಿ (Organ transplant) ಮಾಡಿಸಿಕೊಂಡ ವ್ಯಕ್ತಿಗಳಲ್ಲಿ ಇದರ ಹರಡುವಿಕೆ ಹೆಚ್ಚು. ಒಟ್ಟಿನಲ್ಲಿ ಎಲ್ಲಿ ರೋಗನಿರೋಧಕಶಕ್ತಿ ಕಡಿಮೆಯಾಗುತ್ತದೋ ಅಲ್ಲಿ ಈ ಬೂಜು ಮೇಲುಗೈ ಸಾಧಿಸುತ್ತದೆ.

ಕಪ್ಪು ಶಿಲೀಂಧ್ರವು ನಿಸರ್ಗದಲ್ಲಿ ಎಲ್ಲ ಕಡೆ ಕಾಣಸಿಗುತ್ತದೆ; ಹೆಚ್ಚಾಗಿ ಮಣ್ಣು, ಕೊಳೆತ ಎಲೆ/ತರಕಾರಿ, ಪ್ರಾಣಿಗಳ ಮಲದಲ್ಲಿ ಇರುತ್ತದೆ. ಇದು ದೇಹವನ್ನು ನಾವು ತೆಗೆದುಕೊಳ್ಳುವ ಉಸಿರಿನ ಮೂಲಕ, ತಿನ್ನುವ ಆಹಾರದ ಮೂಲಕ ಮತ್ತು ಮೈ ಮೇಲಿನ ಗಾಯಗಳ ಮೂಲಕ ಪ್ರವೇಶಿಸಬಹುದು. ರೋಗನಿರೋಧಕಶಕ್ತಿ ಕಡಿಮೆ ಇರುವ ಮನುಷ್ಯರ ಮೈ ಹೊಕ್ಕ ಬೂಜು, ರಕ್ತನಾಳಗಳಿಗೆ ಅಂಟಿಕೊಂಡು ಆ ನಾಳಗಳಲ್ಲಿ ರಕ್ತವನ್ನು ಹೆಪ್ಪುಗಟ್ಟಿಸುತ್ತದೆ. ಅದರಿಂದ ದೇಹದ ಭಾಗಗಳಿಗೆ ಹರಿಯುವ ರಕ್ತದ ಪ್ರಮಾಣ ಕಡಿಮೆಯಾಗಿ, ಆ ಭಾಗಗಳು ಕೊಳೆಯುತ್ತಾ ಬರುತ್ತವೆ. ಕಪ್ಪು ಶಿಲೀಂಧ್ರ ಹೆಚ್ಚಾಗಿ ಕಾಣಿಸಿಕೊಳ್ಳುವ ಅಂಗಗಳೆಂದರೆ ಮೂಗಿನ ಮೇಲ್ಭಾಗ; ಅಲ್ಲಿಂದ ಮೆದುಳು, ಶ್ವಾಸಕೋಶ, ಕಣ್ಣು, ಹೊಟ್ಟೆ/ಕರುಳು, ಚರ್ಮದ ಮೇಲಿನ ಗಾಯ ಮತ್ತು ರಕ್ತದಿಂದ ಸಾಗಿ ದೇಹದ ಯಾವುದೇ ಭಾಗಕ್ಕೂ ಹರಡಬಹುದಾಗಿದೆ.

ಕಾಯಿಲೆಯ ಲಕ್ಷಣಗಳು: ಮುಖದ ಮೇಲಿನ ಸ್ಪರ್ಶದ ಅನುಭವ ಕಡಿಮೆಯಾಗುವುದು ಕರಿಬೂಜು ರೋಗದ ಮೊದಲ ಲಕ್ಷಣ. ಈ ಬೂಜು ಮಿದುಳಿಗೆ ಹರಡಿ ಅಲ್ಲಿಂದ ಹೊರಡುವ ನರಗಳನ್ನು (Cranial nerves) ಆಕ್ರಮಿಸುವುದೇ ಇದಕ್ಕೆ ಕಾರಣ. ಇತರೆ ಲಕ್ಷಣಗಳು - ಮೂಗುಕಟ್ಟುವಿಕೆ, ಮೂಗಿನಿಂದ ರಕ್ತ ಸೋರುವುದು, ಮೂಗು ಮತ್ತು ಕೆನ್ನೆಗಳ ನಡುವಿನ ಭಾಗದಲ್ಲಿ ನೋವು, ಸೀನಿದಾಗ ಸಿಂಬಳದಲ್ಲಿ ಕರಿಯ ಬಣ್ಣ ಕಾಣಿಸುಕೊಳ್ಳುವುದು, ಕಣ್ಣುರಿತ, ಕಣ್ಣು ಮುಂದಕ್ಕೆ ಬಂದಂತೆ ಕಾಣುವಿಕೆ, ಕಣ್ಣಿನ ಚಲನೆಯ ಸ್ಥಗಿತ, ಜ್ವರ, ಗೊಂದಲಕ್ಕೆ ಒಳಗಾದವನಂತೆ ಕಾಣುವುದು ಮುಂತಾದುವು.

ಮುನ್ನೆಚ್ಚರಿಕೆಗಳು

- ಸ್ಟೀರಾಯ್ಡ್‌ಗಳನ್ನು ಅನಾವಶ್ಯಕವಾಗಿ ತೆಗೆದುಕೊಳ್ಳದಿರುವುದು.
- ದಿನವೂ ಒಗೆದು ಸ್ವಚ್ಛ ಮಾಡಿದ ಮಾಸ್ಕ್‌ಗಳನ್ನೇ ಉಪಯೋಗಿಸುವುದು. ಇಲ್ಲವಾದಲ್ಲಿ ನಮ್ಮ ಉಸಿರಿನ ತೇವಾಂಶದಿಂದ ಮಾಸ್ಕ್‌ನಲ್ಲಿ ಶಿಲೀಂಧ್ರ ಬೆಳೆದು ಉಸಿರಿನ ಮೂಲಕ ಮೂಗು, ಶ್ವಾಸಕೋಶಗಳಿಗೆ ಸುಲಭವಾಗಿ ರವಾನೆಯಾಗುತ್ತದೆ.
- ಮನೆಯಲ್ಲಿ ಹವಾನಿಯಂತ್ರಣ ಉಪಯೋಗಿಸುತ್ತಿದ್ದರೆ, ಅದು ಕೂಡ ತೇವಾಂಶವನ್ನು ಹೆಚ್ಚು ಮಾಡುವುದರಿಂದ ಶಿಲೀಂಧ್ರ ಬೆಳೆಯಲು ಸಹಕಾರಿಯಾಗುತ್ತದೆ.
- ಬಿಸಿನೀರಿನ ಹಬೆಯನ್ನು ಹೆಚ್ಚಾಗಿ ತೆಗೆದುಕೊಳ್ಳುತ್ತಿದ್ದರೆ ಅದು ಮೂಗಿನ ಒಳಪದರವನ್ನು ಹಾಳು ಮಾಡಿ, ಶಿಲೀಂಧ್ರ ನಮ್ಮ ದೇಹ ಸೇರಲು ಆಸ್ಪದವಾಗುತ್ತದೆ.

ಪರೀಕ್ಷೆ ಹೇಗೆ?

ಮೂಗಿನ ಒಳಭಾಗದಲ್ಲಿ ಕರಿಯ ಬಣ್ಣ ಕಾಣುವುದು ಈ ಕಾಯಿಲೆಯ ಮೊದಲ ಲಕ್ಷಣ ಎನ್ನಬಹುದು. ಸೂಕ್ಷ್ಮದರ್ಶಕದ ಮೂಲಕ ಈ ಬೂಜನ್ನು ಗುರುತಿಸಬಹುದು. ಈ ಬೂಜನ್ನು 'ಕಲ್ಚರ್ ಪ್ಲೇಟ್'ನಲ್ಲಿ ಬೆಳೆಸಿ ಅದರ ಒಳಜಾತಿಯನ್ನು ಕಂಡುಹಿಡಿಯಬಹುದು. CT/MRI ಪರೀಕ್ಷೆಗಳಿಂದ ತಲೆಯ ಮತ್ತು ದೇಹದ ಎಷ್ಟು ಭಾಗ ಬೂಜುರೋಗಕ್ಕೆ ತುತ್ತಾಗಿದೆ ಎಂದು ಅಂದಾಜಿಸಬಹುದು.

ಲಭ್ಯವಿರುವ ಚಿಕಿತ್ಸೆ

ಕಪ್ಪು ಶಿಲೀಂಧ್ರಕ್ಕೆ ಚಿಕಿತ್ಸೆ ದುಬಾರಿ. ಕೊಳೆತ ಶರೀರದ ಭಾಗವನ್ನು ಶಸ್ತ್ರಚಿಕಿತ್ಸೆಯ ಮೂಲಕವೇ ತೆಗೆಯಬೇಕಾಗುತ್ತದೆ. ಉಳಿದ ಭಾಗಗಳಲ್ಲಿರುವ ಬೂಜಿಗೆ 'Liposomal Amphotericin B' ಎಂಬ ಔಷಧಿಯನ್ನು ರಕ್ತನಾಳಗಳ ಮೂಲಕ ಕೊಡಬೇಕಾಗುತ್ತದೆ. ಭಾರತದಲ್ಲಿ 'Posaconazole' ಎಂಬ ಮತ್ತೊಂದು ಔಷಧಿಯ ಲಭ್ಯವಿದೆ. ಇವು ದುಬಾರಿ, ಮತ್ತು ಕೆಲವೊಮ್ಮೆ ತಿಂಗಳುಗಟ್ಟಲೆ ಔಷಧಿಯನ್ನು ತೆಗೆದುಕೊಳ್ಳಬೇಕಾಗುತ್ತದೆ.

(ಲೇಖಕರು: ವೈದ್ಯ)

ಮನಸ್ಸು
ಪ್ರಶಾಂತವಾಗಲು ಹೀಗೆ ಮಾಡಿ...

ಡಾ. ವಿನಯ ಶ್ರೀನಿವಾಸ್

ಕೊರೊನಾ ಎಲ್ಲರ ಮನಸ್ಸನ್ನು ಕದಡಿದೆ. ಎಲ್ಲರ ಮನಸ್ಸಿನಲ್ಲಿಯೂ ಒಂದಲ್ಲ ಒಂದು ಬಗೆಯ ತಳಮಳ. ಮನಸ್ಸಿನ ವ್ಯಾಕುಲತೆ ವ್ಯಕ್ತಿಯನ್ನು ಶಾರೀರಿಕವಾಗಿಯೂ ಬಾಧಿಸಬಹುದು. ಹೆಚ್ಚಾಗುವ ಎದೆಬಡಿತ, ವೇಗವಾಗುವ ಉಸಿರಾಟ, ಬೆವರುವಿಕೆ ಮೊದಲಾದವು ಆತಂಕಗೊಂಡ ಮನಸ್ಸಿನ ಶಾರೀರಿಕ ಸೂಚನೆಗಳು. ಇದು ಮುಂದುವರೆದಾಗ ವ್ಯಕ್ತಿಯ ಕಾರ್ಯಕ್ಷಮತೆಯೂ ಕ್ಷೀಣಿಸುತ್ತದೆ. ಶಿಸ್ತುಬದ್ಧ ಜೀವನವನ್ನು ರೂಢಿಸಿಕೊಂಡು, ಜೊತೆಯಲ್ಲಿ ದಿನವೂ ಸುಮಾರು ಇಪ್ಪತ್ತು ನಿಮಿಷಗಳ ಕಾಲ ಮಾಡಬಹುದಾದ ಸರಳ ವ್ಯಾಯಾಮವೊಂದು ಮನಸ್ಸನ್ನು ಸ್ಥಿಮಿತದಲ್ಲಿಡಲು ಸಾಕಷ್ಟು ಪರಿಣಾಮಕಾರಿಯಾಗಿದೆ.

ಯಾವ ವ್ಯಾಯಾಮ?

ಉಸಿರಾಟ ಪ್ರಕ್ರಿಯೆಯೊಂದಿಗೆ ಹಂತ ಹಂತವಾಗಿ ಶರೀರದ ಎಲ್ಲಾ ಗುಂಪಿನ ಮಾಂಸಖಂಡಗಳ ಸಡಿಲಿಸುವಿಕೆಯೆ ಆ ವ್ಯಾಯಾಮ. ಈ ವ್ಯಾಯಾಮದಲ್ಲಿ ಮುಖ್ಯವಾಗಿ ಎರಡು ಹಂತಗಳಿವೆ. ಮೊದಲನೆಯ ಹಂತದಲ್ಲಿ ಉಸಿರನ್ನು ಒಳಗೆ ಎಳೆದುಕೊಳ್ಳುತ್ತಾ ಒಂದು ನಿರ್ದಿಷ್ಟ ಗುಂಪಿನ ಮಾಂಸಖಂಡಗಳನ್ನು ಬಿಗುಗೊಳಿಸಿ, ಆ ಸ್ಥಿತಿಯಲ್ಲಿ ಸುಮಾರು ಹತ್ತು ಸೆಕೆಂಡ್‌ಗಳ ಕಾಲ ಇರಬೇಕು. ಎರಡನೆಯ ಹಂತದಲ್ಲಿ ಉಸಿರನ್ನು ಹೊರಗೆ ಬಿಡುತ್ತಾ ಅದೇ ಗುಂಪಿನ ಮಾಂಸಖಂಡಗಳನ್ನು ನಿಧಾನವಾಗಿ ಸಡಿಲಿಸಿ, ಆ ಸ್ಥಿತಿಯಲ್ಲಿ ಸುಮಾರು ಹದಿನೈದು ಸೆಕೆಂಡ್‌ಗಳ ಕಾಲ ವಿರಮಿಸಬೇಕು. ಕೈ, ಕಾಲು, ಹೊಟ್ಟೆ, ಎದೆ, ಭುಜ, ಹಣೆ, ಬಾಯಿ ಹಾಗೂ ಮುಖದ ಮಾಂಸಖಂಡಗಳನ್ನು ಒಂದಾದ ನಂತರ ಮತ್ತೊಂದರಂತೆ, ಹಂತ ಹಂತವಾಗಿ ಉಸಿರಾಟ ಪ್ರಕ್ರಿಯೆಯೊಂದಿಗೆ ಮೊದಲು ಬಿಗುಗೊಳಿಸಿ ನಂತರ ಸಡಿಲಗೊಳಿಸುತ್ತಾ ಹೋಗಬೇಕು. ಕೊನೆಯಲ್ಲಿ ಇಡೀ ದೇಹವನ್ನು ಸಡಿಲಗೊಳಿಸಿ ವಿಶ್ರಾಂತ ಸ್ಥಿತಿಯಲ್ಲಿ ಹತ್ತರಿಂದ ಹದಿನೈದು ನಿಮಿಷಗಳ ಕಾಲ ವಿರಮಿಸಬೇಕು.

ಮಾಡುವುದು ಹೇಗೆ?

ಈ ವ್ಯಾಯಾಮವನ್ನು ಆರಾಮವಾಗಿ ಸಮತಟ್ಟಾದ ಹಾಸಿಗೆಯ ಮೇಲೆ ಮಲಗಿ, ತಲೆಯ ಅಥವಾ ಕಾಲಿನ ಭಾಗದಿಂದ ಆರಂಭಿಸಬೇಕು.

ವಿವಿಧ ಮಾಂಸಖಂಡಗಳ ಬಿಗಿಗೊಳಿಸುವಿಕೆ ಮತ್ತು ಸಡಿಲಗೊಳಿಸುವುದನ್ನು ಹೀಗೆ ಮಾಡಬಹುದು:

ಪಾದ: ಪಾದದ ಬೆರಳುಗಳನ್ನು ಕೆಳಮುಖವಾಗಿ ಬಗ್ಗಿಸಿ ಮತ್ತು ನಿಧಾನವಾಗಿ ಮೇಲ್ಮುಖವಾಗಿ ಚಲಿಸಿ.
ಕಾಲುಗಳು ಮತ್ತು ಪಾದ: ಕಾಲ್ಬೆರಳುಗಳನ್ನು ನಿಮ್ಮೆಡೆಗೆ ಎಳೆದುಕೊಳ್ಳಿ ಮತ್ತು ವಿರುದ್ಧ ದಿಕ್ಕಿನಲ್ಲಿ ಸಡಿಲಿಸಿ.
ಕಾಲು: ತೊಡೆಯ ಮಾಂಸಖಂಡಗಳನ್ನು ಹಿಂಡಿದಂತೆ ಗಟ್ಟಿಗೊಳಿಸಿ ಮತ್ತು ಸಡಿಲಿಸಿ.
ಅಂಗೈ: ಗಟ್ಟಿಯಾಗಿ ಮುಷ್ಟಿಯನ್ನು ಕಟ್ಟಿ ಮತ್ತು ಬಿಡಿ.
ಮುಂಗೈ: ಮಡಿಸಿ ಭುಜದತ್ತ ಎಳೆದುಕೊಳ್ಳಿ ಮತ್ತು ನೇರವಾಗಿಸಿ.
ಈ ಪ್ರಕ್ರಿಯೆಯನ್ನು ಎರಡೂ ಕಾಲುಗಳಿಗೂ ಮತ್ತು ಎರಡೂ ಕೈಗಳಿಗೂ ಪ್ರತ್ಯೇಕವಾಗಿ ಮಾಡಿ.
ನಿತಂಬಗಳು: ಎರಡೂ ಪೃಷ್ಠಗಳನ್ನು ಬಿಗಿಗೊಳಿಸಿ ಮತ್ತು ಸಡಿಲಿಸಿ.
ಹೊಟ್ಟೆಯ ಭಾಗ: ಹೊಟ್ಟೆಯನ್ನು ಒಳಕ್ಕೆ ಎಳೆದುಕೊಳ್ಳಿ ಮತ್ತು ಹೊರಕ್ಕೆ ಬಿಡುತ್ತಾ ಉಬ್ಬಿಸಿ.
ಬೆನ್ನು: ಮೊದಲು ಬೆನ್ನಿನ ಮೇಲ್ಭಾಗವನ್ನು ಮೇಲಕ್ಕೆತ್ತಿ ಬಾಗಿಸಿ ನಂತರ ಬೆನ್ನಿನ ಕೆಳಭಾಗವನ್ನು ಮೇಲಕ್ಕೆತ್ತಿ ಬಾಗಿಸಿ ಮತ್ತು ಸಡಿಲಿಸಿ.
ಎದೆಯ ಭಾಗ: ಒಳಕ್ಕೆ ಎಳೆದುಕೊಳ್ಳಿ ಮತ್ತು ಹೊರಕ್ಕೆ ಬಿಡಿ.
ಕುತ್ತಿಗೆ ಮತ್ತು ಭುಜಗಳು: ಭುಜಗಳನ್ನು ಹಿಂದಕ್ಕೆ ಬಾಗಿಸುತ್ತಾ ನಿಮ್ಮ ಕಿವಿಗಳತ್ತ ಎಳೆದುಕೊಳ್ಳಿ ಮತ್ತು ಸಡಿಲಗೊಳಿಸಿ.
ಬಾಯಿ: ಬಾಯಿಯನ್ನು ದೊಡ್ಡದಾಗಿ ತೆರೆಯಿರಿ ಮತ್ತು ಮುಚ್ಚಿರಿ ನಾಲಿಗೆಯನ್ನು ಬಾಯಿಯ ಮೇಲ್ಭಾಗಕ್ಕೆ ಚಪ್ಪಟೆಯಾಗಿ ಒತ್ತಿ, ನಂತರ ಕೆಳಗೆ ಬಿಡಿ. ಹಲ್ಲುಗಳನ್ನು ಬಿಗಿಯಾಗಿ ಕಚ್ಚಿ ಹಿಡಿಯಿರಿ, ನಂತರ ಸಡಿಲಿಸಿ.
ಹಣೆ: ಹುಬ್ಬುಗಳನ್ನು ಮೇಲಕ್ಕೇರಿಸಿ ಮತ್ತು ಕೆಳಕ್ಕೆ ಇಳಿಸಿ.
ಕಣ್ಣು: ರೆಪ್ಪೆಗಳನ್ನು ಗಟ್ಟಿಯಾಗಿ ಮುಚ್ಚಿರಿ ಮತ್ತು ತೆರೆಯಿರಿ

ಮೇಲಿನ ಎಲ್ಲ ಗುಂಪಿನ ಮಾಂಸಖಂಡಗಳನ್ನು ಬಿಗಿಗೊಳಿಸುವಾಗ ಉಸಿರನ್ನು ಒಳಗೆ ತೆಗೆದುಕೊಳ್ಳುವುದು ಹಾಗೂ ಸಡಿಲಗೊಳಿಸುವಾಗ ಉಸಿರನ್ನು ಹೊರಗೆ ಬಿಡುವುದು ಬಹಳ ಮುಖ್ಯ. ದೇಹದ ಎಲ್ಲ ಗುಂಪಿನ ಮಾಂಸಖಂಡಗಳನ್ನು ಹಂತ ಹಂತವಾಗಿ ಗಮನದಲ್ಲಿರಿಸಿಕೊಂಡು ಬಿಗಿ-ಸಡಿಲಗೊಳಿಸುತ್ತಾ ಸಾಗಬೇಕು. ಶುರುವಿನಲ್ಲಿ ಕೇವಲ ಒಂದೇ ಗುಂಪಿನ ಮಾಂಸಖಂಡಗಳನ್ನು ಅಭ್ಯಾಸದಲ್ಲಿ ತೊಡಗಿಸುವುದು ಕಷ್ಟಕರವೆನಿಸಿದರೂ ಬರುಬರುತ್ತಾ ಸುಲಭವೆನಿಸುತ್ತದೆ. ಇಷ್ಟೊಂದು ದೀರ್ಘವಾಗಿ ಮಾಡಲು ಸಮಯದ ಅಭಾವವೆನಿಸಿದರೆ ಪ್ರಮುಖ ಗುಂಪಿನ ಮಾಂಸಖಂಡಗಳನ್ನು ಅಂದರೆ ಕಾಲುಗಳು, ಹೊಟ್ಟೆ ಮತ್ತು ಎದೆ, ಕೈಗಳು, ಕುತ್ತಿಗೆ ಮತ್ತು ಭುಜ ಹಾಗೂ ಮುಖವನ್ನು ಮಾತ್ರವೇ ಅಭ್ಯಾಸದಲ್ಲಿ ತೊಡಗಿಸಿಕೊಳ್ಳಬಹುದು.

ಪ್ರಯೋಜನಗಳು

- ದೈಹಿಕ ನೋವನ್ನು ಮತ್ತು ಆಯಾಸವನ್ನು ಕಡಿಮೆಗೊಳಿಸಲು
- ಮಾಂಸಖಂಡಗಳ ಪೆಡಸುತನವನ್ನು ಕಡಿಮೆ ಮಾಡಲು
- ಮನಸ್ಸಿನ ಕಿರಿಕಿರಿ, ಆತಂಕ ಮತ್ತು ಒತ್ತಡವನ್ನು ಕಡಿಮೆ ಮಾಡಲು
- ಗುಣಮಟ್ಟದ ನಿದ್ದೆಗಾಗಿ
- ಕಾರ್ಯಕ್ಷಮತೆ ಮತ್ತು ನಿರ್ಣಯಗಳನ್ನು ಮಾಡುವ ಸಾಮರ್ಥ್ಯವನ್ನು ಹೆಚ್ಚಿಸಲು
- ಶರೀರದ ಜಡ್ಡುತನವನ್ನು ನಿವಾರಿಸಲು

ನೆನಪಿಡಿ, ಮನಸ್ಸಿನ ಅತಿಯಾದ ತುಮುಲ ಮಾನಸಿಕ ಅನಾರೋಗ್ಯದ ಲಕ್ಷಣವೂ ಇರಬಹುದು. ಈ ಸರಳ ವ್ಯಾಯಾಮದಿಂದ ನಿಯಂತ್ರಣಕ್ಕೆ ಬರದಿದ್ದಲ್ಲಿ ಮನೋವೈದ್ಯರನ್ನು ಕಾಣುವುದು ಸೂಕ್ತ.

(ಲೇಖಕಿ: ವೈದ್ಯೆ)

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಶಂಕುವಿನ ಭಿನ್ನಕ

ಎಸ್ಸೆಸ್ಸೆಲ್ಸಿ

ಗಣಿತ

ಈ ಭಿನ್ನಕದಲ್ಲಿ ಬೇರೆ ಬೇರೆ ತ್ರಿಜ್ಯಗಳನ್ನು ಹೊಂದಿರುವ ಎರಡು ವೃತ್ತಾಕಾರದ ಪಾದಗಳನ್ನು ಕಾಣುತ್ತೀರಿ. ಒಂದು ಶಂಕುವನ್ನು ತೆಗೆದುಕೊಂಡು ಅದರ ಪಾದಕ್ಕೆ ಸಮಾನಾಂತರವಾಗಿರುವ ಒಂದು ಸಮತಲದ ಮೂಲಕ ಕತ್ತರಿಸಿದಾಗ ಮತ್ತು ಸಮತಲದ ಒಂದು ಕಡೆಯಲ್ಲಿ ಉಂಟಾದ ಶಂಕುವನ್ನು ಬೇರ್ಪಡಿಸಿ, ಸಮತಲದ ಮತ್ತೊಂದು ಕಡೆಯಲ್ಲಿ ಉಳಿಯುವ ಘನವನ್ನು ಶಂಕುವಿನ ಭಿನ್ನಕ ಎಂದು ಕರೆಯುತ್ತೇವೆ.



ಶಂಕುವಿನ ಭಿನ್ನಕದ ಎತ್ತರ h ಓರೆ ಎತ್ತರ l ಮತ್ತು ಅದರ ಎರಡು ವೃತ್ತ ಪಾದಗಳ ತ್ರಿಜ್ಯಗಳು r1 ಮತ್ತು r1r2(r1 > r2) ಎಂದು ಆಗಿರಲಿ. ನಂತರದಲ್ಲಿ ನಾವು ನೇರವಾದ ಶಂಕುವಿನ ಭಿನ್ನಕದ ಘನಫಲ, ಪಾರ್ಶ್ವ ಮೇಲ್ಮೈ ವಿಸ್ತೀರ್ಣ ಮತ್ತು ಪೂರ್ಣ ಮೇಲ್ಮೈ ವಿಸ್ತೀರ್ಣವನ್ನು ಈ ಕೆಳಗಿನ ಸೂತ್ರಗಳನ್ನು ಉಪಯೋಗಿಸಿ ಕಂಡುಹಿಡಿಯುತ್ತೇವೆ.

1) ಶಂಕುವಿನ ಬಿನ್ನಕದ ಘನಫಲ

$$=\frac{1}{3}\pi h\,(r_1^2+r_2^2+r_1r_2)$$

2) ಶಂಕುವಿನ ಭಿನ್ನಕದ ಪಾರ್ಶ್ವ ಮೇಲ್ಮೈ ವಿಸ್ತೀರ್ಣ =

$$=\pi(r_1+r_2)l \quad \text{ಇಲ್ಲಿ} \quad L=\sqrt{h^2+(r_1-r_2)^2}$$

3) ಶಂಕುವಿನ ಭಿನ್ನಕದ ಪೂರ್ಣ ಮೇಲ್ಮೈ ವಿಸ್ತೀರ್ಣ =

$$\pi l\,(r_1+r_2)+\pi r_1^2+ r_2^2 \quad \text{ಇಲ್ಲಿ} \quad L=\sqrt{h^2+(r_1-r_2)^2}$$

ಉದಾಹರಣೆ 14: ಶಂಕುವಿನ ಭಿನ್ನಕದ ರೂಪದಲ್ಲಿರುವ ಒಂದು ತೆರೆದ ಲೋಹದ ಬಕೆಟ್ ಇದೆ, ಇದೇ ಲೋಹದ ಹಾಳೆಯಿಂದ ಮಾಡಿದ ಟೊಳ್ಳಾದ ಸಿಲಿಂಡರ್ ಆಕಾರದ ಒಂದು ವೃತ್ತ ಪಾದದ ಮೇಲೆ ಬಕೆಟ್ ಅನ್ನು ಕೂಡಿಸಿದೆ. ಅದರ ಎರಡು ವೃತ್ತಾಕಾರದ ಪಾದದ ವ್ಯಾಸವು 45 ಸೆಂ.ಮೀ ಮತ್ತು 25 ಸೆಂ.ಮೀ, ಬಕೆಟ್‌ನ ಒಟ್ಟು ನೇರ ಎತ್ತರವು 40 ಸೆಂ.ಮೀ ಮತ್ತು ಸಿಲಿಂಡರ್ ಆಕಾರದ ಪಾದದ ಎತ್ತರವು 6 ಸೆಂ.ಮೀ ಆಗಿದೆ. ಈ ಬಕೆಟ್ ಅನ್ನು ಮಾಡಲು ಉಪಯೋಗಿಸಿದ ಲೋಹದ ಹಾಳೆಯ ವಿಸ್ತೀರ್ಣವನ್ನು ಕಂಡುಹಿಡಿಯಿರಿ. ಇಲ್ಲಿ ನಾವು ಬಕೆಟ್‌ನ ಹಿಡಿಕೆಯನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಹಾಗೆಯೇ ಬಕೆಟ್‌ನಲ್ಲಿ ಹಿಡಿಯಬಹುದಾದ ಒಟ್ಟು ನೀರಿನ ಘನಫಲವನ್ನು ಕಂಡುಹಿಡಿಯಿರಿ. ($\pi = \frac{22}{7}$ ಎಂದು ಬಳಸಿ).



ಚಿತ್ರ 15.23

ಪರಿಹಾರ: ಬಕೆಟ್‌ನ ಒಟ್ಟು ಎತ್ತರ = 40 ಸೆಂ.ಮೀ, ಇದರಲ್ಲಿ ಪಾದದ ಎತ್ತರವು ಸಹ ಸೇರಿದೆ. ಆದ್ದರಿಂದ ಶಂಕುವಿನ ಭಿನ್ನಕದ ಎತ್ತರ = h = (40-6)cm = 34cm

ಆದ್ದರಿಂದ ಶಂಕುವಿನ ಭಿನ್ನಕದ ಓರೆ ಎತ್ತರ =

$$L=\sqrt{h^2+(r_1-r_2)^2}$$

ಇಲ್ಲಿ r1 = 22.5cm, r2 = 12.5cm ಮತ್ತು h = 34

$$l=\sqrt{34^2+(22.5-12.5)^2}\ cm$$

$$=\sqrt{34^2+10^2}=35.44cm$$

ಬಳಸಿದ ಲೋಹದ ಹಾಳೆಯ ವಿಸ್ತೀರ್ಣ = ಶಂಕುವಿನ ಭಿನ್ನಕದ ಪಾರ್ಶ್ವ ಮೇಲ್ಮೈ ವಿಸ್ತೀರ್ಣ + ವೃತ್ತಕಾರದ ಪಾದದ ವಿಸ್ತೀರ್ಣ + ಸಿಲಿಂಡರ್‌ನ ಪಾರ್ಶ್ವ ಮೇಲ್ಮೈ ವಿಸ್ತೀರ್ಣ

$$=[\pi\times 35.44(22.5+12.5)+\pi\times(12.5)^2+2\pi\times 12.5\times 6]cm^2$$

$$=\frac{22}{7}(1240.4+156.25+150)cm^2$$

$$=4860.9\ cm^2$$

ಈಗ ಬಕೆಟ್‌ನಲ್ಲಿ ಹಿಡಿಯಬಹುದಾದ ನೀರಿನ ಘನಫಲ (ಇದನ್ನು ಬಕೆಟ್‌ನ ಸಾಮರ್ಥ್ಯ ಎಂದು ಕರೆಯುತ್ತೇವೆ)

$$\frac{\pi\times h}{3}\times(r_1^2+r_2^2+r_1r_2)$$

$$=\frac{22}{7}\times\frac{34}{3}\times[(22.5)^2+(12.5)^2+22.5\times 12.5]cm^3$$

$$=\frac{22}{7}\times\frac{34}{3}\times 943.75=33615.48\ cm^3$$

= 33.62 ಲೀಟರ್‌ಗಳು (ಸರಿ ಸುಮಾರಾಗಿ)

ಉದಾಹರಣೆ 1: ರಶೀದ್ ತನ್ನ ಹುಟ್ಟುಹಬ್ಬದ ಉಡುಗೊರೆಯಾಗಿ ಒಂದು ಬುಗುರಿಯನ್ನು ಪಡೆದನು. ಬುಗುರಿಯ ಹೊರ ಮೇಲ್ಮೈಗೆ ಬಣ್ಣ ಇರಲಿಲ್ಲ. ಅವನ ಬಳಿ ಇರುವ ಬಣ್ಣದ ಕಡ್ಡಿಗಳಿಂದ ಬಣ್ಣ ಬಳಿಯಲು ಬಯಸಿದ್ದಾನೆ. ಬುಗುರಿಯ ಶಂಕುವಿನ ಪಾದದ ಮೇಲೆ ಅರ್ಧಗೋಳವನ್ನು ಇರಿಸಿದ ಹಾಗೆ ಕಾಣಿಸುತ್ತದೆ. ಬುಗುರಿಯ ಸಂಪೂರ್ಣ ಎತ್ತರವು 5 ಸೆಂ.ಮೀ ಮತ್ತು ವ್ಯಾಸವು 3.5 ಸೆಂ.ಮೀ ಇದ್ದರೆ, ಅವನು ಬಣ್ಣ ಹಚ್ಚಬೇಕಾದ ಮೇಲ್ಮೈ ವಿಸ್ತೀರ್ಣವನ್ನು ಕಂಡು ಹಿಡಿಯಿರಿ. ($\pi = \frac{22}{7}$ ಎಂದು ತೆಗೆದುಕೊಳ್ಳಿ)



ಚಿತ್ರ 15.6

ಪರಿಹಾರ: ಚಿತ್ರ 15.5 ರಲ್ಲಿ ಇರುವಂತೆ ಈ ಬುಗುರಿಯೂ ಎರಡು ಭಾಗಗಳನ್ನು ಒಳಗೊಂಡಿದೆ. ಹೀಗಾಗಿ ನಾವು ಅಲ್ಲಿ ಪಡೆದ ಫಲಿತಾಂಶವನ್ನು ಇಲ್ಲಿಯೂ ಸಹ ಬಳಸೋಣ.

ಆಟಿಕೆಯ ಮೇಲ್ಮೈ ವಿಸ್ತೀರ್ಣ = ಅರ್ಧಗೋಳದ ಪಾರ್ಶ್ವ ಮೇಲ್ಮೈ ವಿಸ್ತೀರ್ಣ + ಶಂಕುವಿನ ಮೇಲ್ಮೈ ವಿಸ್ತೀರ್ಣ

ಈಗ ಅರ್ಧಗೋಳದ ಪಾರ್ಶ್ವ ಮೇಲ್ಮೈ ವಿಸ್ತೀರ್ಣ =

ಹಾಗೆಯೇ ಶಂಕುವಿನ ಎತ್ತರ = ಬುಗುರಿಯ ಎತ್ತರ-

$$=\frac{22}{7}\ (4\pi r^2)=2\pi r^2$$

$$-\left(2\times\frac{22}{7}\times\frac{3.5}{2}\times\frac{3.5}{2}\right)cm^2$$

ಅರ್ಧಗೋಳದ ಎತ್ತರ (ತ್ರಿಜ್ಯ)

ಹೀಗೆ, ಶಂಕುವಿನ ಓರೆ ಎತ್ತರ

$$=\left(5-\frac{3.5}{2}\right)=3.25\ cm$$

= 3.7cm ಸರಿ ಸುಮಾರು

$$(l)=\sqrt{r^2+h^2}=\sqrt{\left[\frac{3.5}{2}\right]^2+(3.25)^2}=3.7\ cm$$

ಆದ್ದರಿಂದ ಶಂಕುವಿನ ಪಾರ್ಶ್ವ ಮೇಲ್ಮೈ ವಿಸ್ತೀರ್ಣ ಇದರಿಂದ ಪಡೆಯುವುದೇನೆಂದರೆ

$$=\pi rl=\left(\frac{22}{7}\times\frac{3.5}{2}\times 3.7\right)cm^2$$

ಬುಗುರಿಯ ಮೇಲ್ಮೈ ವಿಸ್ತೀರ್ಣ

$$=\left(2\times\frac{22}{7}\times\frac{3.5}{2}\times 3.7\right)cm^2+\left(\frac{22}{7}\times\right)=$$

$$\sqrt{\left[\frac{3.5}{2}\right]^2+(3.25)^2}=3.7\ cm$$

$$=\frac{22}{7}\times\frac{3.5}{2}(3.5+3.7)cm^2+\frac{11}{7}(3.5+3.7)cm^2$$

= 39.6cm2

ಬಿಂದು ನ್ಯೂನತೆಗಳು ಮತ್ತು ಅದರ ವಿಧಗಳು

ದ್ವಿತೀಯ ಪಿಯುಸಿ

ರಸಾಯನ ಶಾಸ್ತ್ರ

ಬಿಂದು ನ್ಯೂನತೆಗಳನ್ನು ಮೂರು ವಿಧಗಳಾಗಿ ವಿಂಗಡಿಸಬಹುದು.
1) ರಸಗಣಿತ ನ್ಯೂನತೆಗಳು
2) ಅಶುದ್ಧ ನ್ಯೂನತೆಗಳು
3) ರಸಗಣಿತವಲ್ಲದ ನ್ಯೂನತೆಗಳು

1) ರಸಗಣಿತ ನ್ಯೂನತೆಗಳು

ಇವು ಘನದ ರಸಗಣಿತವನ್ನು ತೊಂದರೆ ಮಾಡದ ಬಿಂದು ನ್ಯೂನತೆಯ ಒಂದು ವಿಧವಾಗಿದೆ. ಅವುಗಳು ಆಂತರಿಕ ಅಥವಾ ಉಷ್ಣಬಲ ನ್ಯೂನತೆಗಳೆಂದು ಕರೆಯಲ್ಪಡುತ್ತವೆ. ಮೂಲಭೂತವಾಗಿ ಅವುಗಳು ಎರಡು ವಿಧಗಳು. ಖಾಲಿ ನ್ಯೂನತೆಗಳು ಮತ್ತು ತೆರಪಿನ ನ್ಯೂನತೆಗಳು.

ಎ) ಖಾಲಿ ನ್ಯೂನತೆ

ಕೆಲವು ಜಾಲರಿ ತಾಣಗಳು ಖಾಲಿಯಾಗಿರುವಾಗ ಸ್ಫಟಿಕವು ಖಾಲಿ ನ್ಯೂನತೆಯನ್ನು ಹೊಂದಿರುವುದಾಗಿ ಹೇಳಲಾಗಿದೆ. ಇದು ವಸ್ತುವಿನ ಸಾಂದ್ರತೆಯನ್ನು ಕಡಿಮೆಯಾಗಿಸುತ್ತದೆ. ವಸ್ತುವನ್ನು ಬಿಸಿ ಮಾಡುವಾಗ ಕೂಡ ಈ ನ್ಯೂನತೆ ವೃದ್ಧಿಯಾಗಬಹುದು.

ಬಿ) ತೆರಪಿನ ನ್ಯೂನತೆ

ಕೆಲವು ಘಟಕ ಕಣಗಳು (ಪರಮಾಣುಗಳು ಅಥವಾ ಅಣುಗಳು) ಒಂದು ತೆರಪಿನ ಜಾಗವನ್ನು ಆಕ್ರಮಿಸಿದಾಗ ಸ್ಫಟಿಕದಲ್ಲಿ ತೆರಪಿನ ನ್ಯೂನತೆ ಉಂಟಾಗುತ್ತದೆ. ಈ ನ್ಯೂನತೆಯು ವಸ್ತುವಿನ ಸಾಂದ್ರತೆಯನ್ನು ಹೆಚ್ಚಿಸುತ್ತದೆ.

ಚಿತ್ರ 1.24 ತೆರಪಿನ ನ್ಯೂನತೆ

ಅಯಾನಿಕ್ ಘನ ವಸ್ತುಗಳು ಯಾವಾಗಲೂ ವಿದ್ಯುತ್ ತಟಸ್ಥವಾಗಿರುತ್ತದೆ. ಸರಳ ಖಾಲಿ ಅಥವಾ ತೆರಪಿನ ನ್ಯೂನತೆಗಿಂತ ಹೆಚ್ಚಾಗಿ ಅವು ಫ್ರೆಂಕಲ್ ಮತ್ತು ಸ್ಕಾಟ್ಕಿ ನ್ಯೂನತೆಗಳನ್ನು ತೋರಿಸುತ್ತವೆ.

ಸಿ) ಫ್ರೆಂಕಲ್ ನ್ಯೂನತೆ

ಈ ನ್ಯೂನತೆಯನ್ನು ಅಯಾನಿಕ್ ಘನವಸ್ತುಗಳು ತೋರಿಸುತ್ತವೆ. ಚಿಕ್ಕದಾದ ಅಯಾನ್ (ಸಾಮಾನ್ಯವಾಗಿ ಧನ ಅಯಾನ್) ಅದರ ಸಾಮಾನ್ಯ ಸ್ಥಳದಿಂದ ಒಂದು ತೆರಪಿನ ಜಾಗಕ್ಕೆ ಸ್ಥಳಾಂತರಿಸಲ್ಪಟ್ಟಿದೆ. ಇದು ಅದರ ಹೊಸ ಸ್ಥಳದಲ್ಲಿ ಒಂದು ತೆರಪಿನ ನ್ಯೂನತೆಯನ್ನು ಸೃಷ್ಟಿಸುತ್ತದೆ. ಇದು ಅದರ ಮೂಲಸ್ಥಳದಲ್ಲಿ ಖಾಲಿ ನ್ಯೂನತೆಯನ್ನು ಮತ್ತು ಅದರ ಹೊಸ ಸ್ಥಳದಲ್ಲಿ ಒಂದು ತೆರಪಿನ ನ್ಯೂನತೆಯನ್ನು ಸೃಷ್ಟಿಸುತ್ತದೆ.

ಫ್ರೆಂಕಲ್ ನ್ಯೂನತೆಯನ್ನು ಸ್ಥಳಾಂತರಿಸುವ ನ್ಯೂನತೆ ಎಂದು ಸಹ ಕರೆಯಲಾಗುತ್ತದೆ. ಅದು ಘನದ ಸಾಂದ್ರತೆಯನ್ನು ಬದಲಿಸುವುದಿಲ್ಲ. ಅಯಾನ್‌ಗಳ ಗಾತ್ರದಲ್ಲಿ ದೊಡ್ಡ ವ್ಯತ್ಯಾಸವಿರುವ ಅಯಾನಿಕ್ ವಸ್ತುವಿನಿಂದ ಫ್ರೆಂಕಲ್ ನ್ಯೂನತೆಯು ತೋರಿಸಲ್ಪಡುತ್ತದೆ.

ಉದಾಹರಣೆ:Zns, Agcl, AgBr ಮತ್ತು Agl ಇದರಲ್ಲಿ Zn2 + ಮತ್ತು Ag + ಸಣ್ಣ ಗಾತ್ರದ ಅಯಾನ್‌ಗಳು.



ಚಿತ್ರ 1.26 ಫ್ರೆಂಕಲ್ ನ್ಯೂನತೆ

ಡಿ) ಸ್ಕಾಟ್ಕಿ ನ್ಯೂನತೆ

ಇದು ಮೂಲತಃ ಅಯಾನಿಕ್ ಘನವಸ್ತುಗಳಲ್ಲಿ ಒಂದು ಖಾಲಿ ನ್ಯೂನತೆಯಾಗಿದೆ. ವಿದ್ಯುತ್ ತಟಸ್ಥತೆಯನ್ನು ಕಾಪಾಡಲು, ಕಾಣೆಯಾದ ಧನ ಅಯಾನ್ ಮತ್ತು ಋಣ ಅಯಾನ್‌ಗಳ ಸಂಖ್ಯೆ ಸಮನಾಗಿರುತ್ತದೆ.

ಸರಳ ಖಾಲಿ ನ್ಯೂನತೆಯಂತೆ ಸ್ಕಾಟ್ಕಿ ನ್ಯೂನತೆಯು ಕೂಡ ವಸ್ತುವಿನ ಸಾಂದ್ರತೆಯನ್ನು ಕಡಿಮೆ ಮಾಡುತ್ತದೆ. ಅಯಾನಿಕ್ ಘನವಸ್ತುವಿನಲ್ಲಿ ಅಂತಹ ನ್ಯೂನತೆಗಳ ಸಂಖ್ಯೆ ಬಹಳ ಗಮನಾರ್ಹವಾಗಿದೆ.

ಉದಾಹರಣೆ: Nacl, Kcl, Cscl, AgBr.

AgBr ಫ್ರೆಂಕಲ್ ಮತ್ತು ಸ್ಕಾಟ್ಕಿ ಎರಡೂ ನ್ಯೂನತೆಗಳನ್ನು ತೋರಿಸುತ್ತದೆ.



ಚಿತ್ರ 1.25 ಸ್ಕಾಟ್ಕಿ ನ್ಯೂನತೆ

(ಮುಂದುವರಿಯುವುದು)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಜಗತ್ತಿನಲ್ಲಿ ಯಾರೂ ಪರಿಪೂರ್ಣರಲ್ಲ. ಯಾರೂ ಸಂಪೂರ್ಣವಾಗಿ ಒಳ್ಳೆಯವರು, ಕೆಟ್ಟವರು ಅಥವಾ ಮೂರ್ಖರೂ ಅಲ್ಲ. ನಮ್ಮಲ್ಲಿ ಪ್ರತಿಯೊಬ್ಬರಲ್ಲೂ ದೈನಂದಿನ ಬದುಕಿನಲ್ಲಿ ಆ ಎಲ್ಲ ಗುಣಗಳೂ ಮೇಳೈಸಿರುತ್ತವೆ.

-ಅನಿತಾ ರಾವ್ ಬಾದಾಮಿ

ನಾಯಕತ್ವ ವಿಚಾರ: ಅನಿಶ್ಚಿತ ಸ್ಥಿತಿ ಇನ್ನಾದರೂ ಹೋಗಲಾಡಿಸಿ

ಬಿ.ಎಸ್.ಯಡಿಯೂರಪ್ಪ ನೇತೃತ್ವದ ರಾಜ್ಯ ಸರ್ಕಾರದ ವಿರುದ್ಧ ಅಸಮಾಧಾನ ಮತ್ತೊಮ್ಮೆ ಹೊಗೆಯಾಡುತ್ತಿದೆ. ಮುಖ್ಯಮಂತ್ರಿ ಬದಲಾವಣೆಯ ಸುದ್ದಿಯೂ ದಟ್ಟವಾಗಿದೆ. ಇನ್ನೊಂದೆಡೆ ಯಾವುದೇ ಕಾರಣಕ್ಕೂ ಮುಖ್ಯಮಂತ್ರಿಯವರನ್ನು ಬದಲಾಯಿಸಕೂಡದು ಎಂದು ಶಾಸಕರ ಗುಂಪೊಂದು ಬಹಿರಂಗವಾಗಿಯೇ ಒತ್ತಾಯಿಸುತ್ತಿದೆ. ಯಡಿಯೂರಪ್ಪ ನೇತೃತ್ವದ ಸರ್ಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನ ಇದು ಮೊದಲೇನಲ್ಲ. 2019ರ ಜುಲೈನಲ್ಲಿ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ರಾಜಕೀಯ ಅಭದ್ರತೆ ಇಲ್ಲದೆ ಆಡಳಿತ ಸುಗಮವಾಗಿ ಸಾಗಿದ ಅವಧಿಯೇ ಕಡಿಮೆ. ಈ ಸರ್ಕಾರವನ್ನು ಅಭದ್ರಗೊಳಿಸುವ ಪ್ರಯತ್ನಗಳನ್ನು ವಿರೋಧ ಪಕ್ಷಗಳು ಮಾಡುತ್ತಿಲ್ಲ; ಸ್ವಪಕ್ಷೀಯರೇ ಮಾಡುತ್ತಿದ್ದಾರೆ ಎನ್ನುವುದು ಕುತೂಹಲಕರ. ಆಡಳಿತದಲ್ಲಿ ಯಡಿಯೂರಪ್ಪನವರ ಮಗ ಬಿ.ವೈ.ವಿಜಯೇಂದ್ರ ಹಸ್ತಕ್ಷೇಪ ಹೆಚ್ಚಾಗಿದೆ ಎನ್ನುವುದು ಕೆಲವು ಶಾಸಕರ ಆರೋಪ. ವಿಜಯೇಂದ್ರ ಅವರು 'ಸೂಪರ್ ಮುಖ್ಯಮಂತ್ರಿ'ಯಾಗಿದ್ದಾರೆ ಎಂದು ಬಿಜೆಪಿ ಮುಖಂಡರೇ ಪಿಸುಗುಡುತ್ತಿದ್ದಾರೆ. ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರಂತೂ 'ಯಡಿಯೂರಪ್ಪ ಮತ್ತು ಅವರ ಕುಟುಂಬದ ಸದಸ್ಯರ ಭ್ರಷ್ಟಾಚಾರ ಮಿತಿಮೀರಿದೆ' ಎಂದು ಗಟ್ಟಿಧ್ವನಿಯಲ್ಲಿ ಹೇಳುತ್ತಿದ್ದಾರೆ. ಯಡಿಯೂರಪ್ಪ ಅವರ ಸಚಿವ ಸಂಪುಟದ ಸದಸ್ಯರೇ ಆಗಿರುವ ಸಿ.ಪಿ.ಯೋಗೇಶ್ವರ್ ಅವರ ಇತ್ತೀಚಿನ ದೆಹಲಿ ಭೇಟಿಯೂ ನಾಯಕತ್ವ ಬದಲಾವಣೆಯ ವದಂತಿಯನ್ನು ಮುನ್ನೆಲೆಗೆ ತಂದಿದೆ. ಯತ್ನಾಳ್ ಸೇರಿದಂತೆ ಅಪಸ್ವರ ಎತ್ತಿರುವ ಶಾಸಕರ ವಿರುದ್ಧ ಪಕ್ಷದ ವರಿಷ್ಠರು ಕಠಿಣ ಶಿಸ್ತುಕ್ರಮ ಕೈಗೊಳ್ಳದಿರುವುದು ಭಿನ್ನಮತೀಯ ಶಾಸಕರ ಉತ್ಸಾಹವನ್ನು ಇನ್ನಷ್ಟು ಹೆಚ್ಚಿಸಿದೆ. ಈ ಹಿನ್ನೆಲೆಯಲ್ಲೇ ನಾಯಕತ್ವ ಬದಲಾವಣೆಯ ಕೂಗಿಗೆ ಪಕ್ಷದ ವರಿಷ್ಠರ ಪರೋಕ್ಷ ಆಶೀರ್ವಾದ ಇದೆ ಎಂದು ವ್ಯಾಖ್ಯಾನಿಸಲಾಗುತ್ತಿದೆ.



ತೂಗುಕತ್ತಿಯ ಕೆಳಗೆ ಕುಳಿತು ದಕ್ಷ ಆಡಳಿತ ನೀಡುವುದು ಯಾವ ಮುಖ್ಯಮಂತ್ರಿಗೂ ಸಾಧ್ಯವಿಲ್ಲ. ಬಿಜೆಪಿ ವರಿಷ್ಠರು ಇನ್ನಾದರೂ ಸ್ಪಷ್ಟ ನಿರ್ಧಾರ ಕೈಗೊಳ್ಳಬೇಕು. ಅನಿಶ್ಚಿತ ಸ್ಥಿತಿ ನಿವಾರಿಸಬೇಕು

ಯಾವುದೇ ಪಕ್ಷದ ನೇತೃತ್ವದ ಸರ್ಕಾರದಲ್ಲಿ ಮುಖ್ಯಮಂತ್ರಿ ಯಾರಾಗಬೇಕು ಎನ್ನುವುದು ಪಕ್ಷದ ಶಾಸಕರು ನಿರ್ಧರಿಸಬೇಕಾದ ವಿಚಾರ ಎನ್ನುವುದರಲ್ಲಿ ಎರಡು ಮಾತಿಲ್ಲ. ಅದಕ್ಕೆ ವರಿಷ್ಠರ ಸಮ್ಮತಿ ಪಡೆಯುವುದೂ ರೂಢಿ. ಆದರೆ, ಮುಖ್ಯಮಂತ್ರಿ ವಿರುದ್ಧ ಬಹಿರಂಗವಾಗಿ ಟೀಕಾಸ್ತ್ರ ಬಿಡುವುದು ಮತ್ತು ಬದಲಾವಣೆಗೆ ಪದೇ ಪದೇ ಯತ್ನಿಸುವುದು ಒಳ್ಳೆಯ ಆಡಳಿತದ ಲಕ್ಷಣವಂತೂ ಅಲ್ಲ. ಮುಖ್ಯಮಂತ್ರಿಗೆ ತಾವು ಕುಳಿತ ಕುರ್ಚಿಯೇ ಅಭದ್ರ ಅಂತ ಅನ್ನಿಸತೊಡಗಿದರೆ, ರಾಜ್ಯದ ಅಭಿವೃದ್ಧಿಯ ಕಡೆಗೆ ಅವರು ಪೂರ್ತಿ ಗಮನ ಕೊಡಲಾರರು. ಅದರಲ್ಲೂ ಕೋವಿಡ್ ಸಂಕಷ್ಟವು ರಾಜ್ಯದ ಲಕ್ಷಾಂತರ ಜನರನ್ನು ದುಃಖದ ಮಡುವಿನಲ್ಲಿ ದೂಡಿರುವ ಈ ಸಮಯದಲ್ಲಿ ಆಳುವ ಪಕ್ಷದ ಶಾಸಕರು, ಸಚಿವರು ದೆಹಲಿಗೆ ಓಡಾಡುತ್ತಾ, ಸರ್ಕಾರವನ್ನು ಅಸ್ಥಿರಗೊಳಿಸಲು ಕೆಲಸ ಮಾಡುತ್ತಿರುವುದು ಸಾರ್ವಜನಿಕರಲ್ಲಿ ಹೇವರಿಕೆ ಹುಟ್ಟಿಸುವಂತಿದೆ. ಮೂರು ಉಪಮುಖ್ಯಮಂತ್ರಿ ಹುದ್ದೆಗಳ ಸೃಷ್ಟಿ, ಸಚಿವ ಸಂಪುಟದ ಪುನರ್‌ರಚನೆ ವೇಳೆ ಖಾತೆಗಳ ಹಂಚಿಕೆಯನ್ನು ಮೂರು ದಿನಗಳಲ್ಲಿ ಐದು ಸಲ ಬದಲಾಯಿಸಿದ್ದು, ಹಿರಿಯ ಸಚಿವ ಕೆ.ಎಸ್.ಈಶ್ವರಪ್ಪ ನೇರವಾಗಿ ರಾಜ್ಯಪಾಲರ ಬಳಿಗೆ ಹೋಗಿ ಅನುದಾನ ಹಂಚಿಕೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ನಿರ್ಧಾರದ ಬಗ್ಗೆ ದೂರು ನೀಡಿರುವುದು, ಕೋವಿಡ್ ಪರಿಸ್ಥಿತಿಯ ನಿರ್ವಹಣೆಯಲ್ಲಿ ಸಚಿವ ಸಂಪುಟದಲ್ಲೇ ಪರಸ್ಪರ ಹೊಂದಾಣಿಕೆ ಇಲ್ಲದಿರುವುದು- ಎಲ್ಲವೂ ಸರ್ಕಾರದ ಅದಕ್ಷತೆಯನ್ನು ಎತ್ತಿ ತೋರಿಸುತ್ತಿವೆ. ಸರ್ಕಾರ ತೆಗೆದುಕೊಳ್ಳುತ್ತಿರುವ ಆಡಳಿತಾತ್ಮಕ ನಿರ್ಧಾರಗಳ ಬಗ್ಗೆ ಗೊಂದಲವೂ ಹೆಚ್ಚುತ್ತಿದೆ. ಜೆಎಸ್‌ಡಬ್ಲ್ಯು ಸ್ಟೀಲ್ ಕಂಪನಿಗೆ (ಜಿಂದಾಲ್) 3,667 ಎಕರೆ ಭೂಮಿಯನ್ನು ಅತ್ಯಂತ ಕಡಿಮೆ ದರಕ್ಕೆ ಶುದ್ಧ ಕ್ರಯ ಮಾಡಿಕೊಡುವ ಸಚಿವ ಸಂಪುಟದ ನಿರ್ಧಾರವನ್ನು ಪಕ್ಷದ ಶಾಸಕರಾದ ಅರವಿಂದ ಬೆಲ್ಲದ, ಕೆ.ಪೂರ್ಣಿಮಾ, ಉದಯ್ ಗರುಡಾಚಾರ್ ವಿರೋಧಿಸಿದ್ದರು. ಸಚಿವ ಸಂಪುಟದ ಈ ನಿರ್ಧಾರ ವಿರೋಧಿಸಿ ಯತ್ನಾಳ್ ಅವರು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದಿದ್ದರು. ಈ ಭೂಮಿ ಮಾರಾಟದ ಬಗ್ಗೆ ಆಡಳಿತ ಪಕ್ಷದ ಶಾಸಕರೇ ಸಂಶಯ ವ್ಯಕ್ತಪಡಿಸಿದ್ದರಿಂದ ಹಾಗೂ ಸಂಪುಟ ತೀರ್ಮಾನದ ವಿರುದ್ಧ ಧ್ವನಿ ಎತ್ತಿದ ಕಾರಣ ಮಾರಾಟದ ನಿರ್ಧಾರವನ್ನು ಕೈಬಿಡಲಾಗಿದೆ. ಸಂಪುಟದಲ್ಲಿ ಸಾಮೂಹಿಕ ಜವಾಬ್ದಾರಿಯಿಂದ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತಿಲ್ಲ ಎನ್ನುವುದೂ ಇದರಿಂದ ಸ್ಪಷ್ಟವಾಗಿದೆ. ಬಿಜೆಪಿ ಒಳಗೆ ನಿರಂತರವಾಗಿ ನಡೆಯುತ್ತಿರುವ ಭಿನ್ನಮತೀಯ ಚಟುವಟಿಕೆಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗುತ್ತಿಲ್ಲ. ಆಡಳಿತವನ್ನು ದಕ್ಷತೆಯಿಂದ ನಡೆಸಲು ಅದೇ ಭಿನ್ನಮತ ಅಡ್ಡಿಯಾಗುತ್ತಿದೆ. ಇವೆಲ್ಲವನ್ನೂ ಗಮನಿಸಿದಾಗ, ಯಡಿಯೂರಪ್ಪ ಅವರು ರಾಜ್ಯ ಕಂಡ ಅತ್ಯಂತ ದುರ್ಬಲ ಮುಖ್ಯಮಂತ್ರಿ ಎನ್ನದೇ ನಿರ್ವಾಹವಿಲ್ಲ. ತೂಗುಕತ್ತಿಯ ಕೆಳಗೆ ಕುಳಿತು ದಕ್ಷ ಆಡಳಿತ ನೀಡುವುದು ಯಾವ ಮುಖ್ಯಮಂತ್ರಿಗೂ ಸಾಧ್ಯವಿಲ್ಲ. ಪಕ್ಷದ ವರಿಷ್ಠರು ಏಕಕಾಲದಲ್ಲಿ ಮಗುವನ್ನು ಚಿವುಟುವ ಮತ್ತು ತೊಟ್ಟಿಲು ತೂಗುವ ಕೆಲಸ ಮಾಡುತ್ತಿರುವುದು ಎಳ್ಳಷ್ಟೂ ಸರಿಯಲ್ಲ. ಕೋವಿಡ್ ಸಂಕಷ್ಟದ ಸಮಯದಲ್ಲಿ ಇಂತಹ ಗೊಂದಲಮಯ ಪರಿಸ್ಥಿತಿಗೆ ಅವಕಾಶ ಮಾಡಿಕೊಟ್ಟಿರುವುದು ರಾಜ್ಯದ ಜನರಿಗೆ ಬಗೆಯುವ ದ್ರೋಹ ಎಂದೇ ಹೇಳಬೇಕಾಗುತ್ತದೆ. ದಕ್ಷ ಆಡಳಿತವನ್ನು ಬಯಸುವುದು ಜನರ ಮೂಲಭೂತ ಹಕ್ಕು ಎನ್ನುವುದನ್ನು ಬಿಜೆಪಿ ಮುಖಂಡರು ಮರೆಯಬಾರದು.

ದಿನದ ಟ್ವೀಟ್

ಭರವಸೆಯ ಕಿರಣ

ಪುದುಚೇರಿಯಲ್ಲಿ ಕೋವಿಡ್- 19 ಹೊಸ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿದೆ -24 ಗಂಟೆಗಳ ಅವಧಿಯಲ್ಲಿ 627 ಪ್ರಕರಣಗಳು ಕಂಡುಬಂದಿವೆ- ಇದು, ಕೋವಿಡ್ ಸಾಂಕ್ರಾಮಿಕದ ಎರಡನೇ ಅಲೆಯನ್ನು ಎದುರಿಸುವಲ್ಲಿ ನಮಗೆ ಭರವಸೆಯ ಕಿರಣದಂತೆ ಕಾಣುತ್ತಿದೆ.

ಡಾ. ತಮಿಳ್‌ಸಾಯಿ ಸೌಂದರರಾಜನ್, ಲೆಫ್ಟಿನೆಂಟ್ ಗವರ್ನರ್, ಪುದುಚೇರಿ

25 ವರ್ಷಗಳ ಹಿಂದೆ

ಶನಿವಾರ, 1-6-1996

• **ಕೇಂದ್ರ ಸಂಪುಟದಲ್ಲಿ ಪ್ರಾದೇಶಿಕ ಪಕ್ಷಗಳು**

ನವದೆಹಲಿ, ಮೇ 31- ಪ್ರಾದೇಶಿಕ ಪಕ್ಷಗಳಾದ ಡಿಎಂಕೆ, ಟಿಎಂಸಿ ಹಾಗೂ ತೆಲುಗು ದೇಶಂ, ಸಂಯುಕ್ತ ರಂಗ ನೇತೃತ್ವದ ಸರ್ಕಾರದಲ್ಲಿ ಸೇರಲು ತೀರ್ಮಾನ ಕೈಗೊಂಡಿದ್ದರಿಂದ, ನಾಳೆ ಪ್ರಧಾನ ಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ ಮಾಡಲಿರುವ ಎಚ್.ಡಿ. ದೇವೇಗೌಡ ಅವರ ಮಂತ್ರಿಮಂಡಲ ರಚನೆಗೆ ಇದ್ದ ಅಡಚಣೆ ನಿವಾರಣೆಯಾದಂತಾಯಿತು.

ದೇವೇಗೌಡ ಅವರು ಪ್ರಧಾನಿಯಾಗುವ ಮೂಲಕ ಕರ್ನಾಟಕ ಮೊದಲ ಬಾರಿಗೆ ದೇಶವನ್ನಾಳುವ ಅತ್ಯುನ್ನತ ಸ್ಥಾನವನ್ನು ಅಲಂಕರಿಸುವ ಹೆಗ್ಗಳಿಕೆಗೆ ಪಾತ್ರವಾಗಲಿದೆ. ಪಿ.ವಿ. ನರಸಿಂಹ ರಾವ್ ಅವರ ನಂತರ ಕೆಲ ದಿನಗಳ ಕಾಲ ಬಿಜೆಪಿ ನಾಯಕ ವಾಜಪೇಯಿ ಅವರಿಗೆ ದಕ್ಕುವ ಮೂಲಕ ಪುನಃ ಉತ್ತರ ಭಾರತದ ವಶವಾಗಿದ್ದ ಈ ಸ್ಥಾನ ಮತ್ತೆ ದಕ್ಷಿಣ ಭಾರತದ ಪಾಲಾಗಲಿದೆ.

• **ರಾಜ್ಯದಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ**

ಬೆಂಗಳೂರು, ಮೇ 31- ರಾಜ್ಯದ 15ನೇ ಮುಖ್ಯಮಂತ್ರಿಯಾಗಿ ಜೆ.ಎಚ್. ಪಟೇಲ್, ಮೂರನೇ ಉಪಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಇಂದು ಪ್ರಮಾಣವಚನ ಸ್ವೀಕರಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 1-6-1971

• **ವಿದೇಶಕ್ಕೆ ಕೋಕ ಕೋಲಾ ಕಂಪನಿಯಿಂದ 2 ಕೋಟಿ ರೂ ರವಾನೆ: ರಾಜ್ಯಸಭೆ ಆಕ್ರೋಶ**

ನವದೆಹಲಿ, ಮೇ 31- ಕೋಕ ಕೋಲ ತಯಾರಿಸುತ್ತಿರುವ ಕಂಪನಿಯು 1958ರಿಂದ 1969ರವರೆಗಿನ ಅವಧಿಯಲ್ಲಿ ವಿದೇಶಕ್ಕೆ ಎರಡು ಕೋಟಿ ರೂಪಾಯಿಗಳನ್ನು ಸಂದಾಯ ಮಾಡಿದೆ. ಕಂಪನಿಯು ಸರ್ಕಾರದಿಂದ ಕೆಲವೊಂದು ವಿಶೇಷ ಅನುಗ್ರಹಗಳಿಗೆ ಪಾತ್ರವಾಗಿದೆ ಎಂದು ರಾಜ್ಯಸಭೆಯಲ್ಲಿ ಸಂಶಯ ವ್ಯಕ್ತಪಡಿಸಿದ ಕೆಲವು ಸದಸ್ಯರು, ಒಂದೇ ಸಮನೆ ಆರೋಪಗಳ ಸುರಿಮಳೆ ಕರೆದಿದ್ದರಿಂದ ಉಪ ಪ್ರಶ್ನೆಗಳಿಗೆ ಉತ್ತರ ದೊರೆಯಲಿಲ್ಲ.

• **ಧರ್ಮವೀರರಿಗೆ ದೆಹಲಿಗೆ ಬುಲಾವ್**

ನವದೆಹಲಿ, ಮೇ 31- ಉದಕಮಂಡಲದಲ್ಲಿ ವಿಶ್ರಾಂತಿ ಪಡೆಯುತ್ತಿರುವ ಮೈಸೂರಿನ ರಾಜ್ಯಪಾಲ ಶ್ರೀ ಧರ್ಮವೀರ ಅವರಿಗೆ ದೆಹಲಿಗೆ ಬರಬೇಕೆಂದು ಕೇಂದ್ರ ಸರ್ಕಾರ ಕರೆ ಇತ್ತಿದೆ. ಅವರು ನಾಳೆ ಇಲ್ಲಿಗೆ ಬರುವ ನಿರೀಕ್ಷೆ ಇದೆ.

ಮೈಸೂರಿನಿಂದ ಆಯ್ಕೆಯಾಗಿರುವ ಆಡಳಿತ ಕಾಂಗ್ರೆಸ್ಸಿನ ಸಂಸತ್ ಸದಸ್ಯರು ರಾಜ್ಯಪಾಲರ ಆಡಳಿತದ ವಿರುದ್ಧ ಕೊಟ್ಟಿರುವ ದೂರುಗಳಿಗೆ ಸಂಬಂಧಿಸಿದಂತೆ ಧರ್ಮವೀರ ಅವರನ್ನು ದೆಹಲಿಗೆ ಕರೆಸಲಾಗಿದೆಯೆಂದು ಗೊತ್ತಾಗಿದೆ.

ಕನಸುಗಳ ನೆಪದಲ್ಲಿ ಗ್ರಾಮೀಣ ಭಾರತದ ಕಟು ವಾಸ್ತವಗಳ ಕಾಣಿಸುವ ಪ್ರಯತ್ನ

ಗ್ರಾಮೀಣ ಅಂತಃಕರಣಕ್ಕೆ 'ಬಂಡಿ'ಗನ್ನಡಿ

ಪಡಸಾಲೆ

ರಘುನಾಥ ಚ.ಹ.

ಊರೊಂದನ್ನು ಒಗ್ಗೂಡಿಸುವ ಸಂಗತಿಗಳು ಯಾವುವು? 'ಸಿನಿಮಾ' ಅಂಥ ಸಂಗತಿಗಳಲ್ಲೊಂದು ಎನ್ನುತ್ತದೆ 'ಸಿನಿಮಾ ಬಂಡಿ'. ಪಕ್ಕದಲ್ಲಿ ಕುಳಿತ ವ್ಯಕ್ತಿಯ ಹಿನ್ನೆಲೆಯ ಬಗ್ಗೆ ತಲೆಕೆಡಿಸಿಕೊಳ್ಳದ ಪ್ರೇಕ್ಷಕ, ಪರದೆಯ ಮೇಲಿನ ಬಿಂಬಗಳಲ್ಲಿ ಕಳೆದುಹೋಗುತ್ತಾನೆ ಹಾಗೂ ವಿವಿಧ ಜಾತಿ, ಧರ್ಮ, ಸಾಮಾಜಿಕ ಹಿನ್ನೆಲೆಗಳ ಜನ ಚಿತ್ರಮಂದಿರದ ಮಬ್ಬಿನಲ್ಲಿ ಒಟ್ಟುಗೂಡಿ ಪರದೆಯ ಮೇಲಿನ ಬೆಳಕನ್ನು ಮನಸ್ಸಿಗಿಳಿಸಿಕೊಳ್ಳುತ್ತಾರೆ. ಇದು ಸಿನಿಮಾದಿಂದ ಸಾಧ್ಯವಾಗುವ ಜಾದೂ. ಯಾವುದೇ ಕಲೆಯ ಉದ್ದೇಶ ಮನುಷ್ಯನ ಮನಸ್ಸನ್ನು ತಿಳಿಗೊಳಿಸುವುದು ಎನ್ನುವುದಾದರೆ, ಆ ಉದ್ದೇಶವನ್ನು ಉಳಿದೆಲ್ಲ ಕಲೆಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ಸಿನಿಮಾ ಮಾಡುತ್ತದೆ.

'ನೆಟ್‌ಫ್ಲಿಕ್ಸ್'ನಲ್ಲಿ ತೆರೆಕಂಡಿರುವ 'ಸಿನಿಮಾ ಬಂಡಿ' ತೆಲುಗು ಚಿತ್ರೋದ್ಯಾನದಲ್ಲಿ ಅರಳಿರುವ ಅಪರೂಪದ ಮಂದಾರ. ಬಹುಕೋಟಿ ಬಜೆಟ್‌ನ ವ್ಯಾಪಾರಿ ಸಿನಿಮಾಗಳಿಗೆ ಪ್ರಸಿದ್ಧವಾದ ತೆಲುಗು ಚಿತ್ರರಂಗದಲ್ಲಿ, ಕಥೆಗೆ ಒತ್ತು ನೀಡುವ ಸರಳ ಗುಣಾತ್ಮಕ ಸಿನಿಮಾಗಳು ಅಪರೂಪಕ್ಕೊಮ್ಮೆ ರೂಪುಗೊಳ್ಳುವುದಿದೆ. ಅಂಥ, ಕಣ್ಣರಳಿಸಬಹುದಾದ ಕೃತಿ 'ಸಿನಿಮಾ ಬಂಡಿ'. ಈ ಬಂಡಿ ಕನ್ನಡದ ಪ್ರೇಕ್ಷಕರಿಗೆ ಆಪ್ತವಾಗಲಿಕ್ಕೆ ವಿಶೇಷ ಕಾರಣವೊಂದಿದೆ. ಅದು, ಕೋಲಾರದ ಪರಿಸರದಲ್ಲಿ, ಅಲ್ಲಿನ ಕನ್ನಡ ಸೊಗಡು ಬೆರೆತ ತೆಲುಗನ್ನು ಒಳಗೊಂಡು ರೂಪುಗೊಂಡಿರುವುದು. ಆದರೆ, ಕೋಲಾರದ ಬಹುಭಾಷಿಕ ವಾತಾವರಣವನ್ನು ಚಿತ್ರತಂಡ ಬಳಸಿಕೊಳ್ಳದಿರುವುದು ಅಚ್ಚರಿಯ ಸಂಗತಿ ಹಾಗೂ ಅದು ಸಿನಿಮಾಕ್ಕಾಗಿರುವ ನಷ್ಟ ಕೂಡ.

ಪಾತ್ರ ಸೃಷ್ಟಿ, ಆಯ್ಕೆ, ನಿರೂಪಣೆ, ಭಾಷಾಸೊಗಡು, ಸಿನಿಮಾದುದ್ದಕ್ಕೂ ಹಾಸುಹೊಕ್ಕಾಗಿರುವ ಹಾಸ್ಯ, ಸರಳತೆಯಲ್ಲಿ ಸಾಧಿಸಿರುವ ಅಪೂರ್ವ ಸೌಂದರ್ಯ, ಗಂಭೀರ ಸಿನಿಮಾ ವ್ಯಾಕರಣ – ಈ ಎಲ್ಲ ಸಂಗತಿಗಳಲ್ಲಿ 'ಸಿನಿಮಾ ಬಂಡಿ' ಕನ್ನಡದ 'ತಿಥಿ'ಯ ಕಿರಿಯ ಸೋದರನಂತಿದೆ. ಕನ್ನಡದ ಗಡ್ಡಪ್ಪನನ್ನು ಹೋಲುವಂಥ ಪಾತ್ರ ತೆಲುಗಿನ ಬಂಡಿಯಲ್ಲೂ ಇದೆ. ಎರಡೂ ಸಿನಿಮಾಗಳ ಆತ್ಮಸಾಕ್ಷಿಯಂತೆ ಈ ಪಾತ್ರಗಳಿವೆ. ಗಡ್ಡಪ್ಪ ಸಿನಿಮಾದುದ್ದಕ್ಕೂ ಮಾತನಾಡಿದರೆ, ಬಂಡಿಯ ಅಜ್ಜನಿಗಿರುವುದು ಒಂದೇ ಡೈಲಾಗ್. 'ನನಗೆ ಓದು ಬರಹ ತಿಳಿದಿಲ್ಲ' ಎನ್ನುವ ಅಜ್ಜನ ಮಾತು ಸಿನಿಮಾದ ಕ್ಲೈಮ್ಯಾಕ್ಸ್ ಮಾತ್ರವಲ್ಲ; ಬಂಡಿಗೆ ಹೊಸ ದೃಷ್ಟಿಕೋನವೊಂದನ್ನು ಕರುಣಿಸುವ ಮಾತೂ ಹೌದು.

ಸಿನಿಮಾದ ಶೀರ್ಷಿಕೆಗೆ ಪೂರಕವೆನ್ನುವಂತೆ ಕಥಾನಾಯಕ ವೀರಬಾಬು ರಿಕ್ಷಾವಾಲ. ಹಳ್ಳಿಯ ಕೊರಕಲು ರಸ್ತೆಗಳಿಂದ ಸುಧಾರಣೆಗೊಂಡ ರಸ್ತೆಗಳ ಪಟ್ಟಣಗಳಿಗೆ ಆಟೊ ಮೂಲಕ ಜನರನ್ನು ಸಾಗಿಸುವ ಆತನಿಗೆ, ಅನಿಯಮಿತ ಮಳೆಯಿಂದಾಗಿ ಕೃಷಿಯ ಮೇಲೆ ನಂಬಿಕೆ ಕಳೆದುಕೊಂಡು ನಗರದತ್ತ ಮುಖ ಮಾಡಿರುವ ರೈತ ಕುಟುಂಬಗಳ ಬಗ್ಗೆ ಬೇಸರ. ಎಲ್ಲರೂ ನಗರಕ್ಕೆ ಹೋದರೆ ಹಳ್ಳಿಯನ್ನು ಉದ್ಧಾರ ಮಾಡುವವರು ಯಾರು ಎಂದು ಪ್ರಶ್ನಿಸುವ ಆತ, ಇಂದಲ್ಲಾ ನಾಳೆ ಹಳ್ಳಿಯಲ್ಲೂ ಏನಾದರೂ ಪವಾಡ ನಡೆಯುತ್ತದೆ ಎಂದು ನಂಬಿರುವ ಆಶಾವಾದಿ. ಅವನ ಆಶಾವಾದಕ್ಕೆ ಇಂಬುಕೊಡುವಂತೆ ಆಟೊದಲ್ಲಿ ಯಾರೋ ಬಿಟ್ಟುಹೋದ ಕ್ಯಾಮೆರಾವೊಂದು ದೊರೆಯುತ್ತದೆ. ಆ ಕ್ಯಾಮೆರಾ ವೀರಬಾಬುವಿನ ಪಾಲಿಗೆ ಕನಸುಗಳ ಪೆಟ್ಟಿಗೆಯಾಗಿ ಪರಿಣಮಿಸಿ, ತಾನೊಂದು ಸಿನಿಮಾ ಮಾಡಲು ಮುಂದಾಗುತ್ತಾನೆ. ಅವನ ಕನಸಿಗೆ ಕಣ್ಣಾಗಿ, ಊರಿನಲ್ಲಿ ಮದುವೆಮುಂಜಿಗಳ ಫೋಟೊ ತೆಗೆಯುತ್ತಿದ್ದ ಫೋಟೊಗ್ರಾಫರ್ ಗಣ ಅಲಿಯಾಸ್ ಗಣಪತಿ ಜೊತೆಯಾಗುತ್ತಾನೆ. ಕಥೆಗಾರ ಮಂಜಣ್ಣನಂಥ ಅಜ್ಜ, ನಾಯಕನ ಪಾತ್ರಕ್ಕೆ ಆಯ್ಕೆಯಾಗುವ ಮರಿಡಯ್ಯ, ನಾಯಕಿ ಪಾತ್ರ ಒಪ್ಪಿಕೊಳ್ಳುವ ಶಾಲಾ ಬಾಲಕಿ ಹಾಗೂ ತರಕಾರಿ ಮಾರುವ ಮಂಗಾ, ಸಹಾಯಕ ನಿರ್ದೇಶಕನ ರೂಪದಲ್ಲಿ ಒದಗಿಬರುವ ಬಾಲಕ, ಹೀಗೆ ಬೆಳೆಯುವ ಚಿತ್ರತಂಡವನ್ನು ಊರು ಕಡೆಗಣ್ಣಿನಲ್ಲಿಯೇ ಗಮನಿಸುತ್ತದೆ. ಸಿನಿಮಾ ಮೂಲಕ ಒಳ್ಳೆಯ ಬದುಕು ಕಟ್ಟಿಕೊಳ್ಳಲು ಹಂಬಲಿಸುವ ವೀರನ ಪ್ರಯತ್ನವನ್ನು ಅವನ ಹೆಂಡತಿ ಗಂಗಾ ಮೊದಲಿಗೆ ವಿರೋಧಿಸಿದರೂ, ನಂತರದಲ್ಲಿ ಗಂಡನಿಗೆ ಬೆಂಬಲವಾಗಿ ನಿಲ್ಲುತ್ತಾಳೆ. ಕೂಲಿ ಕೆಲಸಕ್ಕೆ ಹೋಗುವ ಮೂಲಕ ಮನೆಯ ಜವಾಬ್ದಾರಿ ವಹಿಸಿಕೊಳ್ಳುತ್ತಾಳೆ. ಊರಿನ ಜನರೂ ತಮ್ಮ ದಂದುಗಗಳಿಂದ ಹೊರಬಂದು ಸಿನಿಮಾ ನಿರ್ಮಾಣದ ವಿನೋದದಲ್ಲಿ ಭಾಗಿಯಾಗುತ್ತಾರೆ. ವೀರನ ಸಿನಿಮಾ ಊರಿನ ಸಿನಿಮಾ ಆಗುವ ಮೂಲಕ, 'ಪ್ರತಿಯೊಬ್ಬನೂ ಸಿನಿಮಾ ನಿರ್ಮಾತೃ' (Everyone is a filmmaker) ಎನ್ನುವ ಸಿನಿಮಾಬಂಡಿಯ ಧ್ಯೇಯವಾಕ್ಯ ಸಾಕಾರಗೊಳ್ಳುತ್ತದೆ.

'ಸಿನಿಮಾ ಬಂಡಿ' ಹಳ್ಳಿಯ ಜನರಲ್ಲಿನ ಸಿನಿಮಾ ಹುಚ್ಚಿನ ಕುರಿತಷ್ಟೇ ಹೇಳುತ್ತಿದೆ ಎಂದುಕೊಂಡರೆ ಅದು ನಮ್ಮ ನೋಟದ ಮಿತಿ. ಈ ಸಿನಿಮಾ ಹಳ್ಳಿಯ ಅಂತರಂಗಕ್ಕೆ ಕನ್ನಡಿ ಹಿಡಿಯುವ ಕೆಲಸವನ್ನು ಸೂಚ್ಯವಾಗಿ ಮಾಡಿದೆ. ಸಿನಿಮಾ ಬಂಡಿ ಕನಸುಗಳನ್ನಷ್ಟೇ ಕಾಣಿಸುವುದಿಲ್ಲ; ಕನಸುಗಳ ನೆಪದಲ್ಲಿ ಊರಿನ ಅಗತ್ಯಗಳನ್ನೂ ಕಟು ವಾಸ್ತವಗಳನ್ನೂ ಕಾಣಿಸುವ ಕೆಲಸ ಮಾಡುತ್ತದೆ. ಇಡೀ ಸಿನಿಮಾದಲ್ಲಿ ಹಾಸುಹೊಕ್ಕಾಗಿರುವ ಹಾಸ್ಯದ ಹಿನ್ನೆಲೆಯಲ್ಲಿ ವಿಷಾದ ಇಣುಕಿದೆ. ಹಳ್ಳಿಗಳಿಂದ ನಗರಕ್ಕೆ ಜನರ ವಲಸೆ ನಿಲ್ಲಿಸುವ ಹಾಗೂ ಶಿಥಿಲಗೊಂಡಿರುವ ಶಾಲೆಯನ್ನು ಬಲಪಡಿಸಬೇಕಾದ ಅಗತ್ಯದ ಬಗ್ಗೆ ಬಂಡಿ ಗಮನಸೆಳೆಯುತ್ತದೆ. ಪ್ರೇಮವಿವಾಹ ಗ್ರಾಮೀಣ ಸಮಾಜದಲ್ಲಿ ತರುವ ಚಲನೆಯನ್ನು ಕಾಣಿಸುತ್ತದೆ. ಮಳೆಯಲ್ಲಿ ಹಾಡೊಂದನ್ನು ಚಿತ್ರೀಕರಿಸಲು ಚಿತ್ರತಂಡ ಪಡುವ ಪಡಿಪಾಟಲು ನಗು ತರಿಸಿದರೂ, ಮಳೆಯ ಕಣ್ಣಾಮುಚ್ಚಾಲೆ ಗ್ರಾಮೀಣರ ಆತ್ಮವಿಶ್ವಾಸ ಕುಗ್ಗಿಸಿರುವುದರ ವ್ಯಥೆಯನ್ನು ಆ ದೃಶ್ಯಗಳು ಕಾಣಿಸುವಂತಿವೆ. ಚಿತ್ರತಂಡದ ಮಳೆನೃತ್ಯದ ಹಾಡಿನ ಹಂಬಲಕ್ಕೆ ನೀರೆರೆಯುವಂತೆ ಮುಗಿಲು ಆಸೆ ತೋರಿಸಿದರೂ ಮೋಡಗಳು ದಯೆ ತೋರುವುದಿಲ್ಲ. ಕ್ಯಾಮೆರಾ ಕೈತಪ್ಪಿಹೋಗಿ ಚಿತ್ರೀಕರಣ ಅಪೂರ್ಣವಾದಾಗ, ಚಿತ್ರತಂಡದ ಸಂಕಟಕ್ಕೆ ಸ್ಪಂದಿಸುವಂತೆ ಮುಗಿಲು ಹನಿಗಣ್ಣಾಗುತ್ತದೆ. ನಗರದ ಯುವತಿಯ ಒಳ್ಳೆಯತನದಿಂದಾಗಿ ಗೊಲ್ಲಪಲ್ಲಿಯ ಜನರ ಸಿನಿಮಾ ಪೂರ್ಣಗೊಳ್ಳುತ್ತದೆ. ಕನಸೊಂದು ನನಸಾಗುವ ಈ ಕ್ರಿಯೆ, ಗ್ರಾಮೀಣಾಭಿವೃದ್ಧಿಯ ಬಂಡಿಗೆ ಇಂಧನ ಊಡಿಸುವಂತಿದೆ.

'ಸಿನಿಮಾ ಬಂಡಿ' ಗ್ರಾಮೀಣರಲ್ಲಿನ ಸುಪ್ತ ಚೈತನ್ಯ ಹಾಗೂ ಅಂತಃಕರಣಕ್ಕೆ ಹಿಡಿದಿರುವ ಕ್ಯಾಮೆರಾ ಬೆಳಕೂ ಹೌದು. ಕೊರೊನಾ ನಿಯಂತ್ರಣಕ್ಕಾಗಿ ಹೇರಲಾದ ಲಾಕ್‌ಡೌನ್ ಸಂದರ್ಭದಲ್ಲಿ, ನಗರಗಳಲ್ಲಿನ ಲಕ್ಷ ಲಕ್ಷ ಕಾರ್ಮಿಕರು ಮತ್ತೆ ಹಳ್ಳಿಗಳ ಹಾದಿ ಹಿಡಿದರಲ್ಲ; ಅನ್ನ ಹುಡುಕಿಕೊಂಡು ನಗರಕ್ಕೆ ವಲಸೆ ಬಂದಿದ್ದ ಅವರೆಲ್ಲ ಮತ್ತೆ ಯಾವ ನಿರೀಕ್ಷೆ, ನಂಬಿಕೆಯಿಂದ ತಮ್ಮೂರುಗಳಿಗೆ ಮರಳಿದರು? ಈ ಪ್ರಶ್ನೆಗೆ ಉತ್ತರ ಸಂಕೀರ್ಣವಾದುದೇನೂ ಅಲ್ಲ. ಹಂಚಿಕೊಂಡು ತಿನ್ನುವ ಅಂತಃಕರಣ ಹಾಗೂ ಕಷ್ಟದಲ್ಲಿ ಇರುವವರಿಗೆ ಮರುಗುವ ಮನಸ್ಸುಗಳು ಹಳ್ಳಿಗಳಲ್ಲಿನ್ನೂ ಇವೆ ಎನ್ನುವ ನಂಬಿಕೆ ಜನರಲ್ಲಿದೆ. ಆ ನಂಬಿಕೆಯನ್ನು 'ಸಿನಿಮಾ ಬಂಡಿ' ಗಟ್ಟಿಗೊಳಿಸುತ್ತದೆ. ಹಳ್ಳಿಯ ಜನ ಒಗ್ಗಟ್ಟಾಗಿ ನಿಂತರೆ ಏನನ್ನಾದರೂ ಸಾಧಿಸಬಲ್ಲರು ಎನ್ನುವ ಸೂಚನೆ ಸಿನಿಮಾದಲ್ಲಿದೆ. ಹಾಗೆ ಸಾಧಿಸಬೇಕಾದುದು ಏನನ್ನು? ಊರಿನ ಶಾಲೆಯ ಬೆನ್ನುಮೂಳೆ ಗಟ್ಟಿಗೊಳಿಸುವುದು, ಕೆರೆಯ ಆರ್ದ್ರತೆಯನ್ನು ಕಾಪಾಡಿಕೊಳ್ಳುವುದು, ಜಾತಿಯ ರಾಜಕಾರಣದಿಂದ ದೂರ ಉಳಿಯುವುದು, ಗ್ರಾಮೀಣ ಉದ್ಯೋಗಾವಕಾಶಗಳನ್ನು ಸೃಷ್ಟಿಸಿಕೊಳ್ಳುವುದು – ಇವೆಲ್ಲ ಊರಿನ ಆರೋಗ್ಯಕ್ಕಾಗಿ ಆಗಬೇಕಾದ ಕೆಲಸಗಳು. ಸದ್ಯದ ಬಿಕ್ಕಟ್ಟಿನ ಸಂದರ್ಭದಲ್ಲಿ, ಕೊರೊನಾ ಸೋಂಕನ್ನು ಎದುರಿಸುವ ನಿಟ್ಟಿನಲ್ಲಿ ಗ್ರಾಮಗಳು ಒಗ್ಗಟ್ಟನ್ನು ತೋರಿಸಬೇಕಾಗಿದೆ. ಯಾರೋ ನಮ್ಮ ನೆರವಿಗೆ ಬರುತ್ತಾರೆ ಎನ್ನುವ ನಿರೀಕ್ಷೆಯನ್ನು ಬಿಟ್ಟು ಗ್ರಾಮೀಣರು ಒಟ್ಟಾಗಿ, ಒಗ್ಗಟ್ಟಾಗಿ ನಿಂತರೆ ಕೊರೊನಾ ಮಾತ್ರವೇನು, ಯಾವುದೇ ಸೋಂಕಾದರೂ ಪೇರಿ ಕೀಳಲೇಬೇಕು.

'ಸಿನಿಮಾ ಬಂಡಿ' ಯುವ ಪ್ರತಿಭೆಗಳ ಕಲಾಕೃತಿ. ಪ್ರವೀಣ್ ಕಂಡ್ರೇಗುಲ ಅವರಿಗಿದು ಚೊಚ್ಚಿಲ ನಿರ್ದೇಶನದ ಸಂಭ್ರಮ. ಮುಖ್ಯಪಾತ್ರಗಳಾದ ವೀರಬಾಬು ಹಾಗೂ ಮಂಗಾನ ಪಾತ್ರಗಳಲ್ಲಿ ನಟಿಸಿರುವ ವಿಕಾಸ್ ವಸಿಷ್ಠ ಹಾಗೂ ಉಮಾ ಕನ್ನಡದ ಪ್ರತಿಭೆಗಳು. ಛಾಯಾಗ್ರಹಣದ ಜವಾಬ್ದಾರಿ ನಿರ್ವಹಿಸಿರುವ ಅಪೂರ್ವ ಶಾಲಿಗ್ರಾಮ ಮತ್ತು ಸಾಗರ್, ಸಂಗೀತ ಸಂಯೋಜಿಸಿರುವ ಸತ್ಯವೋಲು ಶಿರೀಷ್ ಕೂಡ ಹೊಸ ಕನಸುಗಳ ಹಂಬಲದ ಸೃಜನಶೀಲರು. ಯುವ ತಂಡವನ್ನು ಅಭಿನಂದಿಸುತ್ತಲೇ, 'ಸಿನಿಮಾ ಬಂಡಿ'ಯಲ್ಲಿರುವ ಪಾಠವೊಂದನ್ನು ಕನ್ನಡ ಸಿನಿಮಾ ನಿರ್ಮಾತೃಗಳ ಗಮನಕ್ಕೆ ತರಬೇಕು. ಹಳೆಯದಾದರೂ ಮತ್ತೆ ಮತ್ತೆ ನೆನಪಿಸಿಕೊಳ್ಳಬೇಕಾದ ಆ ಪಾಠ: ಸಿನಿಮಾ ಮಾಡಲಿಕ್ಕೆ ಮುಖ್ಯವಾದುದು ಕಥೆ ಹಾಗೂ ಸ್ವಂತಿಕೆ.

ಚುರುಮುರಿ

ಮುಂದಾನೊಂದು ಕಾಲದಲ್ಲಿ...

• ಲಿಂಗರಾಜು ಡಿ.ಎಸ್.

2071ನೇ ವರ್ಷದ ಜೂನ್ ತಿಂಗಳ 1ನೇ ತಾರೀಖು ಬೆಳಗ್ಗೆ ಎದ್ದೋನೇ ರೆಸ್ಪಿರೇಟರಿ ಮಾಸ್ಕ್ ತಗಲಾಕ್ಯಂಡು ಆಕ್ಸಿಜನ್ ಪ್ಲಾಂಟ್ ಆನ್ ಮಾಡಿದೆ. ಬಟ್ಟೆ ಸ್ಕ್ಯಾನು, ಸ್ಯಾನಿಟೈಸ್ ಮಾಡಿಕ್ಯಂಡ ನ್ಯಾನೋ, ಆರೋಗ್ಯ ಚೆನ್ನಾಗದೆ ಅಂತ ರಿಪೋರ್ಟ್ ಕೊಡ್ತು. ನನ್ನ ಮನೆ ಇದ್ದ 100ನೇ ಫ್ಲೋರಿಂದ ಆಚೆಗೆ ನೋಡಿದರೆ ಬರೀ ಡ್ರೋನುಗಳು, ಏರ್ ಟ್ಯಾಕ್ಸಿಗಳು ಓಡಾಡ್ತಿದ್ದೋ.

'ಪ್ರಜಾವಾಣಿ' ವರ್ಚುವಲ್ ಪೇಪರ್ ನೋಡಿದೆ. ಈವತ್ತು ಸರ್ಕಾರ ರಚನೆಗೆ ಪೀಪಲ್ ಪೋಲ್ ಕೌಂಟಾಯ್ತಾ ಇತ್ತು. ಸಾರ್ವಜನಿಕ ಹಣ ದುರುಪಯೋಗ ಮಾಡಿದೋನಿಗೆ, ಅಕ್ರಮವಾಗಿ ದುಡ್ಡು ಮಾಡಿದ್ದೋನಿಗೆ ಪೀಪಲ್ ಕೋರ್ಟ್ ಗುಂಡಿಟ್ಟು ಕೊಲ್ಲಕೆ ಆರ್ಡ್ರು ಮಾಡಿತ್ತು.

ಪೇಪರಲ್ಲಿ 'ಐವತ್ತೊರ್ಸದ ಹಿಂದೆ' ಕಾಲಂ ಕಾಣಿಸ್ತು! ಕೊರೊನಾ ವ್ಯಾಕ್ಸಿನ್, ಆಕ್ಸಿಜನ್ ಇಲ್ಲದೇ ಜನ ಸಾಯ್ತಿದ್ರೂ ರಾಜಕಾರಣಿಗಳು ಕ್ಯಾಮೆ ಬುಟ್ಟು ಲಡ್ಡು-ಲಸೆ ಅಂತ ಕಚ್ಚಾಡಿಕ್ಯಂಡು ಕಾಲ ಕಳೀದ್ರಂತೆ. ಈಗ ಪಾರ್ಟಿಗಳೇ ಇಲ್ದಿದ್ರಿಂದ ಒಳಜಗಳ, ಕಾಲೆಳೆತ, ಜಾತಿ ರಾಜಕೀಯವೇ ಇಲ್ಲ. ಸರ್ಕಾರದ ಮಾರಿಪತ್ತಲ್ಲಿ ನಿಸೂರಾಗಿ ಕೆಲಸ ಆಯ್ತವೆ. 2021ರಲ್ಲಿ 8 ಜನ ಬ್ಯಾಂಕುಗಳಿಗೆ ಬಗನಿ ಗೂಟ ಮಡಗಿ ಓಡೋಗಿದ್ರಂತೆ. ಈಗ ದುಡ್ಡು ಎಪ್ಪೆಸ್ ಅಂತ ಕಂಪ್ಲೆಂಟ್ ಬಂದ್ರೆ ಅಲ್ಲೇ ಶೂಟ್!

'ನೀನು ಚಂದ್ರಲೋಕಕ್ಕೆ ಹೋಗಬಕು. ಸಂದೇಗೆ ಸ್ಪೇಸ್ ಎಲಿವೇಟರ್ ಬುಕ್ಕಾಗ್ಯದೆ, ರೆಡಿಯಾಗು' ಅಂತ ಆಪೀಸಿಂದ ಹೋಲೋಗ್ರಾಫ್‌ನಲ್ಲಿ ಬಾಸ್ ಮಾತಾಡಿದ್ರು. ಅಲ್ಲಿ ಆಚೆ ಓಡಾಡಿಕ್ಯಂಡಿರಬೋದಲ್ಲಾ ಅಂತ ಖುಷಿಯಾಯ್ತು. ಮಧ್ಯಾಹ್ನದ ಊಟಕ್ಕೆ 3ಡಿ ಪ್ರಿಂಟಲ್ಲಿ ಚಿತ್ರಾನ್ನ ಮಾಡಿ, ಎರಡು ಕ್ಯಾಪ್ಸೂಲ್ ನೀರು ಕುಡದು ರೆಡಿಯಾದೆ.

ಸ್ಪೇಸ್ ಎಲೆವೇಟರ್ ಪೋರ್ಟಿಗೆ ಬಂದಾಗ ಯಂಟಪ್ಪಣ್ಣ ಕಾಯ್ತಿತ್ತು. 'ನನ್ನ ಬುಟ್ಟು ನೀನೆಂಗೋದಿಲಾ! ಹೋಗಬ್ಯಾಡ ಇಲ್ಲೇ ಇರೋ' ಅಂತ ಕೈ ಹಿಡಿದು ಎಳದೇಟಿಗೇ ನಾನು ಆಯತಪ್ಪಿ ಮುಗ್ಗರಿಸಿದೆ. ಎಚ್ಚರಾದಾಗ ಭವಿಷ್ಯದಿಂದ ವರ್ತಮಾನದ ಬಂಡಾಟಕ್ಕೆ ವಾಪಸ್ ಬಿದ್ದಿದ್ದೆ.

ಸಂಗತ

ಗೆಲ್ಲಬಲ್ಲೆವು, ಬದುಕಬಲ್ಲೆವು...

ಪ್ರಕ್ಷುಬ್ಧಗೊಳ್ಳುತ್ತಿರುವ ಮಾನವೀಯ ಸಂಬಂಧಗಳ ವಿಷವನ್ನು ಹಿಂಡಿ ತೆಗೆದು, ಅಮೃತತ್ವದ ಬೆಸುಗೆ ಬಿಗಿಯಲು ಇದು ಸಕಾಲ

• ಪ. ರಾಮಕೃಷ್ಣ ಶಾಸ್ತ್ರಿ

ಕೋವಿಡ್ ಎರಡನೇ ಅಲೆಯ ಹೊಡೆತಕ್ಕೆ ಸಿಲುಕಿದವರ ಸಾವು-ನೋವುಗಳು ಹೆಚ್ಚು ಸದ್ದು ಮಾಡುತ್ತಿವೆ. ಆದರೆ ಸದ್ದಿಲ್ಲದೆ, ಸುದ್ದಿಯಾಗದೆ, ಗದ್ದಲವೆಬ್ಬಿಸದೆ ತಮ್ಮ ಪಾಡಿಗೆ ತಾವು ತೆರೆಯಮರೆಯಲ್ಲಿ ನಿಂತೇ ಶ್ರಮಿಸಿದ ಅದೆಷ್ಟೋ ಮಾನವೀಯ ಹೃದಯಗಳು ಮಾತ್ರ ಯಾವುದೇ ಸಮ್ಮಾನಕ್ಕೂ ಕೈಯೊಡ್ಡಲಿಲ್ಲ. ಎಲ್ಲರೂ ಸುದ್ದಿಯ ಬಲೆಗೆ ಸಿಗಲಿಲ್ಲ.

ಅವರು, ಬಳಲಿದ ಸಮಾಜದ ಬಡಪಾಯಿಗಳ ಬೆನ್ನಿಗೆ ನಿಂತವರು. ಲಾಕ್‌ಡೌನ್‌ನಿಂದ ತತ್ತರಿಸಿ ಹೋದ ಬಹುಸಂಖ್ಯಾತರ ಬದುಕಿನ ಭಾರಕ್ಕೆ ಎಲ್ಲೋ ಒಂದು ಕಡೆ ಹೆಗಲು ಕೊಟ್ಟವರು. ಅಮಾನವೀಯ ನಡೆಯ, ರೋಸಿ ಹೋಗುವ ಸುದ್ದಿಗಳ ನಡುವೆಯೂ ಮಾನವೀಯತೆಯ ಸೆಲೆ ಜೀವಂತವಾಗಿಯೇ ಇದೆ ಎಂಬುದಕ್ಕೆ ಪ್ರತ್ಯಕ್ಷ ಸಾಕ್ಷಿಯಾದವರು.

ವೈದ್ಯರಿಗೆ, ದಾದಿಯರಿಗೆ, ಪೊಲೀಸರಿಗೆ ತಮ್ಮ ಜವಾಬ್ದಾರಿ ಮೆರೆದಾಗ ವೇತನವಾದರೂ ಸಿಗುತ್ತದೆಂಬ ಭಾವ ಇರಬಹುದು. ಆದರೆ, ಈ ಹೃದಯವಂತರಿಗೆ ಮಾನಸಿಕ ಸಂತೋಷವೇ ಬಹು ದೊಡ್ಡ ವೇತನ ಎಂದೆನಿಸಿಬಿಟ್ಟಿತು.

ಕೊರೊನಾ ಸೋಂಕಿಗೆ ತುತ್ತಾಗದೆ ಪಾರಾದರೂ ಗಳಿಕೆಯ ಬಾಗಿಲು ಮುಚ್ಚಿಹೋದವರಿಗೆ ಅನ್ನದ ಪಾತ್ರೆ ಬರಿದಾಗಿ ಹೋಗಿತ್ತು. ಎಲ್ಲ ಕಡೆ ಒಂದಷ್ಟು ಯುವಕರ ತಂಡಗಳು ಅಂಥವರನ್ನು ಹುಡುಕಿಕೊಂಡು ಹೋಗಿ ಆಹಾರದ ಪೊಟ್ಟಣಗಳನ್ನು ನೀಡಿ ಹಸಿವು ನೀಗಿಸಿದವು. ಬೀದಿ ನಾಯಿಗಳಿಗೆ ಕೂಳೇ ಇರಲಿಲ್ಲ. ಮನುಷ್ಯ ಕೊಡುವ ಆಹಾರವನ್ನೇ ನಂಬಿ ಅಂಗಡಿಗಳ ಬಾಗಿಲು ಕಾಯುವ ಅವುಗಳ ಪರಿಸ್ಥಿತಿಯನ್ನು ಅರ್ಥೈಸಿಕೊಂಡ ಸಹೃದಯರೊಬ್ಬರು ಅಕ್ಕಿಯ ಜೊತೆಗೆ ಕೋಳಿಮಾಂಸದ ಅಂಗಡಿಯಿಂದ ತಂದ ತ್ಯಾಜ್ಯಗಳನ್ನೂ ಬೇಯಿಸಿ ದಿನವೂ ರಾಜಾತಿಥ್ಯ ನೀಡಿದರು. ಔಷಧಗಳನ್ನು ತರಲಾಗದೆ ಪರಿತಪಿಸಿದವರ ಮನೆ ಬಾಗಿಲಿಗೆ ಅದನ್ನೂ ತಲುಪಿಸಲು ಶ್ರಮಿಸಿದ ಕರುಣವಂತರೂ ಕಂಡುಬಂದರು.

ಬೆಳೆದ ತರಕಾರಿಗಳಿಗೆ ಮಾರುಕಟ್ಟೆ ಇಲ್ಲವೆಂದು ಬೀದಿಗೆ ತಂದು ಎಸೆಯುತ್ತಿದ್ದ ರೈತರ ಹತಾಶೆಯನ್ನು ಗಮನಿಸಿ, ಅದನ್ನೆಲ್ಲ ಖರೀದಿಸಿ, ಹಸಿದ ಮಂದಿಯನ್ನು ಕರೆದು ಹಂಚಿದವರೂ ದೇವರಂತೆ ಎನಿಸಿಕೊಂಡರು.

ಬಂಧುಗಳೇ ಶವದ ಬಳಿಗೆ ಸುಳಿಯದ ಪ್ರಸಂಗಗಳು ನಡೆದವು. ದಾಸರು ಹೇಳಿದ ಹಾಗೆ, 'ಮಂಚ ಬಾರದು ಮಡದಿ ಬಾರಳು ಕಂಚು ಕನ್ನಡಿ ಬಾರದು, ಸಂಚಿತಾರ್ಥದ ದ್ರವ್ಯ ಬಾರದು ಮುಂಚೆ ಮಾಡಿರೋ ಧರ್ಮವ, ಅರ್ಥವ್ಯಾರಿಗೆ ಪುತ್ರರ್‍ಯಾರಿಗೆ ಮಿತ್ರ ಬಾಂಧವರ್‍ಯಾರಿಗೆ? ಕರ್ತೃ ಯಮನವರೆಳೆದು ಒಯ್ವಾಗ ಅರ್ಥ ಪುತ್ರರು ಕಾಯ್ವರೆ?' ಎಂಬ ಪ್ರಶ್ನೆ ನೆನಪಾಯಿತು. ಯಾರಿಗೂ ಬೇಡವಾದ ಶವಗಳಿಗೆ ಯಾರೋ ಯಾವ ಜಾತಿಯವರೋ ಸಂಸ್ಕಾರ ಮಾಡಿದರು. ಇಲ್ಲಿ ಕೋಮು ಭೇದಗಳು, ಧಾರ್ಮಿಕ ಮೇಲುಕೀಳುಗಳು ಒಂದೂ ಪರಿಗಣನೆಯಾಗದೆ ಸ್ಪಷ್ಟವಾಗಿ ಮೆರೆದದ್ದು ಒಂದೇ, ಅದು ಮಾನವೀಯತೆ.

ಕೋವಿಡ್ ಸಾಂಕ್ರಾಮಿಕವು ಹಲವು ಕುಟುಂಬಗಳಲ್ಲಿ ಬೆಳಗುವ ದೀಪಗಳನ್ನು ನಂದಿಸಿಬಿಟ್ಟಿದ್ದರೂ ಬುದ್ಧಿಜೀವಿ ಎನಿಸಿಕೊಂಡ ಮನುಷ್ಯ ಕಲಿಯಲೇಬೇಕಾದ ಹಲವು ಪಾಠಗಳನ್ನೂ ಕಲಿಸಿದೆ. ತಿರುಗಾಟದಲ್ಲಿ ಸಂಯಮ, ಸಂಪರ್ಕದಲ್ಲಿ ಪರಿಮಿತಿ, ಶುಚಿತ್ವದ ಪ್ರಜ್ಞೆ ಸದಾಕಾಲವೂ ಪರಿಪಾಲನೆಗೆ ಯೋಗ್ಯವಾದುವೆಂಬ ಮಂತ್ರವನ್ನು ಉಚ್ಚರಿಸಿದೆ. ಹೊಡೆದಾಟ, ದ್ವೇಷ, ತೋಳ್ಬಲಗಳಿಗಿಂತ ಸಹಬಾಳ್ವೆ, ಸಹಕಾರಗಳಿದ್ದರೆ ಯಾವುದೇ ಸಂಕಷ್ಟವನ್ನೂ ಎದುರಿಸಬಹುದೆಂಬುದನ್ನು ಸ್ಪಷ್ಟಪಡಿಸಿದೆ.

ಗುರುತಿಸುವ ಸಾಮರ್ಥ್ಯವಿದ್ದರೆ ಬೇರೆಯವರ ಎಲ್ಲ ಅವಗುಣಗಳನ್ನೂ ಕ್ಷಮಿಸಿ, ಅವರಲ್ಲಿದ್ದ ಅಗಾಧ ಕೆಟ್ಟಗುಣದ ರಾಶಿಯಲ್ಲೂ ಒಂದೇ ಹನಿಯಷ್ಟು ದೊಡ್ಡ ಮಾನವೀಯತೆಯನ್ನು ಹೆಕ್ಕಿ ತೆಗೆಯಬಹುದು. ಪ್ರಕ್ಷುಬ್ಧಗೊಳ್ಳುತ್ತಿರುವ ಮಾನವೀಯ ಸಂಬಂಧಗಳ ವಿಷವನ್ನು ಹಿಂಡಿ ತೆಗೆದು ಅಮೃತತ್ವದ ಬೆಸುಗೆ ಬಿಗಿಯಲು ಇದೀಗ ಸಕಾಲವೆನಿಸಿದೆ.

ಮನುಷ್ಯ ಬೇರೊಬ್ಬ ಮನುಷ್ಯನನ್ನು ಪ್ರೀತಿಸಲು, ಹೆಗಲೆಣೆಯಾಗಲು ಸಾಂಕ್ರಾಮಿಕವು ಅವಕಾಶ ಒದಗಿಸಿತು. ಕಾಗೆ ಒಂದಗುಳ ಕಂಡರೆ ತನ್ನ ಬಳಗವ ಕೂಗಿ ಕರೆಯುತ್ತದೆ, ಮನುಷ್ಯನಿಗೆ ಈ ಬುದ್ಧಿಯಿಲ್ಲ ಎಂದು ಹಾಡು ಕಟ್ಟಿದವರಿಗೆ ಉತ್ತರ ಹೇಳಲು ಬಹುಮಂದಿ ಸದ್ಗುಣಿಗಳ ಕಾಯಕಪ್ರಜ್ಞೆಯಿಂದ ಸಾಧ್ಯವಾಯಿತು. ಬೇರೊಬ್ಬರ ಒಳಿತಿಗಾಗಿ ತಮ್ಮ ಸಮಯವನ್ನು ಮೆರೆದವರು ಯಾರೆಂಬುದೇ ನಾಳೆಯ ದಿನಗಳಲ್ಲಿ ತಿಳಿಯದೇ ಹೋಗಬಹುದು. ಯಾಕೆಂದರೆ, ನಾಯಿ ಒಂದು ಹಿಡಿ ಅನ್ನ ಕೊಟ್ಟವನನ್ನು ಬದುಕಿದಷ್ಟು ದಿನವೂ ಮರೆಯುವುದಿಲ್ಲ. ಮನುಷ್ಯನ ಚಿತ್ತಭಿತ್ತಿಯಲ್ಲಿ ಅಚ್ಚೊತ್ತಿದುದೆಲ್ಲ ಅಳಿಸಿಹೋಗುವುದು ಬೇಗನೆ. ಆದರೆ ಅಂಥವರು ನೆಲದ ಮಣ್ಣಿನಲ್ಲಿ ಒತ್ತಿದ ಒಳಿತಿನ ಮಾದರಿಯ ಹೆಜ್ಜೆಗಳು ಮಾತ್ರ ಯಾರೋ ಒಂದಿಬ್ಬರ ಹೃದಯದಲ್ಲಾದರೂ ಅಳಿಯದೇ ಉಳಿಯುತ್ತವೆ ಎಂಬುದರಲ್ಲಿ ಅನುಮಾನವೇ ಇರದು.

ಸ್ವಾರ್ಥವನ್ನು ಮರೆತು ಅದೆಷ್ಟೋ ಮಂದಿ ಸ್ವಂತ ಹಣ ಉಪಯೋಗಿಸಿದರು, ಇದ್ದವರಲ್ಲಿ ಕೇಳಿ ತಂದರು. ಕೆಲವು ಯುವಕರಂತೂ ಬೇರೆಯವರಿಗೆ ನೆರವಾಗುವುದೇ ಭಗವಂತನ ಸೇವೆ ಎಂಬ ಭಾವದಿಂದ ಟೊಂಕಕಟ್ಟಿ ನಿಂತರು.

ವಿಶ್ವವನ್ನೇ ಕಾಡಿದ ಇಂತಹ ಇನ್ನೊಂದು ಮಾರಿ ಅಪ್ಪಳಿಸಿದರೂ ಮಾನವೀಯತೆಯ ಹೃದಯ ಮಿಡಿಯುವ ಜನರ ಒರತೆ ಹರಿಯುತ್ತಲೇ ಇದ್ದರೆ ಹತಾಶೆಯ ಅಗತ್ಯವಿಲ್ಲ. ಗೆಲ್ಲಬಲ್ಲೆವು, ಬದುಕಬಲ್ಲೆವು ಎನ್ನುವ ಆತ್ಮವಿಶ್ವಾಸವು ಉಪಕೃತ ವ್ಯಕ್ತಿಯಲ್ಲಿಯೂ ಮೂಲಭೂತ ಕೆಟ್ಟ ಗುಣಗಳಿದ್ದರೆ ಪರಿವರ್ತನೆಗೆ ಕಾರಣವಾಗಬಹುದು. ಸಂತರು ಹೇಳಿದ್ದು ಇದಕ್ಕೇ ಅಲ್ಲವೆ, 'ಒಳಿತು ಮಾಡು ಮನುಷಾ, ನೀ ಇರೋದು ಮೂರು ದಿವಸಾ...'

ವಾಚಕರ ವಾಣಿ

ಮನೆಗಳಿಗೆ ಕೆಂಪುಪಟ್ಟಿ: ಅವೈಜ್ಞಾನಿಕ ಕ್ರಮ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ಕೋವಿಡ್ ಸೋಂಕಿಗೆ ಒಳಗಾಗಿ ಮನೆ ಆರೈಕೆಯಲ್ಲಿರುವವರ ನಿವಾಸದ ಮುಂದೆ ಕೆಂಪುಪಟ್ಟಿಯನ್ನು ಕಟ್ಟಲು ಮುಂದಾಗಿರುವುದು ಅಮಾನವೀಯ. ಕೋವಿಡ್ ರೋಗಿಗಳಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪುತ್ತಿರುವವರ ಜೊತೆಗೆ ಭಯದಿಂದ ಪ್ರಾಣಾಪಾಯ ತಂದುಕೊಳ್ಳುವವರೂ ಸೇರಿದ್ದಾರೆ.

ಆಸ್ಪತ್ರೆಯಲ್ಲಿ ಅಕ್ಕಪಕ್ಕ ಸಾವಿನ ದೃಶ್ಯ ಕಂಡು ಮಾನಸಿಕ ಸ್ಥೈರ್ಯ ಕಳೆದುಕೊಳ್ಳುವುದನ್ನು ತಪ್ಪಿಸಲು ಮನೆ ಆರೈಕೆ ಉತ್ತಮ ವಿಧಾನವಾಗಿದೆ. ಅನೇಕ ಸೋಂಕಿತರು ಬೇಗ ಗುಣಮುಖರಾಗಿ ಹೊರಬರಲು ಅವರಲ್ಲಿಯ ಧೈರ್ಯದ ಮನೋಭಾವವೂ ಕಾರಣ. ಕೆಲವು ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಮನರಂಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ರೋಗಿಗಳಲ್ಲಿ ಮನೋಸ್ಥೈರ್ಯವನ್ನು ಹೆಚ್ಚಿಸಲು ಪ್ರಯತ್ನಿಸಲಾಗುತ್ತಿದೆ. ಅಂತಹುದರಲ್ಲಿ ಬಿಬಿಎಂಪಿಯು ಹೀಗೆ ಕೆಂಪುಪಟ್ಟಿ ಕಟ್ಟಲು ಮುಂದಾದರೆ ಸೋಂಕಿತರು ಮತ್ತಷ್ಟು ಮಾನಸಿಕ ಹಿಂಸೆ ಅನುಭವಿಸುವಂತೆ ಆಗುವುದಿಲ್ಲವೇ? ಬಿಬಿಎಂಪಿ ಈ ಅವೈಜ್ಞಾನಿಕ ಕ್ರಮವನ್ನು ಕೈಬಿಟ್ಟು ಸೋಂಕಿತರಲ್ಲಿ ಧೈರ್ಯ ತುಂಬುವ ಕೆಲಸ ಮಾಡಲಿ.

ಶ್ರೀಧರ ಎಸ್. ವಾಣಿ, ಕಲ್ಲತಾವರಗೇರಿ, ಕೊಪ್ಪಳ

ಸೋಂಕು ನಿವಾರಕ: ಪಾರದರ್ಶಕತೆ ಇರಲಿ

ಕೋವಿಡ್ ನಿಯಂತ್ರಣದ ಉದ್ದೇಶದಿಂದ ವಿಮಾನದ ಮೂಲಕ ಸೋಂಕು ನಿವಾರಕ ಸಿಂಪಡಿಸುವ ಕಾರ್ಯಾಚರಣೆಯನ್ನು ಪ್ರಾಯೋಗಿಕವಾಗಿ ಆರಂಭಿಸಲಾಗಿದೆ (ಪ್ರ.ವಾ., ಮೇ 30). ಇದು ಸಾವಯವ ಸೋಂಕು ನಿವಾರಕ, ಹಾಗಾಗಿ ಇದರಿಂದ ಮನುಷ್ಯರಿಗೆ ಯಾವುದೇ ರೀತಿಯಲ್ಲಿ ತೊಂದರೆ ಆಗದು ಎಂಬ ಸರ್ಕಾರದ ಹೇಳಿಕೆಯು ನಂಬಿಕೆಯನ್ನು ಆಧರಿಸಿದ್ದೋ ಅಥವಾ ವೈಜ್ಞಾನಿಕವಾಗಿ ಪರೀಕ್ಷೆಗಳಿಂದ ದೃಢಪಟ್ಟಿದೆಯೋ ತಿಳಿಯದು. ಹಾಗೆಯೇ ಈ ಸಾವಯವ ಸೋಂಕು ನಿವಾರಕ ತಯಾರಿಕೆಗೆ ಬಳಸುವ ಕಚ್ಚಾ ವಸ್ತುಗಳ ಬಗ್ಗೆ ಜನರಿಗೆ ಮಾಹಿತಿ ಕೊಡುವುದು ಸೂಕ್ತ.

ರಾಸಾಯನಿಕದ ವಿನಾ ಯಾವುದೇ ಜೀವಾಣುಗಳನ್ನು ನಾಶಪಡಿಸಲು ಸಾಧ್ಯವಿಲ್ಲ ಎಂಬುದು ನನ್ನಂಥ ವಿಜ್ಞಾನ ವಿದ್ಯಾರ್ಥಿಗಳ ಅಭಿಪ್ರಾಯ. ಜೀವಾಣುಗಳನ್ನು ಕೊಲ್ಲುವ ಸಾಮರ್ಥ್ಯ ಇರುವ ಸೋಂಕು ನಿವಾರಕವು ಮನುಷ್ಯನ ಮೇಲೆ ಸಹ ಪರಿಣಾಮ ಬೀರುವ ಸಾಧ್ಯತೆಯನ್ನು ತಳ್ಳಿಹಾಕಬಹುದೇ? ಆದ್ದರಿಂದ ಸಿಂಪಡಣೆ ಕಾರ್ಯವು ಸಂಶೋಧನಾನಿರತ ವಿಜ್ಞಾನಿಗಳ ತಂಡದ ನೇತೃತ್ವದಲ್ಲಿ ನಡೆಯುವುದು ಒಳಿತು.

ಡಾ. ಜಿ.ಬೈರೇಗೌಡ, ಬೆಂಗಳೂರು

ಲಾಕ್‌ಡೌನ್: ತಜ್ಞರ ಸಲಹೆಯೇ ಮುಖ್ಯ

ರಾಜ್ಯದಲ್ಲಿ ಕೋವಿಡ್ ಸೋಂಕಿತರ ಸಂಖ್ಯೆ ಕ್ರಮೇಣವಾಗಿ ಕಡಿಮೆಯಾಗುತ್ತಿದ್ದರೂ ಇನ್ನೂ ಅಪಾಯದ ಸ್ಥಿತಿ ದೂರವಾಗಿಲ್ಲ. ಇದೇ 7ರ ನಂತರ ಲಾಕ್‌ಡೌನ್ ಮುಂದುವರಿಸುವ ಅಥವಾ ಮುಕ್ತಾಯಗೊಳಿಸುವ ಬಗ್ಗೆ ಪರ-ವಿರೋಧದ ಚರ್ಚೆಗಳು ನಡೆಯುತ್ತಿವೆ. ಅದರಲ್ಲೂ ಹಲವು ಸಚಿವರು ಹಾಗೂ ಶಾಸಕರು ಲಾಕ್‌ಡೌನ್ ಬೇಡವೆಂದು ಮುಖ್ಯಮಂತ್ರಿಯನ್ನು ಒತ್ತಾಯಿಸುತ್ತಿದ್ದಾರೆ. ಜನಾರೋಗ್ಯ ತಜ್ಞರ ಅಭಿಪ್ರಾಯದಂತೆ, ಪಾಸಿಟಿವ್ ಪ್ರಕರಣಗಳ ಸಂಖ್ಯೆ ಶೇ 5ಕ್ಕಿಂತ ಕಡಿಮೆಯಾದಾಗ ಮಾತ್ರ ನಿರ್ಬಂಧಗಳನ್ನು ಸಡಿಲಿಸುವ ಕುರಿತು ಆಲೋಚನೆ ಮಾಡಬಹುದು. ಹೀಗಾಗಿ ಏಕಾಏಕಿ ಲಾಕ್‌ಡೌನ್ ಸಡಿಲಿಸುವುದು ಜಾಣತನದ ನಿರ್ಧಾರವಲ್ಲ. ಕೆಲವು ದಿನಗಳ ಮಟ್ಟಿಗೆ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿ, ಸುರಕ್ಷಿತವೆನಿಸಿದರೆ ಆಗ ಮಾತ್ರ ಲಾಕ್‌ಡೌನ್ ಸಡಿಲಿಸುವ ಕುರಿತು ನಿರ್ಧರಿಸಬಹುದು.

ಇಂತಹ ಸಂದರ್ಭಗಳಲ್ಲಿ ಮಂತ್ರಿಗಳು ಅಥವಾ ಶಾಸಕರ ಅಭಿಪ್ರಾಯಗಳ ಮೇಲೆ ಅವಲಂಬಿತರಾಗದೆ ತಜ್ಞರ ಸಲಹೆಯನ್ನು ಮಾತ್ರ ಪರಿಗಣಿಸಬೇಕು. ಏಕೆಂದರೆ ಯಾವುದೇ ಒಂದು ಸಾಂಕ್ರಾಮಿಕ ರೋಗದ ರೋಗಶಾಸ್ತ್ರವನ್ನು ತಜ್ಞರು ಚೆನ್ನಾಗಿ ಅರಿತಿರುತ್ತಾರೆ. ಬ್ರಿಟನ್‌ನಲ್ಲಿ ಈ ರೀತಿಯ ನಿರ್ಧಾರಗಳನ್ನು ವೈದ್ಯಕೀಯ ತಜ್ಞರ ಸಲಹೆಗಳನ್ನು ಆಧರಿಸಿಯೇ ಕೈಗೊಳ್ಳಲಾಗುತ್ತದೆ. ಇದರಲ್ಲಿ ರಾಜಕಾರಣಿಗಳು ಮಧ್ಯಪ್ರವೇಶಿಸುವುದಿಲ್ಲ. ಆದ್ದರಿಂದ ಅಲ್ಲಿನ ಜನರು ಇದುವರೆಗೂ ನಾಲ್ಕು ಬಾರಿ ಲಾಕ್‌ಡೌನ್ ಅನ್ನು ಕಂಡಿದ್ದಾರೆ ಹಾಗೂ ಅಲ್ಲಿನ ಲಸಿಕೆ ನೀಡಿಕೆ ಪ್ರಮಾಣವೂ ತುಂಬಾ ಚೆನ್ನಾಗಿದೆ ಎಂದು ಹೇಳಲಾಗುತ್ತಿದೆ.

ಒಂದೊಮ್ಮೆ ನಮ್ಮಲ್ಲಿ ದಿಢೀರ್ ಎಂದು ಲಾಕ್‌ಡೌನ್ ನಿರ್ಬಂಧಗಳನ್ನು ಸಡಿಲಿಸಿದ್ದೇ ಆದಲ್ಲಿ, ಕಡಿಮೆಯಾಗಿರುವ ಸೋಂಕಿನ ಪ್ರಮಾಣ ಮತ್ತೆ ಸ್ಫೋಟಗೊಳ್ಳುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಅಲ್ಲದೆ ಮುಂದೆ ಬರಬಹುದಾದ ಮೂರನೆಯ ಅಲೆಯನ್ನು ಎದುರಿಸಲು ಈಗಿನಿಂದಲೇ ಸಿದ್ಧರಾಗಬೇಕು.

ಭುವನೇಶ್ವರಿ ಅಚ್ಚೀಗಾಂವ, ವಿಜಯಪುರ

ಅಂಗವಿಕಲ ಮಕ್ಕಳ ಹಣ ಸದ್ಬಳಕೆ ಆಗಲಿ

ಅಂಗವಿಕಲ ಮಕ್ಕಳ ವಿಶೇಷ ಶಾಲೆಗಳು ಕೊರೊನಾ ಹಾವಳಿಯಿಂದಾಗಿ ಕಳೆದ ವರ್ಷದಿಂದ ಸ್ಥಗಿತಗೊಂಡು, ಮಕ್ಕಳು ಮನೆಯಲ್ಲಿಯೇ ಉಳಿಯುವಂತಾಗಿದೆ. ರಾಜ್ಯದಲ್ಲಿ ಸುಮಾರು 10,000ಕ್ಕೂ ಹೆಚ್ಚು ಮಕ್ಕಳು ಈ ಶಾಲೆಗಳಲ್ಲಿ ಕಲಿಯುತ್ತಿದ್ದಾರೆ. ಶಾಲೆ ಸ್ಥಗಿತಗೊಂಡಿದ್ದರೂ ಸರ್ಕಾರವು ಶಾಲಾ ಕಟ್ಟಡ ಬಾಡಿಗೆ ಮತ್ತು ಶಿಕ್ಷಕರ ಗೌರವಧನವನ್ನು ತ್ರೈಮಾಸಿಕವಾಗಿ ಸ್ವಯಂಸೇವಾ ಸಂಸ್ಥೆಗಳಿಗೆ ನೀಡುತ್ತಿದ್ದು, ಅವರ ಆರ್ಥಿಕ ಹೊರೆ ತಗ್ಗಿಸಿದೆ. ಉಳಿದಂತೆ ಮಕ್ಕಳ ಸಮವಸ್ತ್ರ, ವೈದ್ಯಕೀಯ ವೆಚ್ಚ ಹಾಗೂ ಊಟದ ವೆಚ್ಚಕ್ಕೆ ಮೀಸಲಿಟ್ಟಿದ್ದ ಹಣ ಬಳಕೆಯಾಗದೆ ಸರ್ಕಾರದಲ್ಲೇ ಉಳಿಯುತ್ತಿದೆ. ಈ ಎಲ್ಲಾ ವೆಚ್ಚಗಳು ಸೇರಿದರೆ ಸುಮಾರು ₹ 12 ಕೋಟಿಯಿಂದ 13 ಕೋಟಿಯಾಗುತ್ತದೆ.

ಕೊರೊನಾ ಸಾಂಕ್ರಾಮಿಕ ಬಹುತೇಕ ಎಲ್ಲರ ಆರ್ಥಿಕ ಸ್ಥಿತಿಯನ್ನೂ ಬುಡಮೇಲು ಮಾಡಿದೆ. ಅದರಲ್ಲೂ ಹೆಚ್ಚಿನ ಅಂಗವಿಕಲ ಮಕ್ಕಳ ಕುಟುಂಬಗಳು ಬಿ.ಪಿ.ಎಲ್ ಕಾರ್ಡ್‌ದಾರರಾಗಿದ್ದು ಜೀವನ ನಿರ್ವಹಣೆ ಬಹಳ ಕಷ್ಟದಿಂದ ಕೂಡಿರುತ್ತದೆ. ಆದ್ದರಿಂದ ಖರ್ಚಾಗದೇ ಉಳಿದಿರುವ ಹಣವನ್ನು ಮಕ್ಕಳಿಗೆ ಒದಗಿಸುವುದರಿಂದ ಆಯಾ ಕುಟುಂಬದ ನಿರ್ವಹಣೆಗೆ ಸಹಕಾರಿಯಾಗುತ್ತದೆ. ಎಲ್ಲಾ ಮಕ್ಕಳು ಸರ್ಕಾರದ ಅಂಗವಿಕಲ ಪಿಂಚಣಿ ಪಡೆಯುತ್ತಿದ್ದು, ಪೋಷಕರೊಂದಿಗೆ ಜಂಟಿ ಖಾತೆ ಹೊಂದಿರುತ್ತಾರೆ. ಅದೇ ಖಾತೆಗೆ ಈ ಹಣವನ್ನು ಜಮಾ ಮಾಡಬಹುದಾಗಿದೆ. ಇದು ಈ ಮಕ್ಕಳಿಗೆಂದೇ ಮೀಸಲಿಟ್ಟ ಹಣವಾದ್ದರಿಂದ ಸರ್ಕಾರಕ್ಕೆ ಹೊರೆಯೂ ಆಗದು.

ಚಂದ್ರಶೇಖರ ಪುಟ್ಟಪ್ಪ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದೆಹಲಿಯ ಸಂಚಿಗೆ ಸಿಲುಕಿದರೇ ಗೌಡರು?

● ಕೆ.ಆರ್. ರಮೇಶ್ ಕುಮಾರ್

ಎಚ್.ಡಿ. ದೇವೇಗೌಡ ಅವರು ದೇಶದ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿ (1996ರ ಜೂನ್ 1) ಇಂದಿಗೆ 25 ವರ್ಷಗಳು ಪೂರ್ಣಗೊಂಡಿವೆ. ದೇವೇಗೌಡರ ನಂತರ ಯಾವ ಕನ್ನಡಿಗರೂ ಈ ಹುದ್ದೆಯ ಸಮೀಪಕ್ಕೂ ಹೋಗಿಲ್ಲ. ಕನ್ನಡಿಗರೊಬ್ಬರು ದೇಶದ ಅತ್ಯುನ್ನತ ಹುದ್ದೆಗೇರಿದ ಸನ್ನಿವೇಶ ಮತ್ತು ಆ ಕಾಲದ ರಾಜಕಾರಣದ ಬಗ್ಗೆ ಅಂದು ದೇವೇಗೌಡರ ನಿಕಟವರ್ತಿಗಳಲ್ಲಿ ಒಬ್ಬರೆನಿಸಿಕೊಂಡಿದ್ದ ರಮೇಶ್ ಕುಮಾರ್ ಹಾಗೂ ಪತ್ರಕರ್ತ ಶಿವಾಜಿ ಗಣೇಶನ್ ಅವರು ಇಲ್ಲಿ ಮೆಲುಕು ಹಾಕಿದ್ದಾರೆ...

1996ರಲ್ಲಿ ನಾನು ವಿಧಾನಸಭೆಯ ಅಧ್ಯಕ್ಷನಾಗಿದ್ದೆ. ಎಚ್.ಡಿ. ದೇವೇಗೌಡರು ಆಗ ಮುಖ್ಯಮಂತ್ರಿಯಾಗಿದ್ದರು. 1989ರಿಂದ 1994ರವರೆಗಿನ ಕಾಂಗ್ರೆಸ್ ನೇತೃತ್ವದ ಸರ್ಕಾರದಲ್ಲಿ ಆಗಿದ್ದ ಅವ್ಯವಸ್ಥೆಯ ವಿರುದ್ಧ ನಾವು ಐದು ವರ್ಷಗಳ ಕಾಲ ಹೋರಾಟ ಮಾಡಿ ಪುನಃ ಜನತಾ ದಳದ ಸರ್ಕಾರವನ್ನು ಅಸ್ತಿತ್ವಕ್ಕೆ ತಂದಿದ್ದೆವು.

ಉತ್ತಮವಾದ ಆಡಳಿತವನ್ನು ದೇವೇಗೌಡರು ನೀಡುತ್ತಿದ್ದರು. ಹಿಂದಿನ ಸರ್ಕಾರದ ಅವಧಿಯಲ್ಲಿ ಆಡಳಿತದ ಘನತೆ ಮತ್ತು ಗೌರವ ಕಳೆದುಹೋಗಿತ್ತು. ಅದನ್ನು ಮರಳಿ ತರುವುದು ಪ್ರಯಾಸದ ಕೆಲಸವಾಗಿತ್ತು. ಅಂತಹ ಸ್ಥಿತಿಯಲ್ಲಿ ಒಳ್ಳೆಯ ಸರ್ಕಾರ ಎಂಬ ಕೀರ್ತಿಗೆ ಪಾತ್ರವಾಗುವ ದಿಕ್ಕಿನತ್ತ ಆಗಿನ ಜನತಾ ದಳ ಸರ್ಕಾರ ಸಾಗುತ್ತಿತ್ತು. ಅಷ್ಟರಲ್ಲಿ 1996ರಲ್ಲಿ ಲೋಕಸಭಾ ಚುನಾವಣೆ ನಡೆಯಿತು. ಆಗ, ಜನತಾ ದಳ 16 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತು. ಮೊದಲ ಬಾರಿಗೆ ರಾಜ್ಯದಲ್ಲಿ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹೊರತುಪಡಿಸಿ ಬೇರೆ ಪಕ್ಷದವರು ಅಷ್ಟು ದೊಡ್ಡ ಸಂಖ್ಯೆಯಲ್ಲಿ ಗೆಲುವು ಸಾಧಿಸುವುದಕ್ಕೆ ಅವಕಾಶವಾಯಿತು.

ಆಗ ಒಂದು ರೀತಿಯ ವಿಚಿತ್ರ ಸನ್ನಿವೇಶ ಸೃಷ್ಟಿಯಾಯಿತು. ಪ್ರಧಾನಿಯಾಗಿದ್ದ ಪಿ.ವಿ. ನರಸಿಂಹ ರಾವ್ ಅವರಿಗೆ ಬಹುಮತ ಬರಲಿಲ್ಲ. ಕಾಂಗ್ರೆಸ್ಸೇತರ ವಿರೋಧ ಪಕ್ಷಗಳು ಬಿಜೆಪಿಯನ್ನು ಹೊರಗಿಟ್ಟು ಸರ್ಕಾರ ರಚಿಸುವ ಪ್ರಯತ್ನಕ್ಕೆ ಕೈ ಹಾಕಿದವು. ವಿ.ಪಿ. ಸಿಂಗ್ ಪ್ರಧಾನಿಯಾಗಲು ನಿರಾಕರಿಸಿದರು. ಹಲವು ಸುತ್ತಿನ ಸಭೆಗಳು ನಡೆದ ಬಳಿಕ ಎಚ್. ಡಿ. ದೇವೇಗೌಡರ ಹೆಸರನ್ನು ಪ್ರಧಾನಿ ಹುದ್ದೆಗೆ ಅಂತಿಮಗೊಳಿಸಲಾಯಿತು. ನಿಜವಾಗಿಯೂ ಯಾವ ಕಾರಣಕ್ಕಾಗಿ ಇಂತಹ ಅಚ್ಚರಿಯ ಆಯ್ಕೆ ನಡೆಯಿತು ಎಂಬುದು ಇಂದಿಗೂ ತಿಳಿದಿಲ್ಲ.

ನಮ್ಮ ದೇಶದ ಇತಿಹಾಸ ಮತ್ತು ಭೂಗೋಳವನ್ನು ಅಧ್ಯಯನ ಮಾಡಿದಾಗ ಕರ್ನಾಟಕದವರು ಪ್ರಧಾನಿ ಹುದ್ದೆಯವರೆಗೆ ಹೋಗಲು ಸಾಧ್ಯವೇ ಇಲ್ಲ. 1996ರಲ್ಲಿ ಸಂಯುಕ್ತ ರಂಗದಲ್ಲಿದ್ದ ಪ್ರಬಲ ಪಕ್ಷಗಳ ನಾಯಕರು ಎಲ್ಲರಿಗೂ ಒಪ್ಪಿಗೆಯಾಗದೇ ಇದ್ದುದಕ್ಕೆ ಮತ್ತು ಅವರಲ್ಲಿನ ಆಂತರಿಕ ಸಮಸ್ಯೆಗಳ ಕಾರಣದಿಂದಾಗಿ ದೇವೇಗೌಡರಿಗೆ ಅವಕಾಶ ದೊರಕಿತು. ಡಿಎಂಕೆಯಲ್ಲಿ ಕರುಣಾನಿಧಿ ಸರ್ವೋಚ್ಚ ನಾಯಕ. ಅವರನ್ನು ಪ್ರಧಾನಿಯಾಗಿ ಆಯ್ಕೆ ಮಾಡಲು ಸಾಧ್ಯವಿರಲಿಲ್ಲ. ಪಕ್ಷದ ಬೇರೆಯವರನ್ನು ಅವರು ಒಪ್ಪುತ್ತಿರಲಿಲ್ಲ. ತೆಲುಗು ದೇಶಂ ಪಕ್ಷದ ಚಂದ್ರಬಾಬು ನಾಯ್ಡು ವಿಚಾರದಲ್ಲೂ ಇಂತಹ ಸಮಸ್ಯೆಗಳಿದ್ದವು. ವಿ.ಪಿ. ಸಿಂಗ್ ಸುತರಾಂ ಒಪ್ಪಲಿಲ್ಲ. ಹಾಗಾಗಿ ಗೌಡರಿಗೆ ಅವಕಾಶ ದೊರಕಿತು.

ಆ ಬೆಳವಣಿಗೆಯಿಂದ ನಮ್ಮೆಲ್ಲರಿಗೂ ಒಂದು ರೀತಿಯ ಸಂತೋಷ ಜತೆಗೆ ಆಘಾತವೂ ಆಗಿತ್ತು. ಒಂದು ಕಡೆಗೆ ಹಾಸನದ ಒಂದು ಸಣ್ಣ ಹಳ್ಳಿಯಲ್ಲಿ ರೈತ ಕುಟುಂಬದಲ್ಲಿ ಹುಟ್ಟಿ ತಾಲ್ಲೂಕು ಅಭಿವೃದ್ಧಿ ಮಂಡಳಿಯಿಂದ ರಾಜಕಾರಣ ಆರಂಭಿಸಿದ ನಮ್ಮ ನಾಯಕ ಪ್ರಧಾನಿ ಹುದ್ದೆಗೇರುತ್ತಿದ್ದಾರಲ್ಲಾ ಎಂಬ ಸಂತೋಷ ಇತ್ತು. ರಾಜ್ಯ ರಾಜಕಾರಣದಲ್ಲಿ ಏನಾಗುವುದೋ ಎಂಬ ಭಯವೂ ನಮ್ಮೆಲ್ಲರನ್ನೂ ಆವರಿಸಿತ್ತು. ಆದರೂ, ವಿರಳವಾಗಿ ಸಿಗುವ ಇಂತಹ ಅವಕಾಶವನ್ನು ಕಳೆದುಕೊಳ್ಳಬಾರದು ಎಂದು ನಾವೆಲ್ಲರೂ ದೇವೇಗೌಡರ ಜತೆಗೆ ನಿಂತೆವು.

ಗೌಡರು ಪ್ರಧಾನಿ ಹುದ್ದೆಗೇರಿದ ಬಳಿಕ ರಾಜ್ಯದಲ್ಲಿ ಜೆ.ಎಚ್. ಪಟೇಲ್ ಮುಖ್ಯಮಂತ್ರಿಯಾದರು. ಮೂರು ವರ್ಷಗಳ ಕಾಲ ರಾಜ್ಯದ ಆಡಳಿತವನ್ನು ಗೌರವಯುತವಾಗಿಯೇ ಮುನ್ನಡೆಸಿದರು. ರಾಜ್ಯ ಸರ್ಕಾರಕ್ಕೆ ದೇವೇಗೌಡರ ಮಾರ್ಗದರ್ಶನವೂ ಇತ್ತು. ಆದರೆ, ಪ್ರಧಾನಿಯಾಗಿ ದೊಡ್ಡ ಜವಾಬ್ದಾರಿಗಳನ್ನು ನಿರ್ವಹಿಸಬೇಕಾದ ಕಾರಣದಿಂದ ಇತ್ತ ಹೆಚ್ಚು ಗಮನ ಹರಿಸಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ.

ಈಗ ನಾವು– ಅವರು ಬೇರೆ ಬೇರೆ ಪಕ್ಷಗಳಲ್ಲಿದ್ದೇವೆ. ಸಂಬಂಧಗಳೂ ಅಷ್ಟೇನೂ ಚೆನ್ನಾಗಿಲ್ಲ. ಆದರೂ, ಸತ್ಯಕ್ಕೆ ಅಪಚಾರ ಮಾಡಬಾರದು. ದೇವೇಗೌಡರನ್ನು ಅನಿರೀಕ್ಷಿತವಾಗಿ, ಅವರು ಅಪೇಕ್ಷೆಪಡದೇ ಇರುವ ಸ್ಥಾನಕ್ಕೆ ಸಕಾರಣಗಳಿಲ್ಲದೆ ಬಲವಂತ ಮಾಡಿ ತಳ್ಳಲಾಗುತ್ತದೆ. ಅದೇ ರೀತಿ ನಿರ್ದಿಷ್ಟವಾದ ಕಾರಣಗಳು, ಆಪಾದನೆಗಳು ಇಲ್ಲದೆ ಅವರ ಸರ್ಕಾರವನ್ನು ಅಸ್ಥಿರಗೊಳಿಸಲಾಗುತ್ತದೆ. ಇದು ಅತ್ಯಂತ ಬೇಸರದ ಸಂಗತಿ. ದೇವೇಗೌಡರು ಪ್ರಧಾನಿ ಹುದ್ದೆಯಿಂದ ಕೆಳಕ್ಕಿಳಿದ ದಿನ ನಾವೆಲ್ಲರೂ ಬಹಳ ನೊಂದುಕೊಂಡಿದ್ದೆವು. 'ಎಲ್ಲೋ ಒಂದು ಕಡೆಯಲ್ಲಿ ನಾವು ಬಲಿ ಆದೆವೇನೊ' ಎಂಬ ನೋವು ಎಲ್ಲರನ್ನೂ ಕಾಡಿತ್ತು.

ಆಗ ಒಟ್ಟಿಗಿದ್ದ ನಾವು ಈಗ ಬೇರೆ ಬೇರೆ ಆಗಿದ್ದೇವೆ. ಆ ಪ್ರಶ್ನೆ ಬೇರೆ. ಪ್ರಧಾನಿಯಾಗಿದ್ದ ಅವಧಿಯಲ್ಲಿ ದೇವೇಗೌಡರು ತಮ್ಮ ಸಹೋದ್ಯೋಗಿಗಳ ಜತೆ ತುಂಬಾ ಗೌರವಯುತವಾಗಿ ನಡೆದುಕೊಳ್ಳುತ್ತಿದ್ದರು. ಯಾರೊಬ್ಬರೂ ಅವರ ಬಗ್ಗೆ ದೂರಿದ ಉದಾಹರಣೆಗಳಿಲ್ಲ. ಅವರು ಯಾವುದೇ ತಪ್ಪು ಮಾಡಿಲ್ಲ, ತಲೆ ತಗ್ಗಿಸುವಂತಹ ಕೆಲಸ ಮಾಡಿ ಪ್ರಧಾನಿ ಹುದ್ದೆಯಿಂದ ಕೆಳಕ್ಕೆ ಇಳಿಯಲಿಲ್ಲ. ದೆಹಲಿಯ ಸಂಚುಗಳ ಸ್ವರೂಪವೇ ಹಾಗಿರುತ್ತದೆ. ಕಣ್ಣಿಗೆ ಕಾಣುವುದಿಲ್ಲ.

ಒಬ್ಬ ಕನ್ನಡಿಗನಿಗೆ ಪ್ರಧಾನಿ ಹುದ್ದೆಗೇರುವ ಅವಕಾಶ ಸಿಗಬಹುದು ಎಂಬ ಕಲ್ಪನೆ ಕೂಡ ನಮಗೆ ಆಗ ಇರಲಿಲ್ಲ. ಅದೊಂದು ಹೆಮ್ಮೆಯ ಗಳಿಗೆ. 25 ವರ್ಷ ಎಷ್ಟು ಬೇಗ ಕಳೆದುಹೋಗಿದೆ. ಅತ್ಯಂತ ಹೆಮ್ಮೆಯಿಂದ ಆ ಗಳಿಗೆಗಳನ್ನು ನಾವು ಪುನಃ ನೆನಪಿಸಿಕೊಳ್ಳಬೇಕಿದೆ.

ಕೆಲವೇ ತಿಂಗಳ ಕಾಲ ಪ್ರಧಾನಿ ಹುದ್ದೆಯಲ್ಲಿದ್ದರೂ ದೇವೇಗೌಡರಿಗೆ ಕೀಳರಿಮೆ ಇರಲಿಲ್ಲ. ಹಿಂದಿ ಚೆನ್ನಾಗಿ ಬರುತ್ತಿರಲಿಲ್ಲ ಎಂಬುದೊಂದೆ ಅವರಲ್ಲಿ ಆಗ ಇದ್ದ ಕೊರತೆ. ಈಶಾನ್ಯ ಭಾರತದತ್ತ ಯಾವ ಪ್ರಧಾನಿಯೂ ಹೆಚ್ಚು ಗಮನಹರಿಸಿರಲಿಲ್ಲ. ಆದರೆ, ಗೌಡರು ಈಶಾನ್ಯ ರಾಜ್ಯಗಳಲ್ಲಿ ಹೆಚ್ಚು ಪ್ರವಾಸ ಮಾಡಿ ಆ ಪ್ರದೇಶದ ಜನರಲ್ಲಿ ಹೊಸ ಉತ್ಸಾಹ ತುಂಬಿದರು. ಕಾಶ್ಮೀರ ಆಗ ತುಂಬಾ ಪ್ರಕ್ಷುಬ್ಧಗೊಂಡಿದ್ದ ಪ್ರದೇಶವಾಗಿತ್ತು. ಅಲ್ಲಿಗೂ ಭೇಟಿನೀಡಿದ ಅವರು, ಅಲ್ಲಿನ ಹಲವು ಸಮಸ್ಯೆಗಳಿಗೆ ಪರಿಹಾರ ಒದಗಿಸಿದ್ದರು.

ರೈಲ್ವೆ, ರಾಷ್ಟ್ರೀಯ ಹೆದ್ದಾರಿ, ನೀರಾವರಿ ಯೋಜನೆಗಳು ಮತ್ತು ನಬಾರ್ಡ್ ಅನುದಾನದ ವಿಚಾರದಲ್ಲಿ ದೇವೇಗೌಡರಿಂದ ರಾಜ್ಯಕ್ಕೆ ಹೆಚ್ಚು ಅನುಕೂಲವಾಗಿದೆ. ಆದರೆ, ಸಂಯುಕ್ತ ರಂಗ ಸರ್ಕಾರದಲ್ಲಿ ಜನತಾ ದಳದ ಸಂಖ್ಯಾ ಬಲ ಕಡಿಮೆ ಇತ್ತು. ತೆಲುಗು ದೇಶಂ, ಡಿಎಂಕೆ ಸೇರಿದಂತೆ ಹಲವು ಮಿತ್ರ ಪಕ್ಷಗಳ ಸಂಖ್ಯಾಬಲ ಜಾಸ್ತಿ ಇತ್ತು. ಅವೆಲ್ಲವೂ ವ್ಯವಸ್ಥಿತ ಪಕ್ಷಗಳಾಗಿದ್ದವು. ಆ ಪಕ್ಷಗಳ ಸದೃಢ ನಾಯಕರು ಸ್ಥಳೀಯವಾಗಿ ಉಳಿದುಕೊಂಡು ದೇವೇಗೌಡರ ಕೊರಳಿಗೆ ಪ್ರಧಾನಿ ಹುದ್ದೆಯ ಜವಾಬ್ದಾರಿ ಹಾಕಿದ್ದರು. ದೇಶದ ಆಡಳಿತ ನೋಡಿಕೊಳ್ಳಬೇಕಾದ ಹೊಣೆಗಾರಿಕೆ ಗೌಡರ ಮೇಲಿತ್ತು. ಅದರ ನಡುವೆಯೂ ರಾಜ್ಯಕ್ಕಾಗಿ ಸಮಯ ನೀಡಲು ಪ್ರಯತ್ನಿಸುತ್ತಿದ್ದರು. ಚಾಣಾಕ್ಷರಾಗಿದ್ದ ಚಂದ್ರಬಾಬು ನಾಯ್ಡು ದೆಹಲಿ ರಾಜಕಾರಣದಲ್ಲಿ ಬೇರೂರಿಕೊಂಡಿದ್ದರು. ದೇವೇಗೌಡರು ಪ್ರಧಾನಿಯಾದರೂ ಆಗ ಆಂಧ್ರಪ್ರದೇಶ ಪಡೆದಷ್ಟು ಅನುಕೂಲಗಳನ್ನು ಕರ್ನಾಟಕ ಪಡೆಯಲು ಸಾಧ್ಯವಾಗಲಿಲ್ಲ. ಸರ್ಕಾರ ಪತನವಾಗುವ ಹೊತ್ತಿಗೆ ನಾಯ್ಡು ಅಂತಹವರು ಕೂಡ ಗೌಡರನ್ನು ಕೈಬಿಟ್ಟರು. ನಿಜವಾಗಿಯೂ ಅದೊಂದು ದುರಂತ.

ಲೇಖಕ: ಕಾಂಗ್ರೆಸ್‌ನ ಶಾಸಕ
(ನಿರೂಪಣೆ–ವಿ.ಎಸ್. ಸುಬ್ರಹ್ಮಣ್ಯ)

1990ರ ಮೇ 13ರಂದು ಮೈಸೂರಿನಲ್ಲಿ ನಡೆಯುತ್ತಿದ್ದ ಧರಣಿಯಲ್ಲಿ ರೈತರನ್ನು ಉದ್ದೇಶಿಸಿ ಎಚ್.ಡಿ.ದೇವೇಗೌಡ ಅವರು ಮಾತನಾಡಿದರು. ಎಚ್.ಎನ್.ನಾಗೇಗೌಡ, ಎಚ್.ಎಲ್.ತಿಮ್ಮೇಗೌಡ ಇದ್ದರು ಚಿತ್ರ: ಪ್ರಜಾವಾಣಿ ಆರ್ಕೈವ್

ಹೆಗಡೆಯವರ ಪ್ರಶಂಸೆ ಸಿಕ್ಕಿದ್ದರೆ...

ಸಂಯುಕ್ತ ರಂಗ ಸರ್ಕಾರದ ಸ್ಥಾಪನೆಗೆ ಪ್ರಯತ್ನಗಳು ಆರಂಭವಾದಾಗ ರಾಮಕೃಷ್ಣ ಹೆಗಡೆಯವರು ಪ್ರಧಾನಿ ಹುದ್ದೆಗೆ ಆಯ್ಕೆಯಾಗಬಹುದು ಎಂದು ಎಲ್ಲರೂ ಊಹಿಸಿದ್ದರು. ಹೆಗಡೆಯವರು ಪ್ರಧಾನಿಯಾಗುವುದಕ್ಕೆ ದೇವೇಗೌಡರಿಗೂ ಆಕ್ಷೇಪಣೆ ಇರಲಿಲ್ಲ. ಆದರೆ, ಲೋಕಸಭಾ ಚುನಾವಣಾ ಫಲಿತಾಂಶ ಪ್ರಕಟವಾದ ದಿನ ಮಾಧ್ಯಮದವರು ರಾಮಕೃಷ್ಣ ಹೆಗಡೆಯವರ ಪ್ರತಿಕ್ರಿಯೆ ಕೇಳಿದ್ದರು. ಕರ್ನಾಟಕದಲ್ಲಿ ಜನತಾ ದಳ ಹೆಚ್ಚು ಸ್ಥಾನ ಗಳಿಸಿರುವುದರ ಕೀರ್ತಿಯನ್ನು ಆಗ ಮುಖ್ಯಮಂತ್ರಿಯಾಗಿದ್ದ ದೇವೇಗೌಡರಿಗೆ ನೀಡಲು ಹೆಗಡೆ ನಿರಾಕರಿಸಿದರು. ಅಲ್ಲಿಂದ ಕಂದಕ ಮತ್ತಷ್ಟು ವಿಸ್ತಾರವಾಯಿತು. 'ದೇವೇಗೌಡರು ಚೆನ್ನಾಗಿ ಕೆಲಸ ಮಾಡಿದ್ದಾರೆ. ಬಹಳ ಕಷ್ಟಪಟ್ಟಿದ್ದಾರೆ' ಎಂದು ಹೆಗಡೆಯವರು ಮುಕ್ತ ಮನಸ್ಸಿನಿಂದ ಪ್ರಶಂಸಿಸಿದ್ದರೆ ಬಹುಶಃ ಇತಿಹಾಸ ಬೇರೆ ದಿಕ್ಕಿಗೆ ತಿರುಗುತ್ತಿತ್ತೊ ಏನೊ?

ಹೆಗಡೆಯವರು ಪ್ರಧಾನಿಯಾಗಿದ್ದರೆ ಏನೋ ಆಗಿಬಿಡುತ್ತಿತ್ತು ಎಂದು ಭಾವಿಸಲಾಗುವುದು. ತಂದೆಯನ್ನೇ ಕೊಂದು ಮಗ ಸಿಂಹಾಸನಕ್ಕೇರಿದ ಇತಿಹಾಸ ದೆಹಲಿಯದ್ದು. ದೇವೇಗೌಡರು ಪ್ರಧಾನಿಯಾಗಿದ್ದ ಹತ್ತು ತಿಂಗಳು ಒಂದು ಅಧ್ಯಾಯ. ಅವರು ರಾಜ್ಯ ಸರ್ಕಾರದ ನಾಯಕತ್ವವನ್ನು ಬಿಟ್ಟು ಹೋಗಿದ್ದರಿಂದ ರಾಜ್ಯಕ್ಕೆ ನಷ್ಟವಾಯಿತು. ಆದರೆ, ಆ ಸಂದರ್ಭದಲ್ಲಿ ಅದನ್ನು ಯೋಚನೆ ಮಾಡುವಷ್ಟು ವ್ಯವಧಾನ ನಮ್ಮಲ್ಲಿ ಇರಲಿಲ್ಲ. ಸಿಗುತ್ತಿರುವ ಅವಕಾಶವನ್ನು ಕಳೆದುಕೊಳ್ಳುವುದೇಕೆ ಎಂದು ಯೋಚಿಸಿದೆವೆಯೇ ಹೊರತು ರಾಜ್ಯದ ದೃಷ್ಟಿಯಿಂದ ಸ್ವಾರ್ಥಿಗಳಾಗಿ ಯೋಚನೆ ಮಾಡಲಿಲ್ಲ. ದೇವೇಗೌಡರು ಮುಖ್ಯಮಂತ್ರಿ ಹುದ್ದೆ ತೊರೆದು ಪ್ರಧಾನಿ ಹುದ್ದೆಗೇರದೇ ಹೋಗಿದ್ದರೆ ಇಡೀ ರಾಜಕಾರಣದ ದಿಕ್ಕೇ ಬದಲಾಗುತ್ತಿತ್ತು ಅನಿಸುತ್ತದೆ.



1997ರಲ್ಲಿ ತೆಹ್ರಿಯ ಭಾಗೀರಥಿ ನದಿ ದಡದಲ್ಲಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ಪರಿಸರವಾದಿ ಸುಂದರಲಾಲ್ ಬಹುಗುಣ ಅವರಿಗೆ ಪಾನಕ ನೀಡುವ ಮೂಲಕ ಸತ್ಯಾಗ್ರಹವನ್ನು ಕೈಬಿಡುವಂತೆ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಮನವಿ ಮಾಡಿಕೊಂಡಿದ್ದರು ಚಿತ್ರ: ಪ್ರಜಾವಾಣಿ ಆರ್ಕೈವ್

ಪ್ರಧಾನಿ ಕಾರ್ಯಾಲಯದಲ್ಲಿ ಕನ್ನಡಿಗರ ದರ್ಬಾರು

● ಶಿವಾಜಿ ಗಣೇಶನ್

ದೇವೇಗೌಡರು ಪ್ರಧಾನಿಯಾದ ಬಳಿಕ, ಗೌಡರು ರಾಷ್ಟ್ರ ರಾಜಕಾರಣ ಮತ್ತು ಹಿಂದಿ ಗೊತ್ತಿರದ ವ್ಯಕ್ತಿ ಎಂದು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪತ್ರಿಕೆಗಳು ತಮಗೆ ತಿಳಿದಂತೆ ಬಣ್ಣಿಸಿದ್ದವು. ದೇವೇಗೌಡರು ಈ ಹಿಂದೆ ಒಮ್ಮೆ ಲೋಕಸಭೆ ಸದಸ್ಯರಾಗಿ ರೈತ ಮತ್ತು ಗ್ರಾಮೀಣ ಪ್ರದೇಶದ ಸಮಸ್ಯೆಗಳ ಬಗೆಗೆ ಸದನದಲ್ಲಿ ಮಾತನಾಡಿ ಕೆಲವು ಪತ್ರಕರ್ತರಿಗೆ ಪರಿಚಯವಾಗಿದ್ದರು. ಮುಖ್ಯಮಂತ್ರಿಯಾಗಿ ಕಾವೇರಿ ವಿಷಯದಲ್ಲಿ ದೆಹಲಿ ಪತ್ರಕರ್ತರ ಗಮನವನ್ನೂ ಸೆಳೆದಿದ್ದರು. ಆದರೆ ದೆಹಲಿಯಲ್ಲಿರುವ ಬಹುತೇಕ ಹಿಂದಿ, ಇತರೆ ಪ್ರಾದೇಶಿಕ ಭಾಷೆಗಳು ಹಾಗೂ ವಿದೇಶಿ ಪತ್ರಕರ್ತರಿಗೆ ದೇವೇಗೌಡರ ಪರಿಚಯ ಅಷ್ಟಕಷ್ಟೇ ಆಗಿತ್ತು. ದೇವೇಗೌಡರನ್ನು ದೆಹಲಿಯಲ್ಲಿನ ಈ ಪತ್ರಕರ್ತ ವರ್ಗಕ್ಕೆ ಪರಿಚಯ ಮಾಡುವ ಹೊಣೆ, ನರಸಿಂಹರಾವ್ ಅವರ ಅಧಿಕಾರಾವಧಿಯಲ್ಲಿ ಪ್ರಧಾನ ವಾರ್ತಾಧಿಕಾರಿ ಆಗಿದ್ದ ಮೈಸೂರಿನವರಾದ ಕನ್ನಡಿಗ ಎಸ್. ನರೇಂದ್ರ ಅವರದಾಗಿತ್ತು. ಗೌಡರು ಪ್ರಧಾನಿಯಾದ ಬಳಿಕ ನರೇಂದ್ರ ಅವರು ಅದೇ ಹುದ್ದೆಯಲ್ಲಿ ಮುಂದುವರಿದರು.

ಪ್ರಧಾನಿಯಾದ ಮರುದಿನ ಜೂನ್ 2ರಂದು ಭಾನುವಾರ ಕರ್ನಾಟಕ ಭವನದಲ್ಲಿ (ಪ್ರಧಾನ ಮಂತ್ರಿ ಆದ ಬಳಿಕ ಗೌಡರು ಸುಮಾರು ಒಂದು ವಾರ ಕರ್ನಾಟಕ ಭವನದಲ್ಲಿಯೇ ವಾಸ್ತವ್ಯ ಮಾಡ್ಡಿದರು) ಕರ್ನಾಟಕದವರನ್ನು ಹೊರತುಪಡಿಸಿ ಹಿಂದಿ, ಇಂಗ್ಲಿಷ್, ಇತರೆ ಪ್ರಾದೇಶಿಕ ಭಾಷೆಗಳು ಮತ್ತು ವಿದೇಶಿ ಪತ್ರಕರ್ತರನ್ನುಮಧ್ಯಾಹ್ನದ ಭೋಜನ ಕೂಟಕ್ಕೆ ಆಮಂತ್ರಿಸಲಾಗಿತ್ತು. ದೇವೇಗೌಡರು ತಾವು ಬೆಳೆದ ಪರಿಸ್ಥಿತಿ, ಅವರು ಬೆಳೆದು ಬಂದ ರಾಜಕೀಯ ಸ್ಥಿತಿಗತಿಯನ್ನು ವಿವರಿಸಿ ತಾವೊಬ್ಬ ವಿನಮ್ರ ರೈತ (ಹಂಬಲ್ ಫಾರ್ಮರ್) ಎಂದು ಪರಿಚಯಿಸಿಕೊಂಡರು.

ದೇವೇಗೌಡರು ದೆಹಲಿ ಗದ್ದುಗೆ ಏರಿದ ಮೇಲೆ ಪ್ರಧಾನಿ ಕಾರ್ಯಾಲಯಕ್ಕೂ (ನಾರ್ಥ್ ಬ್ಲಾಕ್) ಕರ್ನಾಟಕದ ಅಧಿಕಾರಿಗಳ ಗುಂಪನ್ನೇ ಕರೆದು ತಂದರು. ಕರ್ನಾಟಕದ ಹಿರಿಯ ಐಎಎಸ್ ಅಧಿಕಾರಿಯಾಗಿ ಕರ್ನಾಟಕದಲ್ಲಿ ವಿವಿಧ ಹುದ್ದೆಗಳನ್ನು ನಿರ್ವಹಿಸಿದ್ದ ಜಾಫರ್ ಸೈಫುಲ್ಲಾ ಕೆಲವು ತಿಂಗಳ ಕಾಲ ಸಂಪುಟ ಕಾರ್ಯದರ್ಶಿ ಆಗಿದ್ದರು. ಕರ್ನಾಟಕದಲ್ಲಿ ರಾಮಕೃಷ್ಣ ಹೆಗಡೆ ಅವರ ಅಧಿಕಾರಾವಧಿಯಲ್ಲಿ ಮುಖ್ಯಕಾರ್ಯದರ್ಶಿಯಾಗಿದ್ದ ಸತೀಶ್ ಚಂದ್ರನ್ ಅವರು ಪ್ರಧಾನಿಯ ವಿಶೇಷ ಕಾರ್ಯದರ್ಶಿ ಆಗಿ ನೇಮಕಗೊಂಡರು. ಮತ್ತೊಬ್ಬ ಹಿರಿಯ ಅಧಿಕಾರಿ ಮೀನಾಕ್ಷಿ ಸುಂದರಂ ಅವರು ಪ್ರಧಾನಿಯವರ ಕಾರ್ಯದರ್ಶಿ ಆದರು. ಕಿರಿಯ ಐಎಎಸ್ ಅಧಿಕಾರಿ ಮಹೇಂದ್ರ ಜೈನ್ ಅವರು ಪ್ರಧಾನಿಯ ಆಪ್ತ ಕಾರ್ಯದರ್ಶಿಯಾದರು. ದೆಹಲಿಗೆ ಬರುವ ಮುನ್ನ ಮಹೇಂದ್ರ ಜೈನ್ ಹಾಸನ ಜಿಲ್ಲಾಧಿಕಾರಿಯಾಗಿದ್ದರು.

ಇವರಲ್ಲದೆ, ಕರ್ನಾಟಕದಲ್ಲಿ ಗೌಡರ ಆಪ್ತ ಅಧಿಕಾರಿ ವಲಯದಲ್ಲಿ ಅವರ ಕುಟುಂಬಕ್ಕೂ ಅತ್ಯಂತ ಆಪ್ತರೆನಿಸಿದ್ದ ಕೆ.ಎ. ತಿಪ್ಪೇಸ್ವಾಮಿ ಕೆಲ ಕಾಲದ ಬಳಿಕ ಹೆಚ್ಚುವರಿ ಆಪ್ತಕಾರ್ಯದರ್ಶಿಯಾದರು. ಕೇಂದ್ರ ಸಚಿವರಾಗಿದ್ದ ಜಾಫರ್ ಷರೀಫ್, ರಾಮಕೃಷ್ಣ ಹೆಗಡೆ ಮುಂತಾದವರಿಗೆ ವಿಶೇಷ ಕರ್ತವ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ಸಕಲೇಶಪುರ ತಾಲ್ಲೂಕಿನ ಬೈಕೆರೆ ನಾಗೇಶ್ ಕೂಡ ವಿಶೇಷ ಕರ್ತವ್ಯಾಧಿಕಾರಿಯಾಗಿ ಪ್ರಧಾನ ಮಂತ್ರಿಗಳ ಕಾರ್ಯಾಲಯವನ್ನು ಸೇರಿಕೊಂಡರು. ಇವರ ಜೊತೆಗೆ ಅವರ ಬಹುತೇಕ ಸಿಬ್ಬಂದಿ ಕೂಡ ಕನ್ನಡದವರೇ ಆಗಿದ್ದದ್ದು ವಿಶೇಷ. ಇದರಿಂದಾಗಿ ಹಿಂದಿ ಮತ್ತು ಇಂಗ್ಲಿಷ್ ವಾತಾವರಣವೇ ಇದ್ದ ಪ್ರಧಾನಿ ಕಾರ್ಯಾಲಯದಲ್ಲಿ ಕನ್ನಡದ ವಾತಾವರಣವೇ ಸೃಷ್ಟಿಯಾಯಿತು. ಕರ್ನಾಟಕದ ಪಾಲಿಗೆ ನಿಜಕ್ಕೂ ಇದೊಂದು ಸ್ಮರಣೀಯ ಕಾಲವಾಗಿತ್ತು.

ದೇವೇಗೌಡರು ಪ್ರಧಾನಿಯಾದ ಬಳಿಕ ಪ್ರಧಾನಿ ಕಾರ್ಯಾಲಯವಲ್ಲದೆ ಬೇರೆ ಸಂಸ್ಥೆಗಳಿಗೆ ಖ್ಯಾತ ತಜ್ಞರನ್ನು ಪ್ರಮುಖ ಸ್ಥಾನಗಳಿಗೆ ನೇಮಕ ಮಾಡಲಾಯಿತು. ಎಸ್. ರಾಮೇಗೌಡ ಅವರನ್ನು ಇಂದಿರಾ ಗಾಂಧಿ ಮುಕ್ತ ವಿಶ್ವವಿದ್ಯಾಲಯದ ಕುಲಪತಿಯನ್ನಾಗಿ ನೇಮಕ ಮಾಡಲಾಯಿತು. ಆರ್ಥಿಕ ತಜ್ಞ ಡಾ. ಡಿ. ಎಂ. ನಂಜುಂಡಪ್ಪ ಅವರು ರೈಲ್ವೆ ದರ ಕುರಿತ ಸಮಿತಿಗೆ ಅಧ್ಯಕ್ಷರನ್ನಾಗಿ ನೇಮಕಗೊಂಡರು. ಇವರಲ್ಲದೆ ಎಸ್. ಆರ್. ಬೊಮ್ಮಾಯಿ ಸಚಿವರಾಗಿದ್ದ ಮಾನವ ಸಂಪನ್ಮೂಲ ಇಲಾಖೆ ವ್ಯಾಪ್ತಿಗೆ ಬರುವ ವಿವಿಧ ಕಡೆಗಳಿಗೆ ಸುಮಾರು 50ಕ್ಕೂ ಹೆಚ್ಚು ಮಂದಿ ಕನ್ನಡಿಗರು ಸದಸ್ಯರಾಗಿ ನೇಮಕಗೊಂಡರು. ಮಾನವ ಸಂಪನ್ಮೂಲ ಸಚಿವಾಲಯವು ಶಿಕ್ಷಣ, ಸಂಸ್ಕೃತಿ ಮತ್ತು ಭಾಷೆ ಕುರಿತಂತೆ ಸಮುದ್ರ ಇದ್ದಹಾಗೆ. ಅಲ್ಲಿ ಮೊಗೆದಷ್ಟು ನೀರು ಮತ್ತು ಸಮುದ್ರದ ಉತ್ಪನ್ನಗಳು ಸಿಗುತ್ತವೆ. ಬೊಮ್ಮಾಯಿ ಅವರು ಸಚಿವರಾದ ಕಾರಣ ಮತ್ತು ಅವರ ಆಪ್ತ ಕಾರ್ಯದರ್ಶಿ ವಿ.ಪಿ ಬಳಿಗಾರ್ ಅವರಿದ್ದ ಕಾರಣ ಈ ಸಚಿವಾಲಯದಲ್ಲಿ ಶಿಕ್ಷಣ ಸಂಸ್ಥೆಗಳಿಗೆ ದೊರೆಯಬಹುದಾದ ಹೆಚ್ಚು ಅನುಕೂಲಗಳನ್ನು ರಾಜ್ಯದ ವಿಶೇಷವಾಗಿ ಲಿಂಗಾಯತ ಮಠಗಳು ಪಡೆದವು. ಆಟದ ಮೈದಾನ, ರಂಗಮಂದಿರ ನಿರ್ಮಾಣ ಹೀಗೆ ಹಲವಾರು ಯೋಜನೆಗಳ ಮೂಲಕ ಲಕ್ಷಾಂತರ ರೂಪಾಯಿ ನೆರವನ್ನು ಪಡೆದದ್ದು ವಿಶೇಷ.

ಲೇಖಕ: ದೇವೇಗೌಡರು ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ದೆಹಲಿಯಲ್ಲಿ ಪ್ರಜಾವಾಣಿಯ ಮುಖ್ಯ ವರದಿಗಾರರಾಗಿದ್ದರು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ **'ನೂತನ ಸಂಸತ್'** ಕಟ್ಟಡವನ್ನು ನಿರ್ಮಾಣ ಮಾಡಲು 2012ರಲ್ಲಿ ಅಂದಿನ ಲೋಕಸಭೆ ಸ್ಪೀಕರ್ ಆಗಿದ್ದ ಕಾಂಗ್ರೆಸ್‌ನ ಮೀರಾ ಕುಮಾರ್ ಅವರು ಒಪ್ಪಿಗೆ ಸೂಚಿಸಿದ್ದರು.
35,000 ಚದರ ಅಡಿ ವಿಸ್ತೀರ್ಣದ ಕಟ್ಟಡವನ್ನು ₹3,000 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಯುಪಿಎ-2 ಸರ್ಕಾರ ಅನುಮತಿ ಪಡೆದುಕೊಂಡಿತ್ತು. ಆದರೆ 65,000 ಚದರ ಅಡಿ ವಿಸ್ತೀರ್ಣದ ನೂತನ ಸಂಸತ್ ಕಟ್ಟಡವನ್ನು ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಕೇವಲ ₹971 ಕೋಟಿಯಲ್ಲಿ ನಿರ್ಮಾಣ ಮಾಡಲಿದೆ' ಎಂಬ ವಿವರ ಇರುವ ಪೋಸ್ಟ್‌ಗಳು ಟ್ವಿಟರ್ ಮತ್ತು ಫೇಸ್‌ಬುಕ್‌ನಲ್ಲಿ ವೈರಲ್ ಆಗಿವೆ.

✓ **'ಈಗಿನ ಸಂಸತ್'** ಭವನ ಹಳೆಯದಾಗಿದೆ. ಹೊಸ ಸಂಸತ್ ಭವನ ನಿರ್ಮಾಣ ಮಾಡಬಹುದು ಎಂದು 2012ರಲ್ಲಿ ಅಂದಿನ ಲೋಕಸಭೆ ಸ್ಪೀಕರ್ ಮೀರಾ ಕುಮಾರ್ ಅವರು ಹೇಳಿದ್ದರು. ಆದರೆ ಈ ಯೋಜನೆ ಕಾರ್ಯರೂಪಕ್ಕೆ ಬಂದಿರಲಿಲ್ಲ. 2015ರಲ್ಲಿ ಅಂದಿನ ಸ್ಪೀಕರ್ ಸುಮಿತ್ರಾ ಮಹಾಜನ್ ಸಹ ಇಂತಹದ್ದೇ ಪ್ರಸ್ತಾವಕ್ಕೆ ಒಪ್ಪಿಗೆ ನೀಡಿದ್ದರು. ಮೀರಾ ಕುಮಾರ್ ಮತ್ತು ಸುಮಿತ್ರಾ ಮಹಾಜನ್ ಅವರು ಒಪ್ಪಿಗೆ ನೀಡಿದ್ದ ಪ್ರಸ್ತಾವಗಳಲ್ಲಿ ನಿರ್ಮಾಣ ವೆಚ್ಚವನ್ನು ಯಾವ ಅಧಿಕೃತ ದಾಖಲೆಯಲ್ಲೂ ಉಲ್ಲೇಖಿಸಿರಲಿಲ್ಲ. ಆದರೆ ₹3,000 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಒಪ್ಪಿಗೆ ನೀಡಲಾಗಿತ್ತು ಎಂದು ಈಗ ಸುಳ್ಳು ಸುದ್ದಿ ಹರಡಲಾಗುತ್ತಿದೆ' ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ

ವಿವೇಕವನ್ನು ಕೆಡಿಸದ ಭಾವನೆಗಳು

ಭಾವರಾಗೋದ್ರೇಕ ತಾನೆ ತಪ್ಪೇನಲ್ಲ |
ಧೀವಿವೇಕದ ಸಮತೆಯದರಿನದಿರದಿರೆ ||
ಸ್ವಾವಿದ್ಯೆಯಾ ಮೋಹ ಮಮತೆಯದನಂಟದಿರೆ |
ಪಾವನವೊ ಹೃನ್ಮಥನ – ಮಂಕುತಿಮ್ಮ || 423 ||

ಪದ-ಅರ್ಥ: ಭಾವರಾಗೋದ್ರೇಕ = ಭಾವ + ರಾಗ + ಉದ್ರೇಕ, ಧೀವಿವೇಕ = ಧೀ (ಮನಸ್ಸು, ಬುದ್ಧಿ, ಆತ್ಮಗಳ ಸಂಯೋಗ, ಆತ್ಮದ ತಿಳುವಳಿಕೆ) + ವಿವೇಕ, ಸಮತೆಯದರಿನದಿರದಿರೆ = ಸಮತೆ (ಸಮತ್ವ) + ಅದರಿಂ (ಅದರಿಂದ) + ಅದಿರದಿರೆ (ಚಂಚಲವಾಗದಿದ್ದರೆ), ಸ್ವಾವಿದ್ಯೆಯಾ = ಸ್ವ + ಅವಿದ್ಯೆ (ಅಜ್ಞಾನ), ಮಮತೆಯದನಂಟದಿರೆ = ಮಮತೆ + ಅದನು + ಅಂಟದಿರೆ, ಹೃನ್ಮಥನ + ಹೃದಯದ ಮಂಥನ.

ವಾಚ್ಯಾರ್ಥ: ಭಾವರಾಗ ಉದ್ರೇಕಗಳು ಸಾಮಾನ್ಯ. ಅವಿದ್ದರೆ ತಪ್ಪಲ್ಲ. ಆದರೆ ಅವು ನಮ್ಮ ಮನಸ್ಸಿನ, ಬುದ್ಧಿಯ ಸ್ಥಿಮಿತವನ್ನು ಅಲುಗಾಡಿಸಬಾರದು. ಅಜ್ಞಾನ, ಮೋಹ, ಮಮತೆಗಳು ಅದಕ್ಕೆ ಅಂಟದಿದ್ದರೆ, ಈ ಹೃದಯ ಮಂಥನ ಬದುಕಿಗೆ ಪಾವನತೆಯನ್ನು ನೀಡುತ್ತದೆ.

ವಿವರಣೆ: ಪ್ರಪಂಚದಲ್ಲಿರುವಾಗ, ಅಲ್ಲಿಯ ಅನುಭವಗಳು, ಮನಸ್ಸಿನಲ್ಲಿ ಭಾವ, ರಾಗ, ಉದ್ರೇಕಗಳನ್ನು ಉಂಟು ಮಾಡುವುದು ಸಹಜ. ಅವುಗಳು ನಮ್ಮ ಬದುಕಿನ ಅವಿಭಾಜ್ಯ ಅಂಗಗಳು. ಅವುಗಳಿಂದ ನಮಗೆ ತೊಂದರೆ ಎನ್ನಿಸಿದರೂ, ಅವುಗಳೇ ನಮ್ಮ ಬದುಕಿನ ಚಾಲಕ, ಪ್ರೇರಕ ಶಕ್ತಿಗಳು. ಆದರೆ ಅವುಗಳ ಪ್ರಭಾವದಿಂದ ನಮ್ಮ ವಿವೇಕದ ಸ್ಥಿಮಿತ, ಸಮತ್ವ ಅಲುಗಾಡಬಾರದು. ಅದು ವಿಚಲಿತವಾದರೆ ಅನಾಹುತ ಕಟ್ಟಿಟ್ಟಿದ್ದು. ಅಪೇಕ್ಷೆ ಒಳ್ಳೆಯದು ಆದರೆ ಅದು ಅತಿಯಾದ ಮಹತ್ವಾಕಾಂಕ್ಷೆಯಾದಾಗ ತನ್ನ ದೊರೆಯನ್ನೇ ಕೊಲ್ಲುವ ಮ್ಯಾಕ್‌ಬೆಥ್‌ನಂತಾಗುತ್ತದೆ. ರಾಜಕೀಯ ಒಳನೋಟಗಳು ಭಿನ್ನವಾಗಿರುವುದು ಸರಿಯೆ, ಆದರೆ ಅದು ತಡೆಯಲಾರದ ಅಸಹನೆಯಾದಾಗ, ಗೋಡ್ಸೆ ಮನೋಧರ್ಮವಾಗಿ ಅನಾಹುತವನ್ನು ಮಾಡುತ್ತದೆ. ಮಕ್ಕಳ ಬಗೆಗಿನ ಮೋಹ ಯಾರನ್ನೂ ಬಿಟ್ಟಿದ್ದಲ್ಲ ಆದರೆ ಅದೂ ಅತಿಯಾದಾಗ ಕಣ್ಣು ಕಟ್ಟಿಸಿಬಿಡುತ್ತದೆ. ಅಂಥ ಪ್ರಸಂಗಗಳಲ್ಲೇ ರಾಜಾಲಿಯರನಂಥವರು, ಧೃತರಾಷ್ಟ್ರನಂಥವರು ಕಂಡುಬರುತ್ತಾರೆ. ಶೇಕ್ಸ್‌ಪಿಯರನ ಯಾವುದೇ ದುರಂತನಾಟಕವನ್ನು ಗಮನಿಸಿ. ಅದರಲ್ಲಿ ಪ್ರಧಾನರಾದವರು ತಮ್ಮ ಭಾವ, ರಾಗ, ಉದ್ರೇಕಗಳನ್ನು ಹತೋಟಿಯಲ್ಲಿಟ್ಟುಕೊಳ್ಳದೆ, ತಮಗೆ ಸಾಧ್ಯವಾಗಬಹುದಾಗಿದ್ದ ಎತ್ತರದ ನೆಲೆಗಳನ್ನು ತಪ್ಪಿಸಿಕೊಳ್ಳುತ್ತಾರೆ. ಹೆಂಡತಿಯ ಮೇಲಿನ ಪ್ರೀತಿ ಸಹಜ ಮತ್ತು ಅವಶ್ಯಕ. ಆದರೆ ಅತಿಯಾದ ಮೋಹ ಸಂಶಯವನ್ನು ಹುಟ್ಟುಹಾಕುತ್ತದೆ. ಚಾಡಿಬುರುಕ ಇಯಾಗೋನ ಮಾತು ಕೇಳಿದ ನಾಯಕ ಒಥೆಲ್ಲೊ ತನ್ನ ನವವಧು ಡೆಸ್ಡಿಮೊನಾಳ ನಡತೆಯನ್ನು ಸಂಶಯಿಸಿ ಕೊಂದುಹಾಕಿ ದುರಂತಕ್ಕೆ ನಾಂದಿ ಹಾಡುತ್ತಾನೆ. ಇಂಥವೆಷ್ಟವನ್ನೋ ನಾವು ನಮ್ಮ ಸುತ್ತಮುತ್ತಲೇ ಕಾಣುತ್ತೇವೆ. ಹಾಗಾದರೆ ಈ ಭಾವನೆಗಳೇ ಇರಬಾರದೆ? ಭಾವನೆಗಳಿಲ್ಲದ ಜೀವನಕ್ಕೆ ಯಾವ ಸೊಗಸೂ ಇಲ್ಲ. ಆದರೆ ನಮ್ಮ ಅತಿಯಾದ ಅಜ್ಞಾನ, ಮೋಹ, ಮಮತೆಗಳು ನಮ್ಮ ಧೀವಿವೇಚನೆಯನ್ನು ತಟ್ಟಿ ಅದರ ಸ್ಥಿಮಿತತೆಯನ್ನು ಹಾಳು ಮಾಡಬಾರದು. ನಮ್ಮ ಧೀಶಕ್ತಿ ನಮ್ಮ ನಿಗ್ರಹದಲ್ಲಿಯೇ ಇದ್ದರೆ ಈ ಭಾವ, ರಾಗಗಳೇ ನಮ್ಮ ಮನಸ್ಸಿನ ಮಂಥನಕ್ಕೆ ಕಾರಣವಾಗಿ, ವಿಷವನ್ನೇ ನೀಡುವ ಬದಲು ಅಮೃತವನ್ನು ನೀಡುತ್ತವೆ. ❖

ದಿನ ಭವಿಷ್ಯ
ಮಂಗಳವಾರ ಜೂನ್ 1, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ರೋಹಿಣಿ ಸಪ್ತಮೀ ಗಂ. 57-50 (ಬೆ.ಝಾ. 5-09) ಮಂಗಳವಾರ ನಿತ್ಯ ನಕ್ಷತ್ರ ಧನಿಷ್ಠ ಗಂ. 36-43 (ರಾ. 8-42) ಐಂದ್ರ ನಾಮ ಯೋಗ ಗಂ. 7-10 ಭದ್ರೆ ಕರಣ ಗಂ. 28-39 ವಿಷ ಗಂ. 54-52 ಅಮೃತ ಗಂ. 11-18 : ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 ಸೂರ್ಯೋದಯ: 5-58 ಸೂರ್ಯಾಸ್ತ: 6-38 ಅದೃಷ್ಟ ಸಂಖ್ಯೆ 2

ಮೇಷ: ಕಚೇರಿ ಕೆಲಸಗಳಿಗೆ ಅಡೆತಡೆ ಸಂಭವ. ಸಮಸ್ಯೆಗಳನ್ನು ಮೆಟ್ಟಿನಿಲ್ಲುವ ಸಾಮರ್ಥ್ಯ ನಿಮ್ಮದು. ಯಾವುದೇ ವಿಚಾರದಲ್ಲಿ ರಾಜಿಯಾಗದ ಮನಃಸ್ಥಿತಿ. ಪ್ರೀತಿಪಾತ್ರರಿಂದ ಭರವಸೆ. ಹಿರಿಯರ ಆರೋಗ್ಯದಲ್ಲಿ ವ್ಯತ್ಯಯ.

ವೃಷಭ: ಕಾರ್ಯಯೋಜನೆಯ ಯಶಸ್ಸಿಗಾಗಿ ಅನೇಕ ಸಲಹೆಗಳು ಬಂದರೂ ಸ್ವಯಂ ತುಲನೆ ಮಾಡಿ ನಿರ್ಧಾರಕ್ಕೆ ಬರುವುದು ಒಳ್ಳೆಯದು. ಉದ್ಯೋಗದಲ್ಲಿ ಅಡೆತಡೆಗಳು ಕಂಡುಬಂದರೂ ನಿವಾರಣೆ ಕಂಡುಕೊಳ್ಳುವಿರಿ.

ಮಿಥುನ: ನಿಮ್ಮ ಗುರಿಯನ್ನು ಯಾವುದೇ ತೊಡಕಿಲ್ಲದೆ ಸಾಧಿಸುವಿರಿ. ಅಂದುಕೊಂಡ ಕಾರ್ಯ ಸಾಧನೆಗಾಗಿ ಸಮರ್ಥ ಮಾರ್ಗ ಗೋಚರವಾಗಲಿದೆ. ಸಹೋದ್ಯೋಗಿಗಳಿಂದ ಸ್ವಲ್ಪ ಮಟ್ಟಿನ ವಿರೋಧ ವ್ಯಕ್ತವಾಗಬಹುದು.

ಕರ್ಕಾಟಕ: ಅನಿವಾರ್ಯ ಒತ್ತಡಕ್ಕೆ ಒಳಗಾಗಿ ಎಲ್ಲವನ್ನು ತಾಳಿಕೊಳ್ಳಬೇಕಾದೀತು. ಒಳ್ಳೆಯ ಯೋಜನೆಯೊಂದಕ್ಕೆ ಮುನ್ನುಡಿ ಹಾಡುವ ಸಾಧ್ಯತೆ. ವಿಶ್ವಾಸ, ಪ್ರೀತಿಪಾತ್ರ ನಡೆಗಳಿಂದಾಗಿ ಎಲ್ಲರಲ್ಲೂ ಪ್ರಶಂಸೆಗೆ ಪಾತ್ರರಾಗುವಿರಿ.

ಸಿಂಹ: ಆಕರ್ಷಣೀಯ ವ್ಯಕ್ತಿತ್ವದ ಜೊತೆಗೆ ನಡವಳಿಕೆಯಿಂದಾಗಿ ಅಭಿಮಾನಿಗಳು ಹೆಚ್ಚುವ ಸಾಧ್ಯತೆ. ಕಾರ್ಯಗಳನ್ನು ಯಶಸ್ವಿಯಾಗಿ ನಿಭಾಯಿಸುವಿರಿ. ಭಾವನೆಗಳಿಗೆ ಮನ್ನಣೆ ನೀಡಿ ಗೌರವ ಸಂಪಾದನೆ.

ಕನ್ಯಾ: ನಿಮ್ಮ ಯೋಜನೆಯ ಆಗುಹೋಗುಗಳ ಬಗ್ಗೆ ಪರಿಣತ ವ್ಯಕ್ತಿಗಳೊಂದಿಗೆ ಸಮಾಲೋಚನೆ. ಸರಿಯಾದ ನಿರ್ಧಾರದಿಂದಾಗಿ ಪ್ರಶಂಸೆಗೆ ಪಾತ್ರರಾಗುವಿರಿ. ಮಾದಕ ವಸ್ತುಗಳಿಂದ ದೂರವಿರುವುದು ಒಳ್ಳೆಯದು.

ತುಲಾ: ಒಮ್ಮೆಲೇ ಅನೇಕ ಕಾರ್ಯಗಳನ್ನು ಮಾಡಿ ಮುಗಿಸುವ ಧಾವಂತದಿಂದಾಗಿ ಗಡಿಬಿಡಿ ಉಂಟಾಗಬಹುದು. ದುಪ್ಪಟ್ಟು ವೆಚ್ಚ ಭರಿಸಬೇಕಾಗಬಹುದು. ಯೋಜನಾ ಬದ್ಧ ಕ್ರಮದಿಂದ ವೆಚ್ಚ ಕಡಿತಗೊಳಿಸುವ ಸಾಧ್ಯತೆ.

ವೃಶ್ಚಿಕ: ನಿಮ್ಮ ಕೆಲಸವೊಂದನ್ನು ಕೈಬಿಡುವಂತೆ ಬಂಧುಗಳಿಂದ ಸಲಹೆಗಳು ಬರುವ ಸಾಧ್ಯತೆ. ನಿಮ್ಮ ದಿಟ್ಟ ನಿಲುವಿನಿಂದ ಹಿಂದೆ ಸರಿಯುವ ಅವಶ್ಯಕತೆ ಇಲ್ಲ. ಯಾವುದೇ ಕೆಲಸಕ್ಕೂ ದುಡುಕದೇ ಯೋಚಿಸಿ ಕೈ ಹಾಕುವುದು ಉತ್ತಮ.

ಧನು: ನಿಮ್ಮ ಸಾಹಸೀ ಪ್ರವೃತ್ತಿಯೇ ನಿಮಗೊಂದು ವೃತ್ತಿಯಾಗಿ ಮಾರ್ಪಾಡಾಗುವ ಸಾಧ್ಯತೆ. ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಲಿದ್ದೀರಿ. ಯೋಗ್ಯ ಸಲಹೆ, ಸಹಕಾರ ದೊರೆತು ಶುಭ ಲಾಭಗಳನ್ನು ತಂದುಕೊಡಲಿವೆ.

ಮಕರ: ಸ್ವತಂತ್ರ ನಿರ್ಧಾರ ಕೈಗೊಳ್ಳುವಲ್ಲಿ ಹಿಂಜರಿಕೆ ಬೇಡ. ಕಾರ್ಯಸಾಧನೆಯಿಂದಾಗಿ ಮಾನಸಿಕ ನೆಮ್ಮದಿ. ಸಹೋದ್ಯೋಗಿಗಳೊಂದಿಗೆ ಹಿತವಾದ ಚರ್ಚೆ ನಡೆದು ಪ್ರಮುಖ ನಿರ್ಧಾರ ಕೈಗೊಳ್ಳುವ ಸಾಧ್ಯತೆ.

ಕುಂಭ: ಉದ್ಯೋಗದಲ್ಲಿ ಬಡ್ತಿ ಅಥವಾ ಪ್ರಗತಿ ಸಾಧ್ಯತೆ. ಸಮಸ್ಯೆಗಳಿಗೆ ಸುಲಭ ಪರಿಹಾರ. ಕುಟುಂಬದ ಸದಸ್ಯರೊಂದಿಗೆ ಸಂತಸದ ದಿನ.

ಮೀನ: ತೊಂದರೆ ಎದುರಾದರೂ ಹೆಚ್ಚು ಕೆಲಸ ಮಾಡುವ ಸ್ಥೈರ್ಯ. ಬುದ್ಧಿವಂತಿಕೆಯಿಂದ ಸಾಧನೆ ಮಾಡುವಿರಿ. ಒಳ್ಳೆಯ ಗೌರವಾದರಗಳು ಬರಲಿವೆ. ಪರಶಿವನ ಅನುಗ್ರಹದಿಂದಾಗಿ ಮಾನಸಿಕ ಶಾಂತಿ ಲಭಿಸಲಿದೆ.

ನಿಮ್ಮ ಜನ್ಮದಿನ 1-ಜೂನ್ ಈ ದಿನವು ಅತ್ಯಂತ ಶುಭಕರವಾಗಿದ್ದು, ರಾಜಕಾರಣ ಹಾಗೂ ವಕೀಲಿ ವೃತ್ತಿಯಲ್ಲಿ ಆಸಕ್ತರಾಗಿರುವ ನೀವು ಉತ್ತಮ ಮಾತುಗಾರಿಕೆಯನ್ನು ರೂಢಿಸಿಕೊಳ್ಳಲಿದ್ದೀರಿ. ಮುನ್ನುಗ್ಗಿ ಕಾರ್ಯಸಾಧನೆ ಮಾಡುವುದು ನಿಮ್ಮ ಜಾಯಮಾನವಾಗಿದ್ದು ಇದು ನಿಮಗೆ ಅತ್ಯಂತ ಪ್ರಯೋಜನಕಾರಿಯಾಗಿ ಪರಿಣಮಿಸುವುದು.

ಪದಬಂಧ 4614
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಂತರಂಗದಲ್ಲಿನ ಅಲೆ (3)
3.ಲೋಹದ ಅಥವಾ ಮರದ ಹಾಳೆ (3)
5.ಅಡುಗೆ ಮಾಡಲು ಬೆಂಕಿ ಉರಿಸುವ ಸಲಕರಣೆ (2)
6.ರಾಟೆ ಕೊನೆಗಿದ್ದಾಗಲೇ ಈ ಆಕ್ಷೇಪಣೆ! (3)
7.ನಿಯಮ ಹೇಳಿದ ನರಕಾಧಿಪತಿ! (2)
9.ಇದು ಸತ್ಯ (2)
11.ನೆನಪು ಮಾಡಿಕೊಂಡು ತೋರಿದ ವೈಯಾರ (3)
13.ಆಕಳು ಹಿಡಿದಿರುವ ಸೇವಕ (2)
14.ಹೆಚ್ಚು ಪದದ ವಿರುದ್ಧ ಪದ (3)
15.ಮೂಲಿಕೆಗಳನ್ನು ಭಟ್ಟಿಯಿಳಿಸಿ ತೆಗೆದ ರಸ (3)

ಮೇಲಿಂದ ಕೆಳಕ್ಕೆ
1.ಅನ್ನವನ್ನು ಮಾಡುವ ಪಾತ್ರೆಯು ತಲೆಯಲ್ಲಿದೆ (3)
2. ಲೆಕ್ಕ ಶಾಸ್ತ್ರವಿದು (3)
3.ಕೆಲಸಕ್ಕೆ ಬಾರದ ಮಾತು (3)
4.ಇಳೆಯಲ್ಲಿ ಒಂದಾಗಿರುವ ಸ್ನೇಹಿತ (3)
5.ಇಂಪಿಲ್ಲದ ಧ್ವನಿ (5)
8.ಈಕೆ ಲಗ್ನವಾಗುತ್ತಿರುವವಳು (5)
10.ಸೀತೆಯ ತಂದೆ (3)
11.ಮೆಲುವಾಗಿ ವ್ಯಕ್ತವಾದ ಪ್ರೀತಿ (3)
12.ಜಳಕ ಎಂದಾಗಲೇ ಈ ರೋಮಾಂಚನ! (3)
13.ದೇವಾಲಯದ ಹತ್ತಿರವಿರುವ ಮನೆ (3)



4613ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಆಷಾಢಭೂತಿ 3.ಕೃತಘ್ನ 5.ರಣಕಹಳೆ 7.ದರ 9.ಕಪೋಲ 11.ಧಾಮ 13.ಉಪನಯನ 15.ವಿಷಣ್ಣ 16.ಹುಲುಮನುಜ

ಮೇಲಿಂದ ಕೆಳಕ್ಕೆ: 1.ಆಯುರ್ವೇದ 2.ಭೂಶಿರ 4.ತರಳೆ 6.ಕಲ್ಮಶ 8.ರಫ್ತು 9.ಕದನ 10.ತುಧಾ 12.ಮಹಾರಾಜ 13.ಉದ್ಘೋಷ 14.ನವಿಲು

ಸುಡೊಕು 5000

	4		2		9	6		1
		1		8		2	7	
	7		1		4			8
		4				1		
2	8		6	9	1			
		7					6	5
	5			1			2	7
	1	6	8		2	5		
4	2			5				

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4999 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ಅಧಿಕಾರಿಗಳಿಂದ ಮೂದಲಿಕೆ • ತಹಶೀಲ್ದಾರ್ ಕಚೇರಿ ಸಿಬ್ಬಂದಿ ವಿಳಂಬ ಧೋರಣೆ

ಅಂಗವಿಕಲರಿಗೆ ಪಿಂಚಣಿ ಸಿಗದೇ ವರ್ಷ

• ಗುರು ಪಿ. ಎಸ್.

ಬೆಂಗಳೂರು: 'ಸರ್ಕಾರದಿಂದಲೇ ಹಣ ಬಂದಿಲ್ಲ, ಪಿಂಚಣಿ ಹೇಗೆ ಕೊಡೋದು'. 'ನೀವಿನ್ನೂ ಬದುಕಿದ್ದೀರಾ, ಕೋವಿಡ್‌ನಿಂದ ಸತ್ತು ಹೋಗಿರಬಹುದು ಎಂದುಕೊಂಡು ನಿಮ್ಮ ಖಾತೆಗೆ ಹಣ ಹಾಕಿಲ್ಲ..'

ಸುಮಾರು ಒಂದು ವರ್ಷದಿಂದ ಪಿಂಚಣಿಗಾಗಿ ಅಲೆದಾಡುತ್ತಿರುವ ಪೋಲಿಯೊದಿಂದ ಅಂಗವಿಕಲರಾದವರು, ಬೇರೆ ಅಂಗವಿಕಲತೆಗೆ ಗುರಿಯಾಗಿರುವವರು ಕೆಲವು ಅಧಿಕಾರಿಗಳಿಂದ ಎದುರಿಸಿದ ಮೂದಲಿಕೆಯ ಮಾತುಗಳಿವು.

'ನನ್ನ ಎರಡೂ ಕಾಲು ಊನಗೊಂಡಿವೆ. ಶೇ 25ರಷ್ಟು ಅಂಗವೈಕಲ್ಯ ಹೊಂದಿರುವ ನನಗೆ ಮೊದಲು ಪಿಂಚಣಿ ಬರುತ್ತಿತ್ತು. ಒಂದೂವರೆ ವರ್ಷದಿಂದ ಬರುತ್ತಿಲ್ಲ. ಕಂದಾಯ ಭವನಕ್ಕೆ ಐದಾರು ಸಲ ಓಡಾಡಿದ್ದೇನೆ. ಸರ್ಕಾರದಿಂದ ಹಣ ಬಂದಿಲ್ಲ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ' ಎಂದು ನೀಲಸಂದ್ರದ ಲಕ್ಷ್ಮೀ ಪಾಟೀಲ ಹೇಳಿದರು.

ಅಂಕಿ–ಅಂಶ

64 ಲಕ್ಷ
ರಾಜ್ಯದಲ್ಲಿರುವ ಒಟ್ಟು ಪಿಂಚಣಿದಾರರು

8.43 ಲಕ್ಷ
ಪಿಂಚಣಿ ಪಡೆಯುತ್ತಿರುವ ಅಂಗವಿಕಲರು

₹9,000 ಕೋಟಿ
ತಿಂಗಳಿಗೆ ಪಾವತಿಸುವ ಒಟ್ಟು ಪಿಂಚಣಿ ಮೊತ್ತ

₹700 ಕೋಟಿ
ಅಂಗವಿಕಲರಿಗೆ ತಿಂಗಳಿಗೆ ಪಾವತಿಸುವ ಪಿಂಚಣಿ ಮೊತ್ತ

'ನಾನು ಪೋಲಿಯೊ ಪೀಡಿತ. ತಿಂಗಳಿಗೆ ₹1,400 ಪಿಂಚಣಿ ಬರುತ್ತಿತ್ತು. ಆದರೆ, 2020ರಲ್ಲಿ ಒಂದೇ ಒಂದು ತಿಂಗಳ ಪಿಂಚಣಿಯೂ ಬಂದಿಲ್ಲ. ನಾಗರಭಾವಿಯಲ್ಲಿರುವ ನಾಡಕಚೇರಿಗೆ ದಾಖಲೆ ಕೊಟ್ಟಿದ್ದೆ. ನಂತರ, ಕಂದಾಯ ಭವನದ ಐದನೇ ಮಹಡಿಯಲ್ಲಿರುವ ಖಜಾನೆ ಇಲಾಖೆಯ ಅಧಿಕಾರಿಗಳಿಗೆ ಕೇಳಿದರೆ, ಕೊರೊನಾ ಬಂದು ನೀವು ಸತ್ತು ಹೋಗಿದ್ದರೇನೋ ಎಂದುಕೊಂಡಿದ್ದೆವು ಎಂದು ಮೂದಲಿಸಿದರು' ಎಂಬುದಾಗಿ ನಾಯಂಡಹಳ್ಳಿ ನಿವಾಸಿ ಮಹಮ್ಮದ್ ಆರಿಫ್ ಅಳಲು ತೋಡಿಕೊಂಡರು.

'ಪೋಲಿಯೊ ಬಂದು ನನಗೆ ನಡೆಯಲು ಆಗುವುದಿಲ್ಲ. ನಾಡಕಚೇರಿಗೆ ಹೋಗಿ ಪಿಂಚಣಿ ಆದೇಶ ಪತ್ರ, ಮನಿ ಆರ್ಡರ್ ಪ್ರತಿ, ಆಧಾರ್, ಪಾನ್ ಕಾರ್ಡ್ ಸೇರಿದಂತೆ ಎಲ್ಲ ದಾಖಲೆಗಳನ್ನು ನೀಡಿ ಒಂದು ವರ್ಷವೇ ಆಯಿತು. ಇನ್ನೂ ಪಿಂಚಣಿ ಬಂದಿಲ್ಲ' ಎಂದು ಹೆಬ್ಬಾಳದ ಆನಂದನಗರ ನಿವಾಸಿ ಎಸ್. ಮುನಿಸ್ವಾಮಿ ಹೇಳಿದರು.

ಅಂಧರಿಗೂ ಸಮಸ್ಯೆ: 'ಅಂಧರಿಗೆ ಐದಾರು ತಿಂಗಳಿನಿಂದ ಪಿಂಚಣಿ ಕೊಡುತ್ತಿಲ್ಲ. ಕಣ್ಣಿಲ್ಲದವರು ಈ ಕೋವಿಡ್ ಸಂದರ್ಭದಲ್ಲಿ ಕಚೇರಿಯಿಂದ ಕಚೇರಿಗೆ ಅಲೆದಾಡಲು ಸಾಧ್ಯವೇ' ಎಂದು ದೃಷ್ಟಿದೋಷ ಹೊಂದಿರುವ ಅಜಿತ್ ಪ್ರಶ್ನಿಸಿದರು.

ಪ್ರಜಾವಾಣಿ ವಿಶೇಷ

'ಬಾಕಿ ಸಹಿತ ಪಾವತಿಗೆ ಕ್ರಮ'

'ಒಂದು ವರ್ಷದಿಂದ ಪಿಂಚಣಿ ಬಂದಿಲ್ಲ ಎನ್ನುವುದನ್ನು ಒಪ್ಪಲಾಗದು. ಪ್ರತಿ ತಿಂಗಳೂ ಸುಮಾರು ಹತ್ತು ಸಾವಿರ ಹೊಸಬರು ಸೇರ್ಪಡೆಯಾಗುತ್ತಿದ್ದಾರೆ. ಸುಮಾರು 9 ಲಕ್ಷ ಅಂಗವಿಕಲರಿಗೆ ಸಕಾಲಕ್ಕೆ ಪಿಂಚಣಿ ಪಾವತಿಯಾಗುತ್ತಿದೆ' ಎಂದು ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯದ ನಿರ್ದೇಶಕ ಜಿ. ಪ್ರಭು 'ಪ್ರಜಾವಾಣಿ'ಗೆ ತಿಳಿಸಿದರು.

'ಆದಾಗ್ಯೂ, ಮಾಸಾಶನ ಅಥವಾ ಪಿಂಚಣಿ ಪಾವತಿಯಾಗಿಲ್ಲ ಎಂಬ ದೂರುಗಳು ಬಂದರೆ ಫಲಾನುಭವಿಗಳಿಗೆ ಬಾಕಿ ಸಹಿತ ಪೂರ್ಣ ಮೊತ್ತವನ್ನು ಪಾವತಿಸಲಾಗುವುದು' ಎಂದರು.

'ಪಿಂಚಣಿ ಪಡೆಯಲು ಎಷ್ಟು ಜನ ಅರ್ಹರಿದ್ದಾರೆ ಎಂಬ ಬಗ್ಗೆ ತಹಶೀಲ್ದಾರ್ ಅವರು ಪ್ರತಿ ತಿಂಗಳು ಮಾಹಿತಿ ಕಳಿಸುತ್ತಾರೆ. ಅದನ್ನು ಪರಿಶೀಲಿಸಿ, ಶೇ 94ರಷ್ಟು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಹಣ ಜಮಾ ಮಾಡಲಾಗುತ್ತಿದೆ. ತಪ್ಪು ವಿಳಾಸ ಇದ್ದವರು, ಆಧಾರ್–ಪಾನ್ ಅಪ್‌ಡೇಟ್ ಮಾಡದಿದ್ದವರಿಗೆ ತೊಂದರೆ ಆಗಿರಬಹುದು' ಎಂದರು.

'ಕೆಲವರು ಎರಡು ಜಿಲ್ಲೆಯಲ್ಲಿ ಪಿಂಚಣಿ ಪಡೆಯುತ್ತಿದ್ದರು. ಒಂದು ವರ್ಷದಲ್ಲಿ ಇಂತಹ ಲಕ್ಷಕ್ಕೂ ಹೆಚ್ಚು ಪ್ರಕರಣ ಪತ್ತೆ ಮಾಡಿ ಆ ಖಾತೆಗಳನ್ನು ರದ್ದುಗೊಳಿಸಲಾಗಿದೆ' ಎಂದೂ ಅವರು ಮಾಹಿತಿ ನೀಡಿದರು.

'ಬಹುತೇಕ ಇಲಾಖೆಗಳಲ್ಲಿ ಹೊರಗುತ್ತಿಗೆ ನೌಕರರೇ ಕೆಲಸ ಮಾಡುತ್ತಿದ್ದಾರೆ. ಇವರು ಅಂಗವಿಕಲರ ದಾಖಲೆಗಳನ್ನು ಸರಿಯಾಗಿ ಅಪ್‌ಲೋಡ್ ಮಾಡದಿರುವುದರಿಂದ ಸಮಸ್ಯೆಯಾಗುತ್ತಿದೆ' ಎಂದು ರಾಜ್ಯ ಅಂಗವಿಕಲರ ರಕ್ಷಣಾ ಸಮಿತಿಯ ಕಾರ್ಯಾಧ್ಯಕ್ಷ ಚಂದ್ರಶೇಖರ ಪುಟ್ಟಪ್ಪ ದೂರಿದರು.

'ಪಿಂಚಣಿ ಬಂದಿಲ್ಲ ಎಂದು ಕೆಲವು ದೂರುಗಳು ಬಂದಿವೆ. ಆದರೆ, ಇದು ನಮ್ಮ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯಕ್ಕೆ ಈ ಬಗ್ಗೆ ಮಾಹಿತಿ ನೀಡಿದ್ದೇವೆ' ಎಂದು ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ನಿರ್ದೇಶಕ ಮುನಿರಾಜು 'ಪ್ರಜಾವಾಣಿ'ಗೆ ತಿಳಿಸಿದರು.

ಗುರುತಿನ ಚೀಟಿಗೂ ಅಲೆದಾಟ: 'ಅಂಗವಿಕರಿಗಾಗಿ ವಿಶಿಷ್ಟ ಗುರುತಿನ ಚೀಟಿ (ಯುಡಿ ಐಡಿ) ನೀಡಲಾಗುತ್ತಿದೆ. ಕೆಎಸ್‌ಆರ್‌ಟಿಸಿ–ಬಿಎಂಟಿಸಿ ಬಸ್ ಪಾಸ್ ಪಡೆಯಲು ಈ ಯುಡಿ ಐಡಿ ಕೇಳುತ್ತಾರೆ. ಇಲಾಖೆಯಿಂದ ಈ ಕಾರ್ಡ್‌ಗಳನ್ನು ವಿತರಿಸುತ್ತಿಲ್ಲ' ಎಂದು ಅಜಿತ್ ದೂರಿದರು.

'ಚೆನ್ನೈನಿಂದ ಈ ಕಾರ್ಡ್‌ಗಳು ಬರಬೇಕು ಎನ್ನುತ್ತಾರೆ. ಆದರೆ, ಕೆಲವು ಅಧಿಕಾರಿಗಳು ಹೇಳುವಂತೆ 4,500 ಕಾರ್ಡ್‌ಗಳು ಬಂದಿವೆ. ಇವುಗಳನ್ನೂ ಫಲಾನುಭವಿಗಳಿಗೆ ನೀಡುತ್ತಿಲ್ಲ' ಎಂದರು.

ಇಫ್ಕೊ ಸಂಸ್ಥೆಯ ವತಿಯಿಂದ ಹಿರಿಯ ಸಹಕಾರಿಗಳಿಗೆ ನೀಡುವ 'ಸಹಕಾರಿ ಬಂಧು'ರಾಷ್ಟ್ರೀಯ ಪ್ರಶಸ್ತಿಯನ್ನು ಕ್ಯಾಂಪ್ಕೊ ಮಾಜಿ ಅಧ್ಯಕ್ಷ ಎಸ್‌.ಆರ್‌.ರಂಗಮೂರ್ತಿ ಅವರಿಗೆ ವಿಟ್ಲದ ಪುಣಚದ ಮನೆಯಲ್ಲಿ ಸೋಮವಾರ ಪ್ರದಾನ ಮಾಡಲಾಯಿತು. 11 ಲಕ್ಷ ನಗದು, ರಜತ ತಟ್ಟೆ, ರೇಷ್ಮೆಶಾಲು, ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ.

ಕೋವಿಡ್: ಶೇ 5ರೊಳಗೆ ಬರುವವರೆಗೆ ಲಾಕ್ ಡೌನ್ ಅಗತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಕೋವಿಡ್ ದೃಢಪಡುವ ಪ್ರಮಾಣ ಶೇ 5ರ ಒಳಗೆ ಬರುವವರೆಗೆ ಲಾಕ್ ಡೌನ್ ಮುಂದುವರಿಸಬೇಕು' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಈ ವಿಷಯದಲ್ಲಿ ಸರ್ಕಾರ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕು. ಲಾಕ್ ಡೌನ್ ಮತ್ತಿತರ ವಿಷಯದಲ್ಲಿ ತಜ್ಞರ ಸಲಹೆಯನ್ನು ಸರ್ಕಾರ ಪಾಲಿಸಬೇಕು' ಎಂದು ಸಲಹೆ ನೀಡಿದರು.

'ಎಲ್ಲರಿಗೂ ಲಸಿಕೆ ಹಾಕುವುದೊಂದೇ ಕೊರೊನಾದಿಂದ ದೂರ ಇರುವ ಮಾರ್ಗ. 12 ವರ್ಷದೊಳಗಿನ ಮಕ್ಕಳನ್ನು ಹೊರತುಪಡಿಸಿ ಎಲ್ಲರಿಗೂ ಲಸಿಕೆ ಹಾಕಲು ಸಿದ್ಧತೆ ಮಾಡಿಕೊಳ್ಳಬೇಕು. ಡಿಸೆಂಬರ್ ವೇಳೆಗೆ ಈ ಪ್ರಕ್ರಿಯೆ ಪೂರ್ಣಗೊಳಿಸಬೇಕು' ಎಂದರು.

ಹಿಂದಕ್ಕೆ ಕೊಂಡೊಯ್ದ ಮೋದಿ: 'ಬಿಜೆಪಿ ನಾಯಕರು ಮೋದಿಯವರ ನೇತೃತ್ವದ ಸರ್ಕಾರಕ್ಕೆ ಏಳು ವರ್ಷ ತುಂಬಿತೆಂದು ಖಾಲಿ ಕೊಡ ಹೊತ್ತುಕೊಂಡು ಸಂಭ್ರಮ ಪಟ್ಟಿದ್ದಾರೆ. ತಮ್ಮ ಬೆನ್ನು ತಾವೇ ತಟ್ಟಿಕೊಂಡು ಸಂಭ್ರಮಿಸಿದ್ದಾರೆ' ಎಂದು ಸಿದ್ದರಾಮಯ್ಯ ಟೀಕಿಸಿದರು.

'ಏಳು ವರ್ಷಗಳ ಆಳ್ವಿಕೆಯಲ್ಲಿ ದೇಶವನ್ನು 70 ವರ್ಷಗಳಷ್ಟು ಹಿಂದಕ್ಕೆ ಕೊಂಡೊಯ್ದಿರುವುದೇ ಮೋದಿ ಸಾಧನೆ' ಎಂದರು.

'ನೋಟು ರದ್ದತಿ, ಜಿಎಸ್‌ಟಿ ಪಾಲು ನೀಡದೆ ಶೋಷಣೆ, ಕೊರೊನಾ ಗೆದ್ದು ಬಿಟ್ಟಿದ್ದೇವೆಂದು ಮೈಮರೆತು ಎರಡನೆ ಅಲೆ ಸೃಷ್ಟಿಸಿದ್ದು, ಆಮ್ಲಜನಕ, ಔಷಧ ಸಿಗದೆ ಜನ ಮರಣ ಹೊಂದಿದ್ದು, ರೈತ ವಿರೋಧಿ ಕಾನೂನು ತಂದಿದ್ದು, ನಿರುದ್ಯೋಗ ಮತ್ತು ಕಲ್ಲಿದ್ದಲು ಗಣಿಗಳು, ಕಾರ್ಖಾನೆಗಳು, ಸಂಸ್ಥೆಗಳು, ವಿಮಾನ ನಿಲ್ದಾಣ, ಬಂದರುಗಳನ್ನು ಖಾಸಗಿಗೆ ಬಿಟ್ಟುಕೊಟ್ಟಿದ್ದು ಮೋದಿ ಸರ್ಕಾರ ಆಡಳಿತದ ಏಳು ಭೀಕರ ದುರಂತಗಳು' ಎಂದರು.

ಸುದ್ದಿ 2 ನಿಮಿಷ

'ಕುರ್ಚಿ ಉಳಿಸಿಕೊಳ್ಳಲು ಲಾಕ್‌ಡೌನ್ ದುರ್ಬಳಕೆ ಬೇಡ'

ವಿಜಯಪುರ: 'ಮುಖ್ಯಮಂತ್ರಿ ಕುರ್ಚಿ ಉಳಿಸಿಕೊಳ್ಳುವ ರಾಜಕೀಯ ಸ್ವಾರ್ಥಕ್ಕಾಗಿ ಕೋವಿಡ್ ಲಾಕ್‌ಡೌನ್ ದುರ್ಬಳಕೆ ಆಗದಿರಲಿ. ರೋಗ ನಿಯಂತ್ರಣಕ್ಕೆ ಬಂದ ಜಿಲ್ಲೆಗಳಲ್ಲಿ ಹಂತ ಹಂತವಾಗಿ ಲಾಕ್‌ಡೌನ್ ತೆರವುಗೊಳಿಸಬೇಕು' ಎಂದು ವಿಜಯಪುರ ನಗರ ಕ್ಷೇತ್ರದ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆಗ್ರಹಿಸಿದರು.

ಸೋಮವಾರ ನಗರದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಕೋವಿಡ್ ಲಾಕ್‌ಡೌನ್ ಜೂನ್ 7ಕ್ಕೆ ಕೊನೆಗೊಳ್ಳಲಿದೆ.ಲಾಕ್‌ಡೌನ್ ಕಾರಣದಿಂದ ಸಾಮಾನ್ಯ, ಬಡ-ಕೂಲಿ ಕಾರ್ಮಿಕರು ಕೆಲಸ ಇಲ್ಲದೇ ಜೀವನ ನಿರ್ವಹಣೆಗೆ ಪರದಾಡುತ್ತಿದ್ದಾರೆ. ಹೀಗಾಗಿ ಉದ್ಯೋಗ ಸೃಷ್ಟಿಗೂ ಸರ್ಕಾರ ಪರ್ಯಾಯ ಕ್ರಮಕ್ಕೆ ಮುಂದಾಗಬೇಕು ಎಂದು ಹೇಳಿದರು.

ಮಠಾಧೀಶರ ಮೇಲೆ ವಿಜಯೇಂದ್ರ ಒತ್ತಡ:

'ಭ್ರಷ್ಟಾಚಾರದಲ್ಲಿ ತೊಡಗಿರುವ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಕುರ್ಚಿ ಉಳಿಸಲು ಅವರ ಪುತ್ರ ವಿಜಯೇಂದ್ರ ವೀರಶೈವ ಮಠಾಧೀಶರ ಮೇಲೆ ಒತ್ತಡ ಹೇರುತ್ತಿದ್ದಾರೆ. ಯಾವೊಬ್ಬ ಮಠಾಧೀಶರೂ ಕಳಂಕಿತರ ಪರವಾಗಿ ನಿಲ್ಲಬಾರದು' ಎಂದು ಯತ್ನಾಳ ಮನವಿ ಮಾಡಿದರು.

ತಮ್ಮ ಫೇಸ್‌ಬುಕ್‌ನಲ್ಲಿ ಈ ಕುರಿತು ಬರೆದುಕೊಂಡಿರುವ ಯತ್ನಾಳ, ತಮ್ಮ ತಂದೆಯ ಸ್ಥಾನದ ಪತನದ ಮುನ್ಸೂಚನೆ ಸಿಕ್ಕ ಹಿನ್ನೆಲೆಯಲ್ಲಿ ಅವರ ಪುತ್ರ ವಿಜಯೇಂದ್ರ ವೀರಶೈವ-ಲಿಂಗಾಯತ ಮಠಾಧೀಶರ ಮೂಲಕ ಒತ್ತಡ ಹೇರುವ ಕೆಲಸ ಆರಂಭಿಸಿದ್ದಾರೆ ಎಂದು ಆರೋಪಿಸಿದ್ದಾರೆ.

'ಯಡಿಯೂರಪ್ಪ ಕುಟುಂಬ ಭ್ರಷ್ಟಾಚಾರದಿಂದ ರಾಜ್ಯವನ್ನು ಹಗಲು ದರೋಡೆ ಮಾಡುತ್ತಿದೆ. ಇಂತಹ ಕುಟುಂಬದಿಂದ ನಮ್ಮ ರಾಜ್ಯವನ್ನು ಮುಕ್ತಗೊಳಿಸಲು ಯಾರೂ ಆಮಿಷಕ್ಕೆ ಒಳಗಾಗಬಾರದು' ಎಂದು ವಿನಂತಿಸಿಕೊಂಡಿದ್ದಾರೆ.

ರಾಜ್ಯಕ್ಕೆ ಮತ್ತೆ 1,930 ವಯಲ್ಸ್ ಹಂಚಿಕೆ

ಬೆಂಗಳೂರು: ಕಪ್ಪು ಶಿಲೀಂಧ್ರ (ಬ್ಲ್ಯಾಕ್ ಫಂಗಸ್) ರೋಗದ ಚಿಕಿತ್ಸೆಗೆ ವಿವಿಧ ರಾಜ್ಯಗಳಿಗೆ ಹೆಚ್ಚುವರಿಯಾಗಿ ಒಟ್ಟು 30,100 ಆ್ಯಂಪೋಟೆರಿಸಿನ್ ವಯಲ್‌ಗಳನ್ನು ಕೇಂದ್ರ ಸರ್ಕಾರ ಸೋಮವಾರ ಹಂಚಿಕೆ ಮಾಡಿದೆ. ಅದರಲ್ಲಿ ರಾಜ್ಯಕ್ಕೆ 1,930 ಹಂಚಿಕೆ ಮಾಡಲಾಗಿದೆ.

ಈ ರೋಗದ ಚಿಕಿತ್ಸೆಗೆ ಈವರೆಗೆ ರಾಜ್ಯಕ್ಕೆ ಕೇಂದ್ರ ಸರ್ಕಾರ 12,710 ವಯಲ್ಸ್ ಹಂಚಿಕೆ ಮಾಡಿದೆ. ವಿವಿಧ ರಾಜ್ಯಗಳಲ್ಲಿರುವ ಕಪ್ಪು ಶಿಲೀಂಧ್ರ ರೋಗಿಗಳ ಸಂಖ್ಯೆ ಆಧರಿಸಿ ಕೇಂದ್ರ ಸರ್ಕಾರ ಈ ಔಷಧವನ್ನು ಹಂಚಿಕೆ ಮಾಡುತ್ತಿದೆ.

ಮಹಾರಾಷ್ಟ್ರಕ್ಕೆ 5,900 ಗುಜರಾತ್‌ಗೆ 5,630, ರಾಜಸ್ಥಾನಕ್ಕೆ 3,670, ಮಧ್ಯಪ್ರದೇಶಕ್ಕೆ 1,920, ಉತ್ತರಪ್ರದೇಶಕ್ಕೆ 1,710, ಆಂಧ್ರಪ್ರದೇಶಕ್ಕೆ 1,600, ತೆಲಂಗಾಣ ಮತ್ತು ಹರಿಯಾಣಕ್ಕೆ ತಲಾ 1,200, ದೆಹಲಿಗೆ 1,190 ವಯಲ್ಸ್‌ಗಳನ್ನು ಕೇಂದ್ರ ಸರ್ಕಾರ ಹಂಚಿಕೆ ಮಾಡಿದೆ. ಈ ಬಗ್ಗೆ ಕೇಂದ್ರ ರಾಸಾಯನಿಕಸಚಿವ ಡಿ.ವಿ.ಸದಾನಂದ ಗೌಡ ಟ್ವೀಟ್ ಮಾಡಿದ್ದಾರೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಗೌಡರ ಸಾಧನೆ ಪರಿಚಯಕ್ಕೆ ಜೆಡಿಎಸ್ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡರು ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿ ಮಂಗಳವಾರಕ್ಕೆ 25 ವರ್ಷಗಳಾಗುತ್ತಿರುವ ಪ್ರಯುಕ್ತ ಪಕ್ಷವು ಗೌಡರ ಸಾಧನೆಗಳನ್ನು ಪರಿಚಯಿಸಲು ಡಿಜಿಟಲ್ ಮಾಧ್ಯಮದ ಮೂಲಕ 25 ದಿನಗಳ ಅಭಿಯಾನ ಹಮ್ಮಿಕೊಂಡಿದೆ.

ಜೂನ್ 1ರಿಂದ 25ರವರೆಗೆ ದೇವೇಗೌಡರ ರಾಜಕೀಯ ಜೀವನ, ಸಾಧನೆ, ಕೊಡುಗೆಗಳ ಕುರಿತು 25 ಹಿರಿಯ ರಾಜಕಾರಣಿಗಳು ಮತ್ತು ಪತ್ರಕರ್ತರು ವಿಡಿಯೊ ತುಣುಕಗಳ ಮೂಲಕ ಅಭಿಪ್ರಾಯಗಳನ್ನು ಹಂಚಿಕೊಳ್ಳಲಿದ್ದಾರೆ. ಪ್ರತಿ ದಿನ ಸಂಜೆ 5 ಗಂಟೆಗೆ ಜೆಡಿಎಸ್‌ನ ಅಧಿಕೃತ ಫೇಸ್‌ಬುಕ್ ಪುಟ @JDSpartyofficial ಮತ್ತು ಟ್ವಿಟರ್ ಖಾತೆ @JanataDal_Sಗಳಲ್ಲಿ ಈ ವಿಡಿಯೊ ತುಣುಕುಗಳು ಪ್ರಸಾರವಾಗಲಿವೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ಕೋವಿಡ್: ಮತ್ತೆ ಏರಿದ ಸಾವಿನ ಪ್ರಮಾಣ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪೀಡಿತರ ಪೈಕಿ ಸೋಮವಾರ ಮತ್ತೆ 411 ಜನ ಸಾವಿಗೀಡಾಗಿದ್ದಾರೆ. ಈ ಪೈಕಿ ಬೆಂಗಳೂರಿನಲ್ಲೇ (242) ಅಧಿಕ ಪ್ರಕರಣಗಳು ವರದಿಯಾಗಿವೆ. ಇದರೊಂದಿಗೆ ಮೃತರ ಒಟ್ಟು ಸಂಖ್ಯೆ 29,090ಕ್ಕೆ ಹೆಚ್ಚಿದ್ದು, ಮರಣ ಪ್ರಮಾಣ ದರವು ಶೇ 2.47ಕ್ಕೆ ತಲುಪಿದೆ.

ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತೆ ಇಳಿದಿದೆ. ಹಿಂದಿನ 24 ಗಂಟೆಗಳಲ್ಲಿ 16,604 ಮಂದಿಯಲ್ಲಿ ಹೊಸದಾಗಿ ಸೋಂಕು ದೃಢಪಟ್ಟಿದೆ. ರಾಜ್ಯದಲ್ಲಿ ಕೊರೊನಾ ಕಾಲಿಟ್ಟ ದಿನದಿಂದ ಈವರೆಗೆ ಒಟ್ಟು 26.04 ಲಕ್ಷ ಮಂದಿ ಸೋಂಕಿಗೊಳಪಟ್ಟಂತಾಗಿದೆ.

ಸೋಮವಾರ ಒಂದೇ ದಿನ 44,473 ಮಂದಿ ಚೇತರಿಸಿಕೊಂಡಿದ್ದಾರೆ. ಇದರಿಂದಾಗಿ ಗುಣಮುಖರ ಸಂಖ್ಯೆ 22.61 ಲಕ್ಷಕ್ಕೆ ಏರಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 3.13 ಲಕ್ಷಕ್ಕೆ ಕುಸಿದಿದೆ. ಹಿಂದಿನ 24 ಗಂಟೆಗಳಲ್ಲಿ 1.22 ಲಕ್ಷ ಮಂದಿಯ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆಗೊಳಪಡಿಸಲಾಗಿದ್ದು, ಸೋಂಕಿತರ ಪ್ರಮಾಣ ಶೇ 13.57ರಷ್ಟಕ್ಕೆ ಇಳಿದಿದೆ.

ಬೆಂಗಳೂರಿನಲ್ಲಿ ಕೊರೊನಾ ಪ್ರಕರಣಗಳು ಗಣನೀಯವಾಗಿ ಇಳಿಕೆ ಕಾಣುತ್ತಿವೆ. ಸೋಮವಾರ ಕೇವಲ 3,992 ಮಂದಿಯಲ್ಲಿ ಸೋಂಕು ಖಚಿತಪಟ್ಟಿದೆ. ಹಾಸನ (1,162) ಮತ್ತು ಮೈಸೂರಿನಲ್ಲಿ (1,171) ಸಾವಿರಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಬೆಳಗಾವಿ (910), ಚಿತ್ರದುರ್ಗ (731), ದಕ್ಷಿಣ ಕನ್ನಡ (651), ಮಂಡ್ಯ (753), ಶಿವಮೊಗ್ಗ (589), ತುಮಕೂರು (806), ಉಡುಪಿ (519) ಹಾಗೂ ಉತ್ತರ ಕನ್ನಡದಲ್ಲೂ (641) ಅಧಿಕ ಪ್ರಕರಣಗಳು ವರದಿಯಾಗಿವೆ.

ಕೋವಿಡ್ ಪೀಡಿತರ ಪೈಕಿ ಬೆಳಗಾವಿಯಲ್ಲಿ 15, ಬೆಂಗಳೂರು ಗ್ರಾಮಾಂತರ, ಉತ್ತರ ಕನ್ನಡ ಹಾಗೂ ಧಾರವಾಡದಲ್ಲಿ ತಲಾ 10, ಹಾಸನದಲ್ಲಿ 12, ಮೈಸೂರು ಮತ್ತು ಶಿವಮೊಗ್ಗದಲ್ಲಿ ತಲಾ 13, ಬಳ್ಳಾರಿ, ಕೊಪ್ಪಳ ಹಾಗೂ ತುಮಕೂರಿನಲ್ಲಿ ತಲಾ 8 ಜನ ಸತ್ತಿದ್ದಾರೆ. ಮೃತರ ಪೈಕಿ ಹೆಚ್ಚಿನವರು ಜ್ವರ, ಕೆಮ್ಮು ಹಾಗೂ ಉಸಿರಾಟದ ಸಮಸ್ಯೆ ಎದುರಿಸುತ್ತಿದ್ದರು.

'ಸತ್ಯಾಂಶ ಮುಚ್ಚಿಡಲಾಗಿದೆ, ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: '2011ರ ಸಾಲಿನ 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಯ ನೇಮಕಾತಿ ಪ್ರಕರಣದಲ್ಲಿ ಕೆಪಿಎಸ್‌ಸಿಯ ಹಿಂದಿನ ಅಧ್ಯಕ್ಷರು ಮತ್ತು ಸದಸ್ಯರ ಮೇಲಿನ ವಿಚಾರಣೆ ಕೈ ಬಿಡುವಂತೆ ಕಾಂಗ್ರೆಸ್ ಒತ್ತಾಯಿಸಿಲ್ಲ' ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಪಿ.ಆರ್. ರಮೇಶ್ ಹೇಳಿದ್ದಾರೆ.

ಕೆಎಟಿ ನೀಡಿದ್ದ ಆದೇಶದಂತೆ ಸಿದ್ದರಾಮಯ್ಯ ನೇತೃತ್ವದ ಈ ಹಿಂದಿನ ಸರ್ಕಾರ ಅಭ್ಯರ್ಥಿಗಳಿಗೆ ನೀಡಿದ್ದ ನೇಮಕಾತಿ ಆದೇಶ ನಿರ್ಧಾರವನ್ನು ಸಮರ್ಥಿಸುತ್ತದೆ' ಎಂದು ಪ್ರತಿಪಾದಿಸಿರುವ ಅವರು,'ಹೈಕೋರ್ಟ್ ಮುಂದೆ ಸತ್ಯಾಂಶಗಳನ್ನು ಮುಚ್ಚಿಟ್ಟು ತಪ್ಪು ಮಾಹಿತಿ ನೀಡಿ, ವಂಚನೆ ಮೂಲಕ ಪಡೆದ ತೀರ್ಪು ಪಡೆಯಲಾಗಿದೆ. ಇದನ್ನು ಈಗಲೂ ಪಕ್ಷ ಪ್ರತಿಪಾದಿಸುತ್ತದೆ' ಎಂದು ತಿಳಿಸಿದ್ದಾರೆ.

ಪಿ.ಆರ್. ರಮೇಶ್

'2011ರ ಸಾಲಿನ ನೇಮಕಾತಿ ಅಧಿಸೂಚನೆ ರದ್ದುಪಡಿಸುವ ಸಂದರ್ಭದಲ್ಲಿ ಸಂವಿಧಾನದ ವಿಧಿ 323 (2) ಪಾಲನೆ ಆಗಿಲ್ಲ. ಸಿಐಡಿಯ ಮಧ್ಯಂತರ ವರದಿಯಲ್ಲಿ ಸಾಕ್ಷ್ಯಾಧಾರಗಳಿಲ್ಲವೆಂಬ ಕಾರಣಕ್ಕೆ ಆಯ್ಕೆಯಾದವರಿಗೆ ನೇಮಕಾತಿ ಆದೇಶ ನೀಡಲು ಕೆಎಟಿ ಆದೇಶ ನೀಡಿತ್ತು. ಈ ವಿಧಿಯ ಪ್ರಕಾರ, ಆಯ್ಕೆ ಪಟ್ಟಿ ರದ್ದುಪಡಿಸುವ ಮೊದಲು ಸೂಕ್ತ ಕಾರಣ ನೀಡಿ ವಿಧಾನಮಂಡಲದ ಎರಡೂ ಸದನಗಳಲ್ಲಿ ಚರ್ಚಿಸಬೇಕು. ಆದರೆ, ಈ ಪ್ರಕರಣ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬಂದಾಗ, ಸಂವಿಧಾನದ ವಿಧಿ ಪಾಲಿಸಲಾಗಿದೆ ಎಂದು ತಪ್ಪು ಮಾಹಿತಿ ನೀಡಲಾಗಿತ್ತು. ಇದನ್ನು ನಂಬಿ ಹೈಕೋರ್ಟ್ ಆಯ್ಕೆ ಪಟ್ಟಿ ರದ್ದುಗೊಳಿಸಿತ್ತು' ಎಂದು ಅವರು ವಿವರಿಸಿದ್ದಾರೆ.

'ಕೆಎಟಿ ಆದೇಶದಂತೆ ಸಿದ್ದರಾಮಯ್ಯ ಸರ್ಕಾರ ಎಲ್ಲ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಿತ್ತು. ಆಯ್ಕೆ ಪಟ್ಟಿಯನ್ನು ಅಂದಿನ ಸರ್ಕಾರ ಒಪ್ಪಿಕೊಂಡಿದ್ದರಿಂದ ಸಂವಿಧಾನದ ವಿಧಿಯ ಪ್ರಕಾರ ವಿಧಾನಮಂಡಲದಲ್ಲಿ ಚರ್ಚಿಸುವ ಸಂದರ್ಭ ಯಾಕೆ ಸೃಷ್ಟಿಯಾಗುತ್ತದೆ? ಚರ್ಚೆ ಆಗದ ವಿಚಾರವನ್ನು ಚರ್ಚೆ ಆಗಿದೆ ಎಂದು ಹೈಕೋರ್ಟ್‌ಗೆ ಮಾಹಿತಿ ನೀಡಿ ಶಾಸಕಾಂಗದ ಹಕ್ಕು ಚ್ಯುತಿ ಮಾಡಲಾಗಿದೆ. ಈ ವಿಷಯವನ್ನು 2020ರ ಮಾರ್ಚ್‌ನಲ್ಲಿ ನಡೆದ ವಿಧಾನಸಭೆ ಅಧಿವೇಶನದಲ್ಲಿ ಚರ್ಚಿಸಿದ್ದೇವೆ. ಹೈಕೋರ್ಟ್‌ಗೆ ತಪ್ಪು ಮಾಹಿತಿ ನೀಡಿದ್ದ ವಿಷಯ ಸುಪ್ರೀಂ ಕೋರ್ಟ್‌ನಲ್ಲಿ ಚರ್ಚೆಗೆ ಬರಲಿಲ್ಲ. ಅಲ್ಲದೆ, ಸರ್ಕಾರವನ್ನು ಸುಪ್ರೀಂ ಕೋರ್ಟ್ ಪ್ರತಿವಾದಿಯನ್ನಾಗಿ ಮಾಡಲಿಲ್ಲ. ಹೀಗಾಗಿ, ರಾಜ್ಯ ಸರ್ಕಾರದ ವಾದಕ್ಕೂ ಅವಕಾಶ ಸಿಗಲಿಲ್ಲ. ಹೀಗಾಗಿ, ನೇಮಕಗೊಂಡ ಅಭ್ಯರ್ಥಿಗಳಿಗೆ ಅನ್ಯಾಯ ಆಗಿದೆ ಎಂದು ಅಧಿವೇಶನದಲ್ಲಿ ಪ್ರತಿಪಾದಿಸಿದ್ದೇವೆ' ಎಂದೂ ಅವರು ಹೇಳಿದ್ದಾರೆ.

ಕೆಪಿಎಸ್‌ಸಿ: ಮತ್ತೆ ಕೋರ್ಟ್‌ಗೆ?

ಒಂದನೇ ಪುಟದಿಂದ

'ಈ ಪ್ರಕರಣದಲ್ಲಿ ಸಿಐಡಿ ಸಿದ್ಧಪಡಿಸಿದ್ದ ಕರಡು ದೋಷಾರೋಪ ಪಟ್ಟಿ ಆಧರಿಸಿ, ಕೆಪಿಎಸ್‌ಸಿಯ ಅಂದಿನ ಅಧ್ಯಕ್ಷರು ಮತ್ತು ಸದಸ್ಯರ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆ 1988ರ 19(1) ಸೆಕ್ಷನ್ ಮತ್ತು ಅಪರಾಧ ದಂಡ ಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) 1973ರ ಸೆಕ್ಷನ್197ರ ಅಡಿಯಲ್ಲಿ ಪ್ರಕರಣ ದಾಖಲಾಗಿದೆ. ಕೆಪಿಎಸ್‌ಸಿ ಅಧ್ಯಕ್ಷ, ಸದಸ್ಯರ ನೇಮಕಾತಿಯಲ್ಲಿ ಸಕ್ಷಮ ಪ್ರಾಧಿಕಾರ ರಾಷ್ಟ್ರಪತಿ. ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಂಡು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆಗೆ (ಡಿಒಪಿಟಿ) ಕಳುಹಿಸಬೇಕು. ಡಿಒಪಿಟಿ ಅದನ್ನು ರಾಷ್ಟ್ರಪತಿ ಮುಂದೆ ಮಂಡಿಸುವುದು ನಿಯಮ. ಹೀಗಾಗಿ ಪ್ರಸ್ತಾವನ್ನು ಸೆ. 15ರ ಸಚಿವ ಸಂಪುಟ ಸಭೆಗೆ ಮಂಡಿಸಲಾಗಿತ್ತು. ಈ ಸಂಬಂಧ ರಚಿಸಿದ್ದ ಸಂಪುಟ ಉಪ ಸಮಿತಿ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ. ಹೀಗಾಗಿ ಮತ್ತೆ ಸಂಪುಟ ಸಭೆಗೆ ಮಂಡಿಸಲಾಗಿದ್ದು, ಪ್ರಾಸಿಕ್ಯೂಷನ್ ಮಂಜೂರಾತಿ ಸಿಕ್ಕಿಲ್ಲ. ಆದರೆ, ಅಭ್ಯರ್ಥಿಗಳ ನೇಮಕಾತಿಯ ತೀರ್ಮಾನ ಆಗಿಲ್ಲ' ಎಂದು ಸಿಬ್ಬಂದಿ ಮತ್ತು ಸುಧಾರಣಾ ಇಲಾಖೆ (ಡಿಪಿಎಆರ್) ಅಧಿಕಾರಿ ತಿಳಿಸಿದರು.

'2011ರ ಆಯ್ಕೆ ಪಟ್ಟಿಯಲ್ಲಿದ್ದ 362 ಅಭ್ಯರ್ಥಿಗಳ ಪೈಕಿ ಅರ್ಧದಷ್ಟು ಮಂದಿ 2014 ಮತ್ತು 2015 ಆಯ್ಕೆ ಪಟ್ಟಿಯಲ್ಲಿ ನೇಮಕಗೊಂಡಿದ್ದಾರೆ. ಈ ಪ್ರಕರಣ ಮತ್ತೆ ಕೋರ್ಟ್ ಮೆಟ್ಟಿಲೇರಿದರೆ, ಅರ್ಹತೆ ಆಧಾರದಲ್ಲಿ ಪಾರದರ್ಶಕವಾಗಿ ನೇಮಕಗೊಂಡು ಹುದ್ದೆ ಪಡೆಯುವ ನಿರೀಕ್ಷೆಯಲ್ಲಿರುವವರು ಏನು ಮಾಡಬೇಕು' ಎಂದು ಈ ಸಾಲಿನಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಯೊಬ್ಬರು ಪ್ರಶ್ನಿಸಿದರು.

ಏನಿದು ಪ್ರಕರಣ...

ಕೆಪಿಎಸ್‌ಸಿ 2011 ನ. 3ರಂದು ಅರ್ಜಿ ಆಹ್ವಾನಿಸಿ, 2014ರ ಮಾರ್ಚ್ 22ರಂದು ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿತ್ತು. ನೇಮಕದಲ್ಲಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಿ ಅಡ್ವೋಕೇಟ್ ಜನರಲ್‌ಗೆ ಅಭ್ಯರ್ಥಿಯೊಬ್ಬರು ಪತ್ರ ಬರೆದಿದ್ದರು. ಎಜಿ ಅಭಿಪ್ರಾಯದ ಮೇರೆಗೆ ವಿಧಾನಸೌಧ ಪೊಲೀಸ್ ಠಾಣೆಗೆ ಡಿಪಿಎಆರ್ ದೂರು ನೀಡಿತ್ತು. ಆಗ ಅಧಿಕಾರದಲ್ಲಿದ್ದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ 2014ರ ಜೂನ್ 27ರಂದು ಸಿಐಡಿಗೆ ವಹಿಸಿತ್ತು. ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂದು ಸಿಐಡಿ ನೀಡಿದ್ದ ಮಧ್ಯಂತರ ವರದಿ ಪರಿಗಣಿಸಿ 2014ರ ಆ. 8ರಂದು ನೇಮಕಾತಿ ಅಧಿಸೂಚನೆಯನ್ನೇ ಸರ್ಕಾರ ಹಿಂಪಡೆದಿತ್ತು. ಇದನ್ನು ಪ್ರಶ್ನಿಸಿ ಆಯ್ಕೆಯಾಗಿದ್ದ ಅಭ್ಯರ್ಥಿಗಳು ಕೆಎಟಿ ಮೆಟ್ಟಿಲೇರಿದ್ದರು. ಸರ್ಕಾರದ ಆದೇಶವನ್ನು ವಜಾಗೊಳಿಸಿದ್ದ ಕೆಎಟಿ, ಅರ್ಹರಿಗೆ ನೇಮಕ ಪತ್ರ ನೀಡುವಂತೆ 2016ರ ಅ. 19ರಂದು ಆದೇಶಿಸಿತು. ಕೆಎಟಿ ತೀರ್ಪು ಪ್ರಶ್ನಿಸಿ ಹುದ್ದೆ ವಂಚಿತ ಅಭ್ಯರ್ಥಿಗಳು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ್ದ ಹೈಕೋರ್ಟ್, ನೇಮಕ ರದ್ದುಪಡಿಸಿತ್ತು.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪ್ರಭಾವ ಬಳಸಿ ಪಾರಾಗಲು ಯತ್ನಿಸಿದ್ದ ವಿನಯ ಕುಲಕರ್ಣಿ: ಸಿಬಿಐ

ಬೆಂಗಳೂರು: ಧಾರವಾಡ ಜಿಲ್ಲಾ ಪಂಚಾಯಿತಿ ಸದಸ್ಯರಾಗಿದ್ದ ಯೋಗೇಶಗೌಡ ಹತ್ಯೆ ಪ್ರಕರಣದ ಆರೋಪಿ ವಿನಯ ಕುಲಕರ್ಣಿ ಅವರು ತಮ್ಮ ಪ್ರಭಾವ ಬಳಸಿ ಆರೋಪದಿಂದ ಪಾರಾಗಲು ಪ್ರಯತ್ನಿಸಿದ್ದರು ಎಂದು ಈ ಪ್ರಕರಣದ ತನಿಖೆ ನಡೆಸುತ್ತಿರುವ ಸಿಬಿಐ, ಹೈಕೋರ್ಟ್‌ಗೆ ದಾಖಲೆಗಳನ್ನು ಸಲ್ಲಿಸಿದೆ.

ವಿನಯ ಕುಲಕರ್ಣಿ ಜಾಮೀನು ಅರ್ಜಿ ವಜಾಗೊಳಿಸಿದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಪೀಠ, ಅವರ ವಿರುದ್ಧದ ಗಂಭೀರ ಆರೋಪಗಳ ಅವಲೋಕನ ನಡೆಸಿತು.

ಕುಲಕರ್ಣಿ ಈ ಹಿಂದೆ ಸಲ್ಲಿಸಿದ್ದ ಅರ್ಜಿಯನ್ನು 2021ರ ಜನವರಿ 21ರಂದು ತಿರಸ್ಕರಿಸಲಾಗಿತ್ತು. 2021ರ ಜನವರಿ 31ರಂದು ದೋಷಾರೋಪ ಸಲ್ಲಿಕೆಯಾದ ಬಳಿಕ ಮತ್ತೆ ಜಾಮೀನು ಅರ್ಜಿ ಸಲ್ಲಿಸಿದ್ದಾರೆ. 'ದೋಷಾರೋಪ ಪಟ್ಟಿ ಸಲ್ಲಿಕೆಯಾಗಿದೆ ಎಂಬ ಒಂದೇ ಕಾರಣಕ್ಕೆ ಜಾಮೀನು ನೀಡಲು ಸಾಧ್ಯವಾಗುವುದಿಲ್ಲ' ಎಂದು ಪೀಠ ಅಭಿಪ್ರಾಯಪಟ್ಟಿತು.

'ವಿನಯ ಕುಲಕರ್ಣಿ ಮತ್ತು ಹತ್ಯೆಯ ಪ್ರಮುಖ ಆರೋಪಿಗಳು ಮೊಬೈಲ್ ದೂರವಾಣಿ ಮೂಲಕ ನಿರಂತರವಾಗಿ ಸಂಪರ್ಕದಲ್ಲಿದ್ದರು. ಕೊಲೆ ನಡೆಯುವ ಮುನ್ನ ಇಬ್ಬರೂ ನೂರಾರು ಕರೆಗಳನ್ನು ವಿನಿಮಯ ಮಾಡಿಕೊಂಡಿದ್ದಾರೆ. ಕೊಲೆಯ ಬಳಿಕ ವಿನಯ ಕುಲಕರ್ಣಿ ಅವರನ್ನು ಆರೋಪಿ ಬೆಂಗಳೂರಿನಲ್ಲಿ ಭೇಟಿಯಾಗಿ ಮರುದಿನ ಪೊಲೀಸರಿಗೆ ಶರಣಾಗಿದ್ದಾರೆ' ಎಂಬುದನ್ನು ಪೀಠ ಗಮನಿಸಿತು.

'ಪ್ರಕರಣ ಬಗೆಹರಿಸಿಕೊಳ್ಳಲು ಮೃತ ಯೋಗೇಶಗೌಡ ಅವರ ಸಹೋದರನೊಂದಿಗೆ ವಿಫಲ ಪ್ರಯತ್ನ ನಡೆಸಿದರು. ₹20 ಲಕ್ಷ ಮತ್ತು ಕಾಂಗ್ರೆಸ್ ಪಕ್ಷದಲ್ಲಿ ಸ್ಥಾನ ನೀಡುವ ಭರವಸೆಯನ್ನು ಪತ್ನಿಗೆ ನೀಡಿದ್ದರು. ಅರ್ಜಿದಾರರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಕಾರಣ ತಮ್ಮ ಪ್ರಭಾವ ಬಳಸಿಕೊಂಡು ತನಿಖೆಯಲ್ಲಿ ಹಸ್ತಕ್ಷೇಪ ಮಾಡಿದ್ದಾರೆ. ಸಾಕ್ಷ್ಯ ನಾಶಕ್ಕೆ ಮತ್ತು ಸುಳ್ಳು ಆರೋಪಪಟ್ಟಿ ಸಲ್ಲಿಸಲು ತನಿಖಾಧಿಕಾರಿಗೆ ₹2 ಲಕ್ಷ ನೀಡಿದ್ದಾರೆ' ಎಂದು ಸಿಬಿಐ ಸಲ್ಲಿಸಿರುವ ದಾಖಲೆಗಳನ್ನು ಪೀಠ ಅವಲೋಕಿಸಿತು.

2016ರ ಜೂನ್ 15ರಂದು ಯೋಗೇಶಗೌಡ ಹತ್ಯೆಯಾಗಿತ್ತು. 2020 ನವೆಂಬರ್ 5ರಂದು ವಿನಯ ಕುಲಕರ್ಣಿ ಬಂಧನವಾಗಿತ್ತು. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಜಾಮೀನು ಅರ್ಜಿ ವಜಾಗೊಳಿಸಿದ್ದರಿಂದ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು.

ದಾಂಪತ್ಯ ಜೀವನಕ್ಕೆ ಕಾಲಿಟ್ಟ ನಟಿ ಪ್ರಣೀತಾ

ಬೆಂಗಳೂರು: 'ಪೊರ್ಕಿ' ಚಿತ್ರದ ಮುಖಾಂತರ ಚಾಲೆಂಜಿಂಗ್ ಸ್ಟಾರ್ ದರ್ಶನ್ ಅವರಿಗೆ ನಾಯಕಿಯಾಗಿ ಚಂದನವನಕ್ಕೆ ಕಾಲಿಟ್ಟಿದ್ದ ನಟಿ ಪ್ರಣೀತಾ ಸುಭಾಷ್, ಲಾಕ್‌ಡೌನ್‌ನಲ್ಲಿ ಸದ್ದಿಲ್ಲದೇ ದಾಂಪತ್ಯ ಜೀವನಕ್ಕೆ ಕಾಲಿರಿಸಿದ್ದಾರೆ.

ಭಾನುವಾರ ನಡೆದ ಸರಳ ಕಾರ್ಯಕ್ರಮದಲ್ಲಿ ಉದ್ಯಮಿ ನಿತಿನ್ ರಾಜು ಅವರ ಜೊತೆ ಹಸೆಮಣೆ ಏರಿದ್ದಾರೆ. ಕೆಲ ವರ್ಷಗಳಿಂದ ಸ್ನೇಹಿತರಾಗಿದ್ದ ಇಬ್ಬರೂ, ಬೆಂಗಳೂರು ಹೊರವಲಯದಲ್ಲಿನ ರೆಸಾರ್ಟ್ ಒಂದರಲ್ಲಿ ಸರಳವಾಗಿ ಮದುವೆಯಾಗಿದ್ದಾರೆ. ಕೋವಿಡ್ ನಿರ್ಬಂಧವಿರುವ ಕಾರಣ ಕುಟುಂಬದ ಆಪ್ತರು ಹಾಗೂ ಆಪ್ತ ಸ್ನೇಹಿತರಷ್ಟೇ ಮದುವೆಯಲ್ಲಿ ಭಾಗವಹಿಸಿದ್ದರು. ಮದುವೆಯ ನಂತರ ಈ ವಿಚಾರವನ್ನು ಸ್ವತಃ ಪ್ರಣೀತಾ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಇನ್‌ಸ್ಟಾಗ್ರಾಂನಲ್ಲಿ ಮಾಹಿತಿ ನೀಡಿರುವ ಪ್ರಣೀತಾ, 'ನಾನು ಹಾಗೂ ನಿತಿನ್ ಮೇ 30ರಂದು ಕುಟುಂಬದ ತೀರಾ ಆಪ್ತರ ಸಮ್ಮುಖದಲ್ಲಿ ಮದುವೆಯಾಗಿದ್ದೇವೆ ಎನ್ನುವುದನ್ನು ತಿಳಿಸಲು ಸಂತೋಷಪಡುತ್ತೇನೆ.

ವೈವಾಹಿಕ ಜೀವನಕ್ಕೆ ಕಾಲಿಟ್ಟ ಪ್ರಣೀತಾ– ನಿತಿನ್ ರಾಜು

ನಮ್ಮ ಮದುವೆಯ ದಿನಾಂಕವನ್ನು ತಿಳಿಸದೇ ಇದ್ದ ಕಾರಣಕ್ಕೆ ನಿಮ್ಮ ಕ್ಷಮೆ ಕೋರುತ್ತೇವೆ. ಏಕೆಂದರೆ, ಪ್ರಸ್ತುತ ಇರುವಂತಹ ಕೋವಿಡ್‌ನ ಈ ನಿರ್ಬಂಧದ ಪರಿಸ್ಥಿತಿಯಲ್ಲಿ ಮದುವೆಯ ಹಿಂದಿನ ದಿನದವರೆಗೂ ಯಾವಾಗ ಮದುವೆ ನಡೆಯುತ್ತದೆ ಎನ್ನುವುದು ನಮಗೇ ತಿಳಿದಿರಲಿಲ್ಲ' ಎಂದಿದ್ದಾರೆ.

'ಈ ವಿಶೇಷ ದಿನದಂದು ನಮ್ಮ ಪ್ರೀತಿಪಾತ್ರರೆಲ್ಲರೂ ನಮ್ಮ ಜೊತೆಗೆ ಇರಬೇಕಿತ್ತು ಎನ್ನುವ ಆಸೆ ನಮಗೂ ಇತ್ತು. ಆದರೆ ಕ್ಷಮೆ ಇರಲಿ. ಕೋವಿಡ್‌ನ ಈ ಪರಿಸ್ಥಿತಿ ತಿಳಿಯಾದ ಬಳಿಕ ನಿಮ್ಮೆಲ್ಲರ ಜೊತೆಗೂಡಿ ಸಂಭ್ರಮವನ್ನು ಆಚರಿಸೋಣ' ಎಂದೂ ತಿಳಿಸಿದ್ದಾರೆ.

ಪಶ್ಚಿಮ ಬಂಗಾಳ: ರಾಜ್ಯದ ಅಧಿಕಾರಿಯ ಸಮ್ಮತಿ ಇಲ್ಲದೆ ವರ್ಗಾವಣೆಗೆ ಆಕ್ರೋಶ

ಏಕಪಕ್ಷೀಯ ನಿರ್ಧಾರ: ಪ್ರಧಾನಿಗೆ ಮಮತಾ ಪತ್ರ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ಮುಖ್ಯ ಕಾರ್ಯದರ್ಶಿ ಅಲಪನ್ ಬಂದೋಪಾಧ್ಯಾಯ ಅವರನ್ನು ಸೇವೆಯಿಂದ ಬಿಡುಗಡೆ ಮಾಡಿ, ಮುಖ್ಯಮಂತ್ರಿಗಳ ಮುಖ್ಯ ಸಲಹೆಗಾರರನ್ನಾಗಿ ನೇಮಕ ಮಾಡುವುದಕ್ಕೂ ಮೊದಲು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದರು. 'ಅಲಪನ್ ಅವರನ್ನು ಸೇವೆಯಿಂದ ಬಿಡುಗಡೆ ಮಾಡುವುದಿಲ್ಲ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದರು.

'ಅಲಪನ್ ಅವರ ಸೇವೆಯನ್ನು ಮುಂದುವರಿಸುವ ಅಗತ್ಯವಿದೆ ಎಂಬ ನಿಮ್ಮದೇ ತೀರ್ಮಾನಕ್ಕೆ ವಿರುದ್ಧವಾದ ಈ ಆದೇಶವನ್ನು ನೋಡಿ ಆಘಾತವಾಗಿದೆ. ರಾಜ್ಯದ ಮತ್ತು ಅಧಿಕಾರಿಯ ಲಿಖಿತ ಸಮ್ಮತಿ ಪಡೆಯದೇ, ಹೊರಡಿಸಿರುವ ಈ ಆದೇಶವು ಏಕಪಕ್ಷೀಯವಾದುದು. ಇದು ಪಶ್ಚಿಮ ಬಂಗಾಳದ ಜನರ ಹಿತಾಸಕ್ತಿಗೆ ವಿರುದ್ಧವಾಗಿದೆ' ಎಂದು ಮಮತಾ ಅವರು ಪತ್ರದಲ್ಲಿ ಆಘಾತ ವ್ಯಕ್ತಪಡಿಸಿದ್ದಾರೆ.

ಅಧಿಕಾರಿಗಳು ಮೋದಿ ಅವರ ಜೀತದಾಳುಗಳೇ? ಕೇಂದ್ರ ಸೇವೆಯಲ್ಲಿರುವ ಬಂಗಾಳದ ಅಧಿಕಾರಿಗಳನ್ನು ಮನದ ಮಾತಿನ ಪ್ರಧಾನಿ, ಬ್ಯುಸಿ ಪ್ರಧಾನಿಯ ಸಮ್ಮತಿ ಪಡೆಯದೇ ರಾಜ್ಯಕ್ಕೆ ಕರೆಸಿಕೊಂಡರೇ ಹೇಗೆ?

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

'ರಾಜ್ಯದ ಜನರ ಹಿತಾಸಕ್ತಿಯ ದೃಷ್ಟಿಯಿಂದ, ಈ ಆದೇಶವನ್ನು ಮರುಪರಿಗಣಿಸಿ ಹಿಂಪಡೆಯಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಕೋವಿಡ್ ಸಾಂಕ್ರಾಮಿಕದಂತಹ ತುರ್ತುಪರಿಸ್ಥಿತಿಯಲ್ಲಿ ನಮ್ಮ ಮುಖ್ಯ ಕಾರ್ಯದರ್ಶಿಯನ್ನು, ಅವರ ಸೇವೆಯಿಂದ ಬಿಡುಗಡೆ ಮಾಡುವುದಿಲ್ಲ. ಪರಸ್ಪರ ಸಮ್ಮತಿ ಮತ್ತು ಕಾನೂನುಬದ್ಧವಾಗಿ ಅವರ ಸೇವೆಯನ್ನು ಮೂರು ತಿಂಗಳು ವಿಸ್ತರಿಸಲು ಹೊರಡಿಸಿದ್ದ ಆದೇಶವು ಚಾಲ್ತಿಯಲ್ಲಿ ಮತ್ತು ಜಾರಿಯಲ್ಲಿ ಇರುತ್ತದೆ ಎಂದು ನಾವು ಅರ್ಥ ಮಾಡಿಕೊಂಡಿದ್ದೇವೆ. ರಾಜ್ಯದ ಜನರ ಹಿತಾಸಕ್ತಿಯ ದೃಷ್ಟಿಯಿಂದ ತೆಗೆದುಕೊಳ್ಳಲಾಗಿದ್ದ ಈ ಆದೇಶವನ್ನು ನೀವು ಮಾನ್ಯ ಮಾಡುತ್ತೀರಿ ಎಂದು ನಂಬಿದ್ದೇವೆ' ಎಂದು ಮಮತಾ ಅವರು ಪತ್ರದಲ್ಲಿ ಹೇಳಿದ್ದಾರೆ.

'ಮೇ 28ರಂದು ಕಲೈಕುಂದ ವಾಯುನೆಲೆಯಲ್ಲಿ ನಡೆದ ಸಭೆ ಮತ್ತು ಮುಖ್ಯ ಕಾರ್ಯದರ್ಶಿಯನ್ನು ವಾಪಸ್ ಕರೆಸಿಕೊಳ್ಳುವ ಈ ಆದೇಶಕ್ಕೂ ಸಂಬಂಧ ಇಲ್ಲ ಎಂದು ನಾನು ಭಾವಿಸಿದ್ದೇನೆ. ಈ ಆದೇಶ ಹೊರಡಿಸಲು ಆ ಸಭೆಯೇ ಪ್ರಮುಖ ಕಾರಣವಾಗಿದ್ದರೆ, ಅದಕ್ಕಿಂತ ವಿಪರ್ಯಾಸ ಬೇರೊಂದು ಇಲ್ಲ. ಇದು ತಪ್ಪು ಆದ್ಯತೆಗಳಿಗಾಗಿ ರಾಜ್ಯದ ಜನರ ಹಿತಾಸಕ್ತಿಯನ್ನು ಬಲಿಕೊಟ್ಟ ಆದೇಶವಾಗುತ್ತದೆ' ಎಂದು ಮಮತಾ ಅವರು ವಿವರಿಸಿದ್ದಾರೆ.

'ಒಕ್ಕೂಟ ವ್ಯವಸ್ಥೆಗೆ ಧಕ್ಕೆ'

'ಒಕ್ಕೂಟ ಸಹಕಾರವೇ ಅಖಿಲ ಭಾರತ ಸೇವಾ ನಿಯಮಗಳ ಮೂಲಾಧಾರ ಎಂಬುದನ್ನು ನಿಯಮಗಳಲ್ಲಿಯೇ ಸ್ಪಷ್ಟಪಡಿಸಲಾಗಿದೆ. ಒಕ್ಕೂಟ ವ್ಯವಸ್ಥೆಯನ್ನು ರಕ್ಷಿಸುವುದು ಮತ್ತು ಇಲ್ಲಿನ ಒಗ್ಗಟ್ಟನ್ನು ಬಲಪಡಿಸುವುದು //ಅಖಿಲ ಭಾರತ ಸೇವೆಯ// ಪ್ರಧಾನ ಗುರಿಯಾಗಿದೆ. ಇಂತಹ ಏಕಪಕ್ಷೀಯ ಮತ್ತು ಸಮ್ಮತಿ ಪಡೆಯದ ನಿರ್ಧಾರವು ಒಕ್ಕೂಟ ವ್ಯವಸ್ಥೆಯನ್ನು ಭಾರಿ ಅಪಾಯಕ್ಕೆ ದೂಡುತ್ತದೆ ಮತ್ತು ಈ ವ್ಯವಸ್ಥೆಗೆ ಧಕ್ಕೆಯನ್ನುಂಟು ಮಾಡುತ್ತದೆ' ಎಂದು ಮಮತಾ ಬ್ಯಾನರ್ಜಿ ಅವರು ತಮ್ಮ ಪತ್ರದಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ.

'ರಾಜ್ಯವೊಂದರ ಮುಖ್ಯ ಕಾರ್ಯದರ್ಶಿಯನ್ನು ಹೀಗೆ ಏಕಪಕ್ಷೀಯವಾಗಿ ವರ್ಗಾಯಿಸುವ ಆದೇಶ ಹೊರಡಿಸಿದರೆ, ರಾಜ್ಯಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧೀನ ಅಧಿಕಾರಿಗಳು ಆ ರಾಜ್ಯದ ಮುಖ್ಯಮಂತ್ರಿ ಮತ್ತು ಸಚಿವರ ಆದೇಶಗಳನ್ನು ಪಾಲಿಸುತ್ತಾರೆಯೇ' ಎಂದು ಮಮತಾ ಅವರು ಪ್ರಶ್ನಿಸಿದ್ದಾರೆ.

'ನೀವು ಈ ಒಕ್ಕೂಟ ವ್ಯವಸ್ಥೆಯ ಸೌಹಾರ್ದ ಮತ್ತು ಎಲ್ಲಾ ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಭಾರತೀಯ ಆಡಳಿತ ಸೇವೆಯ ಅಧಿಕಾರಿಗಳ ನೈತಿಕತೆಗೆ ಧಕ್ಕೆ ತರುವುದಿಲ್ಲ ಎಂದು ಭಾವಿಸಿದ್ದೇನೆ' ಎಂದು ಅವರು ಪ್ರಧಾನಿಗೆ ಹೇಳಿದ್ದಾರೆ.

ಕ್ರಮ ಸಾಧ್ಯತೆ

'ಕೇಂದ್ರ ಸರ್ಕಾರದ ಆದೇಶ ಪಾಲಿಸದೇ ಇರುವ ಕಾರಣ ಅಲಪನ್ ವಿರುದ್ಧ ಆರೋಪಪಟ್ಟಿ ಸಲ್ಲಿಸಿ, ಕ್ರಮ ತೆಗೆದುಕೊಳ್ಳುವ ಸಾಧ್ಯತೆ ಇದೆ' ಎಂದು ಕೇಂದ್ರ ಸರ್ಕಾರದ ಮೂಲಗಳು ಹೇಳಿವೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಕರ್ತವ್ಯಕ್ಕೆ ಹಾಜರಾಗದೇ ಇರುವ ಕಾರಣಕ್ಕೆ ವಿವರಣೆ ನೀಡಿ ಎಂದು ಸೋಮವಾರ ಬೆಳಿಗ್ಗೆಯೇ ಕೇಂದ್ರ ಸರ್ಕಾರವು ಅಲಪನ್ ಅವರಿಗೆ ನೋಟಿಸ್ ಜಾರಿ ಮಾಡಿತ್ತು. 2020ರ ಡಿಸೆಂಬರ್‌ನಲ್ಲಿಯೂ ಕೇಂದ್ರ ಸರ್ಕಾರವು, ಅಲಪನ್ ಅವರಿಗೆ ಇದೇ ರೀತಿ ನೋಟಿಸ್ ನೀಡಿತ್ತು. 2020ರ ಡಿಸೆಂಬರ್‌ನಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ನಿಯೋಗದ ಮೇಲೆ ಪಶ್ಚಿಮ ಬಂಗಾಳದಲ್ಲಿ ದಾಳಿ ನಡೆದಿತ್ತು. ನಡ್ಡಾ ಅವರ ಭದ್ರತೆಗೆ ಪೊಲೀಸ್ ಅಧಿಕಾರಿಗಳ ನಿಯೋಜನೆ ಸಂಬಂಧ ಕೇಂದ್ರ ಗೃಹ ಸಚಿವಾಲಯದ ಆದೇಶ ಪಾಲಿಸಿಲ್ಲ ಎಂದು ಅಲಪನ್ ಅವರಿಗೆ ನೋಟಿಸ್ ಜಾರಿ ಮಾಡಲಾಗಿತ್ತು. ವಿಚಾರಣೆಗೆ ಹಾಜರಾಗುವಂತೆಯೂ ಸೂಚಿಸಲಾಗಿತ್ತು. ಈ ಆದೇಶವನ್ನೂ ಅಲಪನ್ ಅವರು ಪಾಲಿಸಿರಲಿಲ್ಲ.

ಷೇರುಪೇಟೆ ವಹಿವಾಟು	515
ಹಿಂದಿನ ಅಂತ್ಯ	51,422
ಇಂದಿನ ಅಂತ್ಯ	51,937



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	15,435
ಇಂದಿನ ಅಂತ್ಯ	15,582
▲	147
ದಿನದ ಗರಿಷ್ಠ	15,606

ವಿನಿಮಯ ದರ	
$ ಡಾಲರ್	72.62
£ ಪೌಂಡ್	102.92
€ ಯುರೊ	88.48
¥ ಯೆನ್ (100ಕ್ಕೆ)	66

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು	
100 ಮೊಟ್ಟೆಗೆ	₹545
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹547

ಖಾದ್ಯ ತೈಲ ಮುಂಬೈ (10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1420 (1450)
ಸೋಯಾ (ರಿಫೈನ್ಡ್)	₹1360 (1382)
ಸೂರ್ಯಕಾಂತಿ (ರಿಫೈನ್ಡ್)	₹1560 (1590)
ಪಾಮೋಲಿನ್	₹1235 (1250)

ನಿಮಗೆ ಯಾವ 'ಸ್ಟಾಕ್ ಬ್ರೋಕರ್' ಸೂಕ್ತ?

ಷೇರು ಮಾತು

ಶರತ್ ಎಂ.ಎಸ್.

ಷೇರು ಮಾರುಕಟ್ಟೆ ವ್ಯವಸ್ಥೆಯಲ್ಲಿ ಎರಡು ರೀತಿಯ ದಲ್ಲಾಳಿಗಳಿರುತ್ತಾರೆ (ಬ್ರೋಕರ್ಸ್). ಫುಲ್ ಸರ್ವೀಸ್ ಬ್ರೋಕರ್‌ಗಳು ಮತ್ತು ಡಿಸ್ಕೌಂಟ್ ಬ್ರೋಕರ್‌ಗಳು. ಈ ಎರಡೂ ವ್ಯವಸ್ಥೆಗಳು ಷೇರು ವಹಿವಾಟಿನಲ್ಲಿ ಸಹಕಾರ ನೀಡುತ್ತವೆ. ಆದರೆ ಯಾವುದನ್ನು ನೀವು ಆಯ್ಕೆ ಮಾಡಿಕೊಳ್ಳುವುದು ಸೂಕ್ತ?

ಫುಲ್ ಸರ್ವೀಸ್ ಬ್ರೋಕರ್: ಹೆಸರೇ ಹೇಳುವಂತೆ ಫುಲ್ ಸರ್ವೀಸ್ ಬ್ರೋಕರ್ ಅಂದರೆ, ಷೇರು ಮಾರುಕಟ್ಟೆ ವಹಿವಾಟಿಗೆ ಸಂಬಂಧಿಸಿದಂತೆ ಸಮಗ್ರ ಸೇವೆ ಒದಗಿಸುವ ದಲ್ಲಾಳಿ ಸಂಸ್ಥೆ. ಡಿಮ್ಯಾಟ್, ಟ್ರೇಡಿಂಗ್ ಖಾತೆ ಒದಗಿಸುವ ಜೊತೆಗೆ ಷೇರುಗಳ ಖರೀದಿ ಮತ್ತು ಮಾರಾಟಕ್ಕೆ ಸಲಹೆ ನೀಡಲು ಇಲ್ಲಿ ಪರಿಣತರ ಸಹಕಾರ ಸಿಗುತ್ತದೆ. ಮೊಬೈಲ್ ಕರೆ ಮಾಡಿ, ಯಾವ ಷೇರು ಖರೀದಿಸಬೇಕು, ಯಾವುದನ್ನು ಮಾರಾಟ ಮಾಡಬೇಕು ಎಂದು ನಿರ್ಣಯ ತೆಗೆದುಕೊಳ್ಳಲು ಅವಕಾಶವಿರುತ್ತದೆ.

ಷೇರು ಹೂಡಿಕೆಗೆ ಸಂಬಂಧಿಸಿದಂತೆ ಪ್ರತಿದಿನ ಸಲಹೆ–ಸೂಚನೆಗಳು, ಮ್ಯೂಚುವಲ್ ಫಂಡ್, ಐಪಿಒ ಹೂಡಿಕೆ, ವಿಮೆ, ಸಾಲ ಮತ್ತಿತರ ಸೇವೆಗಳನ್ನು ಫುಲ್ ಸರ್ವೀಸ್ ಬ್ರೋಕರ್‌ಗಳು ಒದಗಿಸುತ್ತಾರೆ. ದೇಶದ ನಾನಾ ಭಾಗಗಳಲ್ಲಿ ಇವರ ಕಚೇರಿಗಳಿರುತ್ತವೆ. ಈ ಸೇವೆಯಲ್ಲಿ ನಿರ್ವಹಣಾ ವೆಚ್ಚ ಹೆಚ್ಚಿರುವ ಕಾರಣ ಹೂಡಿಕೆದಾರರು ಹೆಚ್ಚು ಶುಲ್ಕ ಪಾವತಿಸಬೇಕಾಗುತ್ತದೆ. ಐಸಿಐಸಿಐ ಡೈರೆಕ್ಟ್, ಕೋಟಕ್ ಸೆಕ್ಯೂರಿಟೀಸ್, ಮೋತಿಲಾಲ್ ಓಸ್ವಾಲ್, ಎಚ್‌ಡಿಎಫ್‌ಸಿ ಸೆಕ್ಯೂರಿಟೀಸ್, ಎಸ್‌ಬಿಐ ಸೆಕ್ಯೂರಿಟೀಸ್... ಇವು ಕೆಲವು ಉದಾಹರಣೆಗಳು.

ಫುಲ್ ಸರ್ವೀಸ್ ಬ್ರೋಕರ್ ಶುಲ್ಕ: ನೋಂದಣಿ ಶುಲ್ಕ ₹ 300ರಿಂದ ₹ 500 ಇರುತ್ತದೆ. ಬ್ರೋಕರೇಜ್ ಶುಲ್ಕ ಸಾಮಾನ್ಯವಾಗಿ ಶೇಕಡ 0.3ರಿಂದ ಶೇ 0.5ರಷ್ಟಿರುತ್ತದೆ. ಉದಾಹರಣೆಗೆ ₹ 5 ಸಾವಿರದ ವಹಿವಾಟು ನಡೆಸುತ್ತಿದ್ದೀರಿ ಅಂದರೆ ಶೇ 0.5ರಷ್ಟು (₹ 25) ಶುಲ್ಕ ಪಾವತಿಸಬೇಕು.

ಡಿಸ್ಕೌಂಟ್ ಬ್ರೋಕರ್ಸ್: ಡಿಸ್ಕೌಂಟ್ ಬ್ರೋಕರ್‌ಗಳು ಸಾಮಾನ್ಯವಾಗಿ ಷೇರು ವಹಿವಾಟು ಶುಲ್ಕ ಕಡಿಮೆ ಪಡೆಯುತ್ತಾರೆ. ಇವರು ಕೂಡ ಡಿಮ್ಯಾಟ್ ಮತ್ತು ಟ್ರೇಡಿಂಗ್ ಖಾತೆ ಒದಗಿಸುತ್ತಾರೆ. ಆದರೆ ಹಲವೆಡೆ ಕಚೇರಿಗಳನ್ನು ಹೊಂದಿರುವುದಿಲ್ಲ. ತಂತ್ರಜ್ಞಾನದ ಸಹಾಯದಿಂದ ಷೇರು ವಹಿವಾಟಿಗೆ ಸರಳವಾದ ವ್ಯವಸ್ಥೆ ಒದಗಿಸಿರುತ್ತಾರೆ. ಸ್ಮಾರ್ಟ್‌ಫೋನ್ ಅಥವಾ ಲ್ಯಾಪ್‌ಟಾಪ್ ಬಳಸಿ ಷೇರುಗಳ ಖರೀದಿ, ಮಾರಾಟ ಮಾಡಬಹುದು.

ಮ್ಯೂಚುವಲ್ ಫಂಡ್ ಹೂಡಿಕೆ, ಐಪಿಒ ಹೂಡಿಕೆ, ಷೇರು ವಿಶ್ಲೇಷಣೆ, ಮುಂತಾದ ಕೆಲವು ಸೇವೆಗಳನ್ನು ಇವರೂ ಒದಗಿಸುತ್ತಾರೆ. ಆದರೆ ಪರಿಣತರ ನೇರ ಸಲಹೆ, ಅಧ್ಯಯನ ಮುಂತಾದ ಸೌಲಭ್ಯಗಳು ಇಲ್ಲಿರುವುದಿಲ್ಲ. ಜೆರೋಧಾ, ಅಪ್‌ಸ್ಟಾಕ್, ಫೈವ್ ಪೈಸೆ, ಗ್ರೋ, ಪೇಟಿಎಂ ಮನಿ... ಡಿಸ್ಕೌಂಟ್ ಬ್ರೋಕರ್‌ಗಳಿಗೆ ಉದಾಹರಣೆಗಳು.

ಡಿಸ್ಕೌಂಟ್ ಬ್ರೋಕರ್ ಶುಲ್ಕ: ಫುಲ್ ಸರ್ವೀಸ್ ಬ್ರೋಕರ್‌ಗಳಿಗಿಂತ ಶೇ 60ರಷ್ಟು ಕಡಿಮೆ ಶುಲ್ಕ ಇಲ್ಲಿರುತ್ತದೆ. ಬಹುತೇಕ ಡಿಸ್ಕೌಂಟ್ ಬ್ರೋಕರ್‌ಗಳು ನೋಂದಣಿಗೆ ₹ 300 ಪಡೆಯುತ್ತವೆ. ನಂತರದಲ್ಲಿ ₹ 5 ಸಾವಿರ ಮೊತ್ತದ ವಹಿವಾಟಿರಲಿ ₹ 5 ಲಕ್ಷದ ವಹಿವಾಟಿರಲಿ ಈ ಬ್ರೋಕರ್‌ಗಳು ಪ್ರತಿ ವಹಿವಾಟಿಗೆ ಸುಮಾರು ₹ 20 ಶುಲ್ಕ ಪಡೆಯುತ್ತವೆ. ಕೆಲವು ಡಿಸ್ಕೌಂಟ್ ಬ್ರೋಕರ್‌ಗಳ ಶುಲ್ಕಗಳಲ್ಲಿ, ರೀತಿ ರಿವಾಜುಗಳಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳಿರುತ್ತವೆ. ಇತ್ತೀಚಿನ ದಿನಗಳಲ್ಲಿ ಡಿಸ್ಕೌಂಟ್ ಬ್ರೋಕರ್‌ಗಳು ಹೆಚ್ಚು ಜನಪ್ರಿಯತೆ ಗಳಿಸಿಕೊಳ್ಳುತ್ತಿವೆ.

ಭಾರತೀಯ ವಾಣಿಜ್ಯೋದ್ಯಮ ಮಹಾಸಂಘದ ಸಮೀಕ್ಷೆ

ಕಂಪನಿಗಳ ವಿಶ್ವಾಸ ಕುಗ್ಗಿಸಿದ ಕೋವಿಡ್‌ನ ಎರಡನೇ ಅಲೆ

ಬೆಂಗಳೂರು (ರಾಯಿಟರ್ಸ್): ಕೋವಿಡ್–19 ಸಾಂಕ್ರಾಮಿಕದ ಎರಡನೇ ಅಲೆಯು ಭಾರತದ ಕಾರ್ಪೊರೇಟ್ ವಲಯದ ವಿಶ್ವಾಸವನ್ನು ಕುಗ್ಗಿಸಿದೆ ಎನ್ನುವುದು ಭಾರತೀಯ ವಾಣಿಜ್ಯೋದ್ಯಮ ಮಹಾಸಂಘವು (ಫಿಕ್ಕಿ) ಈಚೆಗೆ ನಡೆಸಿರುವ ಸಮೀಕ್ಷೆಯಿಂದ ಗೊತ್ತಾಗಿದೆ.

ವಾಣಿಜ್ಯ ವಿಶ್ವಾಸ ಸೂಚ್ಯಂಕವು ಹಿಂದಿನ ಬಾರಿ ಇದ್ದ 74.2ಕ್ಕೆ ಹೋಲಿಸಿದರೆ ಈ ಬಾರಿ 51.5ಕ್ಕೆ ಕುಸಿದಿದೆ ಎಂದು ಫಿಕ್ಕಿ ತಿಳಿಸಿದೆ. ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಸೋಂಕು ಪ್ರಕರಣಗಳು ತೀವ್ರವಾಗಿ ಹೆಚ್ಚಾಗಿವೆ. ಇದನ್ನು ನಿಯಂತ್ರಿಸಲು ಹಲವು ರಾಜ್ಯಗಳಲ್ಲಿ ಮತ್ತೆ ಸೀಮಿತವಾದ ಲಾಕ್‌ಡೌನ್‌ಗಳನ್ನು ಜಾರಿಗೊಳಿಸಲಾಗಿದೆ. ಇದು ಆರ್ಥಿಕ ಬೆಳವಣಿಗೆಯ ನಿರೀಕ್ಷೆಗಳನ್ನು ತಗ್ಗಿಸಿದೆ.

ಎರಡನೇ ಅಲೆಯ ಪರಿಣಾಮವು ಹೆಚ್ಚಿನ ಪ್ರಮಾಣದಲ್ಲಿ ಜನರಿಗೆ ತಟ್ಟಿದೆ. ಆರ್ಥಿಕತೆಯ ಮೇಲೆ ಕೋವಿಡ್‌ನಿಂದಾಗಿ ಈಗ ಬಿದ್ದಿರುವ ಹೊಡೆತದಿಂದ ಚೇತರಿಕೆ ಕಾಣಲು ಬೇಡಿಕೆ ಹೆಚ್ಚಿಸುವಂತಹ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯವಿದೆ ಎಂದು ಅದು ಸಲಹೆ ನೀಡಿದೆ.

ವಿವಿಧ ವಲಯಗಳಿಗೆ ಸೇರಿದ 180 ಕಂಪನಿಗಳ ಪ್ರತಿಕ್ರಿಯೆ ಪಡೆಯಲಾಗಿದೆ. ಬೇಡಿಕೆ ಸ್ಥಿತಿಯು ದುರ್ಬಲವಾಗಿದೆ ಎಂದು ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಪ್ರತಿ ನಾಲ್ವರಲ್ಲಿ ಮೂವರು ಹೇಳಿದ್ದಾರೆ.

ಹಣಕಾಸು ವಿಶ್ಲೇಷಣಾ ವೇದಿಕೆ ಆಗಿರುವ ರಿಫಿನಿಟಿವ್ ಐಕಾನ್ ಪ್ರಕಾರ, ಮಾರ್ಚ್ ತ್ರೈಮಾಸಿಕ ಫಲಿತಾಂಶ ಅವಧಿಯು ಮುಕ್ತಾಯವಾಗಿದ್ದು, ನಿಫ್ಟಿ–50 ಸೂಚ್ಯಂಕದಲ್ಲಿನ 42 ಕಂಪನಿಗಳಲ್ಲಿ 18 ಕಂಪನಿಗಳು ಮಾತ್ರವೇ ಮಾರುಕಟ್ಟೆ ನಿರೀಕ್ಷೆಯನ್ನು ಮೀರಿ ಗಳಿಕೆ ಕಂಡುಕೊಂಡಿವೆ. ಆದರೆ, ರೇಟಿಂಗ್ಸ್ ಸಂಸ್ಥೆ ಫಿಚ್ ಪ್ರಕಾರ, 2020ಕ್ಕೆ ಹೋಲಿಸಿದರೆ ಎರಡನೇ ಅಲೆಯ ಪರಿಣಾಮವು ಕಾರ್ಪೊರೇಟ್ ವಲಯದ ಮೇಲೆ ಕಡಿಮೆ ಮಟ್ಟದಲ್ಲಿರಲಿದೆ.

ಮುಖ್ಯಾಂಶಗಳು

- ವಾಣಿಜ್ಯ ವಿಶ್ವಾಸ ಸೂಚ್ಯಂಕ 51.5ಕ್ಕೆ ಕುಸಿತ
- ಮೇ, ಏಪ್ರಿಲ್‌ನಲ್ಲಿ ಸೋಂಕು ಹೆಚ್ಚಳ ಪರಿಣಾಮ
- ಮಾರುಕಟ್ಟೆ ನಿರೀಕ್ಷೆ ತಲುಪದ ಕಂಪನಿಗಳ ತ್ರೈಮಾಸಿಕ ಗಳಿಕೆ

ಮೂಲಸೌಕರ್ಯ ವಲಯದಲ್ಲಿ ಭಾರಿ ಬೆಳವಣಿಗೆ

ನವದೆಹಲಿ (ಪಿಟಿಐ): ದೇಶದ ಪ್ರಮುಖ ಎಂಟು ಕೈಗಾರಿಕಾ ವಲಯಗಳ ಉತ್ಪಾದನೆಯು ಏಪ್ರಿಲ್‌ನಲ್ಲಿ ಶೇಕಡ 56.1ರಷ್ಟು ಏರಿಕೆ ಕಂಡಿದೆ.

ನೈಸರ್ಗಿಕ ಅನಿಲ, ಸಂಸ್ಕರಣಾ ಉತ್ಪನ್ನಗಳು, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ವಲಯಗಳಲ್ಲಿ ಉತ್ಪಾದನೆ ಹೆಚ್ಚಾಗಿರುವುದೇ ಇದಕ್ಕೆ ಕಾರಣ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಪ್ರಕಟಣೆ ತಿಳಿಸಿದೆ.

2020ರ ಏಪ್ರಿಲ್‌ನಲ್ಲಿ ಎಂಟು ಕೈಗಾರಿಕಾ ವಲಯಗಳ ಬೆಳವಣಿಗೆಯು ಶೇ 37.9ರಷ್ಟು ಕುಸಿತ ಕಂಡಿತ್ತು. ಹಿಂದಿನ ವರ್ಷದ ಈ ತಿಂಗಳಿನಲ್ಲಿ ದೇಶದಾದ್ಯಂತ ಲಾಕ್‌ಡೌನ್ ಜಾರಿಯಲ್ಲಿ ಇತ್ತು.

ಕೋವಿಡ್: ಪಿಎಫ್ ಹಣ ಹಿಂಪಡೆಯಲು ಮತ್ತೆ ಅವಕಾಶ

ನವದೆಹಲಿ (ಪಿಟಿಐ): ಕೋವಿಡ್ ಎರಡನೆಯ ಅಲೆಯ ಹಿನ್ನೆಲೆಯಲ್ಲಿ, ಭವಿಷ್ಯನಿಧಿ (ಪಿ.ಎಫ್.) ಖಾತೆಯಲ್ಲಿ ಇರುವ ಮೊತ್ತವನ್ನು ಹಿಂದಕ್ಕೆ ಪಡೆಯಲು ಕಾರ್ಮಿಕರ ಭವಿಷ್ಯ ನಿಧಿ (ಇಪಿಎಫ್‌ಒ) ಸಂಘಟನೆಯು ಎರಡನೆಯ ಬಾರಿಗೆ ಅವಕಾಶ ಕಲ್ಪಿಸಿದೆ.

ಸಾಂಕ್ರಾಮಿಕದ ಕಾರಣದಿಂದಾಗಿ ಎದುರಾಗುವ ಹಣಕಾಸಿನ ತುರ್ತುಗಳನ್ನು ನಿಭಾಯಿಸಲು ಪಿ.ಎಫ್. ಖಾತೆಯಲ್ಲಿನ ಹಣ ಹಿಂದಕ್ಕೆ ಪಡೆಯಲು ಇಪಿಎಫ್‌ಒ ಹಿಂದಿನ ವರ್ಷ ಅವಕಾಶ ನೀಡಿತ್ತು. ಪಿ.ಎಫ್. ಖಾತೆದಾರರು ಮೂರು ತಿಂಗಳ ಮೂಲವೇತನ (ಮೂಲ ವೇತನ ಮತ್ತು ಡಿ.ಎ.ಯ ಒಟ್ಟು ಮೊತ್ತ) ಅಥವಾ ಖಾತೆಯಲ್ಲಿ ಇರುವ ಒಟ್ಟು ಮೊತ್ತದ ಶೇಕಡ 75ರಷ್ಟರಲ್ಲಿ ಯಾವುದು ಕಡಿಮೆ ಮೊತ್ತವೋ ಅಷ್ಟನ್ನು ಹಿಂದಕ್ಕೆ ಪಡೆಯಬಹುದಿತ್ತು. ಅದಕ್ಕಿಂತ ಕಡಿಮೆ ಮೊತ್ತ ಪಡೆಯುವ ಅವಕಾಶವೂ ಇತ್ತು. 'ಈಗ ಎರಡನೆಯ ಬಾರಿಗೆ ಹಣ ಹಿಂದಕ್ಕೆ ಪಡೆಯಲು ಅವಕಾಶ ನೀಡಲಾಗಿದೆ' ಎಂದು ಕೇಂದ್ರ ಕಾರ್ಮಿಕ ಸಚಿವಾಲಯದ ಪ್ರಕಟಣೆ ತಿಳಿಸಿದೆ. ಇದುವರೆಗೆ ಪಿ.ಎಫ್. ಖಾತೆಗಳಿಂದ ಕೋವಿಡ್ ಕಾರಣಕ್ಕಾಗಿ ಒಟ್ಟು ₹ 18,698 ಕೋಟಿ ಹಿಂದಕ್ಕೆ ಪಡೆಯಲಾಗಿದೆ.

ಮೊದಲ ಅಲೆಯ ಸಂದರ್ಭದಲ್ಲಿ ಕೋವಿಡ್ ಕಾರಣಕ್ಕಾಗಿ ಹಣ ಹಿಂದಕ್ಕೆ ಪಡೆದಿದ್ದವರೂ, ಈಗ ಮತ್ತೆ ಹಣ ಹಿಂಪಡೆಯಲು ಅವಕಾಶ ಇದೆ. ಹಣ ಹಿಂದಕ್ಕೆ ಪಡೆಯಲು ಅರ್ಜಿ ಸಲ್ಲಿಸಿದ ಮೂರು ದಿನಗಳಲ್ಲಿ ಅದನ್ನು ಇತ್ಯರ್ಥಪಡಿಸಲು ಇಪಿಎಫ್‌ಒ ಬದ್ಧವಾಗಿದೆ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಕೋವಿಡ್ ಲಸಿಕೆ ಪಡೆಯಲು ಪಶ್ಚಿಮ ಬಂಗಾಳದ ದಕ್ಷಿಣ ದಿನಜ್‌ಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಜನರು ಸೋಮವಾರ ಸಾಲುಗಟ್ಟಿ ನಿಂತಿರುವುದು – ಪಿಟಿಐ ಚಿತ್ರ

ಪ್ರಜಾವಾಣಿ LIVE

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ

ಕೋವಿಡ್ ಸಂದರ್ಭದಲ್ಲಿ ಮಾನಸಿಕ ಸಮಸ್ಯೆಗಳು

ಕೋವಿಡ್ ಆರಂಭವಾದಾಗಿನಿಂದ ಜನರಲ್ಲಿ ಭಯ, ಆತಂಕ, ಖಿನ್ನತೆಯಂತಹ ಮಾನಸಿಕ ಸಮಸ್ಯೆಗಳು ಹೆಚ್ಚುತ್ತಿವೆ. ಇದಕ್ಕೆ ಕಾರಣಗಳು ಹಾಗೂ ಪರಿಹಾರಗಳ ಕುರಿತು ಮಾತನಾಡಲಿದ್ದಾರೆ ಬೆಂಗಳೂರಿನ ನಿಮ್ಹಾನ್ಸ್‌ನ ಮನೋವೈದ್ಯಕೀಯ ಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ಸಿ. ನವೀನ್ ಕುಮಾರ್

ನೀವೂ ಪ್ರಶ್ನೆಗಳನ್ನು ಕೇಳಬಹುದು

ಮಂಗಳವಾರ ಜೂನ್ 1, ಬೆಳಿಗ್ಗೆ 11 ಗಂಟೆಗೆ

30ಗಳ ಜಿಎಸ್‌ಟಿ ವಿವರ ಸಲ್ಲಿಕೆ: ಜೂನ್ 26ರವರೆಗೆ ಅವಕಾಶ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆಯ (ಜಿಎಸ್‌ಟಿ) ಅಡಿಯಲ್ಲಿ, ಮೇ ತಿಂಗಳ ಮಾರಾಟಕ್ಕೆ ಸಂಬಂಧಿಸಿದ ವಿವರಗಳಿರುವ ಜಿಎಸ್‌ಟಿಆರ್–1 ಸಲ್ಲಿಸಲು ಗಡುವನ್ನು ಜೂನ್ 26ರವರೆಗೆ ವಿಸ್ತರಣೆ ಮಾಡಲಾಗಿದೆ.

ಪರೋಕ್ಷ ತೆರಿಗೆ ಮತ್ತು ಕಸ್ಟಮ್ಸ್‌ನ ಕೇಂದ್ರೀಯ ಮಂಡಳಿಯು (ಸಿಬಿಐಸಿ) ಜಿಎಸ್‌ಟಿ ಮಂಡಳಿಯು ನೀಡಿರುವ ವಿವಿಧ ವಿನಾಯಿತಿಗಳ ಕುರಿತು ಸರಣಿ ಟ್ವೀಟ್ ಮಾಡಿದೆ.

ವಹಿವಾಟು ನಡೆಸುವವರು ನಿರ್ದಿಷ್ಟ ತಿಂಗಳಿನಲ್ಲಿ ಪೂರೈಕೆ ಮಾಡಿರುವುದಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಮುಂದಿನ ತಿಂಗಳಿನ 11ನೇ ತಾರೀಕಿನ ಒಳಗಾಗಿ ಜಿಎಸ್‌ಟಿಆರ್–1ರಲ್ಲಿ ತುಂಬಬೇಕು. ಈಗ ಇದಕ್ಕೆ 15 ದಿನಗಳ ಹೆಚ್ಚುವರಿ ಕಾಲಾವಕಾಶ ದೊರೆತಂತಾಗಿದೆ. ಪಾವತಿಗೆ ಸಂಬಂಧಿಸಿದ ಜಿಎಸ್‌ಟಿಆರ್–3ಬಿಯನ್ನು ಮುಂದಿನ ತಿಂಗಳು 20ರಿಂದ 24ನೇ ದಿನದೊಳಗೆ ಸಲ್ಲಿಸಬೇಕು.

2020–21ನೇ ಹಣಕಾಸು ವರ್ಷಕ್ಕೆ ವಾರ್ಷಿಕ ರಿಟರ್ನ್ಸ್ ಸಲ್ಲಿಕೆಗೆ ಇದ್ದ ಗಡುವನ್ನು ಜುಲೈ 31ರವರೆಗೂ ವಿಸ್ತರಣೆ ಮಾಡಲಾಗಿದೆ.

ಕೋವಿಡ್–19 ಸಾಂಕ್ರಾಮಿಕದಿಂದ ಎದುರಾಗಿರುವ ಸಮಸ್ಯೆಗಳನ್ನು ಪರಿಗಣಿಸಿ, ರಿಟರ್ನ್ಸ್ ಸಲ್ಲಿಕೆಗೆ ನೀಡಿದ್ದ ಗಡುವನ್ನು ವಿಸ್ತರಿಸಲು ಮೇ 28ರಂದು ನಡೆದಿದ್ದ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ನಿರ್ಧರಿಸಲಾಗಿತ್ತು.

ರಾಜಸ್ಥಾನದಲ್ಲಿ ₹ 98ರ ಗಡಿ ದಾಟಿದ ಡೀಸೆಲ್ ದರ

ನವದೆಹಲಿ (ಪಿಟಿಐ): ದೇಶದ ಹಲವು ಭಾಗಗಳಲ್ಲಿ ಪೆಟ್ರೋಲ್ ದರ ಲೀಟರಿಗೆ ಈಗಾಗಲೇ ₹ 100ರ ಗಡಿ ದಾಟಿದ್ದು, ಡೀಸೆಲ್ ದರವೂ ಅದೇ ದಿಕ್ಕಿನಲ್ಲಿ ಸಾಗಿದೆ. ರಾಜಸ್ಥಾನದ ಕೆಲವೆಡೆ ಡೀಸೆಲ್ ದರ ಲೀಟರಿಗೆ ₹ 98ರ ಗಡಿ ದಾಟಿದೆ.

ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಸೋಮವಾರ ಪೆಟ್ರೋಲ್ ದರ 29 ಪೈಸೆ ಮತ್ತು ಡೀಸೆಲ್ ದರ 26 ಪೈಸೆ ಹೆಚ್ಚಿಸಿವೆ. ಇದರಿಂದಾಗಿ ರಾಜಸ್ಥಾನದ ಶ್ರೀಗಂಗಾನಗರ ಜಿಲ್ಲೆಯಲ್ಲಿ ಡೀಸೆಲ್ ದರ ₹ 98.08ಕ್ಕೆ ಏರಿಕೆ ಆಗಿದೆ. ಇಲ್ಲಿ ಪೆಟ್ರೋಲ್ ದರವು ದೇಶದಲ್ಲಿಯೇ ಗರಿಷ್ಠ, ಅಂದರೆ ಲೀಟರಿಗೆ ₹ 105.24ರಷ್ಟಿದೆ.

ಬೆಂಗಳೂರಿನಲ್ಲಿ ಪೆಟ್ರೋಲ್ ದರ ₹ 97.37 ಮತ್ತು ಡೀಸೆಲ್ ದರ ₹ 90.27ರಷ್ಟಾಗಿದೆ.

ಮೇ 4ರಿಂದ ಇಲ್ಲಿಯವರೆಗೆ 16 ಬಾರಿ ಇಂಧನ ದರ ಹೆಚ್ಚಿಸಲಾಗಿದೆ. ಇದರಿಂದ ಲೀಟರ್ ಪೆಟ್ರೋಲ್ ದರ ₹ 3.83ರಷ್ಟು ಮತ್ತು ಡೀಸೆಲ್ ದರ ₹ 4.42ರಷ್ಟು ಏರಿಕೆಯಾಗಿದೆ.

ದೇಶದ್ರೋಹ ಕಾಯ್ದೆ ಪರಿಶೀಲನೆಗೆ ಸುಪ್ರೀಂ ಕೋರ್ಟ್ ನಿರ್ಧಾರ

ನವದೆಹಲಿ (ಪಿಟಿಐ): ಮಾಧ್ಯಮ ಹಕ್ಕುಗಳು ಮತ್ತು ವಾಕ್ ಸ್ವಾತಂತ್ರ್ಯವನ್ನು ಗಮನದಲ್ಲಿರಿಸಿಕೊಂಡು, ದೇಶದ್ರೋಹ ಕಾನೂನಿನ ವ್ಯಾಖ್ಯಾನವನ್ನು ಪರಿಶೀಲನೆಗೆ ಒಳಪಡಿಸುವುದಾಗಿ ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ತೆಲುಗು ಸುದ್ದಿವಾಹಿನಿಗಳಾದ ಟಿವಿ5 ಮತ್ತು ಆಂಧ್ರಜ್ಯೋತಿ ವಿರುದ್ಧ ದೇಶದ್ರೋಹ ಕಾನೂನಿನ ಅಡಿಯಲ್ಲಿ ಯಾವುದೇ ಕ್ರಮ ತೆಗೆದುಕೊಳ್ಳಬಾರದು ಎಂದು ಕೋರ್ಟ್ ನಿರ್ದೇಶನ ನೀಡಿದೆ. ವಾಹಿನಿಗಳ ಸಿಬ್ಬಂದಿ, ಆಡಳಿತ ಮಂಡಳಿ ವಿರುದ್ಧ ಯಾವುದೇ ಕ್ರಮ ಜರುಗಿಸದಂತೆ ಆಂಧ್ರ ಪ್ರದೇಶ ಸರ್ಕಾರಕ್ಕೆ ಸೂಚಿಸಿದೆ.

ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಬಂಡಾಯ ಸಂಸದ ಕೆ. ರಘುರಾಮ ಕೃಷ್ಣರಾಜು ಅವರ ಆಕ್ಷೇಪಾರ್ಹ ಭಾಷಣವನ್ನು ಪ್ರಸಾರ ಮಾಡಿದ ಈ ಎರಡೂ ವಾಹಿನಿಗಳ ವಿರುದ್ಧ ಆಂಧ್ರಪ್ರದೇಶ ಸರ್ಕಾರವು ಪ್ರಕರಣ ದಾಖಲಿಸಿದೆ.

'ವಿಶೇಷವಾಗಿ ಪತ್ರಿಕಾ ಮತ್ತು ವಾಕ್ ಸ್ವಾತಂತ್ರ್ಯ ವಿಷಯದಲ್ಲಿ 124ಎ ಸೆಕ್ಷನ್ (ದೇಶದ್ರೋಹ) ಮತ್ತು 153ನೇ ಸೆಕ್ಷನ್‌ಗಳ (ವರ್ಗಗಳ ನಡುವೆ ದ್ವೇಷ ಹುಟ್ಟುಹಾಕುವುದು) ವ್ಯಾಖ್ಯಾನ ಅಗತ್ಯವಿದ್ದು, ಆ ಬಗ್ಗೆ ಪರಿಶೀಲನೆ ನಡೆಸುತ್ತೇವೆ' ಎಂದು ನ್ಯಾಯಮೂರ್ತಿಗಳಾದ ಡಿ.ವೈ ಚಂದ್ರಚೂಡ್, ಎಲ್. ಎನ್. ರಾವ್ ಮತ್ತು ಎಸ್.ರವೀಂದ್ರ ಭಟ್ ಅವರ ಪೀಠ ತಿಳಿಸಿದೆ.

ದೇಶದ್ರೋಹ ಸೇರಿದಂತೆ ವಿವಿಧ ಕಾಯ್ದೆಗಳಡಿ ದಾಖಲಾಗಿರುವ ಎಫ್‌ಐಆರ್ ರದ್ದುಗೊಳಿಸುವಂತೆ ಕೋರಿ ಸುದ್ದಿ ವಾಹಿನಿಗಳು ಸಲ್ಲಿಸಿದ್ದ ಅರ್ಜಿ ಪುರಸ್ಕರಿಸಿರುವ ಕೋರ್ಟ್, ಪ್ರತಿಕ್ರಿಯೆ ನೀಡುವಂತೆ ರಾಜ್ಯ ಸರ್ಕಾರಕ್ಕೆ ನಾಲ್ಕು ವಾರಗಳ ಕಾಲಾವಕಾಶ ನೀಡಿದೆ.

ಸುದ್ದಿ ವಾಹಿನಿಗಳ ವಿರುದ್ಧ ದಾಖಲಾಗಿರುವ ಎಫ್‌ಐಆರ್‌ಗೆ ರಾಜು ವಿರುದ್ಧ ದಾಖಲಿಸಲಾಗಿರುವ ದೇಶದ್ರೋಹ ಪ್ರಕರಣದ ಜತೆಗೆ ಸಂಬಂಧ ಇದೆ. ತಮ್ಮದೇ ಪಕ್ಷದ ನೇತೃತ್ವದ ರಾಜ್ಯ ಸರ್ಕಾರವನ್ನು ಟೀಕಿಸಿರುವ ರಾಜು ಅವರನ್ನು ಕೇಂದ್ರವಾಗಿರಿಸಿಕೊಂಡ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿದ್ದಕ್ಕಾಗಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ವಾಹಿನಿಗಳು ಆರೋಪಿಸಿವೆ. ಈ ಪ್ರಕರಣದಲ್ಲಿ ರಾಜು ಅವರನ್ನು ಬಂಧಿಸಿರುವ ಸಿಐಡಿ, ಎರಡು ಮಾಧ್ಯಮ ಸಂಸ್ಥೆಗಳು ಮತ್ತು ಇತರರನ್ನು ಆರೋಪಿಗಳೆಂದು ಹೆಸರಿಸಿದೆ.

ರಾಜು ವಿರುದ್ಧದ ಆರೋಪವೇನು: 'ಸಂಸದ ರಾಜು ಅವರು ವಿಶೇಷವಾಗಿ ಎರಡು ಸಮುದಾಯಗಳನ್ನು ಗುರಿಯಾಗಿಸಿಕೊಂಡು ಮಾತನಾಡಿದ್ದಾರೆ. ಸರ್ಕಾರವು ಈ ಎರಡು ಸಮುದಾಯಗಳ ಪರವಾಗಿದೆ ಎಂದು ಬಿಂಬಿಸಲು ಪ್ರಯತ್ನಿಸುವ ಮೂಲಕ ಸಮುದಾಯಗಳ ನಡುವೆ ದ್ವೇಷ ಉಂಟುಮಾಡಲು ಪ್ರಯತ್ನಿಸಿದ್ದಾರೆ' ಎಂದು ಸಿಐಡಿ ಆರೋಪಿಸಿದೆ. ಅನಾರೋಗ್ಯದ ಕಾರಣ ರಾಜು ಅವರಿಗೆ ಮೇ 21ರಂದು ಜಾಮೀನು ನೀಡಲಾಗಿದೆ.

ವಾಹಿನಿಗಳ ವಾದವೇನು?

ದೇಶದ್ರೋಹ ಕಾನೂನು ಅಡಿ ಪ್ರಕರಣ ದಾಖಲಿಸುವುದರಿಂದ ರಾಜ್ಯದ ಉಳಿದ ವಾಹಿನಿಗಳು ಸರ್ಕಾರವನ್ನು ಟೀಕಿಸುವ ಯಾವುದೇ ಸುದ್ದಿ ಪ್ರಸಾರ ಮಾಡಲು ಹಿಂದೇಟು ಹಾಕುತ್ತವೆ ಎಂಬ ಉದ್ದೇಶದಿಂದ ಸರ್ಕಾರವು ಈ ಕ್ರಮ ತೆಗೆದುಕೊಂಡಿದೆ ಎಂದು ಅರ್ಜಿದಾರರು ವಾದಿಸಿದ್ದಾರೆ.

'ರಾಜ್ಯ ಸರ್ಕಾರವು ಸ್ಪಷ್ಟತೆಯಿಲ್ಲದೆ ಎಫ್‌ಐಆರ್ ದಾಖಲಿಸುವ ಮೂಲಕ ಕಾನೂನಿನ ಪ್ರಕ್ರಿಯೆಯನ್ನು ದುರುಪಯೋಗಪಡಿಸಿಕೊಂಡಿದ್ದು, ಟೀಕಾಕಾರರನ್ನು ಮತ್ತು ಮಾಧ್ಯಮಗಳನ್ನು ಮೌನಗೊಳಿಸಲು ಬಯಸಿದೆ' ಎಂದು ಟಿವಿ5 ಆರೋಪಿಸಿದೆ.

ಹಾಸಿಗೆ ಹೆಚ್ಚಳಕ್ಕೆ ಸಿಬ್ಬಂದಿ, ಸವಲತ್ತಿನ ಕೊರತೆ

ಒಂದನೇ ಪುಟದಿಂದ

'ಬೆಂಗಳೂರು, ಇತರ ಜಿಲ್ಲೆಗಳಿಂದ ಹಳ್ಳಿಗಳಿಗೆ ವಾಪಸಾಗಿರುವವರು ಬಹಳಷ್ಟು ಮಂದಿ ಕ್ವಾರಂಟೈನ್ ಆಗಲ್ಲ. ಸ್ನೇಹಿತರು, ಗ್ರಾಮಸ್ಥರು, ಸಂಬಂಧಿಕರ ಜತೆ ಬೆರೆಯುತ್ತಾರೆ. ಸೋಂಕು ವ್ಯಾಪಕವಾಗಿ ಪಸರಿಸಲು ಇದೂ ಒಂದು ಕಾರಣ' ಎಂದು ಕಡೂರು ತಾಲ್ಲೂಕಿನ ಗರ್ಜೆ ಪ್ರಾಥಮಿಕ ಕೇಂದ್ರದ ಶುಶ್ರೂಷಕಿಯೊಬ್ಬರು ತಿಳಿಸಿದರು.

'ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಬಹಳಷ್ಟು ಮಂದಿ ಹಿಂದೇಟು ಹಾಕುತ್ತಾರೆ. 100 ಜನರಿಗೆ ಸೂಚಿಸಿದರೆ ಐದರಿಂದ ಹತ್ತು ಜನ ಮಾತ್ರ ಮಾಡಿಸುತ್ತಾರೆ ಅಷ್ಟೆ' ಎನ್ನುವುದು ಕರ್ಜೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಸುಮಾ ಉಮೇಶ್ ಹೇಳುವ ಮಾತು.

ಡಾ.ಸುಮಾ ಉಮೇಶ್

ಕಡೂರು ತಾಲ್ಲೂಕು ಆಸ್ಪತ್ರೆಯ ಎಲ್ಲ ಹಾಸಿಗೆಗಳು ಭರ್ತಿಯಾಗಿವೆ. ಹಾಸಿಗೆ ಸೌಲಭ್ಯ ಹೆಚ್ಚಿಸಲು ಆಮ್ಲಜನಕ ಕೊರತೆ, ಸಿಬ್ಬಂದಿ ಸಮಸ್ಯೆ ಇದೆ. ಈ ಆಸ್ಪತ್ರೆಯನ್ನು ಕೋವಿಡ್ ರೋಗಿಗಳಿಗೆ ಮೀಸಲಿಡಬೇಕು ಎಂಬ ಕೂಗಿದ್ದರೂ, ಪರಿಗಣಿಸುತ್ತಿಲ್ಲ ಎನ್ನುವ ಆರೋಪ ಜನರಿಂದ ಕೇಳಿ ಬರುತ್ತಿದೆ.

'ಕೋವಿಡ್ ದೃಢಪಟ್ಟವರು ಅದನ್ನು ಹೇಳಿಕೊಳ್ಳಲು ಭಯಪಡುತ್ತಾರೆ, ಮುಜುಗರಪಟ್ಟುಕೊಳ್ಳುತ್ತಾರೆ. ಭಯ ಪಡಬೇಡಿ, ಜಾಗ್ರತೆಯಿಂದ ಇರುವಂತೆ ಧೈರ್ಯ ತುಂಬುತ್ತೇವೆ' ಎಂದು ಕಡೂರು ತಾಲ್ಲೂಕಿನ ಮಲ್ಲೇಶ್ವರದ ಶುಶ್ರೂಷಕಿ ಮೀನಾಕ್ಷಮ್ಮ ಹೇಳಿಕೊಂಡರು.

ಮುಖ್ಯಾಂಶಗಳು

- 5 ಸಮುದಾಯ ಆರೋಗ್ಯ ಕೇಂದ್ರ; 89 ಪ್ರಾಥಮಿಕ ಆರೋಗ್ಯ ಕೇಂದ್ರ
- ಒಂದು ಜಿಲ್ಲಾ ಆಸ್ಪತ್ರೆ; 6 ತಾಲ್ಲೂಕು ಆಸ್ಪತ್ರೆ
- 8 ಕೋವಿಡ್ ಆರೈಕೆ ಕೇಂದ್ರಗಳು; ಖಾಸಗಿ ಆಸ್ಪತ್ರೆಗಳು 5

ಚಿಕ್ಕಮಗಳೂರು ಕೋವಿಡ್ ಅಂಕಿ–ಅಂಶ

37,758 ▲ ಒಟ್ಟು ಸೋಂಕಿತರು

5,703 ▲ ಸಕ್ರಿಯ ಪ್ರಕರಣ	31,798 ▲ ಗುಣಮುಖ ಆದವರು	257 ▲ ಒಟ್ಟು ಸಾವು

ದಿನದ ಏರಿಕೆ	
ಹೊಸ ಪ್ರಕರಣ	340 ▼
ಗುಣಮುಖ	645 ▲
ಸಾವು	04 ▼

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಅರಿವಳಿಕೆ ತಜ್ಞರು ಒಬ್ಬರೇ ಇದ್ದಾರೆ. ಸಿಬ್ಬಂದಿ, ಆಮ್ಲಜನಕ ಕೊರತೆ ಸ್ವಲ್ಪ ಇದೆ. ಹೀಗಾಗಿ, ಆಮ್ಲಜನಕ ವ್ಯವಸ್ಥೆಯ ಹಾಸಿಗೆ ಸಂಖ್ಯೆ ಹೆಚ್ಚಿಸಲು ಸಾಧ್ಯವಾಗುತ್ತಿಲ್ಲ

ಡಾ.ದೀಪಕ್, ಆಡಳಿತ ವೈದ್ಯಾಧಿಕಾರಿ, ಸಾರ್ವಜನಿಕ ಆಸ್ಪತ್ರೆ, ಕಡೂರು

'ಡಿ' ಗ್ರೂಪ್ ನೌಕರ ಒಬ್ಬನೇ ಇದ್ದೇನೆ. ಇನ್ನು ಇಬ್ಬರನ್ನು ನೇಮಿಸಿದರೆ ಅನುಕೂಲವಾಗುತ್ತದೆ. ಸಂಬಂಧಪಟ್ಟವರು ಗಮನಹರಿಸಬೇಕು. ಲೋಕೇಶ್,

'ಡಿ'ಗ್ರೂಪ್ ನೌಕರ, ಪ್ರಾಥಮಿಕ ಆರೋಗ್ಯ ಕೇಂದ್ರ, ದಾರದಹಳ್ಳಿ

ತಮ್ಮನಿಗೆ ಕೋವಿಡ್ ದೃಢಪಟ್ಟು ಆಸ್ಪತ್ರೆಗೆ ಸೇರಿಸಿದ್ದೇನೆ. ಆಸ್ಪತ್ರೆ ಬಳಿಯ ಇಂದಿರಾ ಕ್ಯಾಂಟೀನ್‌ನಲ್ಲಿ ದಿನಕ್ಕೊಂದು ರೀತಿಯ ಆಹಾರ ನೀಡಿದರೆ ಒಳ್ಳೆಯದು.

ಬಸವರಾಜ್ ಕೋವಿಡ್ ರೋಗಿಯ ಸಹೋದರ, ಕಡೂರು

ಮೀನಾಕ್ಷಮ್ಮ

ಮೂಡಿಗೆರೆ ತಾಲ್ಲೂಕಿನ ದಾರದಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ ಸುಸಜ್ಜಿತವಾಗಿದೆ. ಕೋವಿಡ್ ಲಸಿಕೆ ಹಾಕಿಸಿಕೊಳ್ಳುವವರು, ರೋಗಿಗಳ ಸಹಿತ ನಿತ್ಯ 60ಕ್ಕೂ ಹೆಚ್ಚು ಮಂದಿ ಇಲ್ಲಿಗೆ ಬಂದು ಹೋಗುತ್ತಾರೆ. ಆಸ್ಪತ್ರೆಗೆ ಔಷಧ ಪೂರೈಕೆ ವಿಳಂಬವಾಗುತ್ತಿದೆ. ದಿನದಲ್ಲಿ 3–4 ಬಾರಿ ವಿದ್ಯುತ್ ಕೈಕೊಡುತ್ತದೆ ಎಂದು ಸಿಬ್ಬಂದಿ ಸಮಸ್ಯೆ ತೋಡಿಕೊಂಡರು.

ಮಲೆನಾಡು ಭಾಗದ ಗ್ರಾಮಗಳ ದುರ್ಗಮ ರಸ್ತೆಗಳಲ್ಲಿ ರೋಗಿಗಳನ್ನು ಆಸ್ಪತ್ರೆಗೆ ಕರೆದೊಯ್ಯಲು ಹರಸಾಹಸ ಪಡಬೇಕಾಗಿದೆ. ಕೆಲ ಗ್ರಾಮಗಳಿಗೆ ಕಾಲುಹಾದಿಗಳೇ ಸಂಪರ್ಕ ರಸ್ತೆಗಳು. ಇಂಥ ಹಾದಿಗಳಲ್ಲಿ ವಾಹನಗಳು ಸಂಚರಿಸಲ್ಲ. ರೋಗಿಗಳನ್ನು ನಡೆಸಿಕೊಂಡು, ಹೊತ್ತುಕೊಂಡು ಸಾಗಬೇಕಾದ ಸ್ಥಿತಿ ಇದೆ.

'ಆಸ್ಪತ್ರೆಗೆ ಹೋಗುವುದೇ ಕಷ್ಟ'

'ಶೃಂಗೇರಿ ತಾಲ್ಲೂಕಿನ ದೂರದ ಮತ್ತು ಒಳನಾಡು ಗುಡ್ಡಗಾಡು ಪ್ರದೇಶವಾದ ಕೆರೆ ಮತ್ತು ನೆಮ್ಮಾರ್ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೋವಿಡ್ ಸೋಂಕಿತರು ಸಾಕಷ್ಟಿದ್ದು, ಸಂಚಾರ ಸಾಧ್ಯವಾಗದೇ ಚಿಕಿತ್ಸೆ ಪಡೆಯುವುದು ಕಷ್ಟವಾಗಿದೆ. ಅವರನ್ನು ಪರೀಕ್ಷೆಗೆ ಒಳಪಡಿಸಿ ಅವರಿಗೆ ಚಿಕಿತ್ಸೆ ನೀಡಬೇಕು' ಎನ್ನುವುದು ನೆಮ್ಮಾರ್ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ದಿನೇಶ್ ಹೆಗ್ಡೆ ಅವರ ಒತ್ತಾಯ.

'ಪಟ್ಟಣದಿಂದ 20 ರಿಂದ 30 ಕಿ.ಮೀ ದೂರದಲ್ಲಿರುವ ಈ ಗ್ರಾಮದ ಜನತೆಗೆ ವೈದ್ಯಕೀಯ ಸೇವೆಗೆ ನೆಮ್ಮಾರ್ ಮತ್ತು ಶೃಂಗೇರಿಯನ್ನೇ ಅವಲಂಬಿಸಬೇಕಿದೆ. ಕೋವಿಡ್ ಪರೀಕ್ಷೆಗೆ ಹಾಗೂ ಲಸಿಕೆ ಪಡೆಯಲು ಪಟ್ಟಣಕ್ಕೆ ಬರಬೇಕು. ಸಾರಿಗೆ ವ್ಯವಸ್ಥೆ ಇಲ್ಲದೇ ಬಹುತೇಕ ರೋಗಿಗಳ ತಪಾಸಣೆ ಆಗಿಲ್ಲ. ಈ ಭಾಗದ ಜನರ ಗಂಟಲು ದ್ರವ ಪರೀಕ್ಷೆ ಹಾಗೂ ಲಸಿಕೆಯನ್ನು ಸಂಚಾರಿ ವಾಹನದ ಮೂಲಕ ಹಳ್ಳಿಗೆ ತೆರಳಿ ತಪಾಸಣೆ ಮಾಡಬೇಕು' ಎಂದು ಆಗ್ರಹಿಸುತ್ತಾರೆ.

ಮಾಧ್ಯಮದ ಮೇಲೆ ದೇಶದ್ರೋಹ ಪ್ರಕರಣ: 'ಸುಪ್ರೀಂ' ವ್ಯಂಗ್ಯ

ನವದೆಹಲಿ (ಪಿಟಿಐ): ಮಾಧ್ಯಮದ ವಿರುದ್ಧ ದೇಶದ್ರೋಹ ಪ್ರಕರಣಗಳನ್ನು ದಾಖಲಿಸುವ ಪ್ರವೃತ್ತಿ ಹೆಚ್ಚಳವಾಗಿರುವುದಕ್ಕೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಚಂದ್ರಚೂಡ್ ಅವರು ವ್ಯಂಗ್ಯವಾಗಿ ಪ್ರತಿಕ್ರಿಯೆ ನೀಡಿದ್ದಾರೆ. ಕೋವಿಡ್‌ನಿಂದ ಮೃತರಾದವರ ಶವಗಳನ್ನು ನದಿಗಳಿಗೆ ಎಸೆಯುವ ದೃಶ್ಯಗಳನ್ನು ಪ್ರಸಾರ ಮಾಡಿದ ಸುದ್ದಿ ವಾಹಿನಿಗಳ ವಿರುದ್ಧ ದೇಶದ್ರೋಹ ಕಾಯ್ದೆಯಡಿ ಪ್ರಕರಣವನ್ನು ದಾಖಲಿಸಿಕೊಂಡಿಲ್ಲವೇ ಎಂದು ಅವರು ಪ್ರಶ್ನಿಸಿದ್ದಾರೆ.

'ನದಿಗೆ ಶವ ಎಸೆಯುವ ವಿಡಿಯೊವನ್ನು ನಾವು ಗಮನಿಸಿದ್ದೇವೆ. ಇದನ್ನು ತೋರಿಸಿದ ಸುದ್ದಿ ವಾಹಿನಿ ಮೇಲೆ ದೇಶದ್ರೋಹ ಪ್ರಕರಣ ದಾಖಲಾಗಿದೆಯೇ ಎಂದು ಗೊತ್ತಿಲ್ಲ' ಎಂದು ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಚಾಟಿ ಬೀಸಿದರು.

ಕೋವಿಡ್‌ನಿಂದ ಮೃತಪಟ್ಟವರಿಗೆ ಗೌರವಯುತ ಅಂತ್ಯಸಂಸ್ಕಾರ ಮಾಡುವ ವಿಚಾರವು ನ್ಯಾಯಪೀಠದ ಎದುರು ಪ್ರಸ್ತಾಪವಾದಾಗ ನ್ಯಾಯಮೂರ್ತಿಗಳು ಈ ಅಭಿಪ್ರಾಯ ವ್ಯಕ್ತಪಡಿಸಿದರು.

ಸರ್ಕಾರವು ಕೋವಿಡ್ ಪರಿಸ್ಥಿತಿಯನ್ನು ನಿರ್ವಹಿಸುತ್ತಿರುವ ರೀತಿಯನ್ನು ಟೀಕಿಸುವವರ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಕೋವಿಡ್ ಸಂಬಂಧಿತ ಸಮಸ್ಯೆಗಳಿಗೆ ನೆರವು ಕೇಳುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಿದ್ದ ವಿಚಾರಗಳನ್ನು ಕೋರ್ಟ್ ಈ ಮೊದಲು ಗಂಭೀರವಾಗಿ ಪರಿಗಣಿಸಿತ್ತು. ಅದನ್ನು ಮುಂದುವರಿಸಿದರೆ ಸರ್ಕಾರದ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸುವುದಾಗಿಯೂ ಎಚ್ಚರಿಸಿತ್ತು.

ಅಗತ್ಯ ಔಷಧಿಗಳು, ಲಸಿಕೆ ಮತ್ತು ವೈದ್ಯಕೀಯ ಆಮ್ಲಜನಕ ಪೂರೈಕೆ ಕುರಿತು ಸ್ವಯಂ ಪ್ರೇರಿತವಾಗಿ ವಿಚಾರಣೆ ನಡೆಸುತ್ತಿರುವ ಪೀಠದ ಎದುರು ಅಮಿಕಸ್ ಕ್ಯೂರಿ ಆಗಿರುವ ಮೀನಾಕ್ಷಿ ಅರೋರಾ ಅವರು ಮೃತದೇಹಗಳ ಗೌರವಯುತ ಅಂತ್ಯಸಂಸ್ಕಾರ ವಿಚಾರವನ್ನು ಪ್ರಸ್ತಾಪಿಸಿದರು.

'ಸ್ಮಶಾನ, ಚಿತಾಗಾರಗಳು ರಾಜ್ಯಗಳಿಗೆ ಸಂಬಂಧಿಸಿದ ವಿಚಾರಗಳು. ಆದರೆ ಮೃತಪಟ್ಟವರಿಗೆ ಗೌರವಯುತ ಅಂತ್ಯ ಸಂಸ್ಕಾರ ಸಿಗುತ್ತಿಲ್ಲ. ಹೆಚ್ಚಿನ ಸಂಖ್ಯೆಯ ಚಿತಾಗಾರಗಳು ಕೆಲಸ ಮಾಡುತ್ತಿಲ್ಲ ಎಂಬುದು ದುರ್ದೈವದ ಸಂಗತಿ. ಅಂತ್ಯಸಂಸ್ಕಾರದ ವಿಧಿ ವಿಧಾನಗಳು ವೆಚ್ಚದಾಯಕ ಎಂಬ ಕಾರಣಕ್ಕೆ ಬಡ ಜನರಿಗೆ ಮೃತದೇಹಗಳನ್ನು ವಿಲೇವಾರಿ ಮಾಡಲೂ ಸಾಧ್ಯವಾಗುತ್ತಿಲ್ಲ' ಎಂದು ಅರೋರಾ ಹೇಳಿದರು.

ಹೊಸ ಐಟಿ ನಿಯಮ ಪಾಲಿಸಿ ಟ್ವಿಟರ್‌ಗೆ ಕೋರ್ಟ್ ಸೂಚನೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರ ಡಿಜಿಟಲ್ ಮಾಧ್ಯಮಗಳಿಗಾಗಿ ಜಾರಿಗೆ ತಂದಿರುವ ಹೊಸ ಮಾಹಿತಿ ತಂತ್ರಜ್ಞಾನ ನಿಯಮಗಳನ್ನು ಟ್ವಿಟರ್ ಪಾಲಿಸಬೇಕು ಎಂದು ದೆಹಲಿ ಹೈಕೋರ್ಟ್ ತಿಳಿಸಿದೆ.

ನ್ಯಾಯಮೂರ್ತಿ ರೇಖಾ ಪಲ್ಲಿ ಅವರು ಈ ಸೂಚನೆ ನೀಡಿದ್ದಲ್ಲದೆ, 'ಟ್ವಿಟರ್ ನಿಯಮಗಳನ್ನು ಪಾಲಿಸುತ್ತಿಲ್ಲ' ಎಂದು ವಕೀಲ ಅಮಿತ್ ಆಚಾರ್ಯ ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ ಕೇಂದ್ರ ಹಾಗೂ ಟ್ವಿಟರ್‌ಗೆ ನೋಟಿಸ್ ಜಾರಿಗೊಳಿಸಿದರು. ಇದಕ್ಕೂ ಮುನ್ನ ನ್ಯಾಯಾಲಯದ ಮುಂದೆ ಹಾಜರಾದ ಟ್ವಿಟರ್, 'ನಾವು ನಿಯಮಗಳನ್ನು ಪಾಲಿಸುತ್ತಿದ್ದೇವೆ ಮತ್ತು ಇದಕ್ಕೆ ಸಂಬಂಧಿಸಿಂತೆ ಕುಂದುಕೊರತೆ ಆಲಿಸಲು ಅಧಿಕಾರಿಯನ್ನು ನೇಮಿಸಿದ್ದೇವೆ, ಆದರೆ, ಸರ್ಕಾರವು ತಮ್ಮ ಹೇಳಿಕೆಯನ್ನು ವಿವಾದವಾಗಿಸಿದೆ' ಎಂದು ತಿಳಿಸಿತ್ತು. ಆದರೆ ಸರ್ಕಾರದ ಪರ ವಕೀಲರು ಈ ವಾದ ಅಲ್ಲಗಳೆದರು. ಹೊಸ ಐಟಿ ನಿಯಮಗಳು ಫೆಬ್ರವರಿ 25 ರಿಂದ ಜಾರಿಗೆ ಬಂದಿವೆ. ಅವುಗಳನ್ನು ಅನುಸರಿಸಲು ಕೇಂದ್ರವು ಟ್ವಿಟರ್ ಸೇರಿದಂತೆ ಪ್ರತಿ ಸಾಮಾಜಿಕ ಮಾಧ್ಯಮ ಸಂಸ್ಥೆಗಳಿಗೆ ಮೂರು ತಿಂಗಳು ಕಾಲಾವಕಾಶ ನೀಡಿದೆ ಎಂದು ಆಚಾರ್ಯ ತಮ್ಮ ಮನವಿಯಲ್ಲಿ ತಿಳಿಸಿದ್ದಾರೆ.

ದಾಖಲೆಯ ಮಟ್ಟಕ್ಕೆ ಏರಿದ ನಿಫ್ಟಿ

ಮುಂಬೈ (ಪಿಟಿಐ): ರಾಷ್ಟ್ರೀಯ ಷೇರುಪೇಟೆ (ಎನ್‌ಎಸ್‌ಇ) ಸಂವೇದಿ ಸೂಚ್ಯಂಕ ನಿಫ್ಟಿ ಸೋಮವಾರದ ವಹಿವಾಟಿನಲ್ಲಿ 147 ಅಂಶ ಏರಿಕೆ ಕಂಡು, 15,582 ಅಂಶಗಳಿಗೆ ತಲುಪಿತು. ಇದು ನಿಫ್ಟಿಯ ಸಾರ್ವಕಾಲಿಕ ಗರಿಷ್ಠ ಮಟ್ಟ.

ಕೋವಿಡ್ ಪ್ರಕರಣಗಳ ಸಂಖ್ಯೆಯು ಇಳಿಮುಖ ಆಗುತ್ತಿರುವುದು ಹೂಡಿಕೆದಾರರಲ್ಲಿ ಉತ್ಸಾಹ ಮೂಡಿಸಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 514 ಅಂಶ ಏರಿಕೆ ದಾಖಲಿಸಿತು. ರಿಲಯನ್ಸ್ ಇಂಡಸ್ಟ್ರೀಸ್, ಐಸಿಐಸಿಐ ಬ್ಯಾಂಕ್, ಭಾರ್ತಿ ಏರ್‌ಟೆಲ್, ಡಾ ರೆಡ್ಡೀಸ್, ಮಾರುತಿ, ಐಟಿಸಿ, ಎನ್‌ಟಿಪಿಸಿ ಮತ್ತು ಎಕ್ಸಿಸ್ ಬ್ಯಾಂಕ್ ಷೇರುಗಳು ಏರಿಕೆ ಕಂಡವು.

ಮಹೀಂದ್ರ ಆ್ಯಂಡ್ ಮಹೀಂದ್ರ, ಇನ್ಫೊಸಿಸ್, ಎಲ್‌ಆ್ಯಂಡ್‌ಟಿ, ಇಂಡಸ್‌ಇಂಡ್ ಬ್ಯಾಂಕ್, ಟೆಕ್ ಮಹೀಂದ್ರ ಮತ್ತು ಸನ್ ಫಾರ್ಮಾ ಷೇರುಗಳು ಕುಸಿತ ಕಂಡವು.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 17 ಪೈಸೆಯಷ್ಟು ತಗ್ಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-40000
ಹಳತು	42500-50000
ಕಾರ್ಕಳ	
ಹೊಸತು	36000-40000
ಹಳತು	46000-50000
ಪುತ್ತೂರು	
ಕೋಕ	9500-24000
ಹೊಸತು	28000-39500
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	240-342
ದ್ವಿತಳಿ (ಬಿ.ವಿ)	285-432

ಮೂಡಿಗೆರೆ ಕಾಫಿ	ಮುದ್ರೆಮನೆ
ಎಪಿ	10925
ಎಸಿ	4675
ಆರ್‌ಪಿ	5175
ಆರ್‌ಸಿ	3100

ಮುಂಬೈ ಧಾರಣೆ

ಶೇಂಗಾ 31-5-2021	
ಜಾವಾ 70/80(ಹೊಸ)	10050-10100
ಜಾವಾ 80/90(ಹೊಸ)	9250-9300
ದಪ್ಪ ಮಧ್ಯಪ್ರದೇಶ(ಹೊಸ)	10400-10500
ದಪ್ಪ ಗುಜರಾತ್(ಹೊಸ)	9600-9700
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1430 (1460)
ಒಂದು ವಾರದ ಡೆಲಿವರಿ	1425 (1455)
ಸೋಯಾ ಕಚ್ಚಾ	1370 (1380)
ಪಾಮ್ ವಾರದ ಡೆಲಿವರಿ	1233 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1520 (1550)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	48,800 (48,650)
ಬೆಳ್ಳಿ ಕೆ.ಜಿ	71,300 (71,200)

ಆವರಣದಲ್ಲಿ ಶನಿವಾರದ ಧಾರಣೆ

₹ 1.41 ಕೋಟಿ ಮೌಲ್ಯದ ವೈದ್ಯಕೀಯ ಉಪಕರಣ ಕೊಡುಗೆ

ಮಂಡ್ಯ: ಅಮೆರಿಕದ ಸರ್ಜನ್ ಜನರಲ್ ಡಾ.ವಿವೇಕ್ ಮೂರ್ತಿ ಹಾಗೂ ಕುಟುಂಬದ ಸದಸ್ಯರು, ಸ್ಕೋಪ್ (ಸೊಸೈಟಿ ಆಫ್ ಚಿಲ್ಡ್ರನ್ ಆಫ್ ಪ್ಲಾನೆಟ್ ಅರ್ಥ್) ಫೌಂಡೇಷನ್ ವತಿಯಿಂದ ಮಂಡ್ಯ ಹಾಗೂ ಕೊಡಗು ಜಿಲ್ಲೆಗೆ ₹ 1.41 ಕೋಟಿ ಮೌಲ್ಯದ ವೈದ್ಯಕೀಯ ಉಪಕರಣ ಕಳುಹಿಸಿದ್ದಾರೆ.

ಡಾ.ವಿವೇಕ್ ಮೂರ್ತಿ

ಮಂಡ್ಯ ತಾಲ್ಲೂಕಿನ ಹಲ್ಲೇಗೆರೆ ಮೂಲದ ಡಾ.ವಿವೇಕ್ ಮೂರ್ತಿ ಅವರ ತಂದೆ ಡಾ.ಎಚ್.ಎನ್.ಲಕ್ಷ್ಮಿನರಸಿಂಹಮೂರ್ತಿ ಅವರು ಸಾಮಾಜಿಕ ಚಟುವಟಿಕೆಗಳಿಗಾಗಿ ಸ್ಕೋಪ್ ಫೌಂಡೇಷನ್ ಸ್ಥಾಪಿಸಿದ್ದಾರೆ. ಐದು ವರ್ಷಗಳಿಂದ ಜಿಲ್ಲೆಯ ಶಾಲೆಗಳಿಗೆ ಕಲಿಕಾ ಉಪಕರಣಗಳನ್ನು ಕೊಡುಗೆಯಾಗಿ ನೀಡುತ್ತಿದ್ದಾರೆ. ಸದ್ಯದ ಕೋವಿಡ್ ಸಂದರ್ಭದಲ್ಲಿ, ಜಿಲ್ಲೆಗೆ ₹ 74 ಲಕ್ಷ, ಕೊಡಗು ಜಿಲ್ಲೆಗೆ ₹ 67 ಲಕ್ಷ ಮೌಲ್ಯದ ಉಪಕರಣ ಕಳುಹಿಸಿಕೊಟ್ಟಿದ್ದಾರೆ.

1.96 ಲಕ್ಷ ಎನ್–95 ಮಾಸ್ಕ್, 70 ಆಮ್ಲಜನಕ ಕಾನ್ಸನ್‌ಟ್ರೇಟರ್, 70 ವೈದ್ಯಕೀಯ ಟ್ರಾನ್ಸ್‌ಫಾರ್ಮರ್, 5 ಸಾವಿರ ಫೇಸ್ ಶೀಲ್ಡ್, 300 ಸರ್ಜಿಕಲ್ ಮಾಸ್ಕ್, 400 ನೈಟ್ರೈಲ್ ಕೋಟೆಡ್ ಗ್ಲೌಸ್, 25 ಥರ್ಮೋಮೀಟರ್, 10 ಸಾವಿರ ವೈಪ್ಸ್, 25 ಪಲ್ಸ್ ಆಕ್ಸಿಮೀಟರ್, 50 ಆಮ್ಲಜನಕ ಟ್ಯೂಬ್‌ಗಳನ್ನು ಅಮೆರಿಕದಿಂದ ಕಳುಹಿಸಿದ್ದಾರೆ.

'ವೈದ್ಯಕೀಯ ಉಪಕರಣಗಳು ಬೆಂಗಳೂರಿಗೆ ಬಂದಿದ್ದು, ಮಂಗಳವಾರ ಮಂಡ್ಯ ಹಾಗೂ ಮಡಿಕೇರಿ ಜಿಲ್ಲಾಸ್ಪತ್ರೆ ತಲುಪಲಿವೆ. ಹಲ್ಲೇಗೆರೆ ಪ್ರಾಥಮಿಕ ಆರೋಗ್ಯ ಕೇಂದ್ರ ಸೇರಿದಂತೆ ತಾಲ್ಲೂಕು ಆಸ್ಪತ್ರೆಗಳಲ್ಲಿ ಅವುಗಳನ್ನು ಬಳಸಲಾಗುವುದು' ಎಂದು ಮಿಮ್ಸ್ ನಿರ್ದೇಶಕ ಡಾ.ಎಂ.ಆರ್.ಹರೀಶ್ ತಿಳಿಸಿದರು.

ಹೋತ ಬಲಿಗೆ ಕರೆ: ಕ್ರಮ

ಬೆಳಗಾವಿ: 'ಕೊರೊನಾ ನಿಗ್ರಹಕ್ಕಾಗಿ ಕರಿಸಿದ್ದೇಶ್ವರ ದೇವರಿಗೆ ಅಮಾವಾಸ್ಯೆ ದಿನದಂದು 21 ಹೋತಗಳನ್ನು ಬಲಿ ಕೊಡಬೇಕು' ಎಂದು ಜನರಿಗೆ ತಿಳಿಸಿದ್ದ ರಾಯಬಾಗ ತಾಲ್ಲೂಕಿನ ಅಲಕನೂರ ಗ್ರಾಮದ ಅರ್ಚಕ ನಾಗಪ್ಪ ಕಟ್ಟಿಕಾರ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಎಸ್ಪಿ ಲಕ್ಷ್ಮಣ ನಿಂಬರಗಿ ತಿಳಿಸಿದರು.

'ಅವರು ಕರೆ ನೀಡಿದ್ದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಈ ಹಿನ್ನೆಲೆಯಲ್ಲಿ ಅರ್ಚಕರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ರಾಯಬಾಗ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಮುಖಂಡರ ಸಭೆ ನಡೆಸಿ ಜಾಗೃತಿ ಮೂಡಿಸಿದ್ದಾರೆ' ಎಂದರು.

'ಕೇಂದ್ರ ಸರ್ಕಾರ ಕರ್ನಾಟಕಕ್ಕೆ ತಾರತಮ್ಯ ಮಾಡುತ್ತಿದೆಯೇ?

'ತಾರತಮ್ಯ' ತೋರಿಸಿದ ಪ್ರತಿಪಕ್ಷ : ಸಮಪಾಲು ಪ್ರತಿಪಾದಿಸಿದ ಬೆಲ್ಲದ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗುಜರಾತ್, ಉತ್ತರ ಪ್ರದೇಶ ರಾಜ್ಯಗಳತ್ತ ವಾಲುವ ಪ್ರಧಾನಿ, ಕರ್ನಾಟಕದ ವಿಷಯದಲ್ಲಿ ತಾರತಮ್ಯ ತೋರುತ್ತಿದ್ದಾರೆ. ಇದು ಹೀಗೆ ಮುಂದುವರಿದರೆ ಅವರು ಜನರ ವಿಶ್ವಾಸ ಕಳೆದುಕೊಳ್ಳುವುದರಲ್ಲಿ ಅನುಮಾನವಿಲ್ಲ' ಎಂದು ಕಾಂಗ್ರೆಸ್ ಮುಖಂಡ ವಿ.ಎಸ್. ಉಗ್ರಪ್ಪ ವಾದಿಸಿದರು. 'ಎಲ್ಲ ರಾಜ್ಯಗಳನ್ನು ಗಣನೆಗೆ ತೆಗೆದುಕೊಂಡು ಕೇಂದ್ರ ಸರ್ಕಾರ ಆಡಳಿತಾತ್ಮಕ ತೀರ್ಮಾನ ತೆಗೆದುಕೊಳ್ಳುತ್ತಿದೆ. ಇದನ್ನು ತಾರತಮ್ಯವೆಂದು ಟೀಕಿಸಿ ವಿರೋಧ ಪಕ್ಷಗಳು ರಾಜಕೀಯ ಮಾಡುತ್ತಿವೆ' ಎಂದು ಬಿಜೆಪಿ ಶಾಸಕ ಅರವಿಂದ ಬೆಲ್ಲದ ತಿರುಗೇಟು ನೀಡಿದರು.

'ನೆರೆ ಪರಿಹಾರ, ಜಿಎಸ್‌ಟಿ, ಲಸಿಕೆ, ಆಮ್ಲಜನಕ ಎಲ್ಲ ವಿಷಯದಲ್ಲೂ ತಾರತಮ್ಯ ಆಗುತ್ತಿದೆ. ಡಬ್ಬಲ್ ಎಂಜಿನ್ ಸರ್ಕಾರದಿಂದ ಲಾಭವೇನೂ ಆಗಿಲ್ಲ' ಎಂದು ಜೆಡಿಎಸ್ ಶಾಸಕ ಬಂಡೆಪ್ಪ ಕಾಶೆಂಪೂರ ಟೀಕಿಸಿದರು. 'ಕೇಂದ್ರ ಸರ್ಕಾರ ಕರ್ನಾಟಕಕ್ಕೆ ತಾರತಮ್ಯ ಮಾಡುತ್ತಿದೆಯೇ? ಎಂಬ ಕುರಿತು 'ಪ್ರಜಾವಾಣಿ'ಯ ಫೇಸ್‌ಬುಕ್ ಸಂವಾದದ ಆಯ್ದ ಅಭಿಪ್ರಾಯ ಇಲ್ಲಿದೆ.

ಪೂರ್ಣ ಸಂವಾದ ಆಲಿಸಲು– https://www.facebook.com/prajavani.net/videos

ಪ್ರಜಾವಾಣಿ ಸಂವಾದ

'ಮೋದಿ ಆಶ್ವಾಸನೆ ಹುಸಿ'

ಕೋವಿಡ್ ನಿಭಾಯಿಸುವಲ್ಲಿ ರಾಜ್ಯ– ಕೇಂದ್ರ ಸರ್ಕಾರ ವಿಫಲವಾಗಿದೆ. ಮೋದಿಯೊಬ್ಬ ಆಧುನಿಕ ದುರ್ಯೋಧನ ಎಂದು ನಾನು ಲೋಕಸಭೆಯಲ್ಲೇ ಹೇಳಿದ್ದೆ. ಜನಪರವಾಗಿ ಕೆಲಸ ಮಾಡಲು ಮುತ್ಸದ್ದಿ ಆಗಿರಬೇಕು. ಬಡತನ ನಿರ್ಮೂಲನೆ, ಭ್ರಷ್ಟಾಚಾರ ನಿಯಂತ್ರಣ, ಕಪ್ಪು ಹಣ ವಾಪಸು, ಎಲ್ಲರ ಖಾತೆಗೆ ₹ 15 ಲಕ್ಷ ಜಮೆ ಎಂದು ಹೇಳಿ ಅಧಿಕಾರಕ್ಕೆ ಬಂದವರು ಬಿಜೆಪಿಯವರು. ಏಳು ವರ್ಷದ ಕೇಂದ್ರದ ಆಡಳಿತವನ್ನು ಸಿಂಹಾವಲೋಕನ ಮಾಡಿದರೆ ಆಶ್ವಾಸನೆಗಳೆಲ್ಲ ಹುಸಿಯಾಗಿದೆ. ಲಸಿಕೆ, ಆಮ್ಲಜನಕ ಪೂರೈಕೆ ವಿಷಯದಲ್ಲಂತೂ ರಾಜ್ಯಕ್ಕೆ ಮೋಸ ಆಗಿದೆ. ಕನ್ನಡ ಮತ್ತು ಕರ್ನಾಟಕವನ್ನು ತಾರತಮ್ಯದಿಂದ ನೋಡುತ್ತಾರೆ. ಗುಜರಾತ್‌ಗೆ ಭೇಟಿ ನೀಡಿದಾಗೆಲ್ಲ ಅನುದಾನ ಘೋಷಿಸುವ ಅವರು, ಕರ್ನಾಟಕಕ್ಕೆ ಬಂದಾಗ ಭಾಷಣ ಹೊಡೆದು ಹೋಗುತ್ತಾರೆ. ರಾಜ್ಯದ ಪಾಲಿನ ಜಿಎಸ್‌ಟಿ ಉಳಿಸಿಕೊಂಡಿದ್ದಾರೆ. ಯಡಿಯೂರಪ್ಪ ಅವರನ್ನು ಅಧಿಕಾರದಿಂದ ಕೆಳಗಿಳಿಸಬೇಕೆಂಬ ಬಿಜೆಪಿಯ ಒಳಜಗಳದಿಂದ ಅಪ್ಪ, ಅಮ್ಮನ ಜಗಳದಲ್ಲಿ ಕೂಸು ಬಡವಾಯಿತು ಎಂಬಂತಾಗಿದೆ ರಾಜ್ಯದ ಸ್ಥಿತಿ.

ವಿ.ಎಸ್. ಉಗ್ರಪ್ಪ, ಕಾಂಗ್ರೆಸ್ ಮುಖಂಡ

ಎರಡು ಎಂಜಿನ್‌ಗಳಿದ್ದರೂ ಲಾಭ ಇಲ್ಲ

ಭೀಕರ ನೆರೆಯಿಂದ 22 ಜಿಲ್ಲೆಗಳಲ್ಲಿ ₹ 35 ಸಾವಿರ ಕೋಟಿಗೂ ಹೆಚ್ಚು ಮೌಲ್ಯದ ನಷ್ಟ ಉಂಟಾಗಿದ್ದರೂ ಕೇಂದ್ರ ಕೊಟ್ಟಿದ್ದು ಕೇವಲ ₹ 800 ಕೋಟಿ ಸಾಲ ತಂದು ರಾಜ್ಯ ಸರ್ಕಾರ ನಡೆಸುತ್ತಿದ್ದಾರೆ. ಕೋವಿಡ್ ನಿಯಂತ್ರಿಸುವುದು ಕೇಂದ್ರ– ರಾಜ್ಯ ಸರ್ಕಾರದ ಜವಾಬ್ದಾರಿ. ಆದರೆ, ಕೋರ್ಟ್ ಹೇಳಿದ ಮೇಲೆ ರಾಜ್ಯಕ್ಕೆ ಆಮ್ಲಜನಕ ಸಿಕ್ಕಿದೆ. ನಮ್ಮಲ್ಲಿ ಉತ್ಪಾದನೆಯಾದ ಆಮ್ಲಜನಕ ಬಳಸಿಕೊಳ್ಳಲು ಕೂಡಾ ಅವಕಾಶ ಇಲ್ಲ. ರಾಜ್ಯಕ್ಕೆ ಬರಬೇಕಾದ ಪ್ರಮಾಣದಷ್ಟು ಲಸಿಕೆ ಬಂದಿಲ್ಲ. ಭಾಷಾ ತಾರತಮ್ಯವೂ ಇದೆ. ಜಿಎಸ್‌ಟಿ ಸಂಗ್ರಹದಲ್ಲಿ ಇಡೀ ದೇಶದಲ್ಲಿ ನಮ್ಮ ರಾಜ್ಯ 4ನೇ ಸ್ಥಾನದಲ್ಲಿದೆ. ರಫ್ತಿನಲ್ಲಿ ಶೇ 40 ರಾಜ್ಯದ ಕೊಡುಗೆ. ಜಿಎಸ್‌ಟಿ ಬಾಕಿ ₹ 13 ಸಾವಿರ ಕೋಟಿಯಲ್ಲಿ ₹ 11 ಸಾವಿರ ಕೋಟಿ ತಕ್ಷಣ ಕೊಡಿ ಎಂದು ಜಿಎಸ್‌ಟಿ ಮಂಡಳಿಯಲ್ಲಿ ಸಚಿವ ಬಸವರಾಜ ಬೊಮ್ಮಾಯಿ ಮನವಿ ಮಾಡಿದ್ದಾರೆ. ಕೇಂದ್ರ ಹಣಕಾಸು ಸಚಿವೆ ಕರ್ನಾಟಕದಿಂದಲೇ ಆಯ್ಕೆಯಾಗಿದ್ದರೂ ನಿರ್ಮಲಾ ಸೀತಾರಾಮನ್ ರಾಜ್ಯಕ್ಕೆ ಲಾಭ ಆಗಿಲ್ಲ. ಇಲ್ಲಿನ ನೆಲ, ಜಲ, ಉಳಿಸಬೇಕೆಂಬ ಕಾಳಜಿ ನಮ್ಮದು.

ಬಂಡೆಪ್ಪ ಕಾಶೆಂಪೂರ, ಜೆಡಿಎಸ್ ಶಾಸಕ

ಅಂಕಿಅಂಶಗಳಿಲ್ಲದೆ ಟೀಕೆ

ಸರ್ವರಿಗೆ ಸಮಪಾಲು, ಸರ್ವರಿಗೂ ಸಮಬಾಳು ಎನ್ನುವುದು ಬಿಜೆಪಿ ಸಿದ್ಧಾಂತ. ಕರ್ನಾಟಕವೂ ಸೇರಿದಂತೆ ಯಾವುದೇ ರಾಜ್ಯಕ್ಕೆ ಕೇಂದ್ರ ಸರ್ಕಾರ ತಾರತಮ್ಯ ಮಾಡಿಲ್ಲ. ಆದರೆ, ಯಾವುದೇ ಅಂಕಿಅಂಶಗಳಿಲ್ಲದೆ, ಆರೋಪ ಮಾಡುವುದು ವಿರೋಧ ಪಕ್ಷದ ಕೆಲಸ. ಕೇಂದ್ರ– ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಆರೋಗ್ಯ ಸೌಲಭ್ಯಗಳು ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾಗಿದೆ. 24 ಗಂಟೆಯೂ ಮುಖ್ಯಮಂತ್ರಿ, ಪ್ರಧಾನಿ ಕೆಲಸ ಮಾಡುತ್ತಾರೆ. ಸಕಾರಾತ್ಮಕ ಬೆಂಬಲ ಕೊಡುವ ಬದಲು ಟೀಕಿಸುವುದೇ ವಿರೋಧ ಪಕ್ಷಗಳ ಕೆಲಸ. ಆಮ್ಲಜನಕ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಲು ರಾಜ್ಯ ದಿಟ್ಟ ಹೆಜ್ಜೆ ಇಟ್ಟಿದೆ. ಇದಕ್ಕೆ ಕೇಂದ್ರದಿಂದಲೂ ನೆರವು ಸಿಗುತ್ತಿದೆ. ಲಸಿಕೆ ವಿಚಾರದಲ್ಲೂ ಕೇಂದ್ರದಿಂದ ನೆರವು ಸಿಗುತ್ತಿದೆ. ರಾಜ್ಯದ ಪಾಲಿನ ಜಿಎಸ್‌ಟಿ ಬಂದೇ ಬರುತ್ತದೆ. ರಾಜ್ಯದ ಎಲ್ಲ ಅವಶ್ಯಕತೆಗಳಿಗೆ ಪ್ರಧಾನಿ ಸ್ಪಂದಿಸಿದ್ದಾರೆ. ರಾಜ್ಯದಲ್ಲಿ ಕನ್ನಡಕ್ಕೆ ಪ್ರಾಧಾನ್ಯತೆ ಕೊಡಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ, ಚುನಾವಣೆ ಸಂದರ್ಭದಲ್ಲಿ ಭಾಷೆ ವಿಷಯ ಎತ್ತುವ ವಿಭಜಕ ಶಕ್ತಿಗಳೂ ಇವೆ. ಟೂಲ್‌ಕಿಟ್ ಮೂಲಕ ಪ್ರಧಾನಿ ಮತ್ತು ದೇಶದ ವರ್ಚಸ್ಸನ್ನು ಹಾಳು ಮಾಡಲು ಕಾಂಗ್ರೆಸ್ ಹೊರಟಿದೆ.

ಅರವಿಂದ ಬೆಲ್ಲದ, ಬಿಜೆಪಿ ಶಾಸಕ

ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ಘೋಷಣೆ

₹ 20,810 ಕೋಟಿ ಕೃಷಿ ಸಾಲ ವಿತರಣೆ ಗುರಿ

ಪ್ರಜಾವಾಣಿ ವಾರ್ತೆ

ಸೋಮಶೇಖರ್

ಬೆಂಗಳೂರು: ರಾಜ್ಯದಲ್ಲಿ 2021–22ನೇ ಆರ್ಥಿಕ ವರ್ಷದಲ್ಲಿ ಸಹಕಾರ ಸಂಸ್ಥೆಗಳ ಮೂಲಕ 30 ಲಕ್ಷ ರೈತರಿಗೆ ₹ 20,810 ಕೋಟಿ ಮೊತ್ತದ ಕೃಷಿ ಸಾಲ ವಿತರಿಸುವ ಗುರಿ ಹೊಂದಲಾಗಿದೆ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, '2020–21ನೇ ಸಾಲಿನಲ್ಲಿ 24.50 ಲಕ್ಷ ರೈತರಿಗೆ ₹ 15,400 ಕೋಟಿ ಸಾಲ ವಿತರಿಸುವ ಗುರಿ ಹೊಂದಲಾಗಿತ್ತು. ಈ ಅವಧಿಯಲ್ಲಿ 25.93 ಲಕ್ಷ ರೈತರಿಗೆ ₹ 17,490 ಕೋಟಿ ಸಾಲ ವಿತರಿಸಲಾಗಿದೆ. ಗುರಿಗೆ ಹೋಲಿಸಿದರೆ ಶೇಕಡ 114.70ರಷ್ಟು ಸಾಧನೆಯಾಗಿದೆ' ಎಂದರು.

ಕೋವಿಡ್ ಬಿಕ್ಕಟ್ಟಿನ ನಡುವೆಯೂ ರೈತರಿಗೆ ಸಾಲ ನೀಡುವುದರಲ್ಲಿ ಸಹಕಾರ ಸಂಸ್ಥೆಗಳಿಂದ ಗುರಿ ಮೀರಿದ ಸಾಧನೆಯಾಗಿದೆ.

ಈ ಬಾರಿ 21 ಜಿಲ್ಲಾ ಕೇಂದ್ರ ಸಹಕಾರ (ಡಿಸಿಸಿ) ಬ್ಯಾಂಕ್‌ಗಳಿಗೂ ಸಾಲ ವಿತರಣೆಯ ಗುರಿಯನ್ನು ಈಗಾಗಲೇ ನೀಡಲಾಗಿದೆ. ಕಳೆದ ವರ್ಷ ಆರು ಡಿಸಿಸಿ ಬ್ಯಾಂಕ್‌ಗಳು ಮಾತ್ರ ಶೇ 100ರ ಗುರಿ ಸಾಧನೆ ಮಾಡಿಲ್ಲ. ಅವುಗಳೂ ಸೇರಿದಂತೆ ಎಲ್ಲ ಡಿಸಿಸಿ ಬ್ಯಾಂಕ್‌ಗಳೂ ಶೇ 100ರಷ್ಟು ಗುರಿ ಸಾಧಿಸಬೇಕೆಂದು ಆದೇಶಿಸಲಾಗಿದೆ ಎಂದು ತಿಳಿಸಿದರು.

'ಲಾಕ್‌ಡೌನ್ ಅಂತ್ಯಗೊಂಡ ಬಳಿಕ ಎಲ್ಲ ಡಿಸಿಸಿ ಬ್ಯಾಂಕ್‌ಗಳಿಗೂ ನಾನೇ ಖುದ್ದಾಗಿ ಭೇಟಿ ನೀಡುತ್ತೇನೆ. ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ವಿತರಣೆಯ ಕುರಿತು ಪರಿಶೀಲನೆ ನಡೆಸುತ್ತೇನೆ. ಸಾಲ ವಿತರಣೆಯಲ್ಲಿ ಗುರಿ ಸಾಧಿಸುವ ಸಂಬಂಧ ಅಗತ್ಯ ಸಲಹೆ, ಸೂಚನೆಗಳನ್ನು ನೀಡುತ್ತೇನೆ' ಎಂದು ಸೋಮಶೇಖರ್ ಹೇಳಿದರು.

21 ಡಿಸಿಸಿ ಬ್ಯಾಂಕ್‌ಗಳಿಗೂ ಕಳೆದ ವರ್ಷ ಎಷ್ಟು ಸಾಲ ವಿತರಣೆಯ ಗುರಿ ನೀಡಲಾಗಿತ್ತು? ಎಷ್ಟು ಸಾಧನೆ ಮಾಡಲಾಗಿದೆ? ಎಂಬುದನ್ನು ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ತುಷಾರ್ ಗಿರಿನಾಥ್ ಮತ್ತು ಸಹಕಾರ ಸಂಘಗಳ ರಿಜಿಸ್ಟ್ರಾರ್ ಜಿಯಾವುಲ್ಲ ಪರಿಶೀಲನೆ ನಡೆಸಿದ್ದಾರೆ. ಆ ಬಳಿಕವೇ ಪ್ರಸಕ್ತ ವರ್ಷದ ಸಾಲ ವಿತರಣೆಯ ಗುರಿ ನಿಗದಿ ಮಾಡಲಾಗಿದೆ ಎಂದರು.

ಎಲ್ಲ ಡಿಸಿಸಿ ಬ್ಯಾಂಕ್‌ಗಳಿಗೂ ಅಪೆಕ್ಸ್ ಬ್ಯಾಂಕ್ ಸಂಪೂರ್ಣ ಸಹಕಾರ ನೀಡಲಿದೆ. ಡಿಸಿಸಿ ಬ್ಯಾಂಕ್‌ಗಳು ತಮಗೆ ನೀಡಿರುವ ಗುರಿಯನ್ನು ನಿಗದಿತ ಅವಧಿಯೊಳಗೆ ತಲುಪಲೇಬೇಕು. ಎಲ್ಲ ರೈತರಿಗೂ ಕೃಷಿ ಸಾಲ ದೊರೆಯಲೇಬೇಕು. ಅರ್ಹತೆ ಹೊಂದಿರುವ ಯಾವುದೇ ರೈತರಿಗೂ ಸಾಲ ನಿರಾಕರಿಸುವಂತಿಲ್ಲ ಎಂದು ಹೇಳಿದರು.

ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರೂ ಆಗಿರುವ ಶಾಸಕ ಬೆಳ್ಳಿ ಪ್ರಕಾಶ್, ತುಷಾರ್ ಗಿರಿನಾಥ್, ಜಿಯಾವುಲ್ಲ ಮತ್ತು ರಾಜ್ಯದ ಎಲ್ಲ ಡಿಸಿಸಿ ಬ್ಯಾಂಕ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪತ್ರಿಕಾಗೋಷ್ಠಿಯಲ್ಲಿದ್ದರು.

ಸಿ.ಡಿ ಪ್ರಕರಣ: ಯುವತಿ ಪತ್ರಕ್ಕೆ ಸ್ಪಂದಿಸಲು ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರ ವಿರುದ್ಧದ ಸಿ.ಡಿಗೆ ಸಂಬಂಧಿಸಿ, ವಿಡಿಯೊದಲ್ಲಿದ್ದಾರೆ ಎನ್ನಲಾಗಿರುವ ಯುವತಿ ಬರೆದಿರುವ ಪತ್ರದಲ್ಲಿನ ಆರೋಪಗಳಿಗೆ ಸ್ಪಂದಿಸುವಂತೆ ವಿಶೇಷ ತನಿಖಾ ತಂಡಕ್ಕೆ(ಎಸ್‌ಐಟಿ) ಹೈಕೋರ್ಟ್ ನಿರ್ದೇಶನ ನೀಡಿದೆ.

ವಿವಾದಾತ್ಮಕ ಸಿ.ಡಿ ಕುರಿತು ಸಲ್ಲಿಕೆಯಾಗಿರುವ ಎರಡು ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಮೂರು ಎಫ್‌ಐಆರ್‌ಗಳ ಕುರಿತು ಎಸಿಪಿ ಸಹಿ ಮಾಡಿ ಸಲ್ಲಿಸಿರುವ ಮೂರು ವರದಿಗಳ ಪರಿಶೀಲನೆ ನಡೆಸಿತು.

'ಮಗಳನ್ನು ಅಪಹರಿಸಲಾಗಿದೆ ಎಂದು ಯುವತಿಯ ಪೋಷಕರು ಆರ್‌.ಟಿ.ನಗರ ಪೊಲೀಸ್ ಠಾಣೆಯಲ್ಲಿ ದಾಖಲಿಸಿದ್ದ ಎಫ್‌ಐಆರ್ ಸಂಬಂಧ ಬಿ. ವರದಿ ಸಲ್ಲಿಸಿ ಮುಕ್ತಾಯಗೊಳಿಸಲಾಗಿದೆ. ಕಬ್ಬನ್ ಪಾರ್ಕ್ ಠಾಣೆ ಮತ್ತು ಸದಾಶಿವನಗರ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ಗಳ ಕುರಿತು ತನಿಖೆ ಮುಂದುವರಿದಿದೆ' ಎಂದು ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವಡಗಿ ಮಾಹಿತಿ ನೀಡಿದರು.

ತನಿಖಾ ವರದಿ ಪರಿಶೀಲಿಸಿದ ಪೀಠ, ಎಸ್‌ಐಟಿ ಮುಖ್ಯಸ್ಥರು ಸಹಿ ಮಾಡಬೇಕು ಎಂದು ಸೂಚಿಸಿತು. 'ಎಸ್‌ಐಟಿ ಮುಖ್ಯಸ್ಥ ಸೌಮೇಂದು ಮುಖರ್ಜಿ ಅವರು ವೈದ್ಯಕೀಯ ರಜೆಯಲ್ಲಿರುವ ಕಾರಣ ತನಿಖಾಧಿಕಾರಿ ಸಹಿ ಮಾಡಿ ವರದಿ ಸಲ್ಲಿಸಿದ್ದಾರೆ' ಎಂದು ಅಡ್ವೊಕೇಟ್ ಜನರಲ್ ತಿಳಿಸಿದರು.

'ಈ ತನಿಖೆಯ ಮೇಲ್ವಿಚಾರಣೆಯನ್ನು ನ್ಯಾಯಾಲಯ ಮಾಡುತ್ತಿರುವ ಕಾರಣ ಎಸ್‌ಐಟಿ ಮುಖ್ಯಸ್ಥರು ಅಥವಾ ಆ ಹುದ್ದೆಯ ಉಸ್ತುವಾರಿ ಅಧಿಕಾರಿ ಅನುಮೋದನೆ ಪಡೆದು ವರದಿ ಸಲ್ಲಿಸಬೇಕು' ಎಂದು ಪೀಠ ಸೂಚಿಸಿತು.

ಯುವತಿ ಬರೆದಿರುವ ಪತ್ರವು ರಿಜಿಸ್ಟ್ರಾರ್(ನ್ಯಾಯಾಂಗ) ಅವರಿಗೆ ತಲುಪಿದೆ ಎಂದು ತಿಳಿಸಿದ ಪೀಠ, 'ಈ ಪತ್ರ ಬರೆದಿರುವುದು ಅದೇ ಯುವತಿಯೇ, ಅಲ್ಲವೇ ಎಂಬುದನ್ನು ಖಚಿತಪಡಿಸಬೇಕು ಮತ್ತು ಅದರಲ್ಲಿರುವ ಆರೋಪಗಳ ಬಗ್ಗೆ ಸ್ಪಂದಿಸಿ ಮುಂದಿನ ವಿಚಾರಣೆ ವೇಳೆಗೆ ವರದಿ ಸಲ್ಲಿಸಬೇಕು' ಎಂದು ಎಸ್‌ಐಟಿಯ ಮುಖ್ಯಸ್ಥರಿಗೆ ನಿರ್ದೇಶನ ನೀಡಿತು. ಪತ್ರವನ್ನು ಎಸ್‌ಐಟಿ ಅಧಿಕಾರಿಗಳಿಗೆ ಮುಚ್ಚಿದ ಲಕೋಟೆಯಲ್ಲಿ ರವಾನಿಸುವಂತೆ ರಿಜಿಸ್ಟ್ರಾರ್‌ಗೆ ಸೂಚನೆ ನೀಡಿತು. ವಿಚಾರಣೆಯನ್ನು ಜೂನ್ 18ಕ್ಕೆ ಮುಂದೂಡಿತು.

ಜಾರಕಿಹೊಳಿ ಆಕ್ಷೇಪಣೆ: ಸಿ.ಡಿ ಪ್ರಕರಣದ ಕುರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆಗೆ ಆಕ್ಷೇಪಣೆ ಸಲ್ಲಿಸಲು ರಮೇಶ ಜಾರಕಿಹೊಳಿ ಮುಂದಾಗಿದ್ದಾರೆ. ಅವರ ಪರ ವಕೀಲರು ನ್ಯಾಯಾಲಯಕ್ಕೆ ಹಾಜರಾಗಿ ಆಕ್ಷೇಪಣೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಹೇಬಿಯಸ್ ಕಾರ್ಪಸ್ ಅರ್ಜಿ ಇತ್ಯರ್ಥ

ಧಾರವಾಡ: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರ ವಿರುದ್ಧದ ಸಿ.ಡಿ. ಪ್ರಕರಣದ ಸಂತ್ರಸ್ತ ಯುವತಿಯನ್ನು ಹುಡುಕಿಕೊಡುವಂತೆ ನಿರ್ದೇಶನ ನೀಡಬೇಕು ಎಂದು ಕೋರಿ ಯುವತಿಯ ತಂದೆ ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಇಲ್ಲಿನ ಹೈಕೋರ್ಟ್ ಇತ್ಯರ್ಥಪಡಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ಎದುರು ಹೇಳಿಕೆ ನೀಡಿದ್ದ ಯುವತಿ, ನಂತರ ಕಾಣೆಯಾಗಿದ್ದಾಳೆ ಎಂದು ಆಕೆಯ ತಂದೆ ಪ್ರಕಾಶ ಕಂಚೇರಿ ದೂರು ದಾಖಲಿಸಿದ್ದರು. ಆದರೆ ಪೊಲೀಸರು ಮಗಳನ್ನು ಹುಡುಕುವ ಪ್ರಯತ್ನ ಮಾಡುತ್ತಿಲ್ಲ. ಹೀಗಾಗಿ ಆಕೆಯನ್ನು ಹುಡುಕಿ, ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ನಿರ್ದೇಶನ ನೀಡಬೇಕು ಎಂದು ಅರ್ಜಿಯ ಮೂಲಕ ಕೋರಿದ್ದರು.

ಸೋಮವಾರ ಬೆಳಗಿನ ಅವಧಿಯಲ್ಲಿ ಅರ್ಜಿ ವಿಚಾರಣೆಗೆ ಬಂದಾಗ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಮತ್ತು ಪ್ರದೀಪಸಿಂಗ್ ಯರೂರ ಅವರಿದ್ದ ನ್ಯಾಯಪೀಠ, ಬೆಂಗಳೂರಿನ ಪ್ರಧಾನ ಪೀಠದ ರಿಜಿಸ್ಟ್ರಾರ್ ಅವರಿಗೆ ಸಂತ್ರಸ್ತ ಯುವತಿಯನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ನಿರ್ದೇಶನ ನೀಡಿ, ವಿಚಾರಣೆಯನ್ನು ಮಧ್ಯಾಹ್ನಕ್ಕೆ ಮುಂದೂಡಿತು.

ಮಧ್ಯಾಹ್ನದ ಅವಧಿಯಲ್ಲಿ ಯುವತಿಯನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು.

'ನಾನು ಸುರಕ್ಷಿತವಾಗಿದ್ದೇನೆ. ನನಗೆ ಯಾವುದೇ ಒತ್ತಡ ಇಲ್ಲ. ವಿಚಾರಣೆ ಪ್ರಗತಿಯಲ್ಲಿದ್ದು, ಮುಗಿದ ನಂತರ ತಂದೆ, ತಾಯಿಯನ್ನು ಭೇಟಿ ಮಾಡುತ್ತೇನೆ' ಎಂದು ಯುವತಿ ನೀಡಿದ ಹೇಳಿಕೆಯನ್ನು ದಾಖಲಿಸಿಕೊಂಡ ವಿಭಾಗೀಯ ಪೀಠ ಅರ್ಜಿಯನ್ನು ಇತ್ಯರ್ಥಗೊಳಿಸಿತು.

ಮುಂಗಾರು ಸಮೀಪ:19 ಜಿಲ್ಲೆಗಳಲ್ಲಿ ಹೆಚ್ಚು ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯಕ್ಕೆ ಮುಂಗಾರು ಪ್ರವೇಶಿಸುವ ದಿನಗಣನೆ ಹಾಗೂ ಅರಬ್ಬಿ ಸಮುದ್ರದಲ್ಲಿ ಮೇಲ್ಮೈ ಸುಳಿಗಾಳಿ ತೀವ್ರಗೊಂಡಿರುವುದರಿಂದ ಜೂನ್ 1ರಿಂದ 3ರವರೆಗೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ವ್ಯಾಪಕ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಎಲ್ಲೆಲ್ಲಿ ಅಲರ್ಟ್?: ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಬೀದರ್, ಗದಗ, ಹಾವೇರಿ, ಕೊಪ್ಪಳ, ರಾಯಚೂರು, ವಿಜಯಪುರ, ಬಳ್ಳಾರಿ, ಬೆಂಗಳೂರು ನಗರ, ಬೆಂಗಳೂರುಗ್ರಾಮಾಂತರ, ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಕೋಲಾರ, ಶಿವಮೊಗ್ಗ ಜಿಲ್ಲೆಗಳಲ್ಲಿ ಜೂ.1ರಿಂದ 3ರವರೆಗೂ ಹೆಚ್ಚಿನ ಮಳೆಯಾಗುವ ಮುನ್ಸೂಚನೆ ಇರುವುದರಿಂದ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಸಿಡಿಲು ಬಡಿದು ಸಾವು

ಕಲಬುರ್ಗಿ: ಯಾದಗಿರಿ ಜಿಲ್ಲೆಯಲ್ಲಿ ಸೋಮವಾರ ಸಿಡಿಲು ಬಡಿದು ಹೊಲದಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ಸಾವನ್ನಪ್ಪಿದ್ದಾರೆ. ಕೆಂಭಾವಿ ಸಮೀಪದ ಯಾಳಗಿಯಲ್ಲಿ ಜಾಕೀರ್ ಮದ್ದರಿ (25) ಮತ್ತು ಸೈದಾಪುರ ಸಮೀಪದ ಕಣೇಕಲ್ ಗ್ರಾಮದಲ್ಲಿ ಶಿವರೆಡ್ಡಿ (35) ಎಂಬುವರು ಮೃತಪಟ್ಟಿದ್ದಾರೆ.

ಪ್ರಜಾವಾಣಿ DH DECCAN HERALD ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್–19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 26 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 29 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ–ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.

ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ 'ಡೆಕ್ಕನ್ ಹೆರಾಲ್ಡ್' ಹಾಗೂ 'ಪ್ರಜಾವಾಣಿ' ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
(Canara Bank, Cantonment Branch; A/C NO.0404101200385, IFSC CODE : CNRB0000404)

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.finc@printersmysore.co.in ಈ ಇ–ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ಕಮಲಮ್ಮ,** ಶಿವಕೃಪ, ಕುವೆಂಪು ರಸ್ತೆ, ರಾಘವೇಂದ್ರ ನಗರ, ತುಮಕೂರು	50,000
2	**ಕಿಶೋರ್ ಗೋವಿಂದೆ,** 906/1 ನಂದನ, 6ನೇ ಮುಖ್ಯರಸ್ತೆ, ಎಲ್‌ಐಸಿ ಕಾಲೊನಿ ಎದುರು, ನ್ಯೂ ತಿಪ್ಪಸಂದ್ರ, ಬೆಂಗಳೂರು	5,111
3	**ಚೇತನ್ ಪುರುಷೋತ್ತಮ,** 5ನೇ ಮುಖ್ಯರಸ್ತೆ, 1ನೇ ಅಡ್ಡ ರಸ್ತೆ, ಎಚ್‌ಎಎಲ್ 2ನೇ ಹಂತ, ಕೋಡಿಹಳ್ಳಿ ಲೇಔಟ್, ಬೆಂಗಳೂರು	5,001
4	**ಎನ್.ಪ್ರಕಾಶ್,** 'ಚಿಗುರು', ಗುರುನಗರ ಮೇರಿಹಿಲ್, ಕೊಂಚಡಿ, ಮಂಗಳೂರು	5,000
5	**ಮಾಲಾ ಎಸ್.,** #43, 6ನೇ ಅಡ್ಡ ರಸ್ತೆ, ಬಿಎಫ್‌ಡಬ್ಲ್ಯೂ ಲೇಔಟ್, ಲಗ್ಗೆರೆ, ಬೆಂಗಳೂರು	5,000
6	**ಕಿರಣ್ ಸೂರಿ,** 33, ಪ್ರತೀಕ್ಷ, 3ನೇ ಮುಖ್ಯರಸ್ತೆ, ಸಾಮ್ರಾಟ್ ಲೇಔಟ್, ಅರಕೆರೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು	5,000
7	**ಆರ್. ಕೃಷ್ಣಮೂರ್ತಿ,** ರಾಜಶ್ರೀ, 62/1. ಎಸ್. ಕರಿಯಪ್ಪ ರಸ್ತೆ, ಬಸವನಗುಡಿ, ಬೆಂಗಳೂರು	5,000
8	**ಎನ್.ಗುರುಪ್ರಕಾಶ್,** ನಂ.6, 1ನೇ ಮುಖ್ಯರಸ್ತೆ, ಮೊದಲನೇ ಅಡ್ಡರಸ್ತೆ, ರಾಘವೇಂದ್ರ ಲೇಔಟ್, ಅರಕೆರೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು	5,000
9	**ಚಲುವಾಂಬಾ ಎಸ್.,** 1299, 13ನೇ ಅಡ್ಡರಸ್ತೆ, 2ನೇ ಹಂತ, ಇಂದಿರಾನಗರ, ಬೆಂಗಳೂರು	5,000
10	**ಸೋಮನಾಥ,** s/o ನಾಗಪ್ಪ, 1–11–52/81, ಶ್ರೀ ಮಾರುತಿ ಕಾಲೋನಿ, ವಿದ್ಯಾಭಾರತಿ ಶಾಲೆಯ ಹತ್ತಿರ, ರಾಯಚೂರು	5,000
11	**ವೀರೇಶ್ ಗೋಕಾವಿ,** c/o ವಿಜಯ್, 12, ತಿರುಮಲ ಸ್ಟ್ರೀಟ್, 2ನೇ ಅಡ್ಡರಸ್ತೆ, ಕಗ್ಗದಾಸಪುರ ಮುಖ್ಯರಸ್ತೆ, ಮಲ್ಲೇಶಪಾಳ್ಯ, ಬೆಂಗಳೂರು	3,000
12	**ಆರ್.ವಿ.ಅಯ್ಯಂಗಾರ್,** 64/1, 2ನೇ ಅಡ್ಡರಸ್ತೆ, ಪವನ್ ಇಂಗ್ಲಿಷ್ ಶಾಲೆ ಎದುರು, ನಾಗಪ್ಪ ಬ್ಲಾಕ್, ಬೆಂಗಳೂರು	2,500
13	**ಕೆ.ಎಸ್. ಸುದರ್ಶನ,** 66, 3ನೇ ಅಡ್ಡರಸ್ತೆ, ಅನಿಕೇತನ ರಸ್ತೆ, ಕುವೆಂಪು ನಗರ, ಮೈಸೂರು	2,500
14	**ಲಕ್ಷ್ಮಣ್ ಜಿ.,** 2464, 2ನೇ ಮುಖ್ಯ ಪೊಲೀಸ್ ಠಾಣೆ ರಸ್ತೆ, ವಿಜಯನಗರ, 2ನೇ ಹಂತ, ಮೈಸೂರು	2,001
15	**ಮುಷ್ತಾಕ್ ಅಹ್ಮದ್,** ನಂ.11, 1ನೇ ಅಡ್ಡರಸ್ತೆ, ಮಾರಪ್ಪ ಗಾರ್ಡನ್, ಜೆ.ಸಿ.ನಗರ, ಬೆಂಗಳೂರು	1,500
16	**ಜಿ.ಮೃತ್ಯುಂಜಯ,** #7047, ಪ್ರೆಸ್ಟೀಜ್ ಬಾಗಮನೆ ಟೆಂಪಲ್ ಬೆಲ್ಸ್, ಜವರೇಗೌಡ ದೊಡ್ಡಿ, ರಾಜರಾಜೇಶ್ವರಿ ನಗರ, ಬೆಂಗಳೂರು	1,000
17	**ಡಾ.ಎ. ಗಾಯತ್ರಿ,** ಎನ್.ಆರ್. ಮೊಹಲ್ಲಾ, ಮೈಸೂರು	1,000
18	**ಸಿದ್ದಾರಾಂ ಗಂಗಪ್ಪ ಮಾಲಿ,** ಮೋಗನಇಟಗಾ ಗ್ರಾಮ, ಜೇವರ್ಗಿ ತಾಲ್ಲೂಕು, ಕಲಬುರ್ಗಿ ಜಿಲ್ಲೆ	1,000
19	**ಅನಂತಪದ್ಮನಾಭನ್,** ಸಿಬಿ–205, ಶ್ರೀರಾಮ್ ಸ್ಮೃತಿ, ಅಪಾರ್ಟ್‌ಮೆಂಟ್ ಅತ್ತಿಬೆಲೆ, ಸರ್ಜಾಪುರ ರಸ್ತೆ, ಆನೇಕಲ್ ತಾಲ್ಲೂಕು, ಬೆಂಗಳೂರು	1,000
20	**ನಿಂಗನಗೌಡ ಎಚ್. ದೇಸಾಯಿ,** ಟೀಚರ್ ಬಾಲಕಿಯರ ಸರ್ಕಾರಿ ಹೈಸ್ಕೂಲ್, ಕೆಂಭಾವಿ ತಾಲ್ಲೂಕು, ಶೋರಾಪುರ, ಯಾದಗಿರಿ	1,000
21	**ನಾಗೇಶ್ ಕಲ್ಯಾಣ್ ಶೆಟ್ಟಿ,** ಪ್ಲಾಟ್ ನಂ.111, ಕೃಷಿ ಕಾಲೊನಿ, 5ನೇ ಮುಖ್ಯರಸ್ತೆ, ಭಾಗ್ಯನಗರ, ಬೆಳಗಾವಿ	1,000
	ಒಟ್ಟು ಹಣ	1,12,613

ಪ್ರಜಾವಾಣಿ facebook LIVE fb.com/prajavani.net

ವಿದ್ಯಾರ್ಥಿಗಳ ಪ್ರಶ್ನೆ.. ತಜ್ಞರ ಉತ್ತರ!

ಹರೀಶ್ ಶೆಟ್ಟಿ ಬಂಡ್ಸಾಲೆ
ಪಿಎಚ್‌ಡಿ ಸ್ಕಾಲರ್ - ಐಐಎಂ ಅಹಮದಾಬಾದ್
05 ಜೂನ್ 2021, ಶನಿವಾರ ಸಂಜೆ 5 ರಿಂದ 6

ಸಮಾಜ ವಿಜ್ಞಾನ, ಸಮಾಜ ಕಾರ್ಯ, ಮ್ಯಾನೇಜ್‌ಮೆಂಟ್ ಮತ್ತು ವಾಣಿಜ್ಯ ಅಧ್ಯಯನ ಈ ವಿಭಾಗಗಳಲ್ಲಿ
ಸ್ನಾತಕೋತ್ತರ ಪದವಿ (MBA, MCom, MSW, MA): ಆಯ್ಕೆಗಳು, ಪ್ರವೇಶ ಪರೀಕ್ಷೆಗಳ ವಿವರಗಳು, ತಯಾರಿ ವಿಧಾನಗಳು
ಪಿಎಚ್‌ಡಿ: ಪ್ರವೇಶಾತಿ ತಯಾರಿ, ಆಯ್ಕೆ ಮತ್ತು ಅವಕಾಶಗಳು
ಈ ವಿಷಯಗಳ ಮಾಹಿತಿ ನೀಡಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು ನೋಂದಣಿ ಸಂದರ್ಭದಲ್ಲೇ ಕಳುಹಿಸಿ, FB ಲೈವ್ ಮೂಲಕ ಉತ್ತರ ಪಡೆದುಕೊಳ್ಳಿ.
ನೋಂದಣಿ ಕಡ್ಡಾಯ
ಅಂತಿಮ ದಿನಾಂಕ ಮಂಗಳವಾರ 01 ಜೂನ್ 2021
https://bit.ly/3yK3kVD
ನೋಂದಣಿ ಕಡ್ಡಾಯವಾಗಿದ್ದು, ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

ನಿಧನ ವಾರ್ತೆ

ಕಮಲನಾಥ್

ದೊಡ್ಡಬಳ್ಳಾಪುರ: ನಗರದ ಪಾಲನಜೋಗಿಹಳ್ಳಿ ನಿವಾಸಿ ಎನ್.ಎ.ಕಮಲನಾಥ್ (75) ಭಾನುವಾರ ರಾತ್ರಿ ಕೋವಿಡ್‌ನಿಂದಾಗಿ ನಿಧನರಾದರು.

ಕೆಲ ದಿನಗಳಿಂದ ಅವರು ಕೊರೊನಾ ಸೋಂಕಿನಿಂದ ಬಳಲುತ್ತಿದ್ದರು. ಮೃತರಿಗೆ ಪತ್ನಿ ಹಾಗೂ 'ಪ್ರಜಾವಾಣಿ' ಬಳ್ಳಾರಿ ಜಿಲ್ಲೆಯ ಮುಖ್ಯ ವರದಿಗಾರ ಕೆ.ನರಸಿಂಹಮೂರ್ತಿ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಮೃತರ ಅಂತ್ಯಕ್ರಿಯೆ ನಗರದ ಮುಕ್ತಿಧಾಮದಲ್ಲಿ ಸೋಮವಾರ ನಡೆಯಿತು.

ಹೂವಪ್ಪ

ಚಿಕ್ಕಮಗಳೂರು: ತಾಲ್ಲೂಕಿನ ಕೂದುವಳ್ಳಿ ಗ್ರಾಮದವರಾದ ವಕೀಲ ಮತ್ತು ಹೋರಾಟಗಾರ ಕೆ.ಯು.ಹೂವಪ್ಪ (50) ಸೋಮವಾರ ನಿಧನರಾದರು.

ಅವರಿಗೆ ಪತ್ನಿ ಮತ್ತು ಪುತ್ರಿ ಇದ್ದಾರೆ. ಜಾತಿ ವಿನಾಶ ವೇದಿಕೆ, ಕೋಮು ಸೌಹಾರ್ದ ವೇದಿಕೆ ಮೊದಲಾದವುಗಳಲ್ಲಿ ತೊಡಗಿಸಿಕೊಂಡಿದ್ದರು.

'ಹೂವಪ್ಪ ಅವರು ನಮ್ಮ ಒಡನಾಡಿಯಾಗಿದ್ದರು, ಹಲವಾರು ಹೋರಾಟಗಳಲ್ಲಿ ಪಾಲ್ಗೊಂಡಿದ್ದರು ಎಂದು ಹೋರಾಟಗಾರ ಕಲ್ಕುಳಿ ವಿಠ್ಠಲ ಹೆಗ್ಡೆ ತಿಳಿಸಿದರು. ಅಂತ್ಯಕ್ರಿಯೆ ರಾತ್ರಿ ನೆರವೇರಿತು ಎಂದು ಕುಟುಂಬ ತಿಳಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಭವಿಷ್ಯ

Astrology

★ವಶೀಕರಣ ಸ್ಪೆಷಲಿಸ್ಟ್ ಗುರೂಜಿ. 9663631199★ ಓಂ ಶ್ರೀ ದುರ್ಗಾದೇವಿ ಅನುಗ್ರಹ ಜ್ಯೋತಿಷ್ಯಾಲಯ ಕಟೀಲು ದುರ್ಗಾಪರಮೇಶ್ವರಿ ಅಮ್ಮನವರ ಆರಾಧಕರು. ಪಂಡಿತ್ ಮೋಹನ್ ದಾಸ್ ಶರ್ಮ ಗುರೂಜಿ (ಉಡುಪಿ) ನಿಮ್ಮ ಕುಟುಂಬದ ಸಮಸ್ಯೆಗಳಾದ ನಿಮ್ಮ ಮಕ್ಕಳ ವಿದ್ಯಾಭ್ಯಾಸದಲ್ಲಿ ಬುದ್ಧಿ ಜ್ಞಾನಶಕ್ತಿ ಆರೋಗ್ಯ ಸಮಸ್ಯೆ ತೊಂದರೆ ಇದ್ದರೆ, ನಿಮ್ಮ ಗಂಡ ಪರಸ್ತ್ರೀಯಿಂದ ನಿಮ್ಮ ಸಂಸಾರದಲ್ಲಿತೊಂದರೆ, ನಿಮ್ಮ ಅತ್ತೆ, ಸೊಸೆ, ನಾದಿನಿಯಿಂದ ನಿಮ್ಮ ಸಂಸಾರದಲ್ಲಿ ತೊಂದರೆ ಆಗುತ್ತಿದೆಯೇ? ಪ್ರೀತಿಯಲ್ಲಿ ನಂಬಿ ಮೋಸ ಹೋಗಿದ್ದೀರಾ, ನೀವು ಇಷ್ಟಪಟ್ಟಂತಹ ಸ್ತ್ರೀ/ಪುರುಷ ನಿಮ್ಮಂತೆ ವಶೀಕರಣ ಆಗಲು ನಿಮ್ಮ ಜನ್ಮಲಗ್ನದಲ್ಲಿ ಮದುವೆ ವಿಚಾರದಲ್ಲಿ ಕಂಕಣ ತೊಂದರೆ ಆಗುತ್ತಿದ್ದರೆ,ಗಂಡಹೆಂಡತಿ ಕಿರಿಕಿರಿ ಇಂದ ಡೈವರ್ಸ್ ಪ್ರಾಬ್ಲಮ್ ಇರುವುದರಿಂದ ನಿಮ್ಮ ಸಂಸಾರ ಹಾಳಾಗುತ್ತಿದೆ, ಅಣ್ಣ- ತಮ್ಮಂದಿರ ಅಸ್ತಿಯಲ್ಲಿ ತೊಂದರೆ, ಶತ್ರುಗಳಿಂದ ನಿಮ್ಮ ಕುಟುಂಬಕ್ಕೆ ತೊಂದರೆ,ನಿಮ್ಮ ಕುಟುಂಬದಲ್ಲಿ ಮಾಟ ಮಂತ್ರ ಪ್ರಯೋಗದಿಂದ ನಿಮ್ಮ ಕುಟುಂಬ ಸರ್ವನಾಶ ಆಗುತ್ತಿದೆ, ನಿಮ್ಮ ಎಲ್ಲಾ ಕಠಿಣ ಸಮಸ್ಯೆಗಳಿಗೂ ತಾಯಿ ಕೇರಳ ಭಗವತಿ ದೇವಿ ಮತ್ತು ಕಟೀಲು ದುರ್ಗಾಪರಮೇಶ್ವರಿದೇವಿ ಅಮ್ಮನವರ ಪೂಜಾ ಶಕ್ತಿಯಿಂದ ಅಮಾವಾಸ್ಯೆ ಹುಣ್ಣಿಮೆ ಸೂರ್ಯಚಂದ್ರ ಗ್ರಹಣದಿಂದ ಜಪ ಸಿದ್ದಿಗಳಿಂದ ಕೇವಲ ೧ದಿನದಲ್ಲಿ ೧೦೦% ಶಾಶ್ವತ ಪರಿಹಾರ ಮಾಡುತ್ತಾರೆ. ಮಲ್ಲೇಶ್ವರಂ, ಬೆಂಗಳೂರು

ಉಚಿತ ಭವಿಷ್ಯ ಶ್ರೀ ಕೇರಳ ದುರ್ಗಾಂಬಿಕಾದೇವಿ ಆರಾಧಕರು ಪ್ರಧಾನ ತಾಂತ್ರಿಕರು ಮೋಡಿ ಮಾಂತ್ರಿಕರು. ದೈವಶಕ್ತಿ ಜ್ಯೋತಿಷ್ಯರು ಪಂಡಿತ್ ಗುರೂಜಿ ವಶೀಕರಣ ಸ್ಪೆಷಲಿಸ್ಟ್ ನಿಮ್ಮಾವುದೇ ಸುಖದುಃಖ ಮನನೊಂದ ಯಾವುದೇ ಗುಪ್ತಸಮಸ್ಯೆಗಳಿಗೂ 1ದಿನದಲ್ಲಿ ಪರಿಹಾರ.9743010743

★||ಸ್ತ್ರೀವಶೀಕರಣ ಸ್ಪೆಷಲಿಸ್ಟ್||★ ಕೇರಳ ಅಘೋರಿ_ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮ ಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದುನಿಜ ನಂಬಿ_ಕರೆಮಾಡಿ. ಪಂಡಿತ್.ರಾವ್. 9901724082

★||ಶ್ರೀಶಾಕಂಬರಿದೇವಿ||★ ಜ್ಯೋತಿಷ್ಯರು ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ ಇನ್ನೂಯಾವುದೇ ಸಮಸ್ಯೆಗಳಿಗೆ 11 ನಿಮಿಷದಲ್ಲಿ ಶಾಶ್ವತ ಪರಿಹಾರ. ಡಾ||.ವಿವೇಕಾನಂದಜೋಶಿ. 9008968867

★ಅಂಭಭವಾನಿ ಜ್ಯೋತಿಷ್ಯಾಲಯ★ ಕೊಳ್ಳೆಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್ ದೇವಿಪ್ರಸಾದ್ (ಉಚಿತ ಭವಿಷ್ಯ ಖಚಿತ ಪರಿಹಾರ)ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನದಲ್ಲಿ ಪರಿಹಾರ. 9886755306

★ನುಡಿದಂತೆ ನಡೆಯುವುದು★ "ವಂಶಪಾರಂಪರಿಕ ಜ್ಯೋತಿಷ್ಯರು," ಆರೋಗ್ಯ, ಸಂತಾನ. ಸ್ತ್ರೀಪುರುಷ ವಶೀಕರಣ, ಗಂಡಹೆಂಡತಿ ಕಲಹ, ನಾಗಸಾಧುಗಳ ಭಾನಮತಿ ಪ್ರಯೋಗದಿಂದ 100%ಪರಿಹಾರ. 7829724990

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

DH ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP TO BOOK YOUR CLASSIFIEDS ADS ONLINE
condition apply*
5 Easy steps to book your ads
1 LOG INTO WWW.DHCLASSIFIEDS.COM
2 CHOOSE THE CATEGORY
3 CHOOSE THE AD DATES
4 COMPOSE THE MATTER
5 CONFIRM AND PAY
REAL ESTATE JOB NOTICE NAME CHANGE ANY OTHER CATEGORY
WWW.DHCLASSIFIEDS.COM
9880856233
9886213331
E-mail: dhclassified@deccanherald.co.in

ಉದ್ಯೋಗಾವಕಾಶ

Part-Time Jobs

ಲಾಕ್-ಡೌನ್ ಸಮಯದಲ್ಲಿ ಸುವರ್ಣಾವಕಾಶ ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ,ಗಳಿಸಿ 15,000-25,000/-. ಕೊರಿಯರ್ ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ.9108059956, 9901929956

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Tanveer : 9886213331
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ scan the QR code ಸ್ಕ್ಯಾನ್ ಮಾಡಿ ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಕಾಮಗಾರಿ ಸ್ಥಗಿತಗೊಳಿಸಬೇಕಾಗಿಲ್ಲ: ದೆಹಲಿ ಹೈಕೋರ್ಟ್

‘ಸೆಂಟ್ರಲ್ ವಿಸ್ತಾ ಅಗತ್ಯ ಯೋಜನೆ’

ನವದೆಹಲಿ (ಪಿಟಿಐ): ‘ಸೆಂಟ್ರಲ್ ವಿಸ್ತಾ’ ಯೋಜನೆಯು ಪ್ರಮುಖವಾದದ್ದು ಮತ್ತು ಅಗತ್ಯವಾದದ್ದು ಎಂದು ದೆಹಲಿ ಹೈಕೋರ್ಟ್ ಸೋಮವಾರ ಹೇಳಿದೆ. ಈ ಯೋಜನೆಯ ಕಾಮಗಾರಿಯನ್ನು ಸ್ಥಗಿತಗೊಳಿಸಬೇಕಾಗಿಲ್ಲ ಎಂದಿದೆ.

ಕೊರೊನಾ ಕಾರಣದಿಂದ ಈ ಯೋಜನೆಯ ಕಾಮಗಾರಿಯನ್ನು ಸ್ಥಗಿತಗೊಳಿಸಬೇಕೆಂದು ಒತ್ತಾಯಿಸಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯು ಬೇರೆ ಉದ್ದೇಶದಿಂದ ‘ಪ್ರೇರಿತವಾದದ್ದು’ ಎಂದು ಅಭಿಪ್ರಾಯಪಟ್ಟಿರುವ ಕೋರ್ಟ್, ಅರ್ಜಿದಾರರಿಗೆ ₹1 ಲಕ್ಷ ದಂಡ ವಿಧಿಸಿದೆ.

‘ಯೋಜನೆಯ ಕಾನೂನುಬದ್ಧತೆಯನ್ನು ಸುಪ್ರೀಂ ಕೋರ್ಟ್ ಈಗಾಗಲೇ ಎತ್ತಿಹಿಡಿದಿದೆ. ದೆಹಲಿಯ ವಿಪತ್ತು ನಿರ್ವಹಣಾ ಪ್ರಾಧಿಕಾರವೂ ಈ ಯೋಜನೆಯ ಕಾಮಗಾರಿ ಮುಂದುವರಿಸಲು ಅನುಮತಿ ನೀಡಿದೆ. ಕಾರ್ಮಿಕರು ಈಗಾಗಲೇ ಸ್ಥಳದಲ್ಲಿದ್ದಾರೆ. ಆದ್ದರಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಲು ಯಾವುದೇ ಕಾರಣ ಕಾಣಿಸುತ್ತಿಲ್ಲ’ ಎಂದು ಮುಖ್ಯ ನ್ಯಾಯಮೂರ್ತಿ ಡಿ.ಎನ್. ಪಟೇಲ್ ಹಾಗೂ ನ್ಯಾಯಮೂರ್ತಿ ಜ್ಯೋತಿ ಸಿಂಗ್ ಅವರ ಪೀಠ ಹೇಳಿದೆ.

‘ಶಾಪೋರ್‌ಜಿ ಪಲ್ಲೊಂಜಿ ಸಂಸ್ಥೆಗೆ ನೀಡಿರುವ ನಿರ್ಮಾಣ ಗುತ್ತಿಗೆ ಒಪ್ಪಂದದ ಪ್ರಕಾರ 2021ರ ನವೆಂಬರ್ ವೇಳೆಗೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿದೆ. ಆದ್ದರಿಂದ ಈ ಕಾಮಗಾರಿಯನ್ನು ಮುಂದುವರಿಸಲೇಬೇಕು’ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

ಈ ಯೋನನೆಯ ಕಾಮಗಾರಿಯನ್ನು ಸ್ಥಗಿತಗೊಳಿಸಬೇಕು ಎಂದು ಒತ್ತಾಯಿಸಿ ಭಾಷಾಂತರಕಾರ ಅನ್ಯ ಮಲ್ಹೋತ್ರಾ ಹಾಗೂ ಇತಿಹಾಸಕಾರ ಹಾಗೂ ಸಾಕ್ಷ್ಯಚಿತ್ರ ನಿರ್ಮಾಪಕ ಸೊಹೇಲ್ ಹಾಶ್ಮಿ ಅವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಈ ಯೋಜನೆಯು ತುರ್ತಾಗಿ ಆಗಬೇಕಾದ್ದಲ್ಲ, ಆದ್ದರಿಂದ ಸದ್ಯಕ್ಕೆ ಅದನ್ನು ತಡೆಹಿಡಿಯಬೇಕು ಎಂದು ಅರ್ಜಿದಾರರು ವಾದಿಸಿದ್ದರು.

ಒಟ್ಟು ₹23,000 ಕೋಟಿ ಮೊತ್ತದ ಈ ಯೋಜನೆಯನ್ನು 2024ರ ವೇಳೆಗೆ ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿತ್ತು. ಕೊರೊನಾ ಕಾರಣದಿಂದ ಗುರಿಯನ್ನು ಎರಡು ವರ್ಷ (2026ರ ವೇಳೆಗೆ) ಮುಂದೂಡಲಾಗಿದೆ.

ಸುಳ್ಳು ಪ್ರಚಾರಾಂದೋಲನ: ಹರ್‌ದೀಪ್‌ಸಿಂಗ್

‘ಸೆಂಟ್ರಲ್ ವಿಸ್ತಾ ಯೋಜನೆಯ ಬಗ್ಗೆ ವಿರೋಧ ಪಕ್ಷಗಳು ಸುಳ್ಳು ಪ್ರಚಾರಾಂದೋಲನ ನಡೆಸುತ್ತಿವೆ. ಪ್ರಧಾನಿಗೆ ಹೊಸ ನಿವಾಸ ನಿರ್ಮಾಣಕ್ಕೆ ಯಾವ ಯೋಜನೆಯನ್ನೂ ರೂಪಿಸಿಲ್ಲ. ಪ್ರಸಕ್ತ ₹1,300 ಕೋಟಿ ವೆಚ್ಚದಲ್ಲಿ ಸಂಸತ್ ಕಟ್ಟಡ ಹಾಗೂ ಸೆಂಟ್ರಲ್ ವಿಸ್ತಾ ಸಂಕೀರ್ಣವನ್ನು ಮಾತ್ರ ನಿರ್ಮಿಸಲಾಗುತ್ತಿದೆ’ ಎಂದು ಕೇಂದ್ರದ ವಸತಿ ಹಾಗೂ ನಗರ ವ್ಯವಹಾರಗಳ ಸಚಿವ ಹರ್‌ದೀಪ್‌ಸಿಂಗ್ ಪುರಿ ಸೋಮವಾರ ಹೇಳಿದ್ದಾರೆ.

‘ಯಾವ ಪಾರಂಪರಿಕ ಕಟ್ಟಡವನ್ನೂ ಮುಟ್ಟುವುದಿಲ್ಲ. ಇದು ಅನಗತ್ಯ ಯೋಜನೆಯೂ ಅಲ್ಲ. ಬದಲಿಗೆ ಅತ್ಯಗತ್ಯವಾಗಿ ಆಗಬೇಕಾಗಿರುವ ಯೋಜನೆ’ ಎಂದು ಮಾಧ್ಯಮಗೋಷ್ಠಿಯಲ್ಲಿ ಅವರು ಹೇಳಿದರು.

ಹೊಸ ಸಂಸತ್ ಭವನ ನಿರ್ಮಾಣದ ಅಗತ್ಯವನ್ನು ಕುರಿತು ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ ಅವರು ಹಿಂದೆ ಬರೆದಿದ್ದ ಲೇಖನ ಹಾಗೂ ಮಾಜಿ ಸ್ಪೀಕರ್ ಮೀರಾ ಕುಮಾರ್ ಅವರ ಕಚೇರಿಯು ವಸತಿ ಸಚಿವರಿಗೆ ಬರೆದಿದ್ದ ಪತ್ರವನ್ನೂ ಅವರು ಮಾಧ್ಯಮಪ್ರತಿನಿಧಿಗಳ ಮುಂದಿಟ್ಟರು. ‘ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡೇ ಹೊಸ ಕಟ್ಟಡ ನಿರ್ಮಿಸುವ ಯೋಜನೆ ರೂಪಿಸಲಾಗಿತ್ತು’ ಎಂದರು.

ಲಕ್ಷದ್ವೀಪದ ಆಡಳಿತಾಧಿಕಾರಿ ವಾಪಸ್ ಕರೆಸಿಕೊಳ್ಳಿ: ಕೇರಳ ಸಿ.ಎಂ

ತಿರುವನಂತರಪುಂ (ಪಿಟಿಐ): ಲಕ್ಷದ್ವೀಪ ಸಮೂಹದಲ್ಲಿ ಅಲ್ಲಿನ ನಿವಾಸಿಗಳ ಜೀವನ ಶೈಲಿ ಮತ್ತು ಪರಿಸರ ವ್ಯವಸ್ಥೆಯನ್ನು ನಾಶಗೊಳಿಸುವಂತಹ ಕ್ರಮಗಳನ್ನು ಕೈಗೊಂಡಿರುವ ಆಡಳಿತಾಧಿಕಾರಿ ಪ್ರಫುಲ್ ಖೋಡಾ ಪಟೇಲ್ ಅವರನ್ನು ವಾಪಸ್ ಕರೆಸಿಕೊಳ್ಳಬೇಕೆಂದು ಕೋರಿ ಕೇರಳ ವಿಧಾನಸಭೆಯಲ್ಲಿ ಸೋಮವಾರ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮಂಡಿಸಿದ್ದ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಲಕ್ಷದ್ವೀಪದ ಜನರೊಂದಿಗೆ ಒಗ್ಗಟ್ಟು ಪ್ರದರ್ಶಿಸುವ ನಿಟ್ಟಿನಲ್ಲಿ ಸೋಮವಾರ ಬೆಳಿಗ್ಗೆ ಪಿಣರಾಯಿ ವಿಜಯನ್ ಅವರು ವಿಧಾನಸಭೆಯಲ್ಲಿ ಈ ನಿರ್ಣಯವನ್ನು ಮಂಡಿಸಿದ್ದರು.

ಇತ್ತೀಚೆಗೆ ಲಕ್ಷದ್ವೀಪದ ಆಡಳಿತಾಧಿಕಾರಿ ಕೈಗೊಂಡಿರುವ ಕ್ರಮಗಳು ದ್ವೀಪ ಸಮೂಹದಲ್ಲಿನ ಸ್ಥಳೀಯ ಜೀವನಶೈಲಿ ಮತ್ತು ಪರಿಸರ ವ್ಯವಸ್ಥೆಯನ್ನು ನಾಶಮಾಡುವಂತದ್ದು. ಈ ಹಿನ್ನೆಲೆಯಲ್ಲಿ ಆಡಳಿತಾಧಿಕಾರಿ ಪ್ರಫುಲ್ ಪಟೇಲ್ ಅವರನ್ನು ವಾಪಸ್ ಕರೆಸಿಕೊಂಡು, ದ್ವೀಪವಾಸಿಗಳ ಜೀವನ ಮತ್ತು ಜೀವನವನ್ನು ರಕ್ಷಿಸಲು ಕೇಂದ್ರ ಮಧ್ಯಪ್ರವೇಶಿಸುವಂತೆ ನಿರ್ಣಯದಲ್ಲಿ ಕೋರಲಾಗಿದೆ.

ಈಗ ಕೈಗೊಂಡಿರುವ ಕ್ರಮಗಳು ದ್ವೀಪ ಸಮೂಹದಲ್ಲಿ ಹಿಂಬಾಗಿಲಿನ ಮೂಲಕ ‘ತನ್ನ ಕೇಸರಿ ಕಾರ್ಯಸೂಚಿ’ಯನ್ನು ಜಾರಿಗೆ ತರುವ ಪ್ರಯತ್ನವಾಗಿದೆ. ಈ ಮೂಲಕ ಸ್ಥಳೀಯ ಜನರ ಜೀವನದ ಹಕ್ಕನ್ನು ನಿಯಂತ್ರಿಸಲಾಗುತ್ತಿದೆ. ಈ ಕಾರ್ಯಸೂಚಿಯ ಒಂದು ಉದಾಹರಣೆಯಾಗಿ ನಾವು ಅಲ್ಲಿ ತೆಂಗಿನ ಮರಗಳನ್ನು ಕೇಸರಿ ಬಣ್ಣದಿಂದ ಚಿತ್ರಿಸಿರುವುದನ್ನು ಕಾಣಬಹುದು. ಇದನ್ನು ನಾವು ವಿರೋಧಿಸುತ್ತೇವೆ ಎಂದು ನಿರ್ಣಯದಲ್ಲಿ ಉಲ್ಲೇಖಿಸಲಾಗಿದೆ.

ಇದೇ ವೇಳೆ, ಮುಖ್ಯಮಂತ್ರಿ ಪಿಣರಾಯಿ ವಿಜಯನ್, ‘ಲಕ್ಷದ್ವೀಪದಲ್ಲಿ ಕೇಸರಿ ಕಾರ್ಯಸೂಚಿ ಮತ್ತು ಸಾಂಸ್ಥಿಕ ಹಿತಾಸಕ್ತಿಗಳನ್ನು ಹೇರಲು ಮತ್ತು ಜಾರಿಗೆ ತರಲು ಪ್ರಯತ್ನ ನಡೆಯುತ್ತಿದೆ’ ಎಂದು ಆರೋಪಿಸಿದರು. ಕೇಂದ್ರ ಸರ್ಕಾರ ತಕ್ಷಣವೇ ಈ ವಿಷಯದಲ್ಲಿ ಮಧ್ಯೆ ಪ್ರವೇಶಿಸಬೇಕು. ಲಕ್ಷದ್ವೀಪ ಜನರ ಹಿತಾಸಕ್ತಿ ಕಾಪಾಡುವುದು ಕೇಂದ್ರ ಸರ್ಕಾರದ ಜವಾಬ್ದಾರಿ’ ಎಂದು ಒತ್ತಾಯಿಸಿದರು.

ಕೇರಳ ಮತ್ತು ಲಕ್ಷದ್ವೀಪಗಳ ನಡುವಿನ ಐತಿಹಾಸಿಕ ಮತ್ತು ಸಾಂಸ್ಕೃತಿಕ ಬಾಂಧವ್ಯವನ್ನು ನೆನಪಿಸುವ ಮತ್ತು ಅಲ್ಲಿನ ನೈಸರ್ಗಿಕ ಪ್ರಜಾಪ್ರಭುತ್ವವನ್ನು ನಾಶಮಾಡಲು ಯತ್ನಿಸುತ್ತಿದೆ ಎಂದು ಕೇರಳ ಸರ್ಕಾರ ಕೇಂದ್ರವನ್ನು ಟೀಕಿಸಿದೆ.

ಕಾನೂನು ನೆರವು –ಸಂಸದ (ನವದೆಹಲಿ): ಲಕ್ಷದ್ವೀಪದ ಆಡಳಿತಾಧಿಕಾರಿಯು ಕಳೆದ ಐದು ತಿಂಗಳಲ್ಲಿ 15–20 ದಿನವಷ್ಟೇ ಅಲ್ಲಿಗೆ ಭೇಟಿ ನೀಡಿದ್ದು, ಸ್ಥಳೀಯ ಪರಿಸರ ಮತ್ತು ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಯಾವುದೇ ರೀತಿಯಲ್ಲಿ ಯತ್ನಿಸಿಲ್ಲ ಎಂದು ಲಕ್ಷದ್ವೀಪದ ಸಂಸದ ಮೊಹಮ್ಮದ್ ಫೈಜಲ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ದ್ವೀಪಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ತರಲು ಉದ್ದೇಶಿಸಿರುವ ವಿವಾದಿತ ಕಾಯ್ದೆ ಜಾರಿ ವಿರುದ್ಧ ಕಾನೂನು ನೆರವು ಪಡೆಯುವ ಚಿಂತನೆಯೂ ಇದೆ ಎಂದು ಎಂದು ಅವರು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಗಂಗಾನದಿಯಲ್ಲಿ ತೇಲಿ ಬಂದವು 12ಕ್ಕೂ ಹೆಚ್ಚು ಶವಗಳು

ಫತೇಪುರ (ಪಿಟಿಐ): ಉತ್ತರಪ್ರದೇಶದ ಉನ್ನಾವ್ ಮತ್ತು ಫತೇಪುರ ಜಿಲ್ಲೆಯ ವ್ಯಾಪ್ತಿಯಲ್ಲಿ ಗಂಗಾನದಿಯಲ್ಲಿ ಮತ್ತೆ 12ಕ್ಕೂ ಹೆಚ್ಚು ಶವಗಳು ತೇಲಿಬಂದಿವೆ.

ಉನ್ನಾವ್ ಜಿಲ್ಲೆಯ ಬಕ್ಸರ್ ಘಾಟ್ ಸಮೀಪ ನದಿಯಲ್ಲಿ ಈ ಶವಗಳು ಕಂಡುಬಂದಿವೆ. ಇವು ಕೋವಿಡ್ ಪೀಡಿತರ ಶವಗಳು ಎಂದು ಶಂಕಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದರು.

ಸ್ಥಳೀಯರು ಈ ಶವಗಳನ್ನು ನಾಲ್ಕು–ಐದು ಅಡಿ ಆಳದಲ್ಲಿ ಹೂತಿದ್ದರು. ಮಳೆಯಿಂದಾಗಿ ನದಿಯಲ್ಲಿ ನೀರಿನ ಹರಿವು ಹೆಚ್ಚಿದಂತೆ ಶವಗಳು ತೇಲಿಬಂದಿವೆ ಎಂದು ಉನ್ನಾವ್‌ನ ಸ್ಥಳೀಯರೊಬ್ಬರು ತಿಳಿಸಿದರು.

‘ಶವಗಳು ತೇಲುತ್ತಿರುವ ಮಾಹಿತಿ ತಿಳಿದು ಶೋಧ ಆರಂಭಿಸಿದಾಗ, ಆರು ಶವಗಳು ಸಿಕ್ಕಿವೆ. ಇವು ಗುರುತಿಸಾಗದಷ್ಟು ಕೊಳೆತಿವೆ’ ಎಂದು ಫತೇಪುರ ಸದರ್‌ನ ಉಪವಿಭಾಗಾಧಿಕಾರಿ ಪ್ರಮೋದ್ ಜಾ ಹೇಳಿದರು.

ಈ ತಿಂಗಳು ಬಲಿಯಾದ ನಾರಾಹಿ ಪ್ರದೇಶದ ಉಜಿಯಾರ್, ಕುಲ್ಡಿಯಾ, ಭರೌಲಿ ಘಾಟ್‌ಗಳ ವ್ಯಾಪ್ತಿಯಲ್ಲಿ ಒಟ್ಟು 52 ಶವಗಳು ತೇಲಿಬಂದಿದ್ದವು.

ಪುಲ್ವಾಮದಲ್ಲಿ ಐಇಡಿ ನಿಷ್ಕ್ರಿಯ: ತಪ್ಪಿದ ಅನಾಹುತ

ಶ್ರೀನಗರ (ಪಿಟಿಐ): ‘ಜಮ್ಮು–ಕಾಶ್ಮೀರದ ಪುಲ್ವಾಮ ಜಿಲ್ಲೆಯಲ್ಲಿ ಸೋಮವಾರ ಸುಧಾರಿತ ಸ್ಫೋಟಕ ಸಾಧನವೊಂದು (ಐಇಡಿ) ಪತ್ತೆಯಾಗಿದ್ದು, ಅದನ್ನು ಸೂಕ್ತ ಸಮಯದಲ್ಲಿ ನಿಷ್ಕ್ರಿಯಗೊಳಿಸುವ ಮೂಲಕ ಭಾರಿ ಅನಾಹುತವನ್ನು ತಪ್ಪಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ಅವಂತಿಪುರ ಪೊಲೀಸ್ ಠಾಣಾ ವ್ಯಾಪ್ತಿಯ ಪಂಜಗಂನ ರೈಲ್ವೆ ಲಿಂಕ್ ರೋಡ್‌ನಲ್ಲಿ ಭದ್ರತಾ ಪಡೆಗೆ ಐಇಡಿ ಸಿಕ್ಕಿದೆ. ಇದನ್ನು ಬಾಂಬ್ ನಿಷ್ಕ್ರಿಯ ದಳದ ಸಹಾಯದಿಂದ ನಾಶಪಡಿಸಲಾಗಿದೆ. ಈ ವೇಳೆ ಯಾವುದೇ ಹಾನಿ ಸಂಭವಿಸಿಲ್ಲ’ ಎಂದು ಅವರು ಹೇಳಿದರು.

ದಾಂತೇವಾಡದಲ್ಲಿ ಎನ್‌ಕೌಂಟರ್, ಮಹಿಳಾ ನಕ್ಸಲ್ ಸಾವು

ದಾಂತೇವಾಡ (ಪಿಟಿಐ): ‘ಛತ್ತೀಸಗಡದ ದಾಂತೇವಾಡ ಜಿಲ್ಲೆಯಲ್ಲಿ ಸೋಮವಾರ ನಡೆದ ಎನ್‌ಕೌಂಟರ್‌ನಲ್ಲಿ ಒಬ್ಬ ಮಹಿಳಾ ನಕ್ಸಲ್ ಮೃತಪಟ್ಟಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

‘ಗೀದಂ ಪೊಲೀಸ್ ಠಾಣಾ ವ್ಯಾಪ್ತಿಯ ಗುಮಾಲ್ನರ್ ಗ್ರಾಮದ ಬಳಿ ಬೆಳಿಗ್ಗೆ 6.30ರ ಸುಮಾರಿಗೆ ಜಿಲ್ಲಾ ಪೊಲೀಸ್ ಮೀಸಲು ಪಡೆ(ಡಿಆರ್‌ಜಿ) ಮತ್ತು ನಕ್ಸಲರ ನಡುವೆ ಗುಂಡಿನ ಚಕಮಕಿ ನಡೆದಿದೆ’ ಎಂದು ಪೊಲೀಸ್ ವರಿಷ್ಠಾಧಿಕಾರಿ ಅಭಿಷೇಕ್ ಪಲ್ಲವ ಮಾಹಿತಿ ನೀಡಿದರು.

‘ಈ ವೇಳೆ ಮಹಿಳಾ ನಕ್ಸಲರೊಬ್ಬರು ಮೃತಪಟ್ಟಿದ್ದು, ಅವರನ್ನು ವೈಕೋ ಪೆಕ್ಕೊ ಎಂದು ಗುರುತಿಸಲಾಗಿದೆ. ಇನ್ನುಳಿದ ನಕ್ಸಲರು ಅಲ್ಲಿಂದ ಪರಾರಿಯಾಗಿದ್ದಾರೆ. ಘಟನಾ ಸ್ಥಳದಿಂದ ಸುಧಾರಿತ ಸ್ಫೋಟಕ ಸಾಮಗ್ರಿಗಳು (ಐಇಡಿ), ಔಷಧಿಗಳು, ದಿನ ಬಳಕೆಯ ವಸ್ತುಗಳನ್ನು ವಶಕ್ಕೆ ಪಡೆಯಲಾಗಿವೆ’ ಎಂದು ಅವರು ಹೇಳಿದರು.

ವೈಕೋ ಪೆಕ್ಕೊ, ಬಿಜಾಪುರ ಜಿಲ್ಲೆಯ ಬೈರಂಗಢ ಪ್ರದೇಶದಲ್ಲಿ ಸಕ್ರಿಯವಾಗಿರುವ ಪೀಪಲ್ಸ್ ಲಿಬರೇಷನ್ ಆರ್ಮಿಗೆ (ಪಿಎಲ್‌ಜಿಎ) ಸೇರಿದವರು.

ಮಾವೋವಾದಿ ಹತ್ಯೆ: ಜಾರ್ಖಂಡ್‌ನ ಗುಮ್ಲಾ ಜಿಲ್ಲೆಯಲ್ಲಿ ಸೋಮವಾರ ನಡೆದ ಎನ್‌ಕೌಂಟರ್‌ನಲ್ಲಿ ಮಾವೋವಾದಿಯೊಬ್ಬ ಹತನಾಗಿದ್ದಾನೆ, ಆತನ ಗುರುತು ಇನ್ನೂ ಪತ್ತೆಯಾಗಿಲ್ಲ ಎಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಆರ್.ಕೆ.ಮಲಿಕ್ ತಿಳಿಸಿದ್ದಾರೆ.

ಕೆಲಸದಲ್ಲಿ ಮಗ್ನ

ದೆಹಲಿಯಲ್ಲಿ ಕೋವಿಡ್–19 ಲಾಕ್‌ಡೌನ್ ಹಿಂಪಡೆಯುವ ಪ್ರಕ್ರಿಯೆ ಆರಂಭ ಆಗಿದ್ದು, ವಾಜಿರ್‌ಪುರದ ಕೈಗಾರಿಕಾ ಪ್ರದೇಶದಲ್ಲಿನ ಫ್ಯಾಕ್ಟರಿಯಲ್ಲಿ ಕಾರ್ಮಿಕರೊಬ್ಬರು ಕೆಲಸದಲ್ಲಿ ತೊಡಗಿರುವುದು –ಪಿಟಿಐ ಚಿತ್ರ

ಪಕ್ಷಕ್ಕೆ ಶಶಿಕಲಾ ಬರಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ: ಎಐಎಡಿಎಂಕೆ ಸ್ಪಷ್ಟನೆ

ಕೃಷ್ಣಗಿರಿ (ತಮಿಳುನಾಡು): ‘ಪಕ್ಷದಿಂದ ಉಚ್ಚಾಟಿತರಾಗಿರುವ ವಿ.ಕೆ. ಶಶಿಕಲಾ ಅವರನ್ನು ಯಾವುದೇ ಕಾರಣಕ್ಕೂ ಪುನಃ ಪಕ್ಷಕ್ಕೆ ಬರಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ’ ಎಂದು ಎಐಎಡಿಎಂಕೆ ಸೋಮವಾರ ಸ್ಪಷ್ಟಪಡಿಸಿದೆ.

ಭಾನುವಾರ ಪಕ್ಷದ ನಿಷ್ಠಾವಂತ ಕಾರ್ಯಕರ್ತರೊಬ್ಬರ ಜತೆಗೆ ಶಶಿಕಲಾ ಅವರು ಪುನಃ ರಾಜಕಾರಣಕ್ಕೆ ಬರುವುದಾಗಿ ಹೇಳಿದ್ದ ಆಡಿಯೊವೊಂದು ವೈರಲ್ ಆದ ಕಾರಣ, ಸೋಮವಾರ ಎಐಎಡಿಎಂಕೆ ಈ ಕುರಿತು ಸ್ಪಷ್ಟನೆ ನೀಡಿದೆ.

ವಿ.ಕೆ. ಶಶಿಕಲಾ

‘ಶಶಿಕಲಾ ಅವರಿಗೆ ಪಕ್ಷದಿಂದ ದೂರವಿರುವಂತೆ ಹೇಳಲಾಗಿದೆ. ಯಾವುದೇ ಸಂದರ್ಭದಲ್ಲೂ ಅವರನ್ನು ಎಐಎಡಿಎಂಕೆಗೆ ಬರಮಾಡಿಕೊಳ್ಳುವುದಿಲ್ಲ. ಪಕ್ಷಕ್ಕೆ ಪುನಃ ಸೇರ್ಪಡೆ ಮಾಡಿಕೊಳ್ಳದೇ ಇರುವ ಕುರಿತು ಪಕ್ಷದ ಕಾರ್ಯಕರ್ತರು ಸ್ಪಷ್ಟ ಧೋರಣೆ ತಾಳಿದ್ದಾರೆ’ ಎಂದು ಪಕ್ಷದ ಹಿರಿಯ ನಾಯಕ ಕೆ.ಪಿ. ಮುನುಸಾಮಿ ಅವರು ಸುದ್ದಿಗಾರರಿಗೆ ವೇಪ್ಪನಹಳ್ಳಿಯಲ್ಲಿ ತಿಳಿಸಿದ್ದಾರೆ.

ಭಾನುವಾರ ಕಾರ್ಯಕರ್ತರೊಬ್ಬರೊಂದಿಗೆ ನಡೆದ ದೂರವಾಣಿ ಸಂಭಾಷಣೆಯಲ್ಲಿ ಶಶಿಕಲಾ ಅವರು, ‘ಪಕ್ಷದ ನಿಯಂತ್ರಣವನ್ನು ಮರಳಿ ಪಡೆಯುವ ಕುರಿತು ಮಾತನಾಡಿದ್ದರು. ಪಕ್ಷದ ಹೆಸರು ಮತ್ತು ಪನ್ನೀರ್ ಸೆಲ್ವಂ ಮತ್ತು ಕೆ. ಪಳನಿಸ್ವಾಮಿ ಅವರ ಹೆಸರನ್ನು ಉಲ್ಲೇಖಿಸದೇ, ತಮ್ಮ ನಡುವಿನ ವ್ಯತ್ಯಾಸಗಳು ಮತ್ತು ಒಳನೋಟಗಳ ಬಗ್ಗೆಯೂ ಮಾತನಾಡಿದ್ದ ಶಶಿಕಲಾ, ಪಕ್ಷದ ಹಿತಾಸಕ್ತಿ ಕಾಪಾಡುವಂತೆಯೂ ಕಾರ್ಯಕರ್ತರಿಗೆ ಸಲಹೆ ನೀಡಿದ್ದರು.

5ಜಿ ವಿರುದ್ಧ ಕೋರ್ಟ್ ಮೆಟ್ಟಿಲೇರಿದ ನಟಿ ಜೂಹಿ ಚಾವ್ಲಾ

ನವದೆಹಲಿ (ಪಿಟಿಐ): ದೇಶದಲ್ಲಿ 5ಜಿ ವೈರ್‌ಲೆಸ್ ನೆಟ್‌ವರ್ಕ್‌ಗಳನ್ನು ಸ್ಥಾಪಿಸುವುದರ ವಿರುದ್ಧ ನಟಿ, ಪರಿಸರವಾದಿ ಜೂಹಿ ಚಾವ್ಲಾ ಸೋಮವಾರ ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಈ ತಂತ್ರಜ್ಞಾನ ಜಾರಿಗೆ ಬಂದರೆ ಜನತೆ, ಪ್ರಾಣಿ ಸಂಕುಲ, ಸಸ್ಯ ಮತ್ತು ಪ್ರಾಣಿಗಳ ಮೇಲೆ ವಿಕಿರಣದ ನಕಾರಾತ್ಮಕ ಪರಿಣಾಮವಾಗುವ ಆತಂಕ ವ್ಯಕ್ತಪಡಿಸಿದ್ದಾರೆ.

ಅರ್ಜಿಯು ನ್ಯಾಯಮೂರ್ತಿ ಸಿ.ಹರಿಶಂಕರ್ ಪೀಠದ ಎದುರು ವಿಚಾರಣೆಗೆ ಬಂದಿದ್ದು, ಮತ್ತೊಂದು ನ್ಯಾಯಪೀಠಕ್ಕೆ ವರ್ಗಾಯಿಸಿದ್ದಾರೆ. ಜೂನ್ 2ರಂದು ವಿಚಾರಣೆ ನಡೆಯಲಿದೆ.

ದೂರಸಂಪರ್ಕ ಉದ್ಯಮ 5ಜಿ ತಂತ್ರಜ್ಞಾನ ಜಾರಿಗೊಳಿಸಿದಲ್ಲಿ ಅದರ ಪರಿಣಾಮದಿಂದ ಯಾವುದೇ ವ್ಯಕ್ತಿ, ಪ್ರಾಣಿ ಸಂಕುಲ, ಸಸ್ಯ ಸಂಕುಲ ಸೇರಿ ಭೂಮಿ ಮೇಲಿನ ಯಾವುದೇ ಜೀವಿ ತಪ್ಪಿಸಿಕೊಳ್ಳಲಾಗದು. ತರಂಗಾಂತರದ ತೀವ್ರತೆ ಈಗಿರುವುದಕ್ಕಿಂತಲೂ 10 ರಿಂದ 100 ಪಟ್ಟು ಹೆಚ್ಚಿರುತ್ತದೆ ಎಂದು ಚಾವ್ಲಾ ಹೇಳಿದ್ದಾರೆ.

‘ಈ ತಂತ್ರಜ್ಞಾನವು ಮನುಕುಲದ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಜೀವವೈವಿಧ್ಯವನ್ನು ಅಸ್ತವ್ಯಸ್ತಗೊಳಿಸಲಿದೆ’ ಎಂದಿದ್ದಾರೆ. ತಂತ್ರಜ್ಞಾನದ ಜಾರಿಗೆ ಮುನ್ನ ಇದು ಸುರಕ್ಷಿತ, ಪ್ರತಿಕೂಲ ಪರಿಣಾಮವಾಗದು ಎಂದು ಪ್ರಮಾಣೀಕರಿಸಲು ಸಂಬಂಧಿಸಿದ ಆಡಳಿತಕ್ಕೆ ನಿರ್ದೇಶಿಸಬೇಕು ಎಂದು ವಕೀಲ ದೀಪಕ್ ಖೋಸ್ಲಾ ಅವರ ಮೂಲಕ ಸಲ್ಲಿಸಿರುವ ಅರ್ಜಿಯಲ್ಲಿ ಪ್ರತಿಪಾದಿಸಿದ್ದಾರೆ.

ವಿದೇಶಗಳಲ್ಲಿ 11,430 ಭಾರತೀಯರ ಸಾವು: ಆರ್‌ಟಿಐ

ಮುಂಬೈ: ಹೊರ ದೇಶಗಳಲ್ಲಿ 2020ನೇ ಸಾಲಿನಲ್ಲಿ 11,439 ಭಾರತೀಯರು ಮೃತಪಟ್ಟಿದ್ದಾರೆ. ಮುಂಬೈ ಮೂಲದ ಕಾರ್ಯಕರ್ತ ಜತಿನ್ ದೇಸಾಯಿ ಅವರ ಆರ್‌ಟಿಐ ಅರ್ಜಿಗೆ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಈ ಮಾಹಿತಿಯನ್ನು ನೀಡಿದೆ. ಸೌದಿ ಅರೇಬಿಯದಲ್ಲಿ ಗರಿಷ್ಠ ಅಂದರೆ 3,753 ಭಾರತೀಯರು ಮೃತಪಟ್ಟಿದ್ದಾರೆ.

ಉಳಿದಂತೆ, ಯುಎಇಯಲ್ಲಿ 2,454, ಅಮೆರಿಕದಲ್ಲಿ 280, ಕುವೈತ್‌ನಲ್ಲಿ 1,279, ಇಟಲಿಯಲ್ಲಿ 216, ಬ್ರಿಟನ್ ನಲ್ಲಿ 41, ಸ್ವಿಟ್ಜರ್‌ಲೆಂಡ್‌ನಲ್ಲಿ 12, ಸೂಡಾನ್‌ನಲ್ಲಿ 40, ಸಿಂಗಪುರದಲ್ಲಿ 166 ಮತ್ತು ಕತಾರ್‌ನಲ್ಲಿ 385 ಮಂದಿ ಭಾರತೀಯರು ಮೃತಪಟ್ಟಿದ್ದಾರೆ ಎಂದು ಸಚಿವಾಲಯದ ನಿರ್ದೇಶಕ (ಸಿಪಿವಿ) ಉತ್ತರ ನೀಡಿದ್ದಾರೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (ಕೆಎಸ್‌ಎನ್‌ಡಿಎಂಸಿ)
(ಕರ್ನಾಟಕ ಸರ್ಕಾರದ ನೋಂದಾಯಿತ ಸಂಸ್ಥೆ)
ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ಯಲಹಂಕ-ಅಟ್ಟೂರು ಲೇಔಟ್ ಹತ್ತಿರ, ಬೆಂಗಳೂರು - 560 064. ದೂರವಾಣಿ : 080 - 6735 5000.

ಸಂಖ್ಯೆ : ಕರಾನೈವಿಉಕೇ/ಎಸಿಟಿ/13/2020 ದಿನಾಂಕ : 29–05–2021

E-TENDER NOTIFICATION

ಈ ಕಛೇರಿಯು ಕೆಳಕಂಡ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮುಖಾಂತರ ಆಹ್ವಾನಿಸಿರುತ್ತದೆ.

1) ರಾಜ್ಯದಲ್ಲಿ ಸೇಸ್ಮಿಕ್ ಯಂತ್ರಗಳನ್ನು ಸರಬರಾಜು ಮಾಡಿ ಮತ್ತು ಅಳವಡಿಸಿ ಹಾಗೂ ನಿರ್ವಹಣೆ ಮಾಡಲು ಟೆಂಡರ್ ಸಂಖ್ಯೆ : KSNDMC/TECH/01/2021/CALL-2.

2) ಬಿಬಿಎಂಪಿ. ವ್ಯಾಪ್ತಿಯಲ್ಲಿ ವಾಟರ್ ಲೆವೆಲ್ ಸೆನ್ಸಾರ್‌ಗಳನ್ನು ಸರಬರಾಜು ಮಾಡಿ ಮತ್ತು ಅಳವಡಿಸಿ ಹಾಗೂ ನಿರ್ವಹಣೆ ಮಾಡಲು ಟೆಂಡರ್ ಸಂಖ್ಯೆ : KSNDMC/Tech/03/2021/CALL-2.

3) ರಾಜ್ಯದ ಮೂರು ಸ್ಮಾರ್ಟ್ ಸಿಟಿಗಳಲ್ಲಿ ಟಿ.ಆರ್.ಜಿ.ಪಿ.ಡಬ್ಲ್ಯೂ.ಎಸ್ ಹಾಗೂ ಟಿ.ಡಬ್ಲ್ಯೂ.ಎಲ್.ಎಸ್. ಗಳನ್ನು ಸರಬರಾಜು ಮಾಡಿ ಮತ್ತು ಅಳವಡಿಸಿ ಹಾಗೂ ನಿರ್ವಹಣೆ ಮಾಡಲು ಟೆಂಡರ್ ಸಂಖ್ಯೆ : KSNDMC/Tech/04/2021/CALL-2.

4) ಕೃಷ್ಣ ಜಲಾನಯನ ಪ್ರದೇಶದಲ್ಲಿ ರೇಡಾರ್ ಸ್ಟ್ರೀಮ್ ಗೇಜ್ ಹಾಗೂ ಜಲಾಶಯದ ನೀರಿನ ಮಟ್ಟ ದಾಖಲಿಸುವ ಯಂತ್ರಗಳನ್ನು ಸರಬರಾಜು ಮಾಡಿ ಮತ್ತು ಅಳವಡಿಸಿ ಹಾಗೂ ನಿರ್ವಹಣೆ ಮಾಡಲು ಟೆಂಡರ್ ಸಂಖ್ಯೆ : KSNDMC/Tech/06/2021/CALL-2.

ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 29–06–2021. ಈ ಟೆಂಡರ್ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ https://eproc.karnataka.gov.in ಪಡೆಯಬಹುದು.

ಸಹಿ/– ನಿರ್ದೇಶಕರು.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ್, ಗದಗ
ಕಾರ್ಯನಿರ್ವಾಹಕ ಇಂಜನೀಯರ, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಗದಗ.
ನಂ:ಪಂ.ರಾಜ್.ಇಂ.ವಿ/ಗದಗ/ಕಿ.ಇಂ.1/ಟೆಂಡರ/2021–22/340 ದಿನಾಂಕ : 31–05–2021

ಇ–ಪ್ರೊಕ್ಯೂರಮೆಂಟ ಟೆಂಡರ ಪ್ರಕಟಣೆ
Standard Bid Document KW- 4 [ದ್ವಿಲಕೋಟೆ ಪದ್ಧತಿ]

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್–2000 ನಿಯಮದಂತೆ Standard Bid Document KW-4ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಇ–ಪ್ರೋಕ್ಯೂರಮೆಂಟ್ ಪೋರ್ಟಲ್, ಮುಖಾಂತರ 01 ಕಾಮಗಾರಿಯ ಟೆಂಡರನ್ನು ಆಹ್ವಾನಿಸಲಾಗಿದೆ. **ಲೆಕ್ಕ ಶೀರ್ಷಿಕೆ: 2009–10,2010–11 ,2013–14 ರಿಂದ 2017–18ನೇ ಸಾಲಿನ ಅರ್.ಎಮ್.ಎಸ್.ಎ. ಯೋಜನೆ ಅಡಿ** ಪಂ. ರಾಜ್. ಇಂ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ್ ಪೋರ್ಟಲ್, https:// eproc.karnataka.gov.in ಮುಖಾಂತರ ಭಾಗವಹಿಸಬಹುದು. ವಿವರ ಈ ಕೆಳಗಿನಂತಿದೆ.

ಅ. ನಂ.	ಕಾಮಗಾರಿಯ ಹೆಸರು / ವರ್ಕ ಇಂಡೆಂಟ್	ಟೆಂಡರಿಗಿಟ್ಟ ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ (ಇ–ಪೋರ್ಟಲ್ ಮುಖಾಂತರ)	ಕಾಮಗಾರಿ ಅವಧಿ (ಮಳೆಗಾಲ ಸೇರಿ)	ಗುತ್ತಿಗೆ–ದಾರರ ದರ್ಜೆ
1	UPGRADATION OF 4ACR,HM, OFFICE, ARTS/CRAFT/CULTURE, SCIENCE LAB, COMPUTER ROOM, LIBRARY-8 ROOMS AT GHPS NAGAVI, GADAG TALUK, GADAG DIST.UNDER RMSA GRANT **WORK_INDENT84124**	**10867370.57**	**163050/-**	9 ತಿಂಗಳು	1 ನೇ ದರ್ಜೆ **KW-4**

ಇ–ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್–ಬಿ ಯನ್ನು ವೆಬ್‌ಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **01–06–2021** ರಿಂದ **15–06–2021** 16.00 ಗಂಟೆಯವರೆಗೆ. ಪ್ರೀಬಿಡ್ ಮೀಟಿಂಗ್ : **11–06–2021** ರಂದು 16:00:00 ಗಂಟೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **17–06–2021** 16.30 ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ : **19–06–2021** ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ-ಪದ್ಧತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು, ಪಂ.ರಾಜ್. ಇಂಜನೀಯರಿಂಗ್ ವಿಭಾಗ, ಗದಗ
ವಾಸಾಸಂಇ/ಗದಗ/ಎಂ.ಸಿ.ಎ/90/2021–22

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ.
(ದಾವಣಗೆರೆ ಜಿಲ್ಲೆ, ದಾವಣಗೆರೆ.)–577006
ದೂರವಾಣಿ ಸಂಖ್ಯೆ:08192–251168(ಕಛೇರಿ ಮತ್ತು ಫ್ಯಾಕ್ಸ್), e-ail:dudc_dvg@yahoo.co.in
ನಂ.ಜಿ.ನ.ಕೋ.ದಾ(2)/ಸಿಆರ್/926/2016–17 ದಿನಾಂಕ: 28–05–2021

ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ದಾವಣಗೆರೆ ಜಿಲ್ಲೆಯ 2016–17 ನೇ ಸಾಲಿನ ನಗರೋತ್ಥಾನ ಹಂತ–3 (ಮುನಿಸಿಪಾಲಿಟಿ) ಯೋಜನೆಯ ಅನುದಾನದಡಿ ದಾವಣಗೆರೆ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಉಳಿಕೆಯಾದ ಮೊತ್ತಕ್ಕೆ ಪೌರಾಡಳಿತ ನಿರ್ದೇಶನಾಲಯದಿಂದ ಅನುಮೋದನೆ ಪಡೆದುಕೊಂಡಿರುವ ಪರಿಷ್ಕೃತ ಕ್ರಿಯಾ ಯೋಜನೆಯಂತೆ ಹರಿಹರ–ನಗರಸಭೆ, ಚನ್ನಗಿರಿ/ಹೊನ್ನಾಳಿ–ಪುರಸಭೆ ಮತ್ತು ಜಗಳೂರು ಪಟ್ಟಣ ಪಂಚಾಯಿತಿಯಲ್ಲಿ ಕೈಗೊಳ್ಳುವ ಕಾಮಗಾರಿಗಳಿಗೆ ಈ ಕೆಳಗಿನ ಇಂಡೆಂಟ್ ನಂಬರ್‌ಗಳ ಕಾಮಗಾರಿಗಳಿಗೆ ಐಟಂವಾರು ಟೆಂಡರ್‌ನ್ನು ದ್ವಿ ಲಕೋಟೆ ಪದ್ಧತಿ (Two Covers System) ಮತ್ತು ಜಿಲ್ಲೆಯ ಹರಿಹರ ನಗರಸಭೆ, ಚನ್ನಗಿರಿ ಪುರಸಭೆ, ಜಗಳೂರು ಪಟ್ಟಣ ಪಂಚಾಯಿತಿಗಳ ಇಂದಿರಾ ಕ್ಯಾಂಟೀನ್‌ಗಳಿಗೆ ಆಹಾರ ಸರಬರಾಜು ಪೂರೈಸಲು ಟೆಂಡರ್‌ನ್ನು ದ್ವಿ ಲಕೋಟೆ ಪದ್ಧತಿ (Two Covers System) ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

ಕ್ರ. ಸಂ.	ಇಂಡೆಂಟ್‌ಗಳು	ಟೆಂಡರಿಗೆ ಇಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ)	ಇ–ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	ಆರ್ಥಿಕ ಬಿಡ್ ತೆರೆಯುವ ದಿನಾಂಕ.
	KW-2					
1	ಹರಿಹರ ನಗರಸಭೆ ವ್ಯಾಪ್ತಿಯಲ್ಲಿ ಪ.ಜಾತಿ ವಾಸವಾಗಿರುವ ಪ್ರದೇಶ ಮತ್ತು ಇತರೆ ವರ್ಗದ ಪ್ರದೇಶಗಳಲ್ಲಿ ಮಳೆ ನೀರು ಚರಂಡಿ ನಿರ್ಮಾಣ ಕಾಮಗಾರಿ. **ಇಂಡೆಂಟ್ ನಂಬರ್: DMA/2021-22/OW/ Work_ Indent/ 116392**	39.16	78850.00	16–06–2021	18–06–2021	21–06–2021
2	ಹೊನ್ನಾಳಿ ಪುರಸಭೆ ವ್ಯಾಪ್ತಿಯಲ್ಲಿ ಎಲ್.ಇ.ಡಿ ದೀಪಗಳ ಅಳವಡಿಸುವ ಕಾಮಗಾರಿ. **ಇಂಡೆಂಟ್ ನಂಬರ್: DMA/2021-22/ OW/ Work_ Indent/116393**	30.00	60000.00	16–06–2021	18–06–2021	21–06–2021
3	ಜಗಳೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ರಸ್ತೆ ಮತ್ತು ವಿದ್ಯುತ್ ಕಾಮಗಾರಿ. **ಇಂಡೆಂಟ್ ನಂಬರ್: DMA/2021-22/OW/ Work_ Indent/116394**	35.00	70000.00	16–06–2021	18–06–2021	21–06–2021
	KW-4					
1	ಚನ್ನಗಿರಿ ಪುರಸಭೆ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ಕಾಮಗಾರಿ. **ಇಂಡೆಂಟ್ ನಂಬರ್: DMA/2021-22/RD/ Work_ Indent/116308**	205.00	308000.00	16–06–2021	18–06–2021	21–06–2021
	KW-4					
1	ದಾವಣಗೆರೆ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಾದ ಹರಿಹರ/ ಚನ್ನಗಿರಿ/ಜಗಳೂರು ವ್ಯಾಪ್ತಿಯಲ್ಲಿ ಇಂದಿರಾ ಕ್ಯಾಂಟೀನ್‌ಗೆ ಆಹಾರ ಸರಬರಾಜು ಮಾಡುವ ಕುರಿತು.**ಇಂಡೆಂಟ್ ನಂ: DMA/2021-22/IND 12090**	208.05	312000.00	16–06–2021	18–06–2021	21–06–2021

ಸದರಿ ಕಾಮಗಾರಿಗಳ ವಿವರ, ಹಾಗೂ ಇತರೆ ಷರತ್ತುಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ http://eproc.karnataka.gov.in ಮೂಲಕ ಹಾಗೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ತಾಂತ್ರಿಕ ಶಾಖೆಯಿಂದ ಪಡೆದುಕೊಳ್ಳಬಹುದಾಗಿದೆ. ವೇಳಾಪಟ್ಟಿಯಲ್ಲಾಗುವ ಯಾವುದೇ ಬದಲಾವಣೆಯನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಸೂಚಿಸಲಾಗುವುದು. ದಿನ ಪತ್ರಿಕೆ ಅಥವಾ ಯಾವುದೇ ಜಾಹೀರಾತು ಪ್ರಕಟಣೆ ನೀಡಲಾಗುವುದಿಲ್ಲ.

ವಾಸಾಇ/ದಾವಣಗೆರೆ/108/ಎಂಸಿಎ/2021–22 ಸಹಿ/– **ಜಿಲ್ಲಾಧಿಕಾರಿಗಳು,** ದಾವಣಗೆರೆ ಜಿಲ್ಲೆ, ದಾವಣಗೆರೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನಿಯರ್‌ರವರ ಕಚೇರಿ,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಬೆಳಗಾವಿ
ಕ್ರ.ಸಂ. ಕಾನಿಅ/ಗ್ರಾಕುನೀ&ನೈ/ವಿಬೆ/ಪಿಬಿ–2,3,4/ಕೊ.ಬಾ.ಗು.ನಿ/ಟೆಂಡರ್–06/2021–22/347 ದಿನಾಂಕ: 31–05–2021

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ – 06

ಉಲ್ಲೇಖ : ಈ ಕಚೇರಿಯ ಟೆಂಡರ್ ಪ್ರಕಟಣೆ ಸಂ. ಕಾನಿಅ/ಗ್ರಾಕುನೀ&ನೈ/ವಿಬೆ/ಪಿಬಿ–2,3,4/ಕೊ.ಬಾ.ಗು.ನಿ/ಟೆಂಡರ್–05/2021–22/194 ದಿನಾಂಕ: 15–05–2021

ಮೇಲಿನ ಉಲ್ಲೇಖ (1) ರಡಿ ಈ ಕಚೇರಿಯ ಟೆಂಡರ್ ಪ್ರಕಟಣೆಯಲ್ಲಿ ಪ್ರಕಟಿಸಲಾದ ಈ ಕೆಳಗಿನ ಕಾಮಗಾರಿಗಳಿಗಾಗಿ ಮರು ಟೆಂಡರ್ ಆಹ್ವಾನಿಸಲಾಗಿದೆ.

ಇಂಡೆಂಟ್ ನಂ: 33926/Call-2, 33925/Call-2, 339227/Call-2

1) ಟೆಂಡರ್ ಪೂರ್ವಭಾವಿ ಸಭೆ ಕಾರ್ಯನಿರ್ವಾಹಕ ಅಭಿಯಂತರರು ಗ್ರಾ ಕು ನೀ & ನೈ ವಿಭಾಗ, ಬೆಳಗಾವಿ ಇವರ ಕಚೇರಿಯಲ್ಲಿ **ದಿನಾಂಕ: 07–06–2021 ಬೆಳಿಗ್ಗೆ 11:00 ಗಂಟೆಯವರೆಗೆ.** 2) ಇ–ಪ್ರೊಕ್ಯೂರ್‌ಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ **ಕೊನೆಯ ದಿನಾಂಕ ಮತ್ತು ಸಮಯ : 11–06–2021 ಸಾಯಂಕಾಲ 17:30 ಗಂಟೆವರೆಗೆ.** 3) ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 14–06–2021 ಸಾಯಂಕಾಲ 11:00 ಗಂಟೆ ನಂತರ** 4) ಭರ್ತಿ ಮಾಡಿದ ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದಿಸಿದ ನಂತರ.**

ಸೂಚನೆ: ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿದವರ ಕಚೇರಿಗೆ ಅಥವಾ e-Procurement portal www.eproc.karnataka.gov,in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರು, ಗ್ರಾ.ಕು.ನೀ.&ನೈ. ವಿಭಾಗ, ಬೆಳಗಾವಿ
DIPO/RO No. 120/2021-22

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)
ಕಾರ್ಯಪಾಲಕ ಇಂಜನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ
ಐಎಫ್‌ಟಿ ಸಂ. 01/2021–22 ದಿನಾಂಕ: 24.05.2021

ಸೆಕ್ಷನ್ 1: ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್)–ಕೆಡಬ್ಲ್ಯೂ–4

ಕಾರ್ಯಪಾಲಕ ಇಂಜನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಶಿವಮೊಗ್ಗ ರವರ ಕಛೇರಿಯಿಂದ ಸ್ಟ್ಯಾಂಡರ್ಡ್ ಟೆಂಡರ್ ಕೆ.ಡಬ್ಲ್ಯೂ–4ರ ಅನ್ವಯ ಐಎಫ್‌ಟಿ ಸಂಖ್ಯೆ: 01/2021–22 ದಿನಾಂಕ: 24.05.2021ರಲ್ಲಿ ಮುಂದಿನ ಕಾಮಗಾರಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ನಗರದ ಕೆ.ಆರ್. ನೀರು ಸರಬರಾಜು ಕೇಂದ್ರದ ಬಳಿ ತುಂಗಾ ನದಿಗೆ ಅಡ್ಡಲಾಗಿ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿಯ ಟೆಂಡರ್‌ಗೆ ಇಡಲಾದ ಕನಿಷ್ಠ ಮೊತ್ತ ರೂ. 883.49 ಲಕ್ಷಗಳಿರುತ್ತದೆ. ಸದರಿ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ಟೆಂಡರ್‌ನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಪ್ರಮಾಣಗಳನ್ನು ಹಾಗೂ ಇತರೆ ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ ವಿಳಾಸ http://eproc.karnataka.gov.in ನಲ್ಲಿ ದಿನಾಂಕ: 28.05.2021 ರಿಂದ ಲಾಗಿನ್ ಆಗುವ ಮೂಲಕ ಪಡೆದುಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ 14.06.2021. ಇನ್ನುಳಿದಂತೆ ವೆಬ್‌ಸೈಟ್‌ನಲ್ಲಿ ವಿವರಗಳೇ ಅಂತಿಮ.

ಸಹಿ/– ಕಾರ್ಯಪಾಲಕ ಇಂಜನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ
ವಾಸಾಸಂಇ/ಶಿ/ನಂ.52–05/ಝೇಂಕಾರ್/2021–22

ಜಿಲ್ಲಾ ಪಂಚಾಯತ್, ಬಳ್ಳಾರಿ.
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಬಳ್ಳಾರಿ ಜಿಲ್ಲಾ ಪಂಚಾಯತ್
ಇ–ಮೇಲ್: ceo_zp_bly@nic.in ಫ್ಯಾಕ್ಸ್:08392–267200 ದೂರವಾಣಿ:08392–267300
ಸಂಖ್ಯೆ:ಜಿಪಂಬ/ಪಿ.ಡಿ/ರೂರ್ಬನ್/ಹೊ.ಗು.ನೇ/01/2021–22 ದಿನಾಂಕ: 31.05.2021

ಪ್ರಕಟಣೆ

ಶ್ಯಾಮ್ ಪ್ರಸಾದ್ ಮುಖರ್ಜಿ ರೂರ್ಬನ್ ಮಿಷನ್ ಅಡಿಯಲ್ಲಿ ಬಳ್ಳಾರಿ/ವಿಜಯನಗರ ಜಿಲ್ಲೆಯಲ್ಲಿ ಆಯ್ಕೆಯಾದ 04 ಕ್ಲಸ್ಟರ್‌ಗಳಿಗೆ ಸಂಬಂಧಿಸಿದಂತೆ ಬಳ್ಳಾರಿ/ವಿಜಯನಗರ ಜಿಲ್ಲೆಗಳಲ್ಲಿ ಕ್ಲಸ್ಟರ್‌ವಾರು ಪ್ರಗತಿ ಮತ್ತು ಮೇಲ್ವಿಚಾರಣೆ ಮಾಡಲು DPMU ಹಾಗೂ CDMU ಘಟಕಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಮಾನವ ಸಂಪನ್ಮೂಲ ಸಂಸ್ಥೆಯ ಮೂಲಕ ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಅರ್ಜಿಗಳನ್ನು ಕರೆಯಲಾಗಿದೆ. ಹುದ್ದೆಗಳ ವಿವರ ಈ ಕೆಳಗಿನಂತಿರುತ್ತದೆ.

SL. No	Unit	Designation	No.of Posts	Minimum Qualifications & Experience	Salary	Age Limit
01	District Project management Unit (DPMU) Ballari/ Vijayanagara	Regional Planning Specialist	02	Post Graduate Degree in Rural Management / Regional Planning/ Spatial Planning with 02 Years of Relevant Experience	Rs.30,000/-	25 to 45
02		Rural Development Management Specialist	02	Bachelors in Rural Development/ Rural Management, Agriculture/ Social Sciences with 02 Year of Experience preferably in rural sector within the state	Rs.25,000/-	25 to 45
03	Cluster Development management Unit (CDMU) Ballari/ Vijayanagara	Engineering Specialist	04	Bachelors in Civil Engineering with 02 years of relevant experience	Rs.25,000/-	25 to 45
04		Spatial Planning Professional	04	Graduate Degree in Urban Planning	Rs.20,000/-	25 to 45
05		Rural Management Professional	04	Bachelors in Civil Engineering with 01 year of experience	Rs.20,000/-	25 to 45

ಷರತ್ತುಗಳು: 1.ಅರ್ಜಿ ನಮೂನೆ ಮತ್ತು ಪ್ರಕಟಣೆಯನ್ನು https://ballari.nic.in Website ನಲ್ಲಿ ಲಭ್ಯವಿರುತ್ತದೆ. 2.ವಯೋಮಾನ: ಪ್ರಕಟಣೆ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ 25 ಹಾಗೂ ಗರಿಷ್ಟ 45 ಮೀರಿರಬಾರದು. ಅರ್ಜಿಯನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ವಿದ್ಯಾರ್ಹತೆ ಹಾಗೂ ಅನುಭವದ ಅಗತ್ಯ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್, ಬಳ್ಳಾರಿ (ಡಿ.ಆರ್.ಡಿ.ಎ ಶಾಖೆ) ಕೋಟೆ, ಬಳ್ಳಾರಿ 583102 ರವರ ಹೆಸರಿಗೆ ಖುದ್ದಾಗಿ/ಅಂಚೆ ಮೂಲಕ ಅಥವಾ ಇ–ಮೇಲ್ ಮೂಲಕ zpblyrurban@gmail.com ಗೆ “PDF” ನಲ್ಲಿ ದಿನಾಂಕ 14.06.2021 ಮಧ್ಯಾಹ್ನ 1.30 ಗಂಟೆಯವರೆಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. 4.ಮೇಲ್ಕಂಡ ಹುದ್ದೆಗಳು ಸಂಪೂರ್ಣವಾಗಿ ತಾತ್ಕಾಲಿಕ ಹುದ್ದೆಯಾಗಿದ್ದು, ಆಯ್ಕೆಯಾದ ಮಾನವ ಸಂಪನ್ಮೂಲ ಸಂಸ್ಥೆಯ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗುವುದು. ನಂತರ ಕಾಲಕಾಲಕ್ಕೆ ಅವರ ಕಾರ್ಯಕ್ಷಮತೆಯನ್ನು ಪರಿಶೀಲಿಸಿ ನವೀಕರಿಸಲಾಗುವುದು. 5.ಗುತ್ತಿಗೆಯ ಅವಧಿಯು ಯೋಜನೆಯ ಮುಕ್ತಾಯದೊಂದಿಗೆ ಅಂತ್ಯವಾಗುತ್ತದೆ. 6.ಕಡ್ಡಾಯವಾಗಿ ಕಂಪ್ಯೂಟರ್ ಜ್ಞಾನ, ಕನ್ನಡ ಮತ್ತು ಇಂಗ್ಲೀಷ್ ಭಾಷೆ ಚೆನ್ನಾಗಿ ತಿಳಿದಿರಬೇಕು. 7.ಆಯ್ಕೆಯಾದ ಅಭ್ಯರ್ಥಿಗಳು ಬಳ್ಳಾರಿ/ವಿಜಯನಗರ ಜಿಲ್ಲೆಗಳಲ್ಲಿ ಯಾವುದೇ ಭಾಗದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸಲು ಸಿದ್ಧರಿರಬೇಕು. 8.ಸ್ವೀಕರಿಸಲಾದ ಅರ್ಜಿಗಳನ್ನು ವಿದ್ಯಾರ್ಹತೆಯಲ್ಲಿ ಗಳಿಸಿದ ಶೇಕಡವಾರು ಅಂಕಗಳು ಮತ್ತು ಕಾರ್ಯಾನುಭವ ಆಧಾರದ ಮೇಲೆ 1:5 ಅನುಪಾತದಲ್ಲಿ ಕಿರುಪಟ್ಟಿಯನ್ನು ತಯಾರಿಸಿ ಸದರಿ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ನಡೆಸಿ ಶೈಕ್ಷಣಿಕ ಅರ್ಹತೆ ಮತ್ತು ಸಂಬಂಧಿಸಿ ಕಾರ್ಯಕ್ಷೇತ್ರದಲ್ಲಿ ಕಾರ್ಯಾನುಭವದ ಆಧಾರದ ಮೇಲೆ ಮೆರಿಟ್ ಆಧಾರದ ಮೇಲೆ ಮಾನವ ಸಂಪನ್ಮೂಲ ಸಂಸ್ಥೆಯಿಂದ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿಯನ್ನು ಮಾಡಿಕೊಳ್ಳಲಾಗುವುದು. 9.ನೇಮಕಾತಿಯನ್ನು ಪೂರ್ಣವಾಗಿ ಮತ್ತು ಭಾಗಶಃ ರದ್ದು ಮಾಡುವ/ಮುಂದೂಡುವ/ಬದಲಾವಣೆ ಮಾಡುವ ಹಕ್ಕನ್ನು ಇಲಾಖೆಯು ಹೊಂದಿರುತ್ತದೆ. 10.ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 9480855010/ 9113993070 ಸಂಪರ್ಕಿಸಬಹುದಾಗಿದೆ.

ಡಿಐಪಿಆರ್/ಬಳ್ಳಾರಿ/58/ಎಂಸಿಎ/2021–22 ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ.

ಫ್ರೆಂಚ್ ಓಪನ್: ಫೆಡರರ್ ಜಯದ ಆರಂಭ; ಡ್ಯಾನಿಯಲ್ ಮೆಡ್ವೆಡೆವ್‌ಗೆ 'ಮೊದಲ' ಗೆಲುವು

ಸ್ವಾಟೆಕ್ ಜನ್ಮದಿನಕ್ಕೆ ಜಯದ ಸಂಭ್ರಮ

ಪ್ಯಾರಿಸ್ (ಎಎಫ್‌ಪಿ): ಹಾಲಿ ಚಾಂಪಿಯನ್, ಪೋಲೆಂಡ್‌ನ ಇಗಾ ಸ್ವಾಟೆಕ್ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಗೆಲುವಿನೊಂದಿಗೆ ಅಭಿಯಾನ ಆರಂಭಿಸಿದರು. ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ತಮ್ಮ ಆತ್ಮೀಯ ಗೆಳತಿ, ಸ್ಲೊವೇನಿಯಾದ ಕಾಜಾ ಜುವಾನ್ ಅವರನ್ನು ನೇರ ಸೆಟ್‌ಗಳಿಂದ ಮಣಿಸಿದ ಅವರು ಎರಡನೇ ಸುತ್ತು ಪ್ರವೇಶಿಸಿದರು.

ಸೋಮವಾರ 20ನೇ ಜನ್ಮದಿನ ಆಚರಿಸಿದ ಸ್ವಾಟೆಕ್ ಎದುರಾಳಿಯನ್ನು 6-0, 7-5ರಲ್ಲಿ ಸೋಲಿಸಿದರು. ಪಂದ್ಯದ ನಂತರ ಅವರಿಗೆ ಹೂಗುಚ್ಛ ನೀಡಿ ಜನ್ಮದಿನದ ಶುಭಾಶಯ ಕೋರಲಾಯಿತು.

ಎಂಟನೇ ಶ್ರೇಯಾಂಕದ ಸ್ವಾಟೆಕ್ ಮೊದಲ ಸೆಟ್‌ನಲ್ಲಿ ಎದುರಾಳಿಗೆ ಒಂದು ಗೇಮ್ ಕೂಡ ಬಿಟ್ಟುಕೊಡಲಿಲ್ಲ. ಆದರೆ ಎರಡನೇ ಸೆಟ್‌ನಲ್ಲಿ ಚೇತರಿಸಿಕೊಂಡ ಜುವಾನ್ ಪ್ರಬಲ ಪೈಪೋಟಿ ನೀಡಿದರು. 3-1ರ ಹಿನ್ನಡೆಯಲ್ಲಿದ್ದಾಗ ತಿರುಗೇಟು ನೀಡಿದ ಅವರು ಕೆಲವು ಗೇಮ್‌ಗಳಲ್ಲಿ ಆಧಿಪತ್ಯ ಸ್ಥಾಪಿಸಿದರು. ಆದರೆ ನಂತರ ಎರಡು ಬ್ರೇಕ್ ಪಾಯಿಂಟ್‌ಗಳನ್ನು ಕಳೆದುಕೊಂಡು ಹಿನ್ನಡೆ ಅನುಭವಿಸಿದರು. ನಂತರದ ಗೇಮ್‌ನಲ್ಲಿ 0-40ರ ಹಿನ್ನಡೆಯಿಂದ ಅಮೋಘ ಚೇತರಿಕೆ ಕಂಡ ಸ್ವಾಟೆಕ್ ಗೆಲುವಿನತ್ತ ಸಾಗಿದರು.

ಇಗಾ ಸ್ವಾಟೆಕ್ ಚೆಂಡನ್ನು ರಿಟರ್ನ್ ಮಾಡಿದ ರೀತಿ –ರಾಯಿಟರ್ಸ್ ಚಿತ್ರ

ಮಹಿಳಾ ವಿಭಾಗದ ಮತ್ತೊಂದು ಪಂದ್ಯದಲ್ಲಿ ನೆದರ್ಲೆಂಡ್ಸ್‌ನ ಕಿಕಿ ಬರ್ಟನ್ಸ್ 6-1, 3-6, 6-4ರಲ್ಲಿ ಸ್ಲೊವೇನಿಯಾದ ಪೊಲೊನಾ ಹರ್ಕಾಗ್ ವಿರುದ್ಧ ಜಯ ಗಳಿಸಿದರು.

ಫೆಡರರ್, ಮೆಡ್ವೆಡೆವ್‌ಗೆ ಜಯ: ಎರಡನೇ ಶ್ರೇಯಾಂಕದ ರಷ್ಯಾ ಆಟಗಾರ ಡ್ಯಾನಿಯಲ್ ಮೆಡ್ವೆಡೆವ್ ಅವರು ರೊಲ್ಯಾಂಡ್ ಗ್ಯಾರೋಸ್‌ನಲ್ಲಿ ಮೊದಲ ಜಯದ ಸಂಭ್ರಮ ಅನುಭವಿಸಿದರು. ಹಿಂದಿನ ನಾಲ್ಕು ಬಾರಿ ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದ ಮೆಡ್ವೆಡೆವ್ ಸೋಮವಾರ ನಡೆದ ಪಂದ್ಯದಲ್ಲಿ 6-3, 6-3, 7-5ರಲ್ಲಿ ಕಜಕಸ್ತಾನದ ಅಲೆಕ್ಸಾಂಡರ್ ಬುಬ್ಲಿಕ್ ವಿರುದ್ಧ ಜಯ ಗಳಿಸಿದರು.

ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್ ಮೊದಲ ಸುತ್ತಿನ ಹಣಾಹಣಿಯಲ್ಲಿ ಉಜ್ಬೆಕಿಸ್ತಾನದ ಡೆನಿಸ್ ಇಸ್ಟೊಮಿನ್ ಎದುರು 6-2, 6-4, 6-3ರಲ್ಲಿ ಜಯ ಗಳಿಸಿದರು. 20 ಗ್ರ್ಯಾನ್‌ಸ್ಲಾಂ ಪ್ರಶಸ್ತಿಗಳ ಒಡೆಯರಾಗಿರುವ ಫೆಡರರ್ ಸ್ಪೇನ್‌ನ ರಫೆಲ್ ನಡಾಲ್ ಜೊತೆ ದಾಖಲೆಯನ್ನು ಹಂಚಿಕೊಂಡಿದ್ದಾರೆ.

ಟೂರ್ನಿಯಿಂದ ಹಿಂದೆ ಸರಿದ ಒಸಾಕ

ನವೊಮಿ ಒಸಾಕ

ಪ್ಯಾರಿಸ್ (ಎಎಫ್‌ಪಿ): ಜಪಾನ್ ಆಟಗಾರ್ತಿ ನವೊಮಿ ಒಸಾಕ ಅವರು ಫ್ರೆಂಚ್ ಓಪನ್ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ. ಟೂರ್ನಿಯಲ್ಲಿ ಅವರು ಮಾಧ್ಯಮ ಚಟುವಟಿಕೆಗಳಿಂದ ದೂರ ಉಳಿಯುವ ನಿರ್ಧಾರ ಕೈಗೊಂಡಿದ್ದರು. ಈ ನಿರ್ಧಾರದಿಂದಾಗಿ ಎದುರಿಸಿದ ಕಹಿ ಘಟನೆಗಳಿಂದ ಅವರು ಈ ತೀರ್ಮಾನಕ್ಕೆ ಬಂದಿದ್ದಾರೆ ಎನ್ನಲಾಗಿದೆ.

'ನಾನು ಬಹಳಷ್ಟು ಖಿನ್ನಳಾಗಿದ್ದು, ಒಂದಷ್ಟು ಅವಧಿಗೆ ಕ್ರೀಡೆಯಿಂದ ದೂರ ಉಳಿಯುತ್ತೇನೆ' ಎಂದು ಟ್ವಿಟರ್‌ನಲ್ಲಿ ಅವರು ತಿಳಿಸಿದ್ದಾರೆ.

ಪಂದ್ಯದ ನಂತರ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಲು ನಿರಾಕರಿಸಿದ್ದ ಹಿನ್ನೆಲೆಯಲ್ಲಿ ವಿಶ್ವದ ಎರಡನೇ ಕ್ರಮಾಂಕದ ಒಸಾಕ ಅವರಿಗೆ ಭಾನುವಾರ 15 ಸಾವಿರ ಡಾಲರ್ ದಂಡ ವಿಧಿಸಲಾಗಿತ್ತು.

ಇತರ ಪಂದ್ಯಗಳ ಫಲಿತಾಂಶಗಳು

ಸರ್ಬಿಯಾದ ಫಿಲಿಪ್ ಕ್ರಾಜಿನೊವಿಚ್‌ಗೆ ಜರ್ಮನಿಯ ಮ್ಯಾಕ್ಸಿಮಿಲಿಯನ್ ಎದುರು 6-4, 6-1, 7-6 (7/3)ರಲ್ಲಿ ಗೆಲುವು; ಅಮೆರಿಕದ ಜಾನ್ ಇಸ್ನೇರ್‌ಗೆ ತಮ್ಮದೇ ದೇಶದ ಸ್ಯಾಮ್ ಕೆರಿ ವಿರುದ್ಧ 7-6 (7/2), 6-3, 6-4ರಲ್ಲಿ ಜಯ; ಬ್ರೆಜಿಲ್‌ನ ಥಿಯಾಗೊ ಮೊಂಟೆರೊಗೆ ಅರ್ಜೆಂಟೀನಾದ ಫ್ರಾನ್ಸಿಸ್ಕೊ ಸೆರುಂಡೊಲೊ ವಿರುದ್ಧ 6-3, 6-4, 6-3ರಲ್ಲಿ ಜಯ. ಅಮೆರಿಕದ ಮ್ಯಾಡಿಸನ್ ಬ್ರೆಂಗಲ್ಸ್‌ಗೆ ಕೊಲಂಬಿಯಾದ ಮರಿಯಾ ಕಮಿಲಾ ಎದುರು 7-5, 6-4ರಲ್ಲಿ, ಫ್ರಾನ್ಸ್‌ನ ಹಾರ್ಮನಿ ಟ್ಯಾನ್‌ಗೆ ತಮ್ಮದೇ ದೇಶದ ಅಲಿಜ್ ಕಾರ್ನೆಟ್ ಎದುರು 6-4, 6-4ರಲ್ಲಿ, ಜೆಕ್ ಗಣರಾಜ್ಯದ ಮರ್ಕೆಟಾ ವೊಂಡ್ರೊಜಾ ಅವರು ಎಸ್ಟೊನಿಯಾದ ಕಿಯಾ ಕನೆಪಿ ವಿರುದ್ಧ 4-6, 6-3, 6-0ರಲ್ಲಿ ಗೆಲುವು ಸಾಧಿಸಿ ಮುನ್ನಡೆದರು.

ಸಂಜೀತ್‌ಗೆ ಚಿನ್ನದ ಪದಕ

ಏಷ್ಯನ್ ಬಾಕ್ಸಿಂಗ್: ಬೆಳ್ಳಿ ಗೆದ್ದ ಪಂಘಾಲ್, ಶಿವ ಥಾಪಾ

ದುಬೈ (ಪಿಟಿಐ): ಭಾರತದ ಸಂಜೀತ್ ಅವರು ಒಲಿಂಪಿಕ್ಸ್ ಪದಕ ವಿಜೇತ ವಾಸಿಲಿ ಲೆವಿತ್ ಅವರನ್ನು ಮಣಿಸಿ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸೋಮವಾರ ಚಿನ್ನದ ಪದಕ ಕೊರಳಿಗೇರಿಸಿಕೊಂಡರು. ಅಮಿತ್ ಪಂಘಾಲ್ ಮತ್ತು ಶಿವ ಥಾಪಾ ಬೆಳ್ಳಿ ಪದಕಕ್ಕೆ ಸಮಾಧಾನಪಟ್ಟುಕೊಂಡರು.

91 ಕೆಜಿ ವಿಭಾಗದ ಫೈನಲ್‌ನಲ್ಲಿ ಪಾರಮ್ಯ ಮೆರೆದ ಸಂಜೀತ್ 4–1ರಿಂದ ಕಜಕಸ್ತಾನದ ವಾಸಿಲಿಗೆ ಸೋಲುಣಿಸಿದರು. ವಾಸಿಲಿ ಅವರು ರಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದರು. ಅಲ್ಲದೆ ಐದು ಬಾರಿ ಏಷ್ಯನ್ ಚಾಂಪಿಯನ್ ಆಗಿದ್ದಾರೆ.

ಕಳೆದ ಬಾರಿ ಚಾಂಪಿಯನ್ ಆಗಿದ್ದ ಅಮಿತ್ 52 ಕೆಜಿ ವಿಭಾಗದ ಫೈನಲ್ ಬೌಟ್‌ನಲ್ಲಿ ಉಜ್ಬೆಕಿಸ್ತಾನದ ಶಖೋಬಿದಿನ್ ಜೈರೊವ್‌ಗೆ ಮಣಿದರು.

64 ಕೆಜಿ ವಿಭಾಗದಲ್ಲಿ ಶಿವ ಥಾಪಾ ಮಂಗೋಲಿಯಾದ ಬಾತಾರ್‌ಸುಖ್ ಚಿನ್‌ಜೊರಿಂಗ್ ವಿರುದ್ಧ ಸೋತರು. ಈ ಮೂಲಕ ಸತತ ಐದು ಬಾರಿ ಪದಕ ಗೆದ್ದ ಸಾಧನೆ ಮಾಡಿದರು. ಈ ಮೂರು ಬಾರಿ ಚಾಂಪಿಯನ್ ಆಗಿದ್ದಾರೆ.

ಎದುರಾಳಿಗೆ ಪಂಚ್ ನೀಡಿದ ಭಾರತದ ಸಂಜೀತ್ (ಎಡ)– ಪಿಟಿಐ ಚಿತ್ರ

2019ರ ವಿಶ್ವ ಚಾಂಪಿಯನ್‌ಷಿಪ್ ಫೈನಲ್‌ನ ಪ್ರತಿಫಲನ ಎಂಬಂತೆ ಕಂಡು ಬಂದ ಹಣಾಹಣಿಯಲ್ಲಿ ಅಮಿತ್ 2–3ರಲ್ಲಿ ಸೋತರು. ವಿಶ್ವ ಚಾಂಪಿಯನ್‌ಷಿಪ್‌ನಲ್ಲೂ ಜೈರೊವ್ ಇದೇ ಅಂತರದಲ್ಲಿ ಜಯಿಸಿದ್ದರು. ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿರುವ ಇಬ್ಬರೂ ಬಾಕ್ಸರ್‌ಗಳು ಆರಂಭದಿಂದಲೇ ಪ್ರಬಲ ಪೈಪೋಟಿ ನಡೆಸಿದರು. ಮೊದಲ ಸುತ್ತಿನಲ್ಲೇ ಬಲಶಾಲಿ ಪಂಚ್‌ಗಳ ಮೂಲಕ ಮಿಂಚಿದರು. ಮೊದಲ ಸುತ್ತಿನಲ್ಲಿ ಜೈರೊವ್ ಜಯ ಸಾಧಿಸಿದರು.

ಎರಡನೇ ಸುತ್ತಿನಲ್ಲಿ ಅಮಿತ್ ತಿರುಗೇಟು ನೀಡಿದರು. ಶಕ್ತಿಶಾಲಿ ಪಂಚ್‌ಗಳ ಮೂಲಕ ಎದುರಾಳಿಯನ್ನು ಕಂಗೆಡಿಸಿದರು. ಮೂರನೇ ಸುತ್ತಿನಲ್ಲೂ ಅಮಿತ್ ಪ್ರಾಬಲ್ಯ ಮುಂದುವರಿಯಿತು. ಮುಂದಿನ ಎರಡು ಸುತ್ತುಗಳಲ್ಲಿ ಜಯ ಜೈರೊವ್ ಪಾಲಾಯಿತು.

ಒಟ್ಟು 15 ಪದಕಗಳನ್ನು ಗಳಿಸಿದ ಭಾರತ ಚಾಂಪಿಯನ್‌ಷಿಪ್‌ನಲ್ಲಿ ಗರಿಷ್ಠ ಪದಕಗಳ ಸಾಧನೆ ಮಾಡಿತು. 2019ರಲ್ಲಿ ಎರಡು ಚಿನ್ನ ಸೇರಿದಂತೆ ಒಟ್ಟು 13 ಪದಕಗಳು ಲಭಿಸಿದ್ದವು.

ಟಿಟಿ: ದಿಯಾ– ಸ್ವಸ್ತಿಕಾ ರನ್ನರ್ ಅಪ್

ನವದೆಹಲಿ (ಪಿಟಿಐ): ಭಾರತದ ಭರವಸೆಯ ಪ್ರತಿಭೆಗಳಾದ ದಿಯಾ ಚಿತಾಳೆ ಮತ್ತು ಸ್ವಸ್ತಿಕಾ ಘೋಷ್, ಟ್ಯುನೀಷಿಯಾದ ಟ್ಯುನಿಸ್‌ನಲ್ಲಿ ನಡೆದ ಡಬ್ಲ್ಯುಟಿಟಿ ಯೂತ್ ಸ್ಟಾರ್ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ರನ್ನರ್ ಅಪ್ ಸ್ಥಾನ ಗಳಿಸಿದರು. ಸೋಮವಾರ, 19 ವರ್ಷದೊಳಗಿನವರ ಬಾಲಕಿಯರ ಡಬಲ್ಸ್ ಫೈನಲ್‌ನಲ್ಲಿ ಈ ಜೋಡಿ ರಷ್ಯಾದ ಜೋಡಿಯೆದುರು ಮಣಿಯಿತು.

ನತಾಲಿಯಾ ಮಲಿನಿನಾ ಮತ್ತು ಎಲಿಝುಬೆತ್ ಅಬ್ರಾಮಿಯನ್ ಜೋಡಿ 11-3, 11-6, 11- 7 ರಿಂದ ದಿಯಾ–ಸ್ವಸ್ತಿಕಾ ಜೋಡಿಯನ್ನು ಸೋಲಿಸಿತು.

ಇದಕ್ಕೆ ಮೊದಲು ಸೆಮಿಫೈನಲ್‌ನಲ್ಲಿ ಭಾರತದ ಯುವ ಆಟಗಾರ್ತಿಯರು, ಜೆಕ್ ರಿಪಬ್ಲಿಕನ್‌ನ ಲಿಂಡಾ ಝುಡೆರೊವಾ ಮತ್ತು ಕ್ರೊವೇಷ್ಯಾದ ಹನಾ ಅರಪೋವಿಕ್ ಜೋಡಿಯನ್ನು ಸೋಲಿಸಿದ್ದರು.

ರನ್ನರ್ ಅಪ್ ದಿಯಾ ಚಿತಾಳೆ ಮತ್ತು ಸ್ವಸ್ತಿಕಾ ಘೋಷ್–ಪಿಟಿಐ ಚಿತ್ರ

ಸಿಂಗಲ್ಸ್‌ನಲ್ಲೂ ಭಾರತದ ಆಟಗಾರ್ತಿಯರು ಸ್ಫೂರ್ತಿಯುತ ಸಾಮರ್ಥ್ಯ ತೋರಿದರು. ಇಬ್ಬರೂ ಸೆಮಿಫೈನಲ್‌ನಲ್ಲಿ ತೀವ್ರ ಹೋರಾಟ ನೀಡಿದ ನಂತರ 2–3 ಸೆಟ್‌ಗಳ ಅಂತರದಿಂದ ಸೋಲನುಭವಿಸಿದ್ದರು. ದಿಯಾ 8–11, 11–7, 11–6, 8–11, 7–11 ರಿಂದ ರಷ್ಯಾದ ವ್ಲಾಡಾ ವೊರೊನಿನಾ ಅವರಿಗೆ ಮಣಿದರೆ, ಪ್ರಸಕ್ತ ರಾಷ್ಟ್ರೀಯ ಜೂನಿಯರ್ ಚಾಂಪಿಯನ್ ಆಗಿರುವ ಸ್ವಸ್ತಿಕಾ ಕೂಡ ತೀವ್ರ ಸವಾಲಿನ ನಂತರ 11–8, 4–11, 11–9, 3–11, 6–11 ರಿಂದ ಟರ್ಕಿಯ ಎಸ್ ಹೆರಾಕ್ ಅವರಿಗೆ ಸೋತಿದ್ದರು.

ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ ಸಭೆ ಇಂದು

ವಿಶ್ವಕಪ್ ಆಯೋಜನೆ: ನಿರ್ಧಾರಕ್ಕೆ ಕಾಲಾವಕಾಶ ಕೋರಿಕೆ?

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯ (ಐಸಿಸಿ) ಆಡಳಿತ ಮಂಡಳಿ ಸಭೆ ವರ್ಚುವಲ್ ಆಗಿ ಮಂಗಳವಾರ ನಡೆಯಲಿದ್ದು ಟಿ20 ವಿಶ್ವಕಪ್ ಆಯೋಜನೆ ಬಗ್ಗೆ ನಿರ್ಧಾರ ಕೈಗೊಳ್ಳಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಅಧಿಕೃತವಾಗಿ ಸಮಯಾವಕಾಶ ಕೋರುವ ಸಾಧ್ಯತೆ ಇದೆ.

ಸಭೆಯಲ್ಲಿ ಪಾಲ್ಗೊಳ್ಳಲು ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ದುಬೈಗೆ ತೆರಳಿದ್ದಾರೆ ಎಂದು ಈ ಹಿಂದೆ ಹೇಳಲಾಗಿತ್ತು. ಆದರೆ ಅವರು ವರ್ಚುವಲ್ ಆಗಿ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿ ಆಯೋಜನೆ ಬಗ್ಗೆ ಎಮಿರೇಟ್ ಕ್ರಿಕೆಟ್ ಮಂಡಳಿ ಜೊತೆ ಚರ್ಚಿಸಲು ಅವರು ದುಬೈಗೆ ಹೋಗಿದ್ದಾರೆ.

ಕೋವಿಡ್ ಕಾಲದಲ್ಲಿ ಕ್ರಿಕೆಟ್ ಟೂರ್ನಿಗಳ ಸ್ಥಿತಿಗತಿಗಳ ಬಗ್ಗೆ ಸಭೆಯಲ್ಲಿ ಪ್ರಮುಖವಾಗಿ ಚರ್ಚೆ ನಡೆಯಲಿದೆ. ಅದು ಬಿಟ್ಟರೆ ವಿಶೇಷವಾಗಿ ಚರ್ಚಿಸಲು ಗಂಭೀರ ವಿಷಯಗಳು ಇಲ್ಲ. ವಿಶ್ವಕಪ್ ಟೂರ್ನಿಗೆ ಸಂಬಂಧಿಸಿ ಸಭೆಯಲ್ಲಿ ಚರ್ಚಿಸಿದ ನಂತರ ಜುಲೈ ಒಂದರಂದು ನಡೆಯಲಿರುವ ವಿಶೇಷ ಸಭೆಯಲ್ಲಿ ಬಿಸಿಸಿಐ ತೀರ್ಮಾನ ಕೈಗೊಳ್ಳಲಿದೆ. ಜುಲೈ 18ರಿಂದ ನಡೆಯಲಿರುವ ವಾರ್ಷಿಕ ಸಮಾವೇಶದಲ್ಲಿ ಐಸಿಸಿ ಅಂತಿಮ ನಿರ್ಧಾರ ಪ್ರಕಟಿಸಲಿದೆ.

'ದೇಶದಲ್ಲಿ ಕೋವಿಡ್ ಪ್ರಕರಣಗಳು ಕಡಿಮೆಯಾಗುತ್ತಿವೆ. ಆದರೂ ಪರಿಸ್ಥಿತಿ ಸಂಪೂರ್ಣ ಹತೋಟಿಗೆ ಬಂದಿಲ್ಲ. ಹೀಗಾಗಿ ಟೂರ್ನಿ ಆಯೋಜನೆಗೆ ಸಂಬಂಧಿಸಿ ಭರವಸೆ ಕೊಡಲು ಸಾಧ್ಯವಿಲ್ಲ. ಅಧ್ಯಕ್ಷರು ಮತ್ತು ಕಾರ್ಯದರ್ಶಿ ಒಂದು ತಿಂಗಳ ಕಾಲಾವಕಾಶ ಕೋರಲು ಸಜ್ಜಾಗಿದ್ದಾರೆ. ಸರ್ಕಾರದ ಜೊತೆಯೂ ನಿರಂತರ ಸಂಪರ್ಕದಲ್ಲಿದ್ದಾರೆ' ಎಂದು ಬಿಸಿಸಿಐ ಮೂಲಗಳು ಹೇಳಿವೆ.

ಐಸಿಸಿ ಆಯೋಜಿಸುವ ಅಂತರರಾಷ್ಟ್ರೀಯ ಟೂರ್ನಿಗಳಿಗೆ ಸಂಬಂಧಿಸಿ ತೆರಿಗೆ ರಿಯಾಯಿತಿ ಪಡೆಯುವ ಕುರಿತು ಕೂಡ ಗೊಂದಲಗಳಿವೆ. ಸರ್ಕಾರದ ಜೊತೆ ಈ ಕುರಿತು ನಿರಂತರ ಮಾತುಕತೆ ನಡೆಯುತ್ತಿದೆ. 'ಕೋವಿಡ್‌ನಿಂದ ಉಂಟಾಗಿರುವ ವಿಷಮ ಸ್ಥಿತಿಯಲ್ಲೂ ಕ್ರಿಕೆಟ್ ಟೂರ್ನಿಗೆ ಭಾರತ ಸರ್ಕಾರ ₹ 1000 ಕೋಟಿ ತೆರಿಗೆ ವಿನಾಯಿತಿ ನೀಡಲು ಸಿದ್ಧವಿದೆ. ಇದು ಶ್ಲಾಘನೀಯ ಬೆಳವಣಿಗೆ' ಎಂದು ಮೂಲಗಳು ಹೇಳಿವೆ.

ಭವಿಷ್ಯದ ಕಾರ್ಯಯೋಜನೆಗಳು: ದ್ವಿಪಕ್ಷೀಯ ಸರಣಿಗಳನ್ನು ಹೊರತುಪಡಿಸಿ 2023ರಿಂದ 2031ರ ವರೆಗಿನ ತಂಡಗಳ ಪ್ರವಾಸ ಮತ್ತು ಟೂರ್ನಿಗಳಿಗೆ ಸಂಬಂಧಿಸಿಯೂ ಐಸಿಸಿ ಸಭೆಯಲ್ಲಿ ಚರ್ಚೆ ನಡೆಯಲಿದೆ. ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಬಗ್ಗೆಯೂ ಪ್ರಸ್ತಾಪವಾಗುವ ಸಾಧ್ಯತೆ ಇದೆ. ಮಹಿಳಾ ಕ್ರಿಕೆಟ್, 2022ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಭಾರತ ತಂಡದ ಪಾಲ್ಗೊಳ್ಳುವಿಕೆ ಮತ್ತು ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಸೇರ್ಪಡೆಯಾಗಲು ಅದರಿಂದ ಸಿಗಬಹುದಾದ ಪ್ರೇರಣೆ ಇತ್ಯಾದಿ ವಿಷಯಗಳು ಕೂಡ ಚರ್ಚೆಗೆ ಬರಲಿವೆ.

ಕ್ವಾರಂಟೈನ್ ಅವಧಿ ಮುಕ್ತಾಯ; ಭಾವುಕರಾದ ಆಸ್ಟ್ರೇಲಿಯಾ ಕ್ರಿಕೆಟಿಗರು

ಸಿಡ್ನಿ (ಪಿಟಿಐ): ಮುಂದೂಡಿರುವ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಪಾಲ್ಗೊಂಡು ವಾಪಸ್ ಹೋಗಿರುವ ಆಸ್ಟ್ರೇಲಿಯಾದ ಆಟಗಾರರು, ನೆರವು ಸಿಬ್ಬಂದಿ ಮತ್ತು ವೀಕ್ಷಕ ವಿವರಣೆಕಾರರ ಕ್ವಾರಂಟೈನ್ ಅವಧಿ ಮುಗಿದಿದ್ದು ಸೋಮವಾರ ಹೋಟೆಲ್ ಕೊಠಡಿಗಳಿಂದ ಹೊರಗೆ ಬಂದಿದ್ದಾರೆ.

14 ದಿನ ಹೋಟೆಲ್‌ನಲ್ಲೇ ಕಳೆದಿದ್ದ ಆಟಗಾರರು ಮನೆಯ ಕಡೆಗೆ ಸಾಗುವ ಮುನ್ನ ಪರಸ್ಪರ ಅಪ್ಪಿಕೊಂಡು ಸಂಭ್ರಮಿಸಿದರು. ಕೆಲವರ ಕಣ್ಣಿಂದ ಆನಂದಭಾಷ್ಪ ಸುರಿಯಿತು.

ಬಯೊಬಬಲ್‌ನಲ್ಲಿ ಕೋವಿಡ್ ಸೋಂಕು ಕಾಣಿಸಿಕೊಂಡ ಕಾರಣ ಈ ತಿಂಗಳ ಮೊದಲ ವಾರ ಐಪಿಎಲ್ ಟೂರ್ನಿಯನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಲಾಗಿದೆ. ಭಾರತದಿಂದ ವಿಮಾನಯಾನಕ್ಕೆ ನಿರ್ಬಂಧ ಇದ್ದುದರಿಂದ ಆಸ್ಟ್ರೇಲಿಯಾದ 38 ಮಂದಿ ಮಾಲ್ಡೀವ್ಸ್‌ಗೆ ಹೋಗಿ ಅಲ್ಲಿಂದ ತವರಿಗೆ ಮರಳಿದ್ದರು. ಆದರೆ ಅವರು ಕಡ್ಡಾಯ ಕ್ವಾರಂಟೈನ್‌ಗೆ ಒಳಗಾಗಬೇಕಾಗಿತ್ತು.



ಹೋಟೆಲ್‌ನಿಂದ ಹೊರಬಂದಾಕ್ಷಣ ಪತ್ನಿಯನ್ನು ಅಪ್ಪಿಕೊಂಡ ಪ್ಯಾಟ್ ಕಮಿನ್ಸ್ –ಟ್ವಿಟರ್ ಚಿತ್ರ

ವೇಗದ ಬೌಲರ್ ಪ್ಯಾಟ್ ಕಮಿನ್ಸ್ ಅವರನ್ನು ಗರ್ಭಿಣಿ ಪತ್ನಿ ಬೆಕಿ ಬಾಸ್ಟನ್ ಕಾಯುತ್ತಿದ್ದರು. ಹೋಟೆಲ್‌ನಿಂದ ಹೊರಗೆ ಬಂದ ಕೂಡಲೇ ಅಪ್ಪಿ ಮುದ್ದಾಡಿದ ಭಾವುಕ ಕ್ಷಣಗಳ ವಿಡಿಯೊವನ್ನು ಸ್ಥಳೀಯ ಕ್ರೀಡಾ ಪತ್ರಕರ್ತ ಕ್ಲೋ ಅಮಾಂಡ ಬೇಲಿ ಅವರು ಟ್ವಿಟರ್‌ಗೆ ಅಪ್‌ಲೋಡ್ ಮಾಡಿ 'ದಿನದ ವಿಡಿಯೊ' ಎಂದು ಬರೆದುಕೊಂಡಿದ್ದಾರೆ.

ಜೂಡೊ ಟೂರ್ನಿಗೆ ಸೈನಿ, ಸುಶೀಲಾ

ನವದೆಹಲಿ (ಪಿಟಿಐ): ಭಾರತದ ಜಸ್ಲೀನ್ ಸಿಂಗ್ ಸೈನಿ ಮತ್ತು ಸುಶೀಲಾ ದೇವಿ ಲಿಕಮಾಬಮ್ ಅವರು ವಿಶ್ವ ಜೂಡೊ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲಿದ್ದು, ಒಲಿಂಪಿಕ್ಸ್ ಟಿಕೆಟ್ ಗಳಿಸಲು ಪ್ರಯತ್ನಿಸಲಿದ್ದಾರೆ. ಜೂನ್ 6ರಿಂದ 13ರವರೆಗೆ ಹಂಗರಿಯ ಬುಡಾಪೆಸ್ಟ್‌ನಲ್ಲಿ ಟೂರ್ನಿ ನಿಗದಿಯಾಗಿದೆ.

ಪುರುಷರ 66 ಕೆಜಿ ವಿಭಾಗದಲ್ಲಿ ಸೈನಿ ಸ್ಪರ್ಧಿಸಲಿದ್ದರೆ, ಸುಶೀಲಾ ಅವರು ಮಹಿಳೆಯರ 48 ಕೆಜಿ ವಿಭಾಗದಲ್ಲಿ ಅದೃಷ್ಟ ಪರೀಕ್ಷಿಸಲಿದ್ದಾರೆ. ಕೋಚ್ ಜೀವನ್ ಕುಮಾರ್ ಶರ್ಮಾ ಈ ಇಬ್ಬರು ಪಟುಗಳೊಂದಿಗೆ ತೆರಳಲಿದ್ದಾರೆ.

ಸಂಕ್ಷಿಪ್ತ ಸುದ್ದಿ

ಚೀನಾ: ಮೂರು ಮಕ್ಕಳನ್ನು ಹೊಂದಲು ದಂಪತಿಗೆ ಅವಕಾಶ

ಬೀಜಿಂಗ್ (ಎಪಿ): ಚೀನಾದಲ್ಲಿ ಇನ್ನು, ದಂಪತಿಗಳು ಇಬ್ಬರು ಮಕ್ಕಳ ಬದಲು ಮೂರು ಮಕ್ಕಳನ್ನು ಹೊಂದಲು ಚೀನಾದ ಆಡಳಿತಾರೂಢ ಕಮ್ಯುನಿಸ್ಟ್ ಪಕ್ಷವು ಅವಕಾಶ ಕಲ್ಪಿಸಲಿದೆ ಎಂದು ಅಲ್ಲಿನ ಸುದ್ದಿಸಂಸ್ಥೆಯೊಂದು ಸೋಮವಾರ ತಿಳಿಸಿದೆ.

ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯೂರೊ ಸೋಮವಾರ ನಡೆಸಿದ ಸಭೆಯಲ್ಲಿ, ದೇಶದಲ್ಲಿ ಹೆಚ್ಚುತ್ತಿರುವ ವೃದ್ಧರ ಸಂಖ್ಯೆಯನ್ನು ನಿಭಾಯಿಸಲು ಕೆಲವು ಪ್ರಮುಖ ನೀತಿ ಮತ್ತು ಕ್ರಮಗಳನ್ನು ಪರಿಚಯಿಸುವ ಕುರಿತು ನಿರ್ಧರಿಸಿದೆ ಎಂದು ಸ್ಥಳೀಯ ಕ್ಸಿನ್ ಹುವಾ ಸುದ್ದಿಸಂಸ್ಥೆಯು ಮಾಹಿತಿ ನೀಡಿದೆ.

ಸಭೆಯಲ್ಲಿ ಪಕ್ಷದ ನಾಯಕರು, 'ಕುಟುಂಬ ಯೋಜನಾ ನೀತಿಯನ್ನು ಪುನರ್ ರಚಿಸಿ ದಂಪತಿಗಳಿಗೆ ಎರಡು ಮಕ್ಕಳ ನೀತಿಗೆ ಬದಲಾಗಿ, ಮೂವರು ಮಕ್ಕಳನ್ನು ಹೊಂದುವ ಅವಕಾಶ ಕಲ್ಪಿಸಬೇಕು. ಇದರಿಂದಾಗಿ ಜನಸಂಖ್ಯಾ ರಚನೆಯನ್ನು ಸುಧಾರಿಸಲು ಅನುಕೂಲವಾಗಲಿದೆ' ಎಂದು ಗಮನ ಸೆಳೆದರು.

ಗುವಾಂಗ್‌ಜೌನಲ್ಲಿ ಕೋವಿಡ್ ಉಲ್ಬಣ, ವಿಮಾನ ಹಾರಾಟ ರದ್ದು

ಶಾಂಘೈ (ರಾಯಿಟರ್ಸ್/ಎಪಿ): ಚೀನಾದ ದಕ್ಷಿಣ ಭಾಗದಲ್ಲಿ ಸೋಮವಾರ ಏಕಾಏಕಿ ಕೋವಿಡ್ ಪ್ರಕರಣಗಳಲ್ಲಿ ಏರಿಕೆಯಾಗಿದೆ. ಹಾಂಕಾಂಗ್ ಸಮೀಪದ ಗುವಾಂಗ್‌ಜೌ ನಗರದಲ್ಲಿ ಭಾನುವಾರ 18 ಹೊಸ ಪ್ರಕರಣಗಳು ವರದಿಯಾಗಿವೆ. ಈ ಹಿನ್ನೆಲೆಯಲ್ಲಿ ಗುವಾಂಗ್‌ಜೌನಲ್ಲಿ ವಿಮಾನ ಹಾರಾಟವನ್ನು ರದ್ದುಗೊಳಿಸಲಾಗಿದೆ.

ಸೋಮವಾರ ಗುವಾಂಗ್‌ಜೌ ಬೈಯುನ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 519 ವಿಮಾನಗಳನ್ನು ರದ್ದುಗೊಳಿಸಲಾಗಿದೆ. ಚೀನಾದಲ್ಲಿ 27 ಹೊಸ ಪ್ರಕರಣಗಳು ವರದಿಯಾಗಿವೆ.

ವಿಮಾನ ಪತನದಲ್ಲಿ ಟಾರ್ಜನ್ ನಟ ಜೋ ಲಾರಾ ಸಾವು

ವಾಷಿಂಗ್ಟನ್ (ಎಎಫ್‌ಪಿ): ಅಮೆರಿಕದ ನಾಶ್‌ವಿಲ್ ನಗರದ ಸಮೀಪ ಶನಿವಾರ ಸಂಭವಿಸಿದ ವಿಮಾನ ದುರಂತದಲ್ಲಿ ಮೃತಪಟ್ಟ ಏಳು ಮಂದಿಯಲ್ಲಿ ಟಾರ್ಜನ್ ನಟ ಜೋ ಲಾರಾ ಮತ್ತು ಅವರ ಪತ್ನಿಯೂ ಇರುವುದು ತಿಳಿದುಬಂದಿದೆ.

ನಾಶ್‌ವಿಲ್ ನಗರದಿಂದ 19 ಕಿಲೋಮೀಟರ್ ದೂರದಲ್ಲಿರುವ ಪರ್ಸಿ ಪ್ರೀಸ್ಟ್ ಸರೋವರದಲ್ಲಿ ವಿಮಾನ ಪತನಗೊಂಡು ಎಲ್ಲ 7 ಮಂದಿ ಪ್ರಯಾಣಿಕರು ಮೃತಪಟ್ಟಿದ್ದರು.

ಸ್ಥಳೀಯ ಕಾಲಮಾನ ಶನಿವಾರ ಬೆಳಿಗ್ಗೆ 11 ಗಂಟೆಗೆ ವಿಮಾನ ಪತನಗೊಂಡಿತ್ತು. ವಿಮಾನವು ಸ್ಮಿರ್ನಾದ ಟೆನ್ನೆಸ್ಸೀ ವಿಮಾನ ನಿಲ್ದಾಣದಿಂದ ಫ್ಲಾರಿಡಾದ ಪಾಮ್ ಬೀಚ್‌ಗೆ ಹೊ ರಟಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಎಫ್‌ಸಿ ತೊರೆದ ರಾಹುಲ್ ಭೆಕೆ

ಬೆಂಗಳೂರು: ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫ್ರಾಂಚೈಸ್ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡವನ್ನು ರಾಹುಲ್ ಭೆಕೆ ತೊರೆದಿದ್ದಾರೆ. ಕ್ಲಬ್‌ನೊಂದಿಗಿನ ಅವರ ಒಪ್ಪಂದದ ಅವಧಿಯು ಸೋಮವಾರ ಮುಕ್ತಾಯಗೊಂಡಿದೆ.

4 ವರ್ಷಗಳ ಕಾಲ ಬಿಎಫ್‌ಸಿ ತಂಡದ ಪ್ರಮುಖ ಆಟಗಾರರಾಗಿದ್ದ ಭೆಕೆ, 88 ಪಂದ್ಯಗಳನ್ನು ಆಡಿ 12 ಗೋಲುಗಳನ್ನು ದಾಖಲಿಸಿದ್ದರು. ತಂಡದ ಹಲವು ಗೆಲುವುಗಳಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ.

'ಶೆಫಾಲಿ ಆಯ್ಕೆಯಿಂದ ಅನುಕೂಲ'

ನವದೆಹಲಿ (ಪಿಟಿಐ): ಇಂಗ್ಲೆಂಡ್ ವಿರುದ್ಧದ ಮೂರೂ ಮಾದರಿಯ ಪಂದ್ಯಗಳ ಸರಣಿಗಳಿಗೆ ಶೆಫಾಲಿ ವರ್ಮಾ ಅವರ ಆಯ್ಕೆಯನ್ನು ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಮಿಥಾಲಿ ರಾಜ್ ಸ್ವಾಗತಿಸಿದ್ದಾರೆ. ತವರಿನಲ್ಲಿ ದಕ್ಷಿಣ ಆಫ್ರಿಕಾ ತಂಡದ ಎದುರು ನಿರಾಸೆ ಅನುಭವಿಸಿದ್ದ ತಂಡಕ್ಕೆ ಇಂಗ್ಲೆಂಡ್ ಪ್ರವಾಸದಲ್ಲಿ ಗೆಲುವಿನ ಹಳಿಗೆ ಮರಳಲು ಇದು ಅನುಕೂಲವಾಗಲಿದೆ ಎಂದು ಅವರು ಹೇಳಿದ್ದಾರೆ.

ಭಾರತ ಮಹಿಳಾ ತಂಡವು ಇಂಗ್ಲೆಂಡ್ ಪ್ರವಾಸದಲ್ಲಿ ಒಂದು ಟೆಸ್ಟ್, ತಲಾ ಮೂರು ಏಕದಿನ ಮತ್ತು ಟ್ವೆಂಟಿ–20 ಪಂದ್ಯಗಳನ್ನು ಆಡಲಿದೆ.

ದಕ್ಷಿಣ ಆಫ್ರಿಕಾ ವಿರುದ್ಧದ ಏಕದಿನ ಸರಣಿಗೆ ಶೆಫಾಲಿ ವರ್ಮಾ ಅವರನ್ನು ಕೈಬಿಟ್ಟಿದ್ದು ಚರ್ಚೆಗೆ ಕಾರಣವಾಗಿತ್ತು. 17 ವರ್ಷದ ಶೆಫಾಲಿ ಕಳೆದ 18 ತಿಂಗಳುಗಳಿಂದ ಸೀಮಿತ ಓವರ್‌ಗಳ ಪಂದ್ಯಗಳ ಪ್ರಮುಖ ಆಟಗಾರ್ತಿಯಾಗಿದ್ದಾರೆ.

ಮಿಥಾಲಿ ರಾಜ್

'ಸ್ಫೋಟಕ ಬ್ಯಾಟರ್ ಶೆಫಾಲಿ ಅವರು ಮೂರು ಮಾದರಿಗೆ ಆಯ್ಕೆ ಮಾಡಿರುವುದು ಸಕಾರಾತ್ಮಕ ಸಂಗತಿ. ಇದರಿಂದ ತಂಡಕ್ಕೆ ಹೆಚ್ಚು ಅನುಕೂಲವಾಗಲಿದೆ. ಟೆಸ್ಟ್ ಹಾಗೂ ಏಕದಿನ ಪಂದ್ಯಗಳಲ್ಲಿ ಅವರ ಆಟ ನೋಡಲು ಕಾತರರಾಗಿದ್ದೇವೆ' ಎಂದು ಮಿಥಾಲಿ ನುಡಿದರು.

ಏಕದಿನ ಮಾದರಿಯಲ್ಲಿ ಸ್ಮೃತಿ ಮಂದಾನ ಅವರೊಂದಿಗೆ ಶೆಫಾಲಿ ಅವರು ಇನಿಂಗ್ಸ್ ಆರಂಭಿಸುವ ಸುಳಿವನ್ನೂ ಇದೇ ವೇಳೆ ಅವರು ನೀಡಿದರು.

ಕೆಎಸ್‌ಎಫ್‌ಎ: ನವೀಕರಣ ಅವಧಿ ವಿಸ್ತರಣೆ

ಬೆಂಗಳೂರು: ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯು (ಕೆಎಸ್‌ಎಫ್‌ಎ) ತನ್ನ ಅಧೀನದ ಕ್ಲಬ್‌ಗಳ ನವೀಕರಣ ಅವಧಿಯನ್ನು ಜೂನ್ 30ರವರೆಗೆ ವಿಸ್ತರಿಸಿದೆ.

ಕೋವಿಡ್, ಲಾಕ್‌ಡೌನ್ ಕಾರಣದಿಂದ ಕೋರ್ ಕಮಿಟಿಯು ಈ ನಿರ್ಧಾರಕ್ಕೆ ಬಂದಿದೆ.

ಜುಲೈ 15ವರೆಗೆ ದಂಡ ಸಹಿತ ನವೀಕರಣ ಮಾಡಲೂ ಅವಕಾಶ ನೀಡಿದೆ.

ಒಲಿಂಪಿಕ್ಸ್: ಅಭಿಮಾನಿಗಳಿಗೆ ಅವಕಾಶ ನೀಡುವ ಕುರಿತು ಸದ್ಯದಲ್ಲೇ ನಿರ್ಧಾರ

'ಲಸಿಕೆ ಅಥವಾ ನೆಗೆಟಿವ್ ವರದಿ ಕಡ್ಡಾಯ'

ಟೋಕಿಯೊ (ಎಎಫ್‌ಪಿ): ಒಲಿಂಪಿಕ್ಸ್ ಕ್ರೀಡೆಗಳು ನಡೆಯುವ ಇಲ್ಲಿನ ತಾಣಗಳಿಗೆ ಪ್ರವೇಶ ಪಡೆಯಬೇಕಾದರೆ ಅಭಿಮಾನಿಗಳು ಒಂದೊ ಲಸಿಕೆ ಹಾಕಿಸಿಕೊಂಡಿರಬೇಕು ಇಲ್ಲವೇ ಸೋಂಕು ಇಲ್ಲವೆಂಬ ಪರೀಕ್ಷಾ ವರದಿಯನ್ನು ತರಬೇಕು ಎಂದು ಜಪಾನ್‌ನ ಪತ್ರಿಕೆಯೊಂದು ಸೋಮವಾರ ವರದಿ ಮಾಡಿದೆ.

ಹರ್ಷೋದ್ಗಾರ ಮಾಡುವುದಕ್ಕೆ, ತಿನಿಸುಗಳನ್ನು ಒಯ್ಯುವುದಕ್ಕೆ, ಹೈ-ಫೈವ್ (ಚಪ್ಪಾಳೆಯ ಸಂಭ್ರಮಕ್ಕೆ) ಮತ್ತು ಮದ್ಯಸೇವನೆಗೆ ನಿರ್ಬಂಧ ವಿಧಿಸಲಾಗಿದೆ ಎಂದು ಸರ್ಕಾರಿ ಅಧಿಕಾರಿಯೊಬ್ಬರನ್ನು ಉಲ್ಲೇಖಿಸಿ 'ಯೊಮಿಯುರಿ ಶಿಂಬುನ್' ಪತ್ರಿಕೆ ವರದಿ ಮಾಡಿದೆ.

ಕೊರೊನಾ ವೈರಸ್ ಎಬ್ಬಿಸಿದ ಕೋಲಾಹಲದಿಂದ ಕ್ರೀಡೆಗಳು ಈಗಾಗಲೇ ಒಮ್ಮೆ ಮುಂದೂಡಿಕೆಯಾಗಿವೆ. ಈಗ ಜುಲೈ ಅಂತ್ಯದಲ್ಲಿ ಆರಂಭವಾಗುವ ಈ ಕ್ರೀಡೆಗಳಿಗೆ ಪ್ರೇಕ್ಷಕರಿಗೇನಾದರೂ ಅವಕಾಶ ನೀಡುವುದಾದರೆ ಎಷ್ಟು ಮಂದಿಗೆ ಬಿಡಬೇಕು ಅಥವಾ ಸಂಪೂರ್ಣ ನಿರ್ಬಂಧ ಹೇರಬೇಕೇ ಎಂಬುದನ್ನು ಸಂಘಟಕರು ಜೂನ್‌ನಲ್ಲಿ ನಿರ್ಧರಿಸಲಿದ್ದಾರೆ.

ಹೊರರಾಷ್ಟ್ರಗಳ ಪ್ರೇಕ್ಷಕರಿಗೆ ಈಗಾಗಲೇ ನಿರ್ಬಂಧ ವಿಧಿಸಲಾಗಿದೆ. ದೇಶಿಯ ಪ್ರೇಕ್ಷಕರು ಮಾರ್ಗಸೂಚಿ ಉಲ್ಲಂಘಿಸಿದರಲ್ಲಿ ಅವರನ್ನು ಹೊರಹಾಕಲಾಗುವುದು ಎಂದು ಈ ವರದಿಯಲ್ಲಿ ಎಚ್ಚರಿಸಲಾಗಿದೆ.

ಟೋಕಿಯೊದ ಮೆಟ್ರೊಪಾಲಿಟನ್ ಸರ್ಕಾರಿ ಕಟ್ಟಡದಲ್ಲಿ ಭಾನುವಾರ ಕಂಡುಬಂದ ಟೋಕಿಯೊ– 2020ರ ಒಲಿಂಪಿಕ್ಸ್ ಫಲಕ

'ಸೋಂಕು ಹರಡುವುದಕ್ಕೆ ಸಂಪೂರ್ಣ ತಡೆಹಾಕುವುದು ಯೋಜನೆಯಾಗಿದೆ. ಈ ಯೋಜನೆಯ ಪ್ರಕಾರ ಕ್ರೀಡಾಂಗಣಕ್ಕೆ ಬರುವ ಪ್ರೇಕ್ಷಕರು ಲಸಿಕೆ ಹಾಕಿಸಿಕೊಂಡಿರುವ ಪ್ರಮಾಣಪತ್ರ ತೋರಿಸಬೇಕು ಅಥವಾ ಸೋಂಕು ಪರೀಕ್ಷೆಯಲ್ಲಿ ನೆಗೆಟಿವ್ ಆಗಿರುವ ವರದಿಯನ್ನು ತಪಾಸಣೆ ವೇಳೆ ತೋರಿಸಬೇಕಾಗುತ್ತದೆ. ಕ್ರೀಡಾಂಗಣಕ್ಕೆ ಹೋಗುವ ವಾರಕ್ಕೆ ಮೊದಲು ಅಭಿಮಾನಿಗಳು ತಮ್ಮದೇ ಖರ್ಚಿನಲ್ಲಿ ಈ ಪರೀಕ್ಷೆ ಮಾಡಿಸಿಕೊಳ್ಳಬೇಕಾಗಿದೆ' ಎಂದು ವರದಿಯಲ್ಲಿ ವಿವರಿಸಲಾಗಿದೆ.

ಮಾಸ್ಕ್‌ಗಳನ್ನು ಧರಿಸುವುದು ಕಡ್ಡಾಯ. ಆರೋಗ್ಯ ತಪಾಸಣೆ ವಿವರದ ಅರ್ಜಿಯನ್ನು ಪ್ರೇಕ್ಷಕರು ಭರ್ತಿಮಾಡಬೇಕಾಗುತ್ತದೆ. ಇವೆಲ್ಲಾ ಮುಗಿಸಿ ಕ್ರೀಡಾಂಗಣಕ್ಕೆ ಹೋದರೂ ಅಲ್ಲಿ ಗಟ್ಟಿಯಾಗಿ ಹರ್ಷೋದ್ಗಾರ ಮಾಡುವಂತಿಲ್ಲ. ಸಂಭ್ರಮ ಆಚರಿಸಲು ಹೈಫೈಗಳನ್ನೂ ಮಾಡುವಂತಿಲ್ಲ.

ಸೋಂಕು ಪ್ರಕರಣಗಳ ನಿಯಂತ್ರಣಕ್ಕೆ ಈಗಾಗಲೇ ಟೋಕಿಯೊ ಮತ್ತು ಜಪಾನ್‌ನ ಇತರ ಪ್ರಮುಖ ನಗರಗಳಲ್ಲಿ ತುರ್ತುಸ್ಥಿತಿ ಜಾರಿಗೊಳಿಸಲಾಗಿದೆ. ಕಳೆದ ಶುಕ್ರವಾರ ಈ ತುರ್ತುಸ್ಥಿತಿಯನ್ನು ಜೂನ್ 20ರವರೆಗೆ ವಿಸ್ತರಿಸಿ ಆದೇಶ ಹೊರಡಿಸಲಾಗಿದೆ. ಅಲ್ಲಿಂದ ಸುಮಾರು ಒಂದು ತಿಂಗಳ ನಂತರ– ಜುಲೈ 23ಕ್ಕೆ ಕ್ರೀಡೆಗಳ ಉದ್ಘಾಟನಾ ಸಮಾರಂಭ ನಿಗದಿಯಾಗಿದೆ.

ಪ್ರೇಕ್ಷಕರ ವರ್ತನೆ ಗಮನಿಸಲು ಅಲ್ಲಲ್ಲಿ ಭದ್ರತಾ ಸಿಬ್ಬಂದಿ ನಿಯೋಜಿಸಲಾಗುತ್ತಿದೆ. ಎಷ್ಟು ಮಂದಿ ಪ್ರೇಕ್ಷಕರಿಗೆ ಕ್ರೀಡೆಗಳನ್ನು ನೋಡಲು ಬಿಡಲಾಗುವುದು ಎಂಬುದು ಇನ್ನೂ ನಿರ್ಧಾರವಾಗಿಲ್ಲ.

ಇದುವರೆಗೆ ಕೇವಲ ಶೇ 2.5 ರಷ್ಟು ಜಪಾನೀಯರು ಎರಡು ಡೋಸ್ ಲಸಿಕೆ ಪಡೆದಿದ್ದಾರೆ.

ಯೊಮಿಯೂರಿ ಶಿಂಬುನ್ ಪತ್ರಿಕೆ ಸೋಮವಾರ ಹೊಸ ಸಮೀಕ್ಷಾ ವರದಿ ಪ್ರಕಟಿಸಿದ್ದು, ಅದರ ಪ್ರಕಾರ ಟೋಕಿಯೊದ ಶೇ 49ರಷ್ಟು ಮಂದಿ ಕ್ರೀಡೆಗಳು ನಡೆಯಲಿ ಎಂದು ಹೇಳಿದ್ದರೆ, ಶೇ 48 ಮಂದಿ ಒಲಿಂಪಿಕ್ಸ್ ನಡೆಸುವುದು ಬೇಡವೇ ಬೇಡ ಎಂದಿದ್ದಾರೆ.